ಪುಸ್ತಕ ಪ್ರಪಂಚ

ಸಂಪುಟ ೫೦ ಜೂನ್ ೨೦೦೦ ಸಂಚಿಕೆ ೬



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಪರಿವಿಡಿ

ಮುಖಚಿತ್ರ : ಜೋಗ್ ಜಲಪಾತ

PUSTAKA PRAPANCHA: Monthly

Published and printed by Karnataka State Adult Education Council,Mysore-6,
Price : Rupees Ten

ಬಿಡಿಪ್ರತಿ : ರೂ.೧೦

ವಾರ್ಷಿಕ ಚಂದಾ : ರೂ, ೧೦೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೬೦೦

ಸಂಸ್ಥೆಗೆ : ರೂ. ೯೦೦

ಪ್ರಕಟಣೆ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಸಂಸ್ಕೃತಿಯ ದಾರಿದ್ರ್ಯ

ಸಂಸ್ಕೃತಿಯ ಲಕ್ಷಣಗಳನ್ನು ಹೇಳುವುದು ಕಷ್ಟ. ಆದರೆ ಸುಸಂಸ್ಕೃತ ಯಾರೆಂಬುದನ್ನು ಬೆರಳು ಮಾಡಿತೋರಿಸಬಹುದು. ಅವರೇ ಬಸವಣ್ಣನವರು. ದಯೆ, ಅನುಕಂಪೆ, ತ್ಯಾಗ, ಸರಳ ಜೀವನ, ಶೋಷಿತದಲಿತರ ಉದ್ಧಾರಾಕಾಂಕ್ಷೆ, ಸಮಾನತಾಭಾವ, ಅಧ್ಯಾತ್ಮಸಾಧನೆ, ವಿನಯ, ಮಾನವೀಯತೆ ಅವರ ಜೀವನದಲ್ಲಿದ್ದು ಕಾಣುವ ಸದ್ಗುಣಗಳಾಗಿವೆ. ಅವರ ನಡೆನುಡಿಗಳ ನಡುವೆ ಸಂದಿಲ್ಲ. ಸಂಸ್ಕೃತಿಯ ಸಾಕಾರ ಅವರು. ವಿನಯ ಸಂಸ್ಕೃತಿಯ ಮೂಲಭೂತ ಗುಣ. ಬೇರೆ ಯಾವ ಗುಣಗಳಿದ್ದರೂ, ವಿನಯವಿಲ್ಲದಿದ್ದರೆ, ಸಂಸ್ಕೃತಿ ಎನಿಸಕೊಳ್ಳಲಾರದು. ಅವರ ಹಲವು ವಚನಗಳು ಈ ವಿನಯಶ್ರೀಗೆ ದಿವ್ಯಲಕ್ಷ್ಯಗಳಾಗಿವೆ.

ಮೃದು ವಚನವೆ ಸಕಲ ಜಪಂಗಳಯ್ಯ
ಮೃದು ವಚನವೆ ಸಕಲ ತಪಂಗಳಯ್ಯ
ಸದುವಿನಯವೆ ಸದಾಶಿವನ ಒಲುಮೆಯಯ್ಯ

ಏನಿ ಬಂದಿರಿ, ಹದುಳವಿದ್ದಿರೆ ಎಂದಡೆ
ನಿಮ್ಮ ಮೈಸಿರಿ ಹಾರಿಹೋಹುದೆ?
ಕುಳ್ಳಿರೆಂದಡೆ ನೆಲಕುಳಿ ಹೋಹುದೆ?
ಒಡನೆ ನುಡಿದಡೆ ಸಿರ ಹೊಟ್ಟೆಯೊಡೆವುದೆ ?

ಪ್ರತಿಯೊಬ್ಬ ಮಾನವನೂ ತನ್ನ ಜೀವನದಲ್ಲಿ ಅನುಸರಿಸಬೇಕಾದ ಯಾವುದೇ ಖರ್ಚಿಲ್ಲದ ಪ್ರಾಥಮಿಕ ನಡೆವಳಿಗಳು. ಸಜ್ಜನಿಕೆಯ ಲಕ್ಷಣಗಳಿವು.

ಸಿರಿವಂತ, ಮಂತ್ರಿ, ಅಧಿಕಾರಿ ಹಾಗೂ ಕುಡುಕರಲ್ಲಿ ಈ ಗುಣಗಳು ಅಪರೂಪ. ಅಪರೂಪವೆಂದು ಹೇಳಿದೆನೇ ಹೊರತು, ಇಲ್ಲವೆಂದು ಹೇಳಿಲ್ಲ. ಮಂತ್ರಿಗಳಿಗಿಂತ ಮಿಗಿಲಾಗಿ ಅವರ ಆಪ್ತಕಾರ್ಯದರ್ಶಿಗಳಿಗೆ ಆಗಾಗ್ಗೆ ಈ ಗುಣಗಳಲ್ಲಿ ತರಬೇತಿ ನೀಡುವುದಾದರೆ ನನ್ನಂಥ ಸರಳ ವಸ್ತ್ರಧಾರಿಗೆ, ಹಳ್ಳಿಯ ಗಮಾರರಿಗೆ ತುಸು ಸಮಾಧಾನವಾಗಬಹುದು. ಅವರಲ್ಲಿ ಹಲವರು ಸಾಮಾನ್ಯವಾಗಿ ಡಿಗ್ರಿ ಪಡೆದ ಅಸಂಸ್ಕೃತರು. ಕಳೆದ ಮಾರ್ಚ್ ತಿಂಗಳಲ್ಲಿ ಮಂತ್ರಿಯೊಬ್ಬರನ್ನು ನೋಡಲು ವಿಧಾನಸೌಧಕ್ಕೆ ಹೋಗಿದ್ದೆ. ಆ ಮಂತ್ರಿಗಳು ಸಜ್ಜನರು, ವಿನಯವೇ ಮೂರ್ತಿವೆತ್ತಂತಿರುವವರು. ಅವರಲ್ಲಿರಬೇಕಾದ ಅಹಂಕಾರ ಠೇಂಕಾರಗಳು ಅವರ ಆಪ್ತಕಾರ್ಯದರ್ಶಿಯಲ್ಲಿ ಮನೆಮಾಡಿಕೊಂಡಿರುವಂತೆ ತೋರುತ್ತದೆ. ಅವರ ಮುಂದೆ ಕುಳಿತಿರುವುದೇ ಆತ್ಮಗೌರವಕ್ಕೆ ಹಾನಿ ಎಂಬಂತೆ ನನಗನುಭವವಾಯಿತು.

ಬಸವಣ್ಣನವರು ಈ ಹೊತ್ತಿನಲ್ಲಿ ಬದುಕಿದ್ದರೆ, ಮೇಲಣ ವಚನದಲ್ಲಿ 'ಜನರ ಕಾಗದಗಳಿಗೆ ಉತ್ತರ ಬರೆದರೆ ಕೈಸೇದಿ ಹೋಗುವುದೆ ? ಲಕ್ಷ ಒಡೆಯುವುದೆ?' ಎಂಬೆರಡು ಪಂಕ್ತಿಗಳನ್ನು ಸೇರಿಸುತ್ತಿದ್ದರೆಂದು ತೋರುತ್ತದೆ. ಮಾಜಿ ಕುಲಪತಿಯೊಬ್ಬನಿಗೆ ಈ ಗತಿಯಾದರೆ, ಹಳ್ಳಿಯ ಮುಕ್ಕನ ಪಾಡು ಕೇಳಬೇಕೆ ?

ಕುದುರೆ ಸತ್ತಿಗೆಯವರ ಕಂಡಡೆ ಹೊರಳಿ ಬಿದ್ದು ಕಾಲು ಹಿಡಿವರು;
ಬಡಭಕ್ತರು ಬಂದಡೆ ಎಡೆಯಿಲ್ಲ ಅತ್ತಸನ್ನಿಯೆಂಬರು.

ಇಂದು ನಮ್ಮ ಸುತ್ತಮುತ್ತಲಿರುವ ಮಂತ್ರಿಗಳಂಥ ಅಧಿಕಾರಿಗಳಂಥ ಸ್ವಾಮಿಗಳಂಥ ಮಾನ್ಯರು ಆಗಲೂ ಇದ್ದರೆಂದು ತೋರುತ್ತದೆ. ಇಂದಿನ ಸಮಾಜಕ್ಕನುಗುಣವಾಗಿ ಸತ್ತಿಗೆಯವರ ಜತೆಗೆ ದಂಡಧಾರಿಗಳನ್ನು ಸೇರಿಸಿಕೊಳ್ಳಬಹುದು. ಪ್ರಜಾಕೋಟಿಗೂ ಸರ್ಕಾರಕ್ಕೂ ನಡುವಣ

ಸೇತುವೆಯ ಪತ್ರಮಾಧ್ಯಮ. ಪತ್ರಾವಹೇಳನವೆ ಪ್ರಜಾವಹೇಳನ ; ಕೃತಘ್ನತೆಯ ಸಂಕೇತ, ಸಂಸ್ಕೃತಿಯ ದಾರಿದ್ರ್ಯ.

ಲಂಚಕೋರರಲ್ಲಿಯೂ ಸತ್ಯವಂತರಿದ್ದಾರೆ: ಲಂಚರುಷುವತ್ತುಗಳ ಪೂರ್ಣ ಪ್ರತಿಬಂಧನ ಮನೆಯ ಮಡದಿ ಮಕ್ಕಳಿಂದ ಸಾಧ್ಯವೇ ಹೊರತು, ದೇವರಿಂದಾಗಲಿ, ನಿರೋಧಶಾಖೆಯಿಂದಾಗಲಿ ಸಾಧ್ಯವಿಲ್ಲ. ಸಹಸ್ರ ಸಹಸ್ರ ಮಠಗಳಿದ್ದರೂ, ಮಠಾಧಿಪತಿಗಳು ತಮ್ಮ ಶಿಷ್ಯರ ದುಷ್ಕರ್ಮಗಳನ್ನೆಂದೂ ಖಂಡಿಸಿದ್ದಿಲ್ಲ. ಆ ದುಷ್ಕರ್ಮಗಳ ಘಾಯಿದೆ ಅಷ್ಟಿಷ್ಟಾದರೂ ತಮಗೆ ದೊರೆತದ್ದಾದರೆ, ಅವರು ತೃಪ್ತರು. ಶಿಷ್ಯರೇ ಹಲವು ಗುರುಗಳ ದಾರಿತಪ್ಪಿಸುತ್ತಾರೆಂಬ ಪ್ರತೀತಿಯೂ ಇದೆ. ಹಲವು ಪ್ರತಿಷ್ಠಿತ ರಾಜಕೀಯ ನಾಯಕರ ಕಪ್ಪುಹಣದ ಭದ್ರತೆಗೆ ಕೆಲವು ಮಠಗಳು ಸಹಕರಿಸುವುದೂ ಉಂಟಂತೆ. ಸಮಾಜದ ಅವಿಭಾಜ್ಯಾಂಗವೆನ್ನುವಂತೆ ಲಂಚತನ ದರ್ಬಾರು ನಡಸುತ್ತಿದೆ. ಲಂಚಗುಳಿಯಂತೆ ಲಂಚಕೊಡುವವನೂ ಸಮಾನಾಪರಾಧಿಯೆಂದು ದಂಡಸಂಹಿತೆ ಪರಿಗಣಿಸುವುದಾದರೆ, ಲಂಚದ ಭರಾಟೆಯ ಕಾವು ತಕ್ಕಮಟ್ಟಿಗೆ ತಗ್ಗಬಹುದು.

ಕಳ್ಳನನ್ನು ಹಿಡಿಯಲು ನೇಮಕಗೊಂಡ ಅಧಿಕಾರಿಯೇ ಕಳ್ಳನಾದಂತಿದೆ, ಪ್ರಜಾಪಾಲಕನೆ ಪ್ರಜಾನಾಶಕನಾದಂತಿದೆ ಲಂಚನಿರೋಧ ಶಾಖೆಯ ಪರಿಸ್ಥಿತಿ. ಸಮಾಜದ ಜನ ಎಚ್ಚೆತ್ತುಕೊಂಡರೆ ಮಾತ್ರ, ಭ್ರಷ್ಟಾಚಾರ ನಿರೋಧವಾಗಲಿ, ನ್ಯಾಯಪಾಲನೆಯಾಗಲಿ ಸಾಧ್ಯವೇ ಹೊರತು, ಊರಿಗೊಂದು ಕೋರ್ಟಿದ್ದರೂ ಸಾಧ್ಯವಿಲ್ಲವೆಂಬುದಕ್ಕೆ ಹಲವು ನಿದರ್ಶನಗಳನ್ನು ನೀಡಬಹುದು. ಲಂಚದ ಹಣವನ್ನು ತೆಗೆದುಕೊಂಡವನಿಂದ ಕಕ್ಕಿಸಿದ ಒಂದು ಪ್ರಕರಣವನ್ನಿಲ್ಲಿ ಸದ್ಯಕ್ಕೆ ಉಲ್ಲೇಖಿಸಬಹುದು. (೩..೫.೨೦೦೦ದ ಪ್ರಜಾವಾಣಿಯ ಕೃಪೆ) ಜಗಳೂರು ತಾಲ್ಲೂಕು ದೊಣೆಹಳ್ಳಿಹೋಬಳಿಯ ಲೆಕ್ಕಿಗನನ್ನು ಕಮ್ಯೂನಿಸ್ಟ್ ಪಕ್ಷದ ಕಾರ್ಯಕರ್ತರು ಪಂಚಾಯಿತಿ ಕಚೇರಿಯ ಕೋಣೆಯಲ್ಲಿ ಕೂಡಿ ಹಾಕಿ ಧರಣಿ ಸತ್ಯಾಗ್ರಹ ಹೂಡುತ್ತಾರೆ. ರೈತರಿಂದ ತೆಗೆದುಕೊಂಡಿದ್ದ ಲಂಚವನ್ನು ವಾಪಸುಮಾಡುವುದಾಗಿ ಬರೆದುಕೊಟ್ಟ ಮೇಲೆ ಲಂಚಕೋರನನ್ನು ಕಾರ್ಯಕರ್ತರು ಬಿಡುಗಡೆ ಮಾಡುತ್ತಾರೆ. ಸಾರ್ವಜನಿಕರು ಹೀಗೆ ಸಂಘಟಿತರಾದಾಗ ಮಾತ್ರ ಭ್ರಷ್ಟಾಚಾರವನ್ನು ತಡೆಗಟ್ಟಲು ಸಾಧ್ಯ.

ಲಂಚಗುಳಿಗಳ ಸಮುದಾಯದಲ್ಲಿಯೂ ಅಲ್ಲೊಬ್ಬ ಇಲ್ಲೊಬ್ಬ ಸತ್ಯವಂತರಿದ್ದಾರೆ. ವಿಶ್ವವಿದ್ಯಾನಿಲಯದ ಸಂಶೋಧಕ ಮಿತ್ರರೊಬ್ಬರ ತಂಗಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳೊಡನೆ ತೇರ್ಗಡೆಹೊಂದಿದ್ದರು. ಮೌಖಿಕ ಪರೀಕ್ಷೆ ನಡೆಯಬೇಕಾಗಿತ್ತು. ಮಧ್ಯಸ್ಥನ ಮೂಲಕ ಸಂಬಂಧಪಟ್ಟವರಿಗೆ ಒಂದು ಲಕ್ಷ ರೂಪಾಯಿ ಸಲ್ಲಿಸಿದರು. ಒಪ್ಪಂದದಂತೆ ಉಳಿದ ಹಣವನ್ನು ಫಲಿತಾಂಶ ಪ್ರಕಟಗೊಂಡನಂತರ ಕೊಡತಕ್ಕದ್ದೆಂದು ತೀರ್ಮಾನವಾಗಿತ್ತು. ತಂಗಿ ಪರೀಕ್ಷೆಯಲ್ಲಿ ಬೇತೇರ್ಗಡೆಯಾಗಲಾಗಿ ಮಿತ್ರರು ಮಧ್ಯಸ್ಥರನ್ನು ಭೇಟಿಮಾಡಿದರು. ಆ ಮೇಲೊಂದು ದಿನ ಕೊಟ್ಟಿದ್ದ ಹಣವನ್ನು ಬಿಡಿಗಾಸೂ ಹಿಡಿದುಕೊಳ್ಳದೆ ಹಿಂದಿರುಗಿಸಿದರು. ಇಂಥ ಸತ್ಯವಂತ ಲಂಚಕೋರರಿಂದ ದೇಶದಲ್ಲಿ ಇನ್ನೂ ಅಲ್ಪಸ್ವಲ್ಪ ಧರ್ಮ ಉಳಿದಂತಾಗಿದೆಯಲ್ಲವೆ?

ಆಯ್ದಕ್ಕಿಮಾರಯ್ಯನ ಧರ್ಮಪತ್ನಿ ಶಿವಶರಣೆ ಲಕ್ಕಮ್ಮನಂಥವರು ಪ್ರತಿಯೊಂದು ಮನೆಯಲ್ಲಿಯೂ ಇರುವುದಾದರೆ, ಭ್ರಷ್ಟಾಚಾರ ಕೇವಲ ಒಂದು ದಿನದಲ್ಲಿ ನಿಂತು ಹೋದೀತು. ಅಕ್ಕಿ ಆಯುವ ಕಾಯಕ ಮಾರಯ್ಯನದು. ಆಯಾಯ ದಿನಕ್ಕೆಷ್ಟು ಬೇಕೋ ಅಷ್ಟೇ ಅಕ್ಕಿಯನ್ನು ತರಬೇಕಲ್ಲದೆ, ಒಂದು ಹಿಡಿ ಹೆಚ್ಚಾಗಿ ತಂದರೂ ಲಕ್ಕಮ್ಮ ಅದನ್ನು ಹಿಂದಿರುಗಿಸುತ್ತಾಳೆ. ಇಂಥ ಶರಣೆಯರಿಂದಲ್ಲದೆ, ಭ್ರಷ್ಟಾಚಾರವನ್ನು ತಡೆಗಟ್ಟುವ ಶಕ್ತಿ ಎಂಥ ಕಾಯ್ದೆಗಳಿಂದಾಗಲಿ ಆಯುಕ್ತರಿಂದಾಗಲಿ, ನ್ಯಾಯಾಲಯಗಳಿಂದಾಗಲಿ ಸಾಧ್ಯವಿಲ್ಲವೆಂದು ಯಾವ ದೇವರ ಮೇಲಾದರೂ ಆಣೆಯಿಟ್ಟು ಹೇಳಬಹುದು. ಗುಡಿಯೊಳಗಣ ದೇವರು ಸಹ ಲಂಚಪ್ರಿಯರಲ್ಲವೆ?

ದೇಜಗೌ

ಶೀತಲ ಪಾನೀಯ ಎಷ್ಟು ಸುರಕ್ಷಿತ ?

ಡಾ|| ಕರವೀರಪ್ರಭು ಕ್ಯಾಲಕೊಂಡ
ವೈದ್ಯಾಧಿಕಾರಿಗಳು,
ಸಮುದಾಯ ಆರೋಗ್ಯ ಕೇಂದ್ರ,
ಬಾದಾಮಿ-೫೮೭ ೨೦೧

ಬೇಸಿಗೆಯಲ್ಲಿ ಹೆಚ್ಚುವುದು ಧಗೆ. ಬಿಸಿಲಿನ ಬೇಗೆ, ಸಂಕಟ ಸುರಿಸುವ ಸೆಕೆ. ಕೋಲ್ಡ್ರಿಂಕ್ಸ್ (ಶೀಲತಪಾನೀಯ) ಎಲ್ಲಿಲ್ಲದ ಬೇಡಿಕೆ. ಜನರಿಗೂ ಅವನ್ನು ಕುಡಿಯುವ ತವಕ. ಇದಕ್ಕೆ ಕಂಪನಿಗಳು ನೀಡುವ ಮನಮೋಹಕ ಜಾಹೀರಾತುಗಳು ಪೂರಕ, ಪೋಷಕ ಉತ್ಪ್ರೇಕ್ಷೆ ಮಾಡಿ ಹೇಳಿದ್ದನ್ನೇ ಸತ್ಯವೆಂದು ನಂಬುವ ಯುವ ಜನಾಂಗ ಈ ಕೃತಕ ಪೇಯಗಳು ಕಟ್ಟಾಭಿಮಾನಿಗಳಾಗುವರು. ಮೇಲಿಂದ ಮೇಲೆ ಶೀತಲ ಪಾನೀಯ ಕುಡಿಯುವ ಚಟ ಮಾಡಿಕೊಳ್ಳುವರು. ಕಂಪನಿಗಳ ಕಮಾಂಡರು ಗಳ ಕಪ್ಪು ಹಣಕ್ಕೆ ಸರಕಾರವೂ ಸೊಪ್ಪು ಹಾಕುವುದು. ಅಂತಃಕರುಣ ಉಕ್ಕುವುದು, ರಿಯಾಯಿತಿಗಳನ್ನು ನೀಡುವುದು, ಕಂಪನಿಯವರು ಪೇಳಿದ್ದಕ್ಕೆ ಕಾಲೆತ್ತಿನಂತೆ ನಮ್ಮನ್ನಾಳುವ ನೇತಾರರು ಗೋಣು ಹಾಕುವರು. ಪರಿಣಾಮವಾಗಿ ಮೆಗಾ, ಜಂಬು, ಸೂಪರ್ ಜಂಬು ಪ್ಯಾಕುಗಳು ಮಾರುಕಟ್ಟೆಗೆ ಬಿಡುಗಡೆಯಾಗಿವೆ. ಅವು ಕ್ರಮವಾಗಿ ೩೦೦ಮಿಲಿ, ೫೦೦ಮಿಲಿ ಹಾಗೂ ೧.೫ಲೀಟರ್‌ಗಳ ಬಾಟಲುಗಳಾಗಿರುತ್ತವೆ. ಮೋಹಕ ಬಣ್ಣ, ಆಕರ್ಷಕ ಆಕಾರಗಳಲ್ಲಿ ಅಂಗಡಿಗಳಲ್ಲಿ ಅಲಂಕೃತಗೊಂಡು ಯುವಕರಿಗೆ ಮೋಡಿ ಮಾಡುತ್ತವೆ. ಅಂತಾರಾಷ್ಟ್ರೀಯ ಕ್ರೀಡೆಗಳನ್ನು ಪ್ರಾಯೋಜಿಸಿ ಪ್ರಚಾರಗಿಟ್ಟಿಸುತ್ತವೆ.

ಶೀತಲ ಪಾನೀಯ ಉತ್ಪಾದಕರು ಅವುಗಳ ಸೇವನೆಯಿಂದ ಉದ್ಭವಿಸಬಹುದಾದ ಆರೋಗ್ಯ ಸಮಸ್ಯೆಗಳತ್ತ ಸ್ವಲ್ಪವೂ ತಲೆ ಬಿಸಿ ಮಾಡಿಕೊಂಡಿಲ್ಲ. ಯಾವ ತಂತ್ರಗಳನ್ನು ಬಳಸುವುದರಿಂದ ಜನರನ್ನು ಮರುಳು ಮಾಡಲು ಸಾಧ್ಯ ಎಂಬುದರ ಕಡೆಗೆ ಗಮನವಿಟ್ಟು, ಆ ನಿಟ್ಟಿನಲ್ಲಿ ಅಧ್ಯಯನಗಳನ್ನು ಮಾಡುವರು. ಪ್ರಚಾರ ವೈಭವೀಕರಣಗೊಳಿಸುವರು. ಶೀತಲ ಪಾನೀಯಗಳಲ್ಲಿ ಕೆಫಿನ್, ಪಾಸ್ಫೇಟ್, ಕರಗಿದ ಕಾರ್ಬನ್ ಡೈ ಆಕ್ಸೈಡ್ ಇತ್ಯಾದಿ ಅಡಕವಾಗಿ ರುತ್ತವೆ. ೨೦೦ ಮಿಲಿಗಿಂತ ದೊಡ್ಡ ಪ್ರಮಾಣದ ಬಾಟಲುಗಳಲ್ಲಿಯ ಪೇಯಗಳನ್ನು ಕುಡಿಯುವಾಗ ಅದು ಮಕ್ಕಳು, ಯುವಕ ಯುವತಿಯರನ್ನು ಇನ್ನಷ್ಟು ಕುಡಿಯುವಂತೆ ಪ್ರೇರೇಪಿಸುತ್ತದೆ. ಇದರಿಂದಾಗಿ ಇವುಗಳ ಸೇವನೆ ನಿತ್ಯ ನಿರಂತರವಾಗುತ್ತದೆ. ಹೆಚ್ಚು ಪೇಯ ಸೇವನೆ, ಹೆಚ್ಚೆಚ್ಚು ರಸಾಯನಗಳ ಸೇವನೆಗೂ ಹಾದಿ ಮಾಡುವುದು. ಹೀಗಾಗಿ ಅವುಗಳ ತೀವ್ರ ವಿಷಮತೆ ತಲೆದೋರಬಹುದು. ಅನೇಕ ತೊಡಕು ತೊಂದರೆಗಳು ಹಣಕಿ ಹಾಕಬಹುದು. ಆರೋಗ್ಯದ ಮೇಲಾ ಗುವ ದುಷ್ಪರಿಣಾಮಗಳು ಮಕ್ಕಳ ಮೇಲೆ ಉಳಿದವರಿಗಿಂತ ಹೆಚ್ಚಾಗುವುದರಿಂದ ಭವಿಷ್ಯ ಎಷ್ಟೊಂದು ಭೀಕರವಾಗಿರಬಹುದು ಎಂಬುದನ್ನು ಯಾರಾದರೂ ಊಹಿಸಬಹುದು !

ರಸಾಯಣಗಳ ವಿರಸದೂಟ: ಮಾರುಕಟ್ಟೆಯಲ್ಲಿ ಲಭ್ಯವಿರುವ ಹೆಸರಾಂತ ಶೀತಲ ಪಾನೀಯಗಳಲ್ಲಿ ಅಡಕವಾಗಿರುವ ರಾಸಾಯನಿಕ ಗಳನ್ನು ಪ್ರಯೋಗಾಲಯದಲ್ಲಿ ವಿಶ್ಲೇಷಿಸಿದ್ದು ಅವು ಹೀಗಿವೆ- ಶೀತಲ ಪಾನೀಯಗಳ ವಿಶ್ಲೇಷಣೆ ವಿವರ (ಪ್ರತಿ ೧.೫ ಲೀಟರ್‌ನಲ್ಲಿ)

	ಪಿ ಎಚ್	ಕೆಫಿನ್	ಪಾಸ್ಫೇಟ್
ಬ್ರಾಂಡ್ 'ಅ'	೨.೬೧	೭೫೦ ಮಿಗ್ರಾಂ	೭೦೨ ಮಿಗ್ರಾಂ
'ಬ'	೨.೫೪	೪೫೦ ಮಿಗ್ರಾಂ	೭೦೮ ಮಿಗ್ರಾಂ
'ಕ'	೨.೫೫	೬೦೦ ಮಿಗ್ರಾಂ	೮೧೩ ಮಿಗ್ರಾಂ

ಶೀತಲ ಪಾನೀಯಗಳಲ್ಲಿ ಸಕ್ಕರೆ ಬಳಕೆ ಪ್ರಮಾಣಕ್ಕೆ ಮಿತಿಯನ್ನು ಹಾಕಿಲ್ಲ. ಅವುಗಳ ಉತ್ಪಾದಕರು ಮನಬಂದಂತೆ ಕೃತಕ ಸಕ್ಕರೆಯನ್ನು ಬಳಸುವರು. ಹೀಗಾಗಿ ಇವನ್ನು ಸೇವಿಸಿದಾಗ ತತ್‌ಕ್ಷಣ ಹೆಚ್ಚು ಕ್ಯಾಲರಿಗಳು ದೊರೆತು ಹೊಸ ಹುರುಪು, ಹುಮ್ಮಸ್ಸು, ಸ್ಫೂರ್ತಿ ಸಂಚಾರ ವಾದ ಭ್ರಮೆ ಉಂಟಾಗುತ್ತದೆ. ಶ್ರಮ, ದಣಿವು ಪರಿಹಾರವಾದಂತಾಗುತ್ತದೆ. ಟಿ.ವಿ.ಯ ರಂಜನೀಯ ಜಾಹೀರಾತುಗಳ ಮೋಡಿಗೆ ಮೊದಲೇ ಮರುಳಾದ ಯುವಜನಾಂಗ, ಖುಷಿ ನೀಡುವ ತಾತ್ಕಾಲಿಕ ಪರಿಣಾಮಗಳ ಕಪಿ ಮುಷ್ಟಿಯಲ್ಲಿ ಸಿಕ್ಕಾಗ ಶೀತಲ ಪಾನೀಯುಗಳ ಗುಲಾಮರಾಗುವರು.

ಶೀತಲ ಪಾನೀಯುಗಳಲ್ಲಿಯ ಸಕ್ಕರೆಯಲ್ಲಿ ಬೇಗನೆ ರಕ್ತಗತವಾಗಿ ಬಿಡುತ್ತದೆ. ರಕ್ತದಲ್ಲಿ ಸಕ್ಕರೆ ಅಂಶ ಜಾಸ್ತಿಯಾದರೊಡನೆ ದೇಹವು 'ಇನ್ಸುಲಿನ್' ಎಂಬ ಹಾರ್ಮೋನನ್ನು ಸ್ರವಿಸಬೇಕಾಗುತ್ತದೆ. ಇದರಿಂದ ಇನ್ಸುಲಿನ್ ಸ್ರವಿಸುವ ಮೇದೋಜ್ಜೀರಕ ಗ್ರಂಥಿಗೆ ಅನಗತ್ಯ ಒತ್ತಡ ಬೀಳುತ್ತದೆ. ಅಮೆರಿಕದ ವೈದ್ಯರೊಬ್ಬರ ಪ್ರಕಾರ ಶೀತಲಪಾನೀಯುಗಳಲ್ಲಿಯ ಹೆಚ್ಚಿನ ಸಕ್ಕರೆಯಿಂದ ನಮ್ಮ ದೇಹದಲ್ಲಿರುವ ರೋಗ ನಿರೋಧಕ ಬ್ಯಾಕ್ಟೀರಿಯಾಗಳಲ್ಲಿ ಶೇ ೨ರಷ್ಟು ಅಸುನೀಗುತ್ತವೆ. ಇತ್ತೀಚೆಗೆ 'ಪಥ್ಯ'ದ (ಡಯಟ್) ಪಾನೀಯುಗಳು ಕಾಣಿಸಿಕೊಳ್ಳುತ್ತಿವೆ. ಇವಕ್ಕೆ ಸಕ್ಕರೆ ಬದಲು ಸಾಕರಿನ್ ಸೇರಿಸುತ್ತಾರೆ. ಆದರೆ, ಅಧಿಕ ಸಾಕರಿನ್ ಸೇವನೆ ಕ್ಯಾನ್ಸರಿಗೆ ದಾರಿ. ಪ್ರಾಣಿಗಳ ಮೇಲೆ ನಡೆಸಿದ ಪರೀಕ್ಷೆ ಗಳಿಂದಾಗಿ ಇದು ದೃಢಪಟ್ಟಿದೆ. ಅಲ್ಲದೆ ಅದು ನಿಶ್ಶಕ್ತಿ, ಮುಂಗೋಪ, ತಲೆನೋವು ಹಾಗೂ ಮೂಳೆ ಸವೆತಕ್ಕೂ ಕಾರಣವಾಗಬಹುದು.

ಸದ್ಯ ಮಾರುಕಟ್ಟೆಯಲ್ಲಿಯ ಶೀತಲ ಪಾನೀಯುಗಳ ಪ್ರತಿ ಬಾಟಲಿಯಲ್ಲಿಯ ಸಕ್ಕರೆಯ ಪ್ರಮಾಣ ೨೫ ಟೀ ಸ್ಪೂನಗಳಷ್ಟು! ಇದು ನೀಡಬಹುದಾದ ಹೆಚ್ಚುವರಿ ಕ್ಯಾಲರಿಗಳು, ಅವುಗಳಿಂದಾಗುವ ದುಷ್ಪರಿಣಾಮಗಳತ್ತ ಗಮನ ಹರಿಸಿದಾಗ ಯಾರಿಗಾದರೂ ಹೆದರಿಕೆ ಆಗದೇ ಇರದು. ಸಕ್ಕರೆಯ ಪ್ರಮಾಣ ಹಲ್ಲುಗಳ ಮೇಲೆ ಪರಿಣಾಮ ಬೀರುತ್ತದೆ. ದಂತ ಕ್ಷಯದ ಬೀಜ ಬಿತ್ತುವುದು. ಒಸಡುಗಳಲ್ಲಿ ನೋವು ಕಾಣಿಸುವುದು. ಕಾಲಕ್ರಮೇಣ ಹಲ್ಲುಗಳ ಸಡಿಲಗೊಳ್ಳುವುವು. ಪೌಷ್ಟಿಕಾಂಶ ರಹಿತವಾಗಿರುವ ಶೀತಲ ಪಾನೀಯ ಕುಡಿದಾತನ ದೇಹ ತೂಕವನ್ನು ಹೆಚ್ಚಿಸುವುದರ ಹೊರತಾಗಿ ಆತನ ಆರೋಗ್ಯಕ್ಕೆ ಯಾವುದೇ ರೀತಿಯಿಂದ ಸಹಕಾರಿ ಅಲ್ಲ. ಈ ಪೇಯಗಳು ಹಸಿವನ್ನು ಹಿಂಗಿಸುತ್ತವೆ. ಹೀಗಾಗಿ ವ್ಯಕ್ತಿ ಆಹಾರ ಪದಾರ್ಥಗಳನ್ನು ಸೇವಿಸದೇ ಹೋಗುವುದರಿಂದ ಕೊರತೆಯ ಕಾಯಿಲೆಗಳ ಕರಿನೆರಳು ಕಾಣಿಸಿಕೊಳ್ಳುವುದು. ತಂಪು ಪೇಯಗಳಲ್ಲಿಯ ಆರ್ಸೆನಿಕ್ ಅನೇಕ ರೋಗಗಳ ಜನ್ಮದಾತನಂತೆ ವರ್ತಿಸುವುದು. ಪೇಯಗಳ ಆಮ್ಲೀಯತೆ ಹೊಟ್ಟೆ ಹುಣ್ಣಿಗೆ ಹಾದಿ ಮಾಡಬಹುದು. ಈಗಾಗಲೇ ಪಿತ್ತದಿಂದ ತತ್ತರಿಸುವವರಲ್ಲಿ ಹೊಟ್ಟೆ ಹುಣ್ಣು ಉಲ್ಬಣಗೊಂಡು ನೋವಿನಿಂದ ನಲುಗಬಹುದು. ಬಾಯಲ್ಲಿ ಹುಳಿ ಹುಳಿ ನೀರು ಬರಬಹುದು.

ಮಕ್ಕಳು ದೊಡ್ಡವರ ಹಾಗೆ ಶೀತಲ ಪಾನೀಯಗಳನ್ನು ಗಟಗಟ ಕುಡಿಯುವುದಿಲ್ಲ. ಸಾವಕಾಶವಾಗಿ ಸ್ವಲ್ಪ ಸ್ವಲ್ಪವನ್ನೇ ಆಟವಾಡುತ್ತ ಕುಡಿಯುವರು. ಇದು ಅವರ ಸಹಜ ಸ್ವಭಾವ. ಹೀಗಾಗಿ ಶೀತಲ ಪಾನೀಯ ಹಲ್ಲುಗಳ ಸಂಪರ್ಕದಲ್ಲಿ ಬಹಳ ಕಾಲದವರೆಗೆ ಉಳಿಯುವುದು. ಹಲ್ಲುಗಳಿಗೆ ಹಾನಿ ಉಂಟು ಮಾಡುವ ಅವಕಾಶ ಹೆಚ್ಚುವುದು. ಫಾಸ್ಫಾರಿಕ್ ಆಮ್ಲದಿಂದಾಗಿ ಶೀತಲ ಪಾನೀಯಗಳಲ್ಲಿ ಆಮ್ಲೀಯತೆ ಇರುವುದು. ಇದು ಹಲ್ಲುಗಳ ಪದರುಗಳು ಸವೆದು

ಹೋಗುವಂತೆ ಮಾಡುವುದು. ಇದರಿಂದ ಹಲ್ಲುಗಳು ಅಶಕ್ತವಾಗುವುದರ ಜೊತೆಗೆ ಕಂದು ಬಣ್ಣಕ್ಕೆ ತಿರುಗುವುವು. ಯಾವ ಮಕ್ಕಳು ಹೆಚ್ಚು ಶೀತಲ ಪಾನೀಯಗಳನ್ನು ಕುಡಿಯವರೋ, ಆ ಮಕ್ಕಳ ಹಲ್ಲುಗಳು ಹೆಚ್ಚು ಹಾಳಾಗುವುವು. ಇದನ್ನು ಆಳವಾದ ಅಧ್ಯಯನಗಳು ಸ್ಪಷ್ಟ ಪಡಿಸಿವೆ.

ಹಲ್ಲುಗಳನ್ನು ಶೀತಲ ಪಾನೀಯಗಳಲ್ಲಿ ಮುಳುಗಿ ಸಿಟ್ಟರೆ ಅದು ಕ್ಯಾಲ್ಸಿಯಮ್ ರಹಿತ ವಾಗಿ ದುರ್ಬಲಗೊಂಡು ಕೆಲವೇ ದಿನಗಳಲ್ಲಿ ಪಾನೀಯಗಳಲ್ಲಿ ವಿಲೀನಿಸಿ ಹೋಗುವುದಂತೆ. ಇದು ನಾವೆಲ್ ಸಂಶೋಧನ ಕೇಂದ್ರದ ಡಾ|| ಕ್ಲೈವ್ ಮ್ಯಾಕೆ ಅವರ ಪ್ರಯೋಗದ ಫಲಿತಾಂಶ. ಮ್ಯಾಕೆ ಕೈಕೊಂಡ ಮತ್ತೊಂದು ಪ್ರಯೋಗದಲ್ಲಿ ಅವರು ಕೆಲವು ಇಲಿಗಳಿಗೆ ಉತ್ತಮ ಆಹಾರ ವನ್ನು ನೀಡಿ ಕುಡಿಯಲು ಮಾತ್ರ ಶೀತಲ ಪಾನೀಯ ಕೊಡುತ್ತಿದ್ದರು. ಆರು ತಿಂಗಳ ನಂತರ ಕೆಲವು ಇಲಿಗಳಲ್ಲಿ ಹಲ್ಲುಗಳು ಅತ್ಯಂತ ದುರ್ಬಲ ಗೊಂಡಿದ್ದರೆ, ಮತ್ತೆ ಕೆಲವು ಇಲಿಗಳಲ್ಲಿ ಇದ್ದದ್ದು ವಸಡು ಮಾತ್ರ!

ಶೀತಲ ಪಾನೀಯಗಳಲ್ಲಿ 'ಕೆಫಿನ್' ಬಳಸಲ್ಪಡು ವುದು. 'ಕೆಫಿನ್' ಪ್ರಮಾಣ ಜಾಸ್ತಿಯಾದಷ್ಟು ಸೇವಿಸಿದಾತನಿಗೆ ನಿರುತ್ಸಾಹ, ತಲೆನೋವು, ನಿದ್ರಾರಾಹಿತ್ಯ ಇತ್ಯಾದಿಗಳು ಪೀಡಿಸುವುವು. 'ಕೆಫಿನ್' ದೇಹದಲ್ಲಿ ಪಚನವಾದಾಗ ಯುರಿಕೆ ಆಮ್ಲವಾಗಿ ಪರಿವರ್ತನೆಗೊಳ್ಳದೇ, ಮಿಥೈಲ್ ಯುರಿಕೆ ಆಮ್ಲವಾಗಿ ರೂಪಾಂತರಗೊಳ್ಳುವುದು. ಇದು ತ್ವರಿತವಾಗಿ ಕರಗುವುದು. ಕೀಲುಗಳಲ್ಲಿ ಸಂಗ್ರಹಗೊಂಡು ಕೀಲು ನೋವು ಕಾಣಿಸಿ ಕೊಳ್ಳುವುದು. 'ಗೌಟ' ರೋಗದಿಂದ ಬಳಲುವವರಿಗೆ ಮತ್ತಷ್ಟು ನೋವಿನ ಉಡುಗೊರೆ ದೊರೆಯುವುದು.

ಕೆಫಿನ್ ಯುಕ್ತ ಶೀತಲ ಪಾನೀಯ ಹೃದಯ ಮತ್ತು ರಕ್ತ ಸಂಚಾರ ಮಂಡಲ, ನರಮಂಡಲ ಗಳ ಮೇಲೆ ನೇರಪ್ರಭಾವ ಬೀರುವುದರಿಂದ ಇವುಗಳನ್ನು ರಕ್ತದೊತ್ತಡದಿಂದ ಬಳಲು ವವರು ಕುಡಿಯಲೇಬಾರದು. ಕೇಂದ್ರ ನರಮಂಡಲ ಪ್ರಚೋದನೆಯಿಂದ ತಳಮಳ ಹೆಚ್ಚಿ ನಿದ್ರಾಭಂಗ ಆಗುವುದು. ಹೃದಯದ ತಾಳ ತಪ್ಪುವುದು. ಹಾವು ನೋಡಿದ ಹೆದರಿಕೆಯಲ್ಲಿ ಹೃದಯ ಬಡಿದುಕೊಳ್ಳುವಂತೆ, ಶೀತಲ ಪಾನೀಯ ಕುಡಿದಾಗ ಆಗಬಹುದು. ಈ ಪರಿಣಾಮಗಳು ದೊಡ್ಡ ದೊಡ್ಡ ಬಾಟಲು ಗಳಲ್ಲಿನ ಪೇಯ ಕುಡಿಯುವುದರಿಂದ ಸರ್ವಸಾಮಾನ್ಯ. ಕೆಫಿನ್ ಯುಕ್ತ ಪೇಯಗಳನ್ನು ಕುಡಿಯುವುದು ಕಾಲಕ್ರಮೇಣ ದಿಟವಾಗಿ ಬಿಡುವುದು. ತಾಳಿಕೆಯ ತಳಪಾಯದ ಮೇಲೆ ಮಾನಸಿಕ ಅವಲಂಬನೆ ತಲೆ ಎತ್ತುವುದು.

ಶೀತಲ ಪಾನೀಯಗಳಲ್ಲಿ ಕೆಫಿನ್ ಜೊತೆಗೆ ಫಾಸ್ಫಾರಿಕ್ ಆಮ್ಲವು ಅಡಕವಾಗಿರುತ್ತದೆ. ಹೆಚ್ಚುವರಿ ಫಾಸ್ಫೇಟ್ ಸೇವನೆ ಎಲುಬುಗಳನ್ನು ಗಟ್ಟಿಗೊಳಿಸುವ ಬದಲು ಅನೇಕ ಸಮಸ್ಯೆಗಳಿಗೆ ಹುಟ್ಟು ಹಾಕುವುದು. ಫಾಸ್ಫರಸ್ (ರಂಜಕ) ನಿತ್ಯ ಸೇವಿಸುವ ನೈಸರ್ಗಿಕ ಆಹಾರ ಪದಾರ್ಥಗಳಲ್ಲಿ ಹೇರಳವಾಗಿ ದೇಹಕ್ಕೆ ಪೂರೈಕೆಯಾಗುವುದು. ಹೀಗಾಗಿ ಅದರ ಕೊರತೆಯ ಕರಿನೆರಳು ಮಾನವರ ಸಮೀಪ ಸುಳಿಯುವುದಿಲ್ಲ. ಆದರೆ, ಶೀತಲ ಪಾನೀಯ ಮೂಲಕ ಸೇವಿಸಿದ ಹೆಚ್ಚುವರಿ ಫಾಸ್ಫೇಟ್ ಮೂತ್ರ ಪಿಂಡಗಳ ಮೇಲೆ ದುಷ್ಪರಿಣಾಮ ಬೀರು ವುದು. ಅನಾವಶ್ಯಕ ಅನಾಹುತಗಳಿಗೆ ಆಹ್ವಾನ ನೀಡುವುದು.

ಶೀತಲ ಪಾನೀಯಗಳಲ್ಲಿ ರಅಡಗಿರುವ ಇತರ ಅಂಶಗಳೆಂದರೆ- ಸೀಸ, ತವರ, ತಾಮ್ರ, ಆರ್ಸೆನಿಕ್, ಕ್ಯಾಡ್ಮಿಯಮ್ ಇತ್ಯಾದಿ.

ಭಾರತೀಯ ಮಾನಕ ಸಂಸ್ಥೆ ನಿಗದಿಪಡಿಸಿದ ಪ್ರಮಾಣಕ್ಕಿಂತ ಹೆಚ್ಚಿವೆ. ಅಹ್ಮದಾಬಾದಿನಲ್ಲಿ ಸ್ಥಾಪನಗೊಂಡಿರುವ ಗ್ರಾಹಕ ಶಿಕ್ಷಣ ಮತ್ತು ಸಂಶೋದನಾ ಸಂಸ್ಥೆಯಲ್ಲಿ ಬೇರೆ ಬೇರೆ ಕಂಪನಿಗಳಶೀತಲ ಪಾನೀಯಗಳನ್ನು ಕೂಲಂಕುಷವಾಗಿ ವಿಶ್ಲೇಷಿಸಿದಾಗ ಅನೇಕ ಆಶ್ಚರ್ಯಕರ ಸಂಗತಿಗಳು ಬೆಳಕಿಗೆ ಬಂದುವು. ಈ ಪಾನೀಯ ಗಳಲ್ಲಿ ನಿರ್ಧರಿತ ಪ್ರಮಾಣಕ್ಕೂ ಮಿಕ್ಕಿ ೦.೫ ಪಿ.ಪಿ.ಎಂ. ರಷ್ಟು ಹೆಚ್ಚು ಸೀಸ ಇದೆಯೆಂಬುದು ತಿಳಿದು ಬಂದಿದೆ. ಸೀಸ ಶರೀರವನ್ನು ಹೊಕ್ಕಿತೆಂದರೆ ಕೆಂಪು ರಕ್ತಕಣಗಳನ್ನು ನಾಶಗೊಳಿಸುವುದು. ನರಗಳ ದೌರ್ಬಲ್ಯ ಹೆಚ್ಚಿಸುವುದು. ವ್ಯಕ್ತಿ ಅಶಕ್ತಿಯ ಅಗರವಾಗಲು ಸಹಕರಿಸುವುದು. ರಕ್ತದ ಒತ್ತಡ ಹೆಚ್ಚಿಸುವುದು. ಒಂದೇ ಮಾತಿನಲ್ಲಿ ಹೇಳುವುದಾದರೆ ಶೀತಲ ಪಾನೀಯ ಕುಡಿಯುವುದೆಂದರೆ ವಿಷರಾಸಾಯನಿಕಗಳ ಔತಣದೂಟ ಮಾಡಿದಂತೆ!

ಕೋಲಾ ಕಲ್ಚರ್ ಕೋಲಾಹಲ : ಮುಚ್ಚಳ ತೆರೆದೊಡನೆ ಬುಸ್ಸೆಂದು ಉಕ್ಕುವ, ವಿಚಿತ್ರ ರುಚಿಯ ಗಂಟಲು ಹೊಟ್ಟೆಯೆಲ್ಲ ಕೊರೆಯುವಂತೆ, ಮಾಡುವ, ಪಾಶ್ಚಾತ್ಯರ ಜೀವನದ ಮತ್ತು ವ್ಯಾಪಾರ ನೀತಿಯ ಪ್ರತೀಕವಾದ 'ಕೋಲಾ' ಗಳು ಸಮೂಹ ಮಾಧ್ಯಮದ ರಂಗುರಂಗಿನ ಜಾಹೀರಾತುಗಳ ಮೋಡಿಯಿಂದ ನಮ್ಮ ಯುವ ಜನಾಂಗವನ್ನು ಮರಳುಗೊಳಿಸಿವೆ. ಯುವ ಜನರಿಗೆ' ಕೋಲಾಕಲ್ಚರ್' ಆಧುನಿಕ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಕೋಲಾ-ಕೋಲಾಹಲ ಜೀವಕ್ಕೆ ಹಾಲಾಹಲ ಎಂಬ ಅರಿವು ಜನರಲ್ಲಿ ಇಲ್ಲದಿರುವುದು ಒಂದು ದೊಡ್ಡ ದುರಂತ. ಜನರ ಈ ಅಜ್ಞಾನವನ್ನೇ ಬಂಡವಾಳವಾಗಿಸಿಕೊಂಡಿರುವ ಶೀತಲ ಪಾನೀಯ ಕಂಪನಿಗಳು ರಂಗುರಂಗಿನ ಬಾಟಲುಗಳನ್ನು ಬಜಾರಕ್ಕೆ ಬಿಡುಗಡೆ ಮಾಡುತ್ತಲೇ ಇವೆ. ಈ ಪಾನೀಯ ಗಳು ಅತೀ ತಂಪಾಗಿರುವುದರಿಂದ ಗಟಗಟನೆ ಕುಡಿದಾಗ ರಕ್ತನಾಳಗಳು ಒಮ್ಮೆಲೇ ಸಂಕುಚಿತವಾಗುವುವು. ಇದರಿಂದ ಜೀರ್ಣ ರಸಗಳ ಸ್ರಾವ ಒಮ್ಮೆಲೆ ಕಡಿಮೆ ಯಾಗುವುದು. ಅಲ್ಪಸ್ವಲ್ಪ ಪಾಚಕರಸಗಳು ಪಾನೀಯದೊಂದಿಗೆ ಸೇರಿ ಹೆಚ್ಚು ನೀರಾಗಿ ದುರ್ಬಲಗೊಳ್ಳುತ್ತವೆ.

ಹೀಗಾಗಿ ಶೀತಲ ಪಾನೀಯ ಕುಡಿದ ನಂತರ ಸೇವಿಸಿದ ಆಹಾರ ಪಚನವಾಗುವುದಿಲ್ಲ. ಅಲ್ಲದೇ ತೇಗು, ಹೊಟ್ಟೆ ಉಬ್ಬರ ಉಂಟಾಗು ತ್ತದೆ. ಒಂದು ಅಧ್ಯಯನದ ಪ್ರಕಾರ ಒಂದು ಲೋಟ ಶೀತಲ ಪಾನೀಯದಲ್ಲಿಯ ವಿಷಾಮ್ಲಗಳ ದುಷ್ಪರಿಣಾಮವನ್ನು ನಿವಾರಿಸಲು ಹೆಚ್ಚು ಕ್ಷಾರಾಂಶ ಹೊಂದಿದ ೩೨ ಲೋಟ ನೀರು ಕುಡಿಯಬೇಕು! ಮೆಕ್ಸಿಕೋದ ಡಾ||ಫ್ರಾನ್ಸಿಸ್ಕೊ ಕೊಂಟ್ರಾರೀಸರ್ ಪ್ರಕಾರ ಶೀತಲ ಪಾನೀಯ ಸೇವನೆ ದೇಹದಲ್ಲಿ ಆಮ್ಲಜನಕದ ಪ್ರಮಾಣ ವನ್ನು ಕುಗ್ಗಿಸಿ ಯಾವುದೇ ತರಹದ ಕ್ಯಾನ್ಸರನ್ನು ಆಮಂತ್ರಿಸಬಹುದು. ಅಮೆರಿಕನ್ನರು ವರ್ಷಕ್ಕೆ ಸರಾಸರಿ ತಲಾ ೮೦೦ಬಾಟಲಿಗಿಂತ ಹೆಚ್ಚು ತಂಪು ಪಾನೀಯಗಳನ್ನು ಸೇವಿಸುತ್ತಾರೆ. ಅಮೆರಿಕಾದಲ್ಲಿ ಸಾವಿಗೆ ಕ್ಯಾನ್ಸರ್ ಎರಡನೇ ಸ್ಥಾನದಲ್ಲಿದೆ!(ಮೊದಲನೆಯದು ಧೂಮಪಾನ?)

ಶೀತಲ ಪಾನೀಯ ಸೇವನೆಯಿಂದ ಟೈಫಾಯ್ಡ್ ವಾಂತಿಭೇದಿ, ಆಮಶಂಕೆ ರೋಗಗಳಿಗೆ ಆಹ್ವಾನ ನೀಡಿದಂತೆ. ಅಲರ್ಜಿ ಆಗಮನಕ್ಕೆ ವೀಳೆ ಕೊಟ್ಟಂತೆ, ಇದಕ್ಕೆ ಕಾರಣ ಅದರಲ್ಲಿರುವ ನಂಜುಕಾರಕ ಅಂಶಗಳು ಬಾಯಾರಿಕೆ ತಣಿಸಲು, ಆರೋಗ್ಯ ವರ್ಧಿಸಲು ಕ್ಯಾಲೋರಿಗಳಲ್ಲಿದ್ದ ಶುದ್ಧ ನೀರಿನ ಸಮ ಯಾವುದೂ ಇಲ್ಲ. ಇದು ಸತ್ಯ. ಉಳಿದುದೆಲ್ಲಾ ಮಿಥ್ಯ.

ಕಡೆಗಣಿಸಿದ ಕಟ್ಟೆಚ್ಚರಿಕೆಗಳು : ಭಾರತೀಯ ಔಷಧಿ ನಿಯಂತ್ರಣಕಾರರು ಔಷಧ ತಯಾರಿಕೆಯಲ್ಲಿ ಗ್ಲಿಸರೋ ಫಾಸ್ಫೇಟ್ ಮತ್ತು ಕೆಫಿನ್ ಬಳಸಬಾರದೆಂದು ಕಟ್ಟೆಚ್ಚರಿಕೆ ನೀಡುವುದರ ಜೊತೆಗೆ ಈ ಘಟಕಗಳಿರುವ ಔಷಧಿಗಳನ್ನು ಮಾರಾಟಕ್ಕೆ ನಿಷೇಧಿಸಿದೆ. ಇದರ ಅರಿವು ಸಾರ್ವಜನಿಕರಿಗೆ ಇಲ್ಲ. ಈ ದೌರ್ಬಲ್ಯವನ್ನೇ ಬಂಡವಾಳವಾಗಿ ಬಳಸಿಕೊಂಡಿರುವ ಶೀತಲ ಪಾನೀಯ ಕಂಪನಿಗಳು ಪೇಯಗಳ ತಯಾರಿಕೆಯಲ್ಲಿ ಬಳಸುತ್ತಿರುವುದು ಮತ್ತು ಅವು ಯಾವ ಪ್ರಮಾಣದಲ್ಲಿವೆ ಎಂಬುದನ್ನು ಬಾಟಲುಗಳ ಲೇಬಲ್ ಮೇಲೆ ಮುದ್ರಿಸದೇ ಇರುವುದು ಗ್ರಾಹಕರನ್ನು ಕಗ್ಗತ್ತಲಲ್ಲಿ ಇಟ್ಟಂತಾಗಿದೆ.

ಪರದೇಶಗಳಲ್ಲಿ ಪ್ರತಿಯೊಂದು ತಂಪು ಪಾನೀಯಗಳ ಪ್ಯಾಕ್ ಮೇಲೂ ಅದರ ಪ್ಯಾಕಿಂಗ್ ದಿನಾಂಕ, ಸೇವಿಸಲು ಇರುವ ಗರಿಷ್ಠ ಅವಧಿ ಅಡಕವಾಗಿರುವ ಅಂಶಗಳ ವಿವರ ಇತ್ಯಾದಿಗಳನ್ನು ನಮೂದಿಸಬೇಕಾದದ್ದು ಕಾನೂನು ಬದ್ಧ ಕ್ರಮವಾಗಿದೆ. ಆದರೆ ನಮ್ಮ ದೇಶದಲ್ಲಿ? ಅವುಗಳತ್ತ ಗಮನ ಹರಿಸಬೇಕಾದದ್ದು ಮುಖ್ಯ ಎಂಬ ಮೂಲಭೂತ ಪರಿಜ್ಞಾನವೂ ಗ್ರಾಹಕನಿಗಿಲ್ಲ. ಇದರ ದುರ್ಲಾಭವನ್ನು ಶೀತಲ ಪಾನೀಯ ಕಂಪನಿಗಳು ಪಡೆದುಕೊಳ್ಳುತ್ತಿವೆ.

ಇಂಗಾರಾಮ್ಲ ಪಿತ್ತವನ್ನು ಹೆಚ್ಚಿಸಿ, ಹೊಟ್ಟೆ ಹುಣ್ಣಿದ್ದವರಿಗೆ ಮತ್ತಷ್ಟು ತೊಂದರೆ ಕೊಡುವುದು. ಇದು ಉಸಿರಾಟ ಕೇಂದ್ರವನ್ನು ಪ್ರಚೋದಿಸುವುದು. ಶೀತಲ ಪಾನೀಯಗಳೆಲ್ಲ ಇಂಗಾಲಮಿಶ್ರಿತ ಪೇಯಗಳು ಇವುಗಳ ಅತಿಯಾದ ಸೇವನೆ ತಲೆನೋವು, ತಲೆಸುತ್ತು, ಮಾನಸಿಕ ಗೊಂದಲ, ಏದುಸಿರು ಬಿಡುವಿಕೆ, ಉಸಿರಾಟ ವೇಗದ ಹೆಚ್ಚಳಗಳಿಗೆ ಹಾದಿ ಮಾಡಬಹುದು.

ಶೀತಲ ಪಾನೀಯ ಪೋಷಕಾಂಶಗಳನ್ನು ಹೊಂದಿರುವುದಿಲ್ಲ. ಅವು ಕೇವಲ ಕ್ಯಾಲರಿಗಳನ್ನು ನೀಡಬಲ್ಲವು. ಅವುಗಳಲ್ಲಿ ಪ್ರೋಟೀನುಗಳಿಲ್ಲ, ಜೀವಸತ್ವಗಳಿಲ್ಲ, ಸದೃಢ ಶರೀರ ನಿರ್ಮಾಣದಲ್ಲಿ ಉಪಯುಕ್ತವಾಗಬಹುದಾದ ಯಾವ ಅಂಶಗಳೂ ಇಲ್ಲ. ಅನಾರೋಗ್ಯವನ್ನು ಆದರದಿಂದ ಸ್ವಾಗತಿಸುವ ಎಲ್ಲ ಸಲಕರಣೆಗಳೂ ಅವುಗಳಲ್ಲಿವೆ. ಜಗತ್ಪ್ರಸಿದ್ಧ ಆಹಾರ ವಿಜ್ಞಾನಿ ಡಾ|| ಹಾರ್ವೆ ಡೈಮಂಡ್ ತಮ್ಮ 'ಫಿಟ್ ಫಾರ್ ಲೈಫ್' ಪುಸ್ತಕದಲ್ಲಿ ಸ್ಪಷ್ಟವಾಗಿ ಹೀಗೆ ಹೇಳಿದ್ದಾರೆ. ''ಈ ಶೀತಲ ಪಾನೀಯ ಸೇವನೆಯಿಂದ ಇಡಿ ಮಾನವ ಜನಾಂಗಕ್ಕೆ ಅಪಾಯವಿದೆ'', ಅಷ್ಟೆ ಅಲ್ಲ. ಈ ಪೇಯಗಳ ಬದಲಾಗಿ ಪಾರಂಪರಿಕವಾಗಿ ಸೇವಿಸುತ್ತ ಬಂದಿರುವ ನೈಸರ್ಗಿಕ ಪೇಯಗಳಾದ ಲಸ್ಸೀ, ಮಜ್ಜಿಗೆ ಪಾನಕ, ಎಳೆನೀರು, ಹಣ್ಣಿನರಸ ಇತ್ಯಾದಿಗಳನ್ನು ಸೇವಿಸುವುದು ಹೆಚ್ಚು ಸುರಕ್ಷಿತ ಎಂಬ ಸಲಹೆಯನ್ನು ನೀಡಿದ್ದಾರೆ. ಕಾರಣ ತಂಪು ಪಾನೀಯಗಳ ಕಂಪನಿಗಲ ಕಮಾಂಡರುಗಳ ಕಪ್ಪು ಹಣದ ಕಟ್ಟುಗಳಿಗೆ, ಕಸರತ್ತುಗಳಿಗೆ ಸರಕಾರ ಸೊಪ್ಪು ಹಾಕದೇ, ಈ ಮೊದಲು ಮಾರುಕಟ್ಟೆಯಲ್ಲಿದ್ದ ೨೦೦ ಮಿಲಿ ಬಾಟಲಿಗಳ ಉತ್ಪಾದನೆಗೆ ಮಾತ್ರ ಪರವಾನಿಗೆ ನೀಡಬೇಕು. ಮೆಗಾ, ಜಂಬು, ಸೂಪರ್ ಜಂಬುಗಳನ್ನು ನಿಷೇಧಿಸಬೇಕು. ಆಹಾರಾಂಶಗಳನ್ನು ಹೊಂದಿರುವ ನೈಸರ್ಗಿಕ ಹಣ್ಣಿನ ರಸಗಳ ಸೇವನೆಗೆ ಉತ್ತೇಜನ ನೀಡಬೇಕು. ಇದರಿಂದ ಎಲ್ಲರಿಗೂ ಆರೋಗ್ಯ ಸಾಧಿಸಲು ಸಾಧ್ಯವಾದೀತು!

ಕೋಲ್ಡ್ ಡ್ರಿಂಕ್ಸ್ ಎನ್ನುವ ಹಾಲಾಹಲವನು
ಕುಡಿಯುತ ಕರೆವರಿ ಕೋಲಾಹಲವನು
ಯಮಪುರಿ ಸೇರಲು ಶೀಘ್ರ ಕುತೂಹಲ!

ಜನಪದ ಭಾಷಾ ಚಾತುರ್ಯ

ಜೀನಹಳ್ಳಿ ಸಿದ್ದಲಿಂಗಪ್ಪ
೩೮೪೪,೧೪ನೇ ಮುಖ್ಯರಸ್ತೆ
ಸರಸ್ವತೀಪುರಂ
ಮೈಸೂರು-೫೭೦ ೦೦೯

ಜಾನಪದ ತುಂಬಾ ವಿಶಾಲವಾದ ಕ್ಷೇತ್ರ. ಈ ವಿಶಾಲವಾದ ಕ್ಷೇತ್ರದಲ್ಲಿ ಜನಪದ ಸಂಸ್ಕೃತಿಯ ಶೋಧನೆ ಬಹುಮುಖ್ಯವಾದ ಕೆಲಸ. ಇಲ್ಲಿ ಶೋಧನೆಯ ಆಳಕ್ಕಿಳಿದಂತೆಲ್ಲಾ ಹೊಸ ಹೊಸ ಪ್ರಕಾರಗಳ ಅವಿಷ್ಕಾರ ಆಗುತ್ತಲೇ ಇದೆ. ಜನಪದರ ಜೀವನಾನುಭವದ ಒಂದೊಂದು ಮುಖ ಅಲ್ಲಿ ನವೀನತೆಯ ಮೆರುಗಿನಲ್ಲಿ ಗೋಚರಿಸುತ್ತಲೇ ಇದೆ.

ಜನಪದರ ಬೌದ್ಧಿಕ ಚೈತನ್ಯದ, ಜ್ಞಾನ ಸಂಪತ್ತಿನ ಗಣಿಗಳಾದ ಒಗಟು, ಒಡಪು, ಗಾದೆ,ಗಣಿತ , ಭಾಷಾ ಚಮತ್ಕಾರ ಅಥವಾ ಭಾಷಾ ಚಾತುರ್ಯ- ಈ ಮೊದಲಾದ ಪ್ರಕಾರಗಳು ನಮ್ಮಲ್ಲಿ ಕುತೂಹಲವನ್ನು ಕೆರಳಿಸಿವೆ.

ಜನಪದರಲ್ಲಿ ಭಾಷೆಗಿರುವ ಪ್ರಾಧಾನ್ಯತೆ ಅವರ ಆತ್ಮಾಭಿಮಾನದ, ಚೇತನದ ಸಂಕೇತವೇ ಆಗಿದೆ. ಅವರು ಬಳಸುವ ಭಾಷೆಯಲ್ಲಿನ ಚಾತುರ್ಯವು, ಅಕ್ಷರ, ಪದ, ಉಕ್ತಿಗಳನ್ನು ಒಳಗೊಂಡೇ ಸಾಗಿದೆ. ನಮ್ಮ ಜನಪದರಲ್ಲಿನ ಅನೇಕ ಜಾಣರು ತಮ್ಮ ಬೌದ್ಧಿಕ ಬೆಳವಣಿಗೆಗಾಗಿ ಭಾಷೆಯನ್ನು ನಾನಾರೀತಿಯಲ್ಲಿ ಸೊಗಸಾಗಿ, ಅರ್ಥಗರ್ಭಿತವಾಗಿ, ಗಂಭೀರವಾಗಿ ಬಳಸಿ ಕೊಂಡಿದ್ದಾರೆ.

ಈ ಬಗೆಗಿನ ಭಾಷಾ ಚಾತುರ್ಯ ಅಥವಾ ಚಮತ್ಕಾರಗಳು ಕಥೆ, ಒಗಟು, ಒಡಪು ಈ ಮೊದಲಾದವುಗಳ ಮುಂದುವರಿದ ಒಂದು ಭಾಗವಾಗಿದೆ. ಭಾಷಾ ಚಮತ್ಕಾರಗಳಲ್ಲಿ ಮುಖ್ಯವಾಗಿ ಮನರಂಜನೆ, ವಿನೋದ, ಹಾಸ್ಯಕ್ಕೇ ಒತ್ತುಕೊಟ್ಟಂತೆ ಬೌದ್ಧಿಕ ಕಸರತ್ತು ಇಲ್ಲಿ ಪ್ರಧಾನವಾಗಿರುತ್ತದೆ. ಹಾಗಾಗಿ ಇವುಗಳನ್ನು ಬೌದ್ಧಿಕ ಕೌಶಲದ ಜಾಣ್ಮೆಯ ಪ್ರತೀಕಗಳೆಂದೇ ಕರೆಯಬಹುದಾಗಿದೆ.

ಜನಪದ ಭಾಷಾ ಯುವ ಜನತೆಯ ಮನಸ್ಸನ್ನು ಬೇಗನೆ ಸೂರೆಗೊಳ್ಳುವಂತಹ ಈ ಚಮತ್ಕಾರಗಳು ಇಂದಿನ ಶಿಷ್ಟ ಸಾಹಿತ್ಯದ ಸರಿಸಾಟಿಯಲ್ಲಿ ಮೇಲುಗೈಯನ್ನು ಹೊಂದಬಲ್ಲವು ಎನ್ನಿಸುತ್ತದೆ. ಮೊದಲಿಗೆ ಅಕ್ಷರ ಚಮತ್ಕಾರವನ್ನು ನೋಡಬಹುದು. ಉದಾಹರಣೆ :

''ರಸವೈಪುರಿ ತ್ರಿಕಾಂಚ ಪಾಶಾಲ ವಿನಾಕಾ
ಉಮಾಮಾಹೇಶ್ವರ ರಕ್ಷಿಸೋ ನಮ್ಮನು''

ಇದೊಂದು ಪೌರಾಣಿಕ ಹಿನ್ನೆಲೆಯ ಅಕ್ಷರ ಚಮತ್ಕಾರ. ಇದರಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಕುರಿತಂತೆ ಇವರ ಪತ್ನಿಯರು ಹಾಗೂ ಮಕ್ಕಳ ಬಗೆಗೂ ವಿವರಿಸಿದ್ದು ಹರಕೆಯ ಶಕ್ತಿಯನ್ನು ಒಲಿಸಿಕೊಳ್ಳುವ ಅಂಶಗಳನ್ನು ಗುರುತಿಸಬಹುದಾಗಿದೆ.

ಇಲ್ಲಿ ತ್ರಿಮೂರ್ತಿಗಳನ್ನು ಕುರಿತು ಹೇಳುವುದರಿಂದ ಅವರವರ ಸಾಧನೆ ಎಂತಹುದೆಂದರೆ:

'ರ'-ರಜತಾದ್ರಿಗೆ ಒಡೆಯನಾಗಿರುವ
ಪರಮಾತ್ಮನೆ
'ಸ'-ಸತ್ಯಲೋಕಕ್ಕೆ ಒಡೆಯನಾಗಿರುವ
ಬ್ರಹ್ಮದೇವನೆ
'ವೈ'-ವೈಕುಂಠಕ್ಕೆ ಒಡೆಯನಾಗಿರುವ
ವಿಷ್ಣುದೇವನೆ
ಇವರೆಲ್ಲ 'ರಸವೈಪುರಿ'(ಪಟ್ಟಣ)
ಯಲ್ಲಿದ್ದು ಕೊಂಡು,
'ತ್ರಿ'-ತ್ರಿಶೂಲವನ್ನು ಧರಿಸದಂತಹ
ಪರಮಾತ್ಮನೆ

'ಕಾಂ'-ಖಡ್ಗವನ್ನು ಹಿಡಿದಿರುವಂತಹ ಬ್ರಹ್ಮದೇವನೆ
'ಚ'-ಚಕ್ರವನ್ನು ಹೊಂದಿದಂತಹ ವಿಷ್ಣು ದೇವನೆ,
ಹೀಗೆ ಇಂಥ 'ತ್ರಿಕಾಂಚ' ಆಯುಧಗಳನ್ನು ಧರಿಸಿದವರಾಗಿ;
'ಪಾ'-ಪಾರ್ವತಿಗೆ ಪತಿಯಾದ ಪರಮೇಶ್ವರನೆ,
'ಶಾ'-ಶಾರದೆಗೆ ಪತಿಯಾದ ಬ್ರಹ್ಮದೇವನೆ
'ಲ'-ಲಕ್ಷ್ಮಿಗೆ ಪತಿಯಾದ ವಿಷ್ಣುದೇವನೆ,
ಹೀಗೆ 'ಪಾಶಾಲ' ಹೆಂಡತಿಯರನ್ನು ಹೊಂದಿದವರಾಗಿ,
'ವಿ'-ವಿನಾಯಕನಿಗೆ ತಂದೆಯಾಗಿರುವ ಪರಮಾತ್ಮನೆ,
'ನಾ'-ನಾರದನಿಗೆ ತಂದೆಯಾಗಿರುವ ಬ್ರಹ್ಮದೇವನೆ,
'ಕಾ'-ಕಾಮನಿಗೆ ತಂದೆಯಾಗಿರುವ ವಿಷ್ಣುದೇವನೆ,

ಹೀಗೆ 'ವಿನಾಕಾ' ಮಕ್ಕಳನ್ನು ಹೊಂದಿದ ನೀವೆಲ್ಲ ನಮ್ಮನ್ನು ರಕ್ಷಿಸಿ, ಉಮಾ ಮಾಹೇಶ್ವರನೇ ನಮ್ಮನ್ನು ರಕ್ಷಿಸು ಎಂದು ಪ್ರಾರ್ಥಿಸಲಾಗಿದೆ.

ಇಲ್ಲಿನ ಪ್ರಾರ್ಥನೆಯಲ್ಲಿ ಒಂದೊಂದು ಅಕ್ಷರ ಚಮತ್ಕಾರದಲ್ಲಿ ತಮಗೆ ಇಷ್ಟವೆನಿಸಿದ ಒಂದೊಂದು ದೇವರುನ್ನು ಕುರಿತು ಸ್ಮರಿಸುವುದರ ಜೊತೆಗೆ, ಅವರನ್ನು ಹಾಡಿಹೊಗಳುತ್ತ ಅವರ ಆಶೀರ್ವಾದವನ್ನು ಬಯಸುತ್ತಿರುವುದನ್ನು ಕಾಣಬಹುದಾಗಿದೆ.

ಪದಗಳ ಚಮತ್ಕಾರ ಕುರಿತಂತೆ ಸಾಕಷ್ಟು ಉದಾಹರಣೆಗಳನ್ನು ನೋಡಬಹುದು:

''ಬೆಂಡೆಕಾಯಿ ಬಿತ್ತಿ
ಅವುರೆಕಾಯಿ ಕೀಳಬೇಕು''.

ಈ ವಾಕ್ಯದಲ್ಲಿನ ಹಾಸ್ಯ ನಿಜಕ್ಕೂ ಎಂತವರನ್ನು ಮಂತ್ರಮುಗ್ಧರನ್ನಾಗಿಸುವಂಥದ್ದು. 'ಬೆಂಡೆಕಾಯಿ' ಬಿತ್ತಿ 'ಅವುರೆ ಕಾಯಿ' ಕೀಳಬೇಕು-ಅಂದಾಗಲೇ ಹೇಗೆ ಸಾಧ್ಯ? ಅನ್ನುವ ಪ್ರಶ್ನೆ ಹುಟ್ಟುತ್ತದೆ. 'ಅವುರೆಕಾಯಿ' ಎಂಬ ಪದದ ಅರ್ಥ ಇಲ್ಲಿ ಬಹಳ ಮಹತ್ವದ್ದಾಗಿದೆ. ಅವುರೆ(ಅವರೆ) ಕಾಯಿಯನ್ನು ಬೆಂಡೆ ಬೀಜ ಬಿತ್ತಿ ಕೀಳಲು ಸಾಧ್ಯವಿಲ್ಲ. ಯಾರು ಬೆಂಡೆಕಾಯಿ ಬೀಜವನ್ನು ಹಾಕಿರುತ್ತಾರೋ ಅವರೇ (ಅವುರೆ) ಕಾಯನ್ನು ತರಿದು ತರಬೇಕು !ಎಂಬುದೇ ಇಲ್ಲಿನ ಚಮತ್ಕಾರದ ಅಂಶವಾಗಿದೆ.

ಇನ್ನೊಂದು ಚಮತ್ಕಾರವನ್ನು ನೋಡಿ : 'ಸಾರು ಸಪ್ಪಾದ್ರೆ ಉಪ್ಪಿಗೇನ್ಹಾಕ್ತಿ? ಈ ಪ್ರಶ್ನೆಗೆ ಉತ್ತರ ಬಹಳ ಕಷ್ಟವೇನಲ್ಲ. ಸಾರು ಸಪ್ಪೆಯಾದರೆ ಉಪ್ಪಿನ ಮಡಕೆಗೆ ಕೈಹಾಕಿ ಎಷ್ಟು ತೆಗೆದುಕೊಳ್ಳಬೇಕು ಎಂಬುದೇ ಇಲ್ಲಿನ ಸ್ವಾರಸ್ಯ.

ಇನ್ನೊಂದು ಚಮತ್ಕಾರ : ''ಒಬ್ಬ ಬುದ್ಧಿವಂತನಿಗೂ ಒಬ್ಬ ಹಳ್ಳಿಯವನಿಗೂ ಒಂದ್‌ಸಾರಿ ವಾದ ಬಿತ್ತು. ಹಳ್ಳಿಯವ್ನು ಕೇಳಿದ 'ಕೈಮುಂದೆ ಏನೈತಿ ? ' ಈ ಪ್ರಶ್ನೆಗೆ ಉತ್ತರ ಎಷ್ಟೇ ಸುಲಭ ಇದ್ದರೂ ಕೂಡ ಎಲ್ಲರೂ ತಮ್ಮ ತಮ್ಮ 'ಕೈ'ಮುಂದಿನ 'ಅಂಗೈ' 'ಮುಂಗೈ' ನೋಡಿಕೊಳ್ಳುವುದರಲ್ಲೇ ಕಾಲಕಳೆಯುವ್ರುದುಂಟು ! ಆದರೆ ಹಳ್ಳಿಯವನ ಬುದ್ಧಿವಂತಿಕೆಯ ಉತ್ತರವೇನು ?''ಕೊ''ಕೈ' ಮುಂದೆ ಇರೋದು ಅಂದ್ರೆ 'ಕ ಕಾ ಕಿ ಕೀ ಕು ಕೂ ಕೆ ಕೇ ಕೈ-ಕೊ''.

ಊರ ಹೆಸರುಗಳಲ್ಲಿಯೇ ಹಲಬಗೆಯ ಚಮತ್ಕಾರಗಳನ್ನು ಅವರು ಪ್ರಕಟಿಸುತ್ತಾರೆ. ಉದಾ: 'ಕಲ್ಕತ್ತ' ಅಂದಕೂಡಲೆ ತಾನು ಎಲ್ಲಿ ಕುಳಿತಿರುತ್ತಾನೆ ಅಲ್ಲೇ ಎದುರಿಗಿರುವ ಒಂದು 'ಕಲ್ಲು'ಮತ್ತೂ ಪಕ್ಕದಲ್ಲೇ ಮನೆಯೊಳಗಿನ 'ಕತ್ತ'('ಹಗ್ಗ')ತೋರಿಸಿ, ಇದೇಅಲ್ಲವೆ 'ಕಲ್ಕತ್ತ'? ಎನ್ನುತ್ತಾನೆ. 'ಮೈ'+'ಸೂರು' (ಮನೆಯ ಮುಂಭಾಗದ ಸೂರು ಅಥವಾ

ಅಂಚು), ಬಿದಿರಿನ 'ಬೊಂಬು'+ತನ್ನ 'ಬಾಯಿ'=ಬೊಂಬಾಯಿ.

ಒಗಟು ಕಥೆಗಳಲ್ಲಿ ಭಾಷಾ ಚಮತ್ಕಾರ ಇನ್ನಷ್ಟು ಉದ್ದೀಪನಗೊಂಡಿದೆ. ಒಂದು ಉದಾಹರಣೆ: 'ಅತ್ತೆ ಮನೆಗೆ ಅಳಿಯ , ಅಪರೂಪಕೆ ಒಂದ್ ಸಾರಿ ಬಂದಿದ್ದ. ಅತ್ತೆ ಅಳಿಯಾಗೇಂತ ವಿಶೇಷ ಅಡುಗೆ ಮಾಡಿ ಉಣ್ಣಾಕೆ ಕರೆದು ನೀಡಿ ನಿಂತ್ಗಂಡ್ಲು. ಅಳಿಯ ಗಂಗಾಳ ಮುಂದಿಟ್ಗಂದು ಉಣ್ಣದೆ ಹಂಗೇ ಇದ್ದ. ಅತ್ತೆ ಬಾಯಿ ಸುಮ್ನಿರ್ಲಿಲ್ಲ. ಹಿಂಗಂತಿದ್ಲು:

'ಕರ ಕಟ್ಟದೆ ಹುಲ್ಲಾಕದೆ
ಕರಯಾಕಮೇಯ್ತಾ ಇಲ್ಲ?'' ಅಂತ.

ಇದು ಅಳಿಯಾನಿಗೆ ಅರ್ಥಾಯ್ತು. ಅವ್ನೂ ತನಗೆ ತಾನೇ ಅತ್ತೆಗೆ ಕೇಳ್ಲಿ ಅಂತ ಹಿಂಗೆ ಅಂದೇ ಬಿಟ್ಟ:

'ಮೋಡಗಟ್ಟದೆ ಮೇಲೆ ಕಟ್ಟದೆ
ಮಳೆಯಾಕ ಆಗ್ತಾ ಇಲ್ಲ?

ಈ ಒಗಟಿನ ಅರ್ಥ ಇಷ್ಟು: ಅತ್ತೆ ಊಟಕ್ಕೆ ನೀಡಿ ತುಪ್ಪ ಹಾಕದೆ ಹಾಗೆಯೇ ಊಟ ಮಾಡು ಎಂದರೆ ಅಳಿಯ ಊಟ ಮಾಡಿಯಾನೆಯೆ ? ನೆಲ್ಲಿನ (ನೆಲುವು) ಮೇಲಿನ ಕುಡಿಕೆಯಲ್ಲಿ ಹೆಪ್ಪುಗಟ್ಟಿದ ತುಪ್ಪವಿರುವಾಗ ಅದನ್ನು ಕರಗಿಸಿ ಬಿಡಬೇಕಾದದ್ದು ಅತ್ತೆಯ ಕರ್ತವ್ಯ. ಅತ್ತೆ ಬರೀ ಬಾಯಲ್ಲೇ 'ಊಟಕ್ಕೆ ನೀಡಿದೆ ಉಣ್ಣು' ಅನ್ನುವ ಹಾಗೇ ಜಪ್ಪಣೆ ಅನ್ನುವಂತೆ ನಡೆದುಕೊಂಡರೆ ಅಳಿಯ ಸುಮ್ಮನೆ ಬಿಟ್ಟಾನೆಯೆ? ಅದಕ್ಕಾಗಿ ಅತ್ತೆಗೆ ತಕ್ಕ ಉತ್ತರವನ್ನು ಕೊಡುತ್ತಾನೆ. ಅತ್ತೆ -ಅಳಿಯರ ಸಂವಾದ ಒಗಟುರೂಪದಲ್ಲಿಯೇ ಸಂಪಹನಗೊಂಡಿರುವುದು ಇಲ್ಲಿನ ವಿಶೇಷತೆ.

ಜನಪದರು ಸರಳರು, ಮುಗ್ಧರು, ಆದರೆ ಅಷ್ಟೇ ಪಾಂಡಿತ್ಯವುಳ್ಳವರು ಎಂಬುವುದಕ್ಕೆ ಇಲ್ಲೊಂದು ಉದಾಹರಣೆ :ಇದೋ 'ನೋಡಿ , ಇದೊಬ್ಬ ಕವಿಯ ಹೆಸರು . ಐದಕ್ಷರ ಇದೆ. ಇದ್ರಾಗೆ ೧,೨,೩ನೇ ಅಕ್ಷರ ಸೇರಿದ್ರೆ ದೇವರಿಗೆ ಬೀಸೊ 'ಬೀಸಣಿಕೆ' ಅಂತ ಅರ್ಥ ಕೊಡ್ತದೆ. ೪,೨,೩,ನೇ ಅಕ್ಷರ ಸೇರಿದ್ವಂದ್ರೆ 'ಯುದ್ಧ' ಅನ್ನೋದ್ನ ; ೧,೩,ನೇ ಅಕ್ಷರ 'ದೂತ' ಎಂಬುದ್ನ ; ೪,೩ನೇ ಅಕ್ಷರ 'ಹಾರ' ಅಂತ ಅರ್ಥಾನ; ೨,೩ನೇ ಅಕ್ಷರಗಳು ಭೂಮಿ ಮೇಲೆ ಬೆಳೆಯೊ ಒಂದು ವಸ್ತೂನ ಸೂಚಿಸ್ತವೆ. ಹಾಗಾದ್ರೆ ಆ ಕವಿ ಹೆಸರೇನು ಹೇಳ್ತಿರಾ?

ಇಲ್ಲಿ ಪಾಂಡಿತ್ಯದ ಒಂದು ಪ್ರಶ್ನೆ ಎಲ್ಲರನ್ನೂ ದಿಗ್ಭ್ರಮೆಗೊಳಿಸುವುದು ಸಹಜ. ಜನಪದರು ಯಾವುದಕ್ಕೂ ಸೈ ಎಂಬಂತಹ ಚಾತುರ್ಯ ತೋರಬಲ್ಲವರು ಎಂಬುದಕ್ಕೆ ಈ ಉದಾಹರಣೆ ಸಾಕ್ಷಿ. ಇಲ್ಲಿನ ಚಮತ್ಕಾರದ ಉತ್ತರ: 'ಚಾಮರಸ'. ಈ ಕವಿಯ ಹೆಸರನ್ನು ನಾನಾ ರೀತಿಯಲ್ಲಿ ಅರ್ಥ ಬರುವ ಹಾಗೆ ಬಿಡಿಸಿಕೊಳ್ಳಲು ಬಳಸಿಕೊಳ್ಳಲಾಗಿದೆ.

ನಮ್ಮ ಜನಪದ ಸಾಹಿತ್ಯದಲ್ಲಿನ ಈ ಭಾಷಾ ಚಾತುರ್ಯದ ಚಮತ್ಕಾರಗಳು ನಿಜಕ್ಕೂ ಒಂದು ಅಪೂರ್ವ ಶೋಧನೆ ಎನ್ನಬಹುದು. ಇಂಥ ಜಾಣ ಚಮತ್ಕಾರಗಳನ್ನು ಈಗಲೂ ಬಹಳಷ್ಟು ಜನ ಹಳ್ಳಿಗಳಲ್ಲಿ ಸೃಷ್ಟಿಸುತ್ತಾರೆ. ''ಕುರಿತೋದದೆಯುಂ ಕಾವ್ಯಪ್ರಯೋಗ ; ಪರಿಣತಮತಿಗಳ್'' ಎಂಬ ನೃಪತುಂಗನ ಮಾತಿಗೆ ಇಂಥ ಭಾಷಾ ಚಮತ್ಕಾರಗಳು ಸಾಕ್ಷಿ ಒದಗಿಸುತ್ತವೆ.

ಮೂರು ಸತ್ಯ ಕಥನಗಳು

ಡಾ|| ಸ.ಜ.ನಾಗಲೋಟಿಮಠ
ವೈದ್ಯಕೀಯ ನಿರ್ದೇಶಕರು
ಬಿ.ವಿ.ವ. ಸಂಘ
ಬಾಗಲಕೋಟೆ-೫೮೭ ೧೦೧

೧. ಶಿಶುಗಳ ಮರಣದ -ಪತ್ತೇದಾರಿ ಕಥೆ : ಇದು ನಿಜವಾಗಿಯೂ ನಡೆದು ಹೋದ ಘಟನೆ. ಕರ್ನಾಟಕ ರಾಜ್ಯದ ಒಂದು ಶಹರದಲ್ಲಿ ನಡೆದಿತ್ತು. ಆ ಊರಿನಲ್ಲಿ ಒಂದು ಸುಪ್ರಸಿದ್ಧ ಆಸ್ಪತ್ರೆ. ಅದರ ಮುಖ್ಯಸ್ಥರು ಇಂಗ್ಲೆಂಡಿನಲ್ಲಿದ್ದು ಅಲ್ಲಿಯ ಶಿಸ್ತು ಹಾಗೂ ಸ್ವಚ್ಛತೆಗಳನ್ನು ಮೈಗೂಡಿಸಿಕೊಂಡವರು. ತಮ್ಮ ಆಸ್ಪತ್ರೆಯಲ್ಲಿ ಅದೇ ನೇಮ-ನಡಾವಳಿಗಳನ್ನು ರೂಢಿಸಿದವರು. ಆಸ್ಪತ್ರೆಯಲ್ಲಿ ನಿರ್ಮಲತೆಯನ್ನು ನೋಡಿದವರು ಅಬ್ಬಾ! ಎನ್ನುತ್ತಿದ್ದರು. ಅಷ್ಟು ಸ್ವಚ್ಛವಾಗಿರುತ್ತಿತ್ತು. ಮೂತ್ರಾಲಯಗಳು ಕಕ್ಕಸಗಳು, ಚಲಿಸುವ ದಾರಿ, ಆಸ್ಪತ್ರೆಯ ಸುತ್ತಲಿನ ವಾತಾವರಣ ಎಲ್ಲವೂ 'ಝಳ ಝಳ' ಅನ್ನುತ್ತಿದ್ದುವು.

ಆಸ್ಪತ್ರೆಯಲ್ಲಿಯ ಸೇವೆಯೂ ಒಳ್ಳೆಯದು. ಮುಖ್ಯಸ್ಥರು ಜಾಣ ವೈದ್ಯರು. ಅವರ ಸಹ ವೈದ್ಯರೂ ಒಳ್ಳೆಯ ಪ್ರತಿಭಾವಂತರು. ಆಸ್ಪತ್ರೆಯಲ್ಲಿ ಎಲ್ಲ ವಿಭಾಗಗಳಿದ್ದವು.-ಹೀಗಾಗಿ ರೋಗಿಗಳು ಅಲ್ಲಿಂದಲೇ ಉಪಚಾರ ಪಡೆಯಲು ಹೆಮ್ಮೆ ಪಡುತ್ತಿದ್ದರು. ಅವರಿವರಿಗೆ ಹೇಳಿ ಅದೇ ಆಸ್ಪತ್ರೆಯಲ್ಲಿ ದಾಖಲಾಗಿ ಔಷಧೋಪಚಾರ ಪಡೆಯಲು ಹವಣಿಸುತ್ತಿದ್ದರು.

ಉಳಿದ ವಿಭಾಗಗಳಿದ್ದಂತೆ ಆ ಆಸ್ಪತ್ರೆಯಲ್ಲಿ ಪ್ರಸೂತಿ ವಿಭಾಗವೂ ಇತ್ತು. ನಿತ್ಯ ೩-೪ ಸ್ತ್ರೀಯರು ಪ್ರಸವಿಸುತ್ತಿದ್ದರು. ನಿತ್ಯ ಒಬ್ಬಿಬ್ಬರು ತಮ್ಮ ಶಿಶುಗಳನ್ನು ಅಪ್ಪಿಕೊಂಡು ಹಿರಿಯ ವೈದ್ಯರ ಆಶೀರ್ವಾದ ಪಡೆದು ಮನೆಗೆ ಹೋಗುತ್ತಿದ್ದರು.ಆಗ ಒಳ್ಳೆಯ ಪೇಡೆ ತಂದು ಹಂಚಿ ಸಂತೋಷಪಡುತ್ತಿದ್ದರು. ಅಲ್ಲಿ ಕಾರ್ಯ ಮಾಡುವ ವೈದ್ಯರೋ ನಿತ್ಯ ಪೇಡೆ ತಿನ್ನುವ ಸುದೈವಿಗಳಾಗಿದ್ದರು. ಆಸ್ಪತ್ರೆ ತನ್ನ ಉತ್ತಮ ಸೇವೆಯನ್ನು ಸುಮಾರು ೨೫ ವರ್ಷಗಳಿಂದ ಜನತೆಗೆ ಒದಗಿಸುತ್ತ ನಡೆದಿತ್ತು. ಎಲ್ಲರೂ ಆಸ್ಪತ್ರೆಯನ್ನು ಪ್ರಶಂಸಿಸುವವರೇ.

ಒಂದು ಸಲ ಆ ಆಸ್ಪತ್ರೆಗೆ ತೊಂದರೆ ಎದುರಾಯಿತು. ಬರಬರುತ್ತ ಅದೊಂದು ಬಿಡಿಸಲಾಗದ ಸಮಸ್ಯೆ ಎನಿಸಿತು. ಇಡೀ ಪ್ರಸೂತಿ ವಿಭಾಗವನ್ನೇ ಮುಚ್ಚುವ ವಿಚಾರಗಳೂ ಬರಹತ್ತಿದುವು.

ಗರ್ಭಿಣಿಯರು ಪ್ರಸೂತಿಗೆಂದು ದಾಖಲಾಗುತ್ತಿದ್ದರು. ಒಳ್ಳೆಯ ಸಂತೋಷದಿಂದ ಇರುತ್ತಿದ್ದರು. ಪ್ರಸೂತಿಯ ಪ್ರಾರಂಭದ ಉಪಚಾರಗಳನ್ನು ಪಡೆಯುತ್ತಿದ್ದರು. ಪ್ರಸೂತಿಯ ನೋವು ಕಂಡ ಮೇಲೆ ಅವರನ್ನು ಪ್ರಸೂತಿ ಮೊದಲ ವಿಭಾಗದಲ್ಲಿಡಲಾಗುತ್ತಿತ್ತು. ಪ್ರಸವ ವೇದನೆ ಯುಕ್ತವಾಗಿ ಸಮರ್ಪಕವಾಗಿ ಕಾಣ ತೊಡಗಲು ಗರ್ಭಿಣಿಯರನ್ನು ಪ್ರಸೂತಿಯ ಕೋಣೆಗೆ ಕರೆಯೊಯ್ಯುತ್ತಿದ್ದರು. ಪ್ರಸೂತಿ ಮಾಡಿಸಲು ನುರಿತ ದಾಯಿಗಳು ಹಾಗೂ ಸ್ತ್ರೀ ವೈದ್ಯರು ದಿನದ ೨೪ ತಾಸುಗಳೂ ಸೇವೆಗೆ ಸಿದ್ಧರಾಗಿರುತ್ತಿದ್ದರು. ಯಾವ ಗಡಿಬಿಡಿಯಿಲ್ಲದೆ, ತೊಂದರೆ ಇಲ್ಲದೆ ಪ್ರಸವ ನಡೆಯುತ್ತಿತ್ತು. ಅನಂತರ ತಾಯಿ ಹಾಗೂ ಶಿಶುಗಳು ಜೊತೆ ಜೊತೆಯಾಗಿ ತಮ್ಮ ತಮ್ಮ ಕೊಠಡಿಗಳಿಗೆ ಸೇರುತ್ತಿದ್ದರು. ಎಲ್ಲವೂ ಸರಿ ಹೊಂದುತ್ತಲೇ ಬಾಣಂತಿ ಹಾಗೂ ಶಿಶುಗಳು ತಮ್ಮ ಮನೆಗಳಿಗೆ ಸೇರುತ್ತಿದ್ದರು. ಇದೆಲ್ಲ ಸಾಮಾನ್ಯವಾಯಿತು.

ದುರ್ದೈವದಿಂದ ಒಂದು ಸಲ ಒಂದು ಶಿಶುವು ಹುಟ್ಟಿದ ಮೂರನೆಯ ದಿನದಂದು

ವಾಂತಿ ಮಾಡತೊಡಗಿತು. ಅದಕ್ಕೆ ಜ್ವರ ಬಂದಿತು. ಮರುದಿನವೇ ಕೂಸಿಗೆ ಭೇದಿ ಹಾಗೂ ಆಮಶಂಕೆ ಪ್ರಾರಂಭವಾದುವು. ಏನು ಉಪಚಾರ ಮಾಡಬೇಕು ಎನ್ನುವುದರಲ್ಲಿಯೇ ಶಿಶು ಮರಣ ಹೊಂದಿತು. ಇದು ಎಲ್ಲರಿಗೂ ಆಘಾತ ಎನಿಸಿತು. ಆಸ್ಪತ್ರೆಯ ಆ ವಿಭಾಗದಲ್ಲಿ ಮಂಕು ಹಿಡಿಯಿತು. ಎರಡು ದಿನಗಳಾಗು ವಷ್ಟರಲ್ಲಿ ಮತ್ತೊಂದು ಶಿಶು ಇದೇ ಮಾದರಿಯಲ್ಲಿ ಮರಣ ಹೊಂದಿತು. ಈಗ ಪ್ರಸೂತಿ ವಿಭಾಗ ಇನ್ನೂ ತಳಮಳಗೊಂಡಿತು. ಆ ವಿಭಾಗದ ಪ್ರತಿಯೊಂದು ಉಪಕರಣವನ್ನೂ ಪ್ರತಿಯೊಬ್ಬ ವೈದ್ಯರನ್ನೂ, ಪ್ರತಿಯೊಬ್ಬ ದಾಯಿಯನ್ನೂ, ಪ್ರತಿಯೊಬ್ಬ ಆಯಾಗಳನ್ನೂ ಕೂಲಂಕಷವಾಗಿ ಪರೀಕ್ಷಿಸಲಾಯಿತು. ಪ್ರತಿಯೊಂದು ಕಾರ್ಯವೂ ಸರಿಯಾಗಿ ನಡೆದಿದೆಯೋ ಇಲ್ಲವೋ ಎಂಬುದನ್ನು ಪರಿಶೀಲಿಸಲಾಯಿತು. ಎಲ್ಲವೂ ಸಮರ್ಪಕವೆನಿಸಿತು. ಮುಖ್ಯ ವೈದ್ಯರೇ ಒಂದು ಸಲವಲ್ಲ ನಾಲ್ಕಾರು ಬಾರಿ ಪರಿಶೀಲಿಸಿದರು. ಆದರೆ ಶಿಶುಗಳಲ್ಲಿ ಕಂಡ ಈ ತೊಂದರೆ ಪದೇ ಪದೇ ಪ್ರಕಟವಾಗುತ್ತ ನಡೆಯಿತು. ಅಂದಾಜು ಮೂರು ತಿಂಗಳಲ್ಲಿ ೨೦ ರಿಂದಾ ೪೦ ಶಿಶುಗಳು ಅಸುವನ್ನು ನೀಗಿದುವು. ಇಡೀ ಆಸ್ಪತ್ರೆಯಲ್ಲಿ ಈ ಸುದ್ದಿ ಹಬ್ಬಿತು. ಪ್ರಸೂತಿಗೆಂದು ಬಂದ ತಾಯಂದಿರು ಹೆದರಿ ಆಸ್ಪತ್ರೆ ಬಿಟ್ಟು ಮನೆಗೆ ಓಡಿ ಹೋದರು. ಮುಖ್ಯ ವೈದ್ಯಾಧಿಕಾರಿಗಳು ತಲೆ ತಿರುಗಹತ್ತಿತು.

ಈ ಹಂತದಲ್ಲಿ ವೈದ್ಯರು ನನ್ನನ್ನು ಸಂಪರ್ಕಿಸಿದರು. ವಿವರಗಳನ್ನು ಕೊಟ್ಟರು. ನನಗೂ ಏನೂ ಹೊಳೆಯಲಿಲ್ಲ. ನಾನೇ ಬಂದು ಆಸ್ಪತ್ರೆಯ ಚಟುವಟಿಕೆ ಪರಿಶೀಲಿಸುವೆ ಎಂದು ಹೇಳಿದೆ. ಮರುದಿನ ಆಸ್ಪತ್ರೆಗೆ ಹೋಗಿ ಈ ಗೊಂದಲದಲಿ ಸಿಕ್ಕಿಕೊಂಡವರನ್ನೆಲ್ಲ ಕಂಡು ಅವರು ಮಾಡುವ ಮಾಡುತ್ತಿರುವ ಕಾರ್ಯಗಳನ್ನು ಕಾರ್ಯ ವಿಧಾನಗಳನ್ನು ಕೇಳಿದೆನು.

ಅಲ್ಲಿದ್ದವರೆಲ್ಲ ೧೦-೧೫ ವರ್ಷಗಳಿಂದ ಸೇವೆ ಸಲ್ಲಿಸುತ್ತ ಬಂದವರೇ. ಹೊಸಬರಾರೂ ಕಾಲಿಟ್ಟಿರಲಿಲ್ಲ. ಅವರು ತಾವು ನಡೆಸುವ ಕಾರ್ಯಗಳಲ್ಲಿ ಪರಿಣತಿ ಪಡೆದು ಶಭಾಸ್ ಅನ್ನಿಸಿಕೊಂಡವರು. ಅಲ್ಲಿಯ ನರ್ಸ್‌ಗಳು ಒಳ್ಳೆಯ ತರಬೇತಿ ಪಡೆದವರು. ಮುಖ್ಯ ವೈದ್ಯರ ಹೆಮ್ಮೆಯ ಸೈನಿಕರು. ಆಯಾಗಳೂ ಒಳ್ಳೆಯ ಕೆಲಸಗಾರರು. ನುರಿತವರು. ವೈದ್ಯರ ಸಂಬಂಧ ಈ ಪ್ರಕರಣದಲ್ಲಿ ಅಷ್ಟೊಂದು ಇರಲಿಲ್ಲ.

ನಾನು ಕೆಲಸ ಪ್ರಾರಂಭಿಸಿದ್ದು ಒಂದು ಶಿಶುವಿನಿಂದ. ಆ ಶಿಶುವು ಒಂದು ದಿನದ ಹಿಂದೆಯಷ್ಟೆ ಹುಟ್ಟಿತ್ತು. ನಾನು ಅಲ್ಲಿಗೆ ಹೋದಾಗ ಮೊದಲ ಸಲ ಕಕ್ಕಿಕೊಂಡಿತು. ಹೊರಬಂದ ಪದಾರ್ಥವನ್ನು ಪರೀಕ್ಷೆಗೆಂದು ಜಾಗರೂಕತೆಯಿಂದ ತೆಗೆದುಕೊಂಡೆನು. ಮಧ್ಯಾಹ್ನ ಮತ್ತೆ ಬಂದು ಶಿಶುವನ್ನು ನೋಡಿದೆ. ಅಷ್ಟರಲ್ಲಿ ಶಿಶುವಿಗೆ ಜ್ವರ ಬಂದು ಮುದ್ದೆಯಾಗಿತ್ತು. ಕಕ್ಕುವುದರ ಜೊತೆಗೆ ಅದರ ಹೊಟ್ಟೆ ಜಾಡಿಸತೊಡಗಿತ್ತು. ಹೊರಬರುತ್ತಿರುವ ಮಲ ಮಿಶ್ರ ದ್ರವವನ್ನೂ ಪರೀಕ್ಷೆಗೆ ತೆಗೆದುಕೊಂಡೆನು. ಅಂದು ಸಂಜೆಗೆ ಮಗುವಿನ ಸ್ಥಿತಿ ಚಿಂತಾಜನಕ ವಾಗಿತ್ತು. ತಾಯಿ, ಆಸ್ಪತ್ರೆಯ ಸಿಬ್ಬಂದಿ ಆತುರದ ಕ್ಷಣಗಳನ್ನು ನೋಡುತ್ತಿದ್ದರು. ಈಗ ಮಗುವಿನಲ್ಲಿ ವಿಷಣ್ಣತೆ ಹೆಚ್ಚಿತ್ತು. ತಾಯಿ ಅಳುತ್ತಿದ್ದಳು. ಮಗುವು ಹಾಲನ್ನು ಚೀಪುತ್ತಿಲ್ಲ. ಒಂದೇ ಸಮ ಕಕ್ಕುತ್ತದೆ. ಕಣ್ಣು ಮುಚ್ಚಿದ್ದನ್ನು ತೆಗೆಯುತ್ತಿಲ್ಲ. ವೈದ್ಯರು ತಮಗೆ ತಿಳಿದಿದ್ದ ಎಲ್ಲ ಉಪಾಯಗಳನ್ನು ಪ್ರಯೋಗಿಸುತ್ತಿದ್ದರು.

ಮರುದಿನ ಮಗು ಮರಣ ಹೊಂದಿತು. ಮಗುವಿನ ದೇಹ ಪರೀಕ್ಷೆ ನಡೆಸಲೇಬೇಕೆಂದು ವಿನಂತಿಸಿದ್ದೆ. ಮಗುವಿನ ಮೃತ ಶರೀರವನ್ನು ಹೊತ್ತು ನನ್ನ ವಿಭಾಗಕ್ಕೆ ತಲುಪಿಸಿದರು.

ದೇಹವನ್ನು ವೈಜ್ಞಾನಿಕವಾಗಿ ಕೊಯ್ದು ಸೂಕ್ಷ್ಮವಾಗಿ ಪರೀಕ್ಷಿಸಿದೆ. ಕೆಲವೊಂದು ಬದಲಾವಣೆಗಳು ಕಂಡವು. ಅವನ್ನೆಲ್ಲ ಜಾಗರೂಕತೆಯಿಂದ ದಾಖಲಿಸಿದೆ. ಜಠರ, ಕರಳು ಹಾಗೂ ಹೃದಯದಲ್ಲಿಯ ರಕ್ತ ಸಂಗ್ರಹಿಸಿ ಅವುಗಳಲ್ಲಿರಬಹುದಾದ ಬ್ಯಾಕ್ಟೀರಿಯಾಗಳನ್ನು ಪತ್ತೆ ಹಚ್ಚಲು ಕಳುಹಿಸಿದೆ. ಶಿಶುವಿನ ದೇಹದ ಎಲ್ಲ ಅಂಗಾಂಶಗಳನ್ನು ಪರೀಕ್ಷಿಸಲು ತೆಗೆದುಕೊಂಡೆ.

ಈಗ ಆಸ್ಪತ್ರೆಯವರು ಪ್ರಸೂತಿಯ ಕೇಸುಗಳನ್ನೇ ದಾಖಲಿಸುವುದನ್ನು ನಿಲ್ಲಿಸಿದ್ದರು. ಆದರೆ ತುರ್ತಾಗಿ ಬಂದವನ್ನು ಬೇಡ ಎನ್ನಲು ಬರುತ್ತಿರಲಿಲ್ಲ. ಅಲ್ಲಿಗೆ ಬರುವವರೆಲ್ಲ ಆ ಆಸ್ಪತ್ರೆಯನ್ನು ೨೦ ವರ್ಷಗಳಿಂದ ಬಲ್ಲವರು. ಸಂಪೂರ್ಣ ನಂಬಿಕೆ ಇಟ್ಟವರು. ಬೇಡ ಬೇಡ ಎಂದರೂ ಪ್ರಸೂತಿ ಕೋಣೆ ಯಾವಾಗಲೂ ಕಾರ್ಯದಲ್ಲಿ ತೊಡಗಿರುತ್ತಿತ್ತು. ಕೆಲವೊಂದು ಶಿಶುಗಳಿಗೆ ಯಾವ ತೊಂದರೆ ಕಾಣದೇ ಮನೆಗೆ ಹೋಗುತ್ತಿದ್ದುವು. ಪೀಡೆ ತೊಲಗಿತು ಎನ್ನುವಷ್ಟರಲ್ಲಿ ಮತ್ತೊಂದು ಶಿಶುವಿನಲ್ಲಿ ಅದೇ ರೋಗ ಲಕ್ಷಣಗಳು ಕಾಣತೊಡಗುತ್ತಿದ್ದುವು. ಇಡೀ ಆಸ್ಪತ್ರೆ ಮಂಕಾಗಿ ಬಿಡುತ್ತಿತ್ತು. ನನ್ನ ಮೊದಲ ಕೇಸಿನ ಪರೀಕ್ಷಾ ಫಲಿತಾಂಶಗಳೆಲ್ಲ ಬರುತ್ತಿರುವಂತೆ ಮತ್ತೊಂದು ಹೊಸ ಶಿಶುವಿನಲ್ಲಿ ಇದೇ ತೊಂದರೆ ಕಂಡಿತು. ಶಿಶು ಮರಣ ಹೊಂದಿತು. ಮೊದಲು ಮಾಡಿದ ಪರೀಕ್ಷೆಗಳು ಇಲ್ಲಿಯೂ ನಡೆದುವು.

ಮೊದಲು ಮರಣವನ್ನಪ್ಪಿದ ಶಿಶುವಿನ ವಾಂತಿ, ಮಲಗಳಲ್ಲಿ ಒಂದೇ ಒಂದು ಜಾತಿಯ ಬ್ಯಾಕ್ಟೀರಿಯಾ ಪತ್ತೆಯಾಯಿತು. ಅದು ಒಂದು ಸಂಗತಿ ಹೇಳುತ್ತಿರುವಂತೆ ಅನಿಸಿತು.. ಅಷ್ಟರಲ್ಲಿ ಜಠರದಿಂದ , ಕರುಳಿನಿಂದ, ಹೃದಯದ ರಕ್ತದಿಂದ ಅದೇ ಜಾತಿಯ ಬ್ಯಾಕ್ಟೀರಿಯಾಗಳನ್ನು ಪತ್ತೆ ಹಚ್ಚಿದ್ದು ಗೊತ್ತಾಯಿತು. ಇದರ ಅರ್ಥವು ಇಷ್ಟೆ. ಶಿಶುವಿನ ಹೊಟ್ಟೆಯಲ್ಲಿ ಟೈಫಿಮ್ಯುರಿಯಮ್ ಎಂಬ ಬ್ಯಾಕ್ಟೀರಿಯಾ ಸೇರಿದೆ. ಅದು ತನ್ನ ವಿಷ ಸ್ರವಿಕೆಗಳಿಂದ ಕೂಸು ಕಕ್ಕುವಂತೆ, ಭೇದಿಯಾಗುವಂತೆ, ಜ್ವರ ಬರುವಂತೆ, ಕೊನೆಗೆ ಕೂಸು ಮರಣ ಹೊಂದುವಂತೆ ಮಾಡಿತು. ಈ ರೋಗಾಣು ಪ್ರಾರಂಭದಲ್ಲಿ ಕೇವಲ ಜಠರ ಹಾಗೂ ಕರುಳುಗಳಲ್ಲಿ ಸೀಮಿತಗೊಂಡಿದ್ದು ಕೊನೆಯ ಹಂತದಲ್ಲಿ ರಕ್ತದಲ್ಲಿ ಸೇರಿ ದೊಡ್ಡ ಅನಾಹುತ ಮಾಡಿತು.

ಎರಡನೆಯ ಶಿಶುವಿನಲ್ಲಿಯೂ ಅದೇ ರೋಗಾಣುಗಳು ಪತ್ತೆಯಾಗಿ ಆದ ಅನಾಹುತ ಏಕೆ ಎಂಬುದು ಪತ್ತೆಯಾಯಿತು. ಈ ಬ್ಯಾಕ್ಟೀರಿಯಾ ಎಲ್ಲಿಂದಲೋ ಬಂದು ಕೂಸಿನ ಹೊಟ್ಟೆ ಸೇರುತ್ತಿವೆ. ಮಕ್ಕಳನ್ನು ಕೊಲ್ಲುತ್ತಿವೆ. ಅಲ್ಲಿಯವರೆಗೆ ಮರಣ ಹೊಂದಿದ ಎಲ್ಲ ಮಕ್ಕಳಲ್ಲೂ ಇದೇ ತೆರನಾಗಿರಬಹುದು ಎಂದೆನಿಸಿತು. ಈ ಸಂಗತಿಯನ್ನು ವೈದ್ಯರಿಗೆ ತಿಳಿಸಿದೆ. ಅವರಿಗೆ ಎಲ್ಲಿಲ್ಲದ ಆಶ್ಚರ್ಯ ಏಕೆಂದರೆ ಮಕ್ಕಳಿಗೆ ಏನೇನೂ ಉಣಿಸಿಲ್ಲ ತಾಯಿಯ ಮೊಲೆಯನ್ನೂ ಸಹ ಚೀಪಿಲ್ಲ. ಪರಿಸ್ಥಿತಿ ಹೀಗಿದ್ದ ಮೇಲೆ ಈ ರೋಗಕಾರಕ ಬ್ಯಾಕ್ಟೀರಿಯಾ ಅವುಗಳ ಜಠರ ಸೇರಿದ್ದೆಂತು ? ಎಂದು ಕೇಳಿದರು. ನಾನು ಹೇಳಿದೆ. ನೀವು ಕೇಳಿದ ಪ್ರಶ್ನೆಗೆ ನನ್ನ ಹತ್ತಿರವೂ ಉತ್ತರ ಸದ್ಯಕ್ಕೆ ಇಲ್ಲ. ಆದರೆ ಪರೀಕ್ಷೆಗಳಿಂದ ಬಂದ ಫಲಿತಾಂಶಗಳು ಇದನ್ನು ಸಾರುತ್ತಿವೆ ಎಂದು ಸುಮ್ಮನಾದೆ.

ಈ ರೋಗಾಣುಗಳು ಎಲ್ಲಿಂದ ಬಂದುವು ಎಂಬ ಮಾತನ್ನು ಪತ್ತೆ ಮಾಡಬೇಕಾಗಿತ್ತು. ಕಾರಣ ಆಸ್ಪತ್ರೆಗೆ ಬಂದು ನನ್ನ ಸಂಶೋಧನಾ ಕಾರ್ಯ ಮುಂದುವರೆಸಿದೆ. ಪ್ರಸೂತಿ ನಡೆಸುವ ಕಾರ್ಯದಲ್ಲಿ ಭಾಗವಹಿಸುವವರ ಕೈ ಬಾಯಿ ಮೂತ್ರ, ಮಲಗಳನ್ನು ಸಂಗ್ರಹಿಸಿ ಅವುಗಳಲ್ಲಿ ಆ ಬ್ಯಾಕ್ಟೀರಿಯಾ ಇರಬಹುದೋ

ಎಂದು ಪರೀಕ್ಷಿಸಲಾಯಿತು. ಯಾರಲ್ಲಿಯೂ ಆ ರೋಗಾಣು ಪತ್ತೆಯಾಗಲ್ಲಿಲ್ಲ. ಈ ಗುಂಪಿನಲ್ಲಿ ವೈದ್ಯರು, ದಾಯಿಗಳು, ಆಯಾಗಳು ಸೇರಿದ್ದರು. ತಾಯಂದಿರನ್ನು ಪರೀಕ್ಷಿಸಲಿಲ್ಲ. ಏಕೆಂದರೆ ಎಲ್ಲ ತಾಯಂದಿರಲ್ಲೂ ಅದೇ ರೋಗಾಣು ಇರಲು ಸಾಧ್ಯವಿಲ್ಲ. ಮುಂದಿನ ಹೆಜ್ಜೆಯಾಗಿ ಪ್ರಸೂತಿ ಕೋಣೆ ಯಲ್ಲಿದ್ದ ಎಲ್ಲ ವಸ್ತುಗಳಿಂದ ಉಪ ಕರಣಗಳಿಂದ ಈ ರೋಗಾಣು ಬಂದಿರ ಬಹುದೋ ಎಂದು ದೀರ್ಘವಾದ ಪರೀಕ್ಷೆ ಮಾಡಿದೆವು. ಎಲ್ಲವೂ ಇಲ್ಲವೆಂದೇ ಉತ್ತರ ಬಂದಿತು. ಆಸ್ಪತ್ರೆಗಳಲ್ಲಿ ಇದ್ದ ಎಲ್ಲ ನಲ್ಲಿಗಳ ನೀರನ್ನು ಪರೀಕ್ಷಿಸಲು ಪ್ರಾರಂಭಿಸಿದೆ. ಒಂದು ನಲ್ಲಿಯ ನೀರಿನಲ್ಲಿ ಗೊಂದಲ ಎಬ್ಬಿಸುವಂತ ಫಲಿತಾಂಶಗಳು ಬಂದವು.

ಈಗ ನಮ್ಮ ಲಕ್ಷವು ನೀರಿನ ಕಡೆಗೆ ಹರಿಯಿತು. ನಿತ್ಯವೂ ನೀರಿನಲ್ಲಿಯ ಬ್ಯಾಕ್ಟೀರಿಯಾಗಳು ಬಗ್ಗೆ ಪರೀಕ್ಷೆ ಪ್ರಾರಂಭಿಸಿದೆ. ಎಲ್ಲ ನಲ್ಲಿಗಳೂ ಪರೀಕ್ಷೆಗೆ ಒಳಪಟ್ಟವು. ಆಂದರೆ ಇದು ಪ್ರಸೂತಿ ಕೋಣೆಗೆ ಸೀಮಿತವಾಗಿತ್ತು. ಒಂದು ದಿನ ಪ್ರಸೂತಿ ಕೋಣೆಯಲ್ಲಿ ಒಂದು ನಲ್ಲಿಯಿಂದ ನಮಗೆ ಬೇಕಾದ ಬ್ಯಾಕ್ಟೀರಿಯಾ ಪತ್ತೆಯಾಯಿತು. ನನಗೆ ಒಂದು ರೀತಿಯ ಸಮಾಧಾನ. ಏಕೆಂದರೆ ಸಂಶೋಧನೆ ಒಂದು ಹೆಜ್ಜೆ ಮುಂದೆ ಇಟ್ಟಿತು. ಆ ನಲ್ಲಿಗೆ ನೀರು ಯಾವ ಮೂಲದಿಂದ ಬರುವದೆಂದು ಹುಡುಕಲು ಆಸ್ಪತ್ರೆಯ ಮಾಳಿಗೆಗೆ ಹೋದೆವು. ಕೂಲಂಕಷವಾಗಿ ಪರೀಕ್ಷಿಸಿದಾಗ ಒಂದು ಟ್ಯಾಂಕು ವಿಶೇಷವೆನಿಸಿತ್ತು. ಆ ಟ್ಯಾಂಕಿಗೆ ನೀರಿನ ಮೂಲಗಳು ಎರಡಿದ್ದುವು. ಒಂದು ಪೈಪದಿಂದ ಕಾರ್ಪೋರೇಶನ್‌ದವರು ಸರಬರಾಜು ಮಾಡುತ್ತಿರುವ ನೀರು ಬರುತ್ತಿತ್ತು. ಎರಡನೆಯ ಪೈಪದಿಂದ ಆಸ್ಪತ್ರೆಯಲ್ಲಿದ್ದ ಒಂದು ಹಳೆಯ ಭಾವಿಯ ನೀರು ಸೇರುತ್ತಿತ್ತು. ಯಾಕೆಂದು ಕೇಳಿದೆ. ಆಸ್ಪತ್ರೆಯ ಮ್ಯಾನೇಜರ್ ಹೇಳಿದರು. ಹಲವಾರು ಬಾರಿ ಕಾರ್ಪೋರೇಶನ್‌ದವರ ನೀರು ಕಡಿಮೆ ಬಂದು ತೊಂದರೆ ಆಗುತ್ತಿತ್ತು. ಇದರಿಂದ ಆಸ್ಪತ್ರೆಯ ಕಾರ್ಯಗಳು ಸ್ಥಗಿತಗೊಳ್ಳುವಂತಾಗುತ್ತಿತ್ತು. ಕಾರಣ ಅಂಥ ಪ್ರಸಂಗಗಳಲ್ಲಿ ಭಾವಿಯ ನೀರನ್ನು ಪಂಪು ಮಾಡಿ ಬಳಸುತ್ತೇವೆ ಎಂದರು. ಕಾರ್ಪೋರೇಶನದ ನೀರು ಪರೀಕ್ಷಿಸಿದೆ. ಅದರಲ್ಲಿ ರೋಗಾಣುಗಳು ಇರಲಿಲ್ಲ. ಈಗ ಭಾವಿಯ ನೀರನ್ನು ಪರೀಕ್ಷಿಸಿದೆವು. ಅದರಲ್ಲಿ ನಾವು ಹುಡುಕುತ್ತಿರುವ ಬ್ಯಾಕ್ಟೀರಿಯಾ ಪತ್ತೆಯಾಯಿತು. ಭಾವಿಗೆ ಹೋಗಿ ಅದನ್ನು ಪರೀಕ್ಷಿಸಿದೆನು. ಅದೊಂದು ಹಳೆಯ ಭಾವಿ. ಭಾವಿಯ ಗೋಡೆ ಭದ್ರವಾಗಿತ್ತು. ಆದರೆ ಅಲ್ಲಲ್ಲಿ ಕಲ್ಲುಗಳ ನಡುವೆ ಸಂದುಗಳಿದ್ದವು. ಭಾವಿಯನ್ನು ಚೆನ್ನಾಗಿ ರಕ್ಷಿಸಲಾಗಿತ್ತು. ಅದರಲ್ಲಿ ಕಸಕಡ್ಡಿಗಳು ಬೀಳದಂತೆ ಮಾಡಿದ್ದರು. ನೀರು ಸ್ವಚ್ಛವಾಗಿ ಕಂಡಿತು. ಆ ಭಾವಿಯನ್ನು ನೋಡಿಕೊಳ್ಳುತ್ತಿದ್ದ ಕೆಲಸಗಾರನನ್ನು ಸಂಪರ್ಕಿಸಿ ವಿಚಾರ ನಡೆಸಿದೆನು. ಅವನು ನೋಡಿದಂತೆ ಭಾವಿಯ ಗೋಡೆಯ ಸಂದುಗಳಲ್ಲಿ ಇಲಿಗಳಿವೆ. ಅವು ಅಲ್ಲಿ ಓಡಾಡುವದನ್ನು ಅವನು ಕಂಡಿರುವನು. ಭಾವಿಯ ನೀರು ಈ ಸಲ ಕಡಿಮೆಯಾಗಿದೆ ಎಂದನು. ಹಗ್ಗ ಹಾಗೂ ಬಕೆಟ್ಟು ತರಿಸಿ ಭಾವಿಯ ನೀರನ್ನು ಮೇಲೆ ಎತ್ತಿದೆವು. ನೀರು ಸ್ವಚ್ಛವಾದಂತೆ ಕಂಡರೂ ಅದಕ್ಕೆ ಒಂದು ವಾಸನೆ ಇತ್ತು. ಆ ನೀರನ್ನು ಪರೀಕ್ಷಿಸಲಾಗಿ ಅದರಲ್ಲಿ ಗೊಂದಲ ಎಬ್ಬಿಸಿದ ಟೈಫಿಮೂರಿಯಮ್ ರೋಗಾಣುಗಳ ಪತ್ತೆಯಾಯಿತು. ಸಂಶೋಧನೆ ಮುಗಿಯುವ ಹಂತಕ್ಕೆ ಬಂದಿತು. ಒಂದು ಪ್ರಶ್ನೆಯನ್ನು ನಾವು ಇನ್ನೂ ಉತ್ತರಿಸಬೇಕಾಗಿತ್ತು. ಆ ಪ್ರಶ್ನೆಯೆಂದರೆ ಈ ರೋಗಾಕಾರಕ ಬ್ಯಾಕ್ಟೀರಿಯಾ ಶಿಶುಗಳ ಜಠರದಲ್ಲಿ ಹೇಗೆ ಪ್ರವೇಶಿಸಿತು?

ಒಂದು ದಿನ ನಾನು ಪ್ರಸವ ನಡೆದಾಗ

ಬಂದಿತು. ಒಂದು ಪ್ರಶ್ನೆಯನ್ನು ನಾವು ಇನ್ನೂ ಉತ್ತರಿಸಬೇಕಾಗಿತ್ತು. ಆ ಪ್ರಶ್ನೆಯೆಂದರೆ ಈ ರೋಗಕಾರಕ ಬ್ಯಾಕ್ಟೀರಿಯಾ ಶಿಶುಗಳ ಜಠರದಲ್ಲಿಹೇಗೆ ಪ್ರವೇಶಿಸಿತು?

ಒಂದು ದಿನ ನಾನು ಪ್ರಸವ ನಡೆದಾಗ ಅಲ್ಲಿಯೇ ಕುಳಿತೆ. ಪ್ರತಿಯೊಂದು ಚಲನವಲನವನ್ನು ಕೂಲಂಕಷವಾಗಿ ನೋಡ ತೊಡಗಿದೆ. ಎಲ್ಲವೂ ಸರಿಯಾಗಿ ನಡೆಯುತ್ತಿತ್ತು. ಮಗು ಹುಟ್ಟಿತು. ಮಗು ಅಳುವಂತೆ ಮಾಡಿದರು. ಈಗ ಮಗುವಿನ ಗಂಟಲನ್ನು ಸ್ವಚ್ಛಗೊಳಿಸಬೇಕು. ರಬ್ಬರಿನ ಕೊಳವೆಯನ್ನು ಹೀರುವ ಉಪಕರಣಕ್ಕೆ ಜೋಡಿಸಿ ಬಾಯಿ ಗಂಟಲಲ್ಲಿಯ ಲೋಳೆಯನ್ನು ಸ್ವಚ್ಛಗೊಳಿಸಿದರು. ರಬ್ಬರಿನ ಕೊಳವೆಯು ಹೊರಮೈಗೆ ಲೋಳೆ ಬಳಿದಿತ್ತು. ಅದನ್ನು ಸ್ವಚ್ಛಗೊಳಿಸಲು ರಬ್ಬರಿನ ಕೊಳವೆಯನ್ನು ನಲ್ಲಿಯ ನೀರಿನಲ್ಲಿ ತೊಳೆದು ಮತ್ತೆ ಮಗುವಿನ ಬಾಯಿಯಲ್ಲಿ ಸೇರಿಸಲು ಬಂದರು. ನಾನು ದೂರದಿಂದಲೇ ಚೀರಿದೆ. ''ಬೇಡ, ಬೇಡ ಈ ಕಾರ್ಯವೇ ಆಸ್ಪತ್ರೆಯನ್ನು ಗೊದಲಕ್ಕೀಡು ಮಾಡಿದೆ'' ನನ್ನ ಧ್ವನಿ ಅಲ್ಲಿದ್ದವರನ್ನೆಲ್ಲ ನಡುಗಿಸಿತು. ನಾನು ಎದ್ದು ಹೋಗಿ ದಾಯಿಯ ಕೈಯಿಂದ ರಬ್ಬರಿನ ಕೊಳವೆಯನ್ನು ಕಸಿದುಕೊಂಡೆ ಹಾಗೂ ಪರೀಕ್ಷಿಸಲು ಇಟ್ಟೆ. ನಲ್ಲಿಯ ನೀರನ್ನೂ ಹಿಡಿದುಕೊಂಡೆ. ಆ ನಲ್ಲಿಯನ್ನು ಬಂದು ಮಾಡಿ ಮೊಹರು ಮಾಡಿದೆ. ನಾನೆಣಿಸಿದಂತೆ ಆ ರೋಗಾಣು ನೀರಿನಲ್ಲಿ ಇತ್ತು. ಹಾಗೂ ರಬ್ಬರಿನ ಕೊಳವೆಯಿಂದಲೂ ಪತ್ತೆಯಾಯಿತು. ಆ ಆಸ್ಪತ್ರೆಯ ಮುಖ್ಯಸ್ಥರನ್ನು ಕರೆದು ವಿವರಿಸಿದೆ. ನೋಡಿ ಸರ್, ನಿಮ್ಮ ಬಾವಿಯ ನೀರು ಕಶ್ಮಲಗೊಂಡಿದೆ. ಆ ನೀರಿನಲ್ಲಿ ಇಲಿಯ ಹಿಕ್ಕೆ ಹಾಗೂ ಮೂತ್ರಗಳು ಸೇರುತ್ತವೆ. ಹಿಕ್ಕೆ ಹಾಗೂ ಮೂತ್ರಗಳಲ್ಲಿ ಟೈಫಿಮ್ಯುರಿಯಮ್ ಎಂಬ ಬ್ಯಾಕ್ಟೀರಿಯಾ ಇರುತ್ತವೆ. ಈ ಜೀವಿಗಳು ನೀರಿನಲ್ಲಿ ವೃದ್ಧಿಗೊಳ್ಳುವ ಶಕ್ತಿ ಪಡೆದಿರುತ್ತವೆ. ಇಂಥ ನೀರನ್ನು ಟ್ಯಾಂಕುಗಳಿಗೆ ಪಂಪು ಮಾಡಿದಾಗ ಈ ರೋಗಾಣುಗಳೂ ಟ್ಯಾಂಕಿಗೆ ತಲಪುತ್ತವೆ. ಈ ಕಶ್ಮಲ ನೀರು ನಲ್ಲಿಯ ಮೂಲಕ ಪ್ರಸೂತಿ ಕೋಣೆಯಲ್ಲಿ ಹರಿಯಲು ಪ್ರಾರಂಭಿಸುತ್ತದೆ. ಇಂಥ ನೀರಿನಲ್ಲಿ ರಬ್ಬರಿನ ಕೊಳವೆಯನ್ನು ತೊಳೆದಾಗ ಹೊರಗಿದ್ದ ಲೋಳೆ ಹೋಗುವುದು. ಆದರೆ ನೀರಿನಲ್ಲಿದ್ದ ರೋಗಾಣುಗಳು ರಬ್ಬರಿನ ಕೊಳವೆಗೆ ಮೆತ್ತಿಕೊಳ್ಳುವುವು. ಈ ರೋಗಾಣುಯುಕ್ತ ಕೊಳವೆಯನ್ನು ಶಿಶುವಿನ ಬಾಯಿಯಲ್ಲಿ ಗಂಟಲಲ್ಲಿ ಸೇರಿಸಿದಾಗ ರೋಗಾಣುಗಳು ಶಿಶುವಿನ ಬಾಯಿಯ ಹಾಗೂ ಗಂಟಲ್ನಿ ಲೋಳ್ಪರೆಗೆ ಅಂಟುವುವು. ಅಂದರೆ ಮಗು ಈಗ ರೋಗಾಣುಗಳಿಗೆ ಬಲಿಬಿದ್ದಂತೆ. ಈ ರೋಗಾಣುಗಳು ತತ್‌ಕ್ಷಣ ಬೆಳೆಯುತ್ತವೆ. ಜಠರ ತಲಪುತ್ತವೆ. ಕರುಳು ಸೇರುತ್ತವೆ. ಜಠರ-ಕರುಳು ಉರಿಯಾತಣೆ ತಲೆಯ ಎತ್ತುವುದು. ಆಗ ವಾಂತಿ ಭೇದಿಗಳು ಪ್ರಾರಂಭವಾಗುವುವು. ಕೆಲವು ರೋಗಾಣುಗಳು ರಕ್ತವನ್ನು ಸೇರಿ ಜ್ವರ ಬರುವಂತೆ ಮಾಡುತ್ತವೆ. 'ವಿಷಣ್ಣತೆ ಮೂಡಿಸುತ್ತವೆ. ಮಗು ವಿಷಣ್ಣತೆಯಿಂದ ಮರಣ ಹೊಂದುವುದು. ನಿಮ್ಮಲ್ಲಿ ನಡೆದ ಈ ಅನಾಹುತವಾದದ್ದು ಹೀಗೆ ಇಂಥದ್ದು ನಡೆಯಬಾರದೆಂದರೆ ಆಸ್ಪತ್ರೆಗೆ ಬರುವ ನೀರು ರೋಗಾಣುಮುಕ್ತವಾಗಿರಬೇಕು. ನೀರಿಗೆ ಬ್ಲೀಚಿಂಗ್ ಪುಡಿಯನ್ನು ಮೇಲಿಂದ ಮೇಲೆ ಕೂಡಿಸಬೇಕು. ಅಲ್ಲದೇ ಪ್ರತಿ ತಿಂಗಳೂ ನಲ್ಲಿಯ ನೀರನ್ನು ಪರೀಕ್ಷೆಗೆ ಗುರಿಪಡಿಸಿ ಅದು ರೋಗಾಣು ಮುಕ್ತ ಎಂಬ ಪ್ರಶಸ್ತಿ ಪಡೆಯಬೇಕು''.

ವೈದ್ಯರು ಎದ್ದು ನಿಂತು ಕೈ ಕುಲುಕಿದರು. ಕೃತಜ್ಞತೆ ಹೇಳಿದರು. ನಾನು ಸೂಚಿಸಿದ ಸಂಗತಿಗಳನ್ನು ಮನಸಾರೆ ನಡೆಸಿಕೊಂಡು ಬಂದರು. ಆಸ್ಪತ್ರೆಯ ಹೆಸರು ದೊಡ್ಡದಾಗಿದೆ.

ಜನರು ಆ ಆಸ್ಪತ್ರೆಯನ್ನು ನಂಬುತ್ತಾರೆ. ಅಲ್ಲಿ ಒಳ್ಳೆಯ ಕಾರ್ಯ ಸೇವೆ ನಡೆದಿದೆ.

ರೋಗಿಗಳನ್ನು ಉಪಚರಿಸುವಾಗ ಒಂದೊಂದು ಸಲ ಇಂಥ ಅಚಾತುರ್ಯಗಳು ನಡೆದು, ಅನಾಹುತಗಳು ನಡೆಯುತ್ತವೆ. ಅವುಗಳಿಗೆ ಯುಕ್ತ ಪರಿಹಾರ ನಡೆದು ಸುಧಾರಣೆಗಳು ರೂಢಿಯಲ್ಲಿ ಬರುತ್ತವೆ.

೨. ನಿಜವಾಗಿ ಕೈಕೊಟ್ಟವರು: ರೂಢಿಯಲ್ಲಿ ಒಂದು ಮಾತಿದೆ. ಅದು ''ಕೈ ಕೊಟ್ಟರು'' ಎಂಬುದು ಇದರ ವ್ಯಾವಹಾರಿಕ ಅರ್ಥ ವೆಂದರೆ ಮೋಸ ಮಾಡಿದರು, ಎಂದು. ಕೊನೆಗೂ ಅವನು ನಮಗೆ ಕೈಕೊಟ್ಟ ಎಂದು ಹಳಹಳಿಸುವುದನ್ನು ನಾವು ನಾಕಷ್ಟು ಸಲ ಕಂಡಿದ್ದೇವೆ, ಅನುಭವಿಸಿದ್ದೇವೆ.

ಆದರೆ ಪ್ರಸ್ತುತ ಪ್ರಸಂಗದಲ್ಲಿ ಈ ತಲೆಬರಹ ಸರಳಾರ್ಥವನ್ನು ಒಪ್ಪುವುದೇ ವಿನಾ ವ್ಯಾವಹಾರಿಕವಾಗಿ ಅಲ್ಲ.

ಇದು ಅಂಗಾಂಗಗಳ ಕಸಿ ಮಾಡುವ ಯುಗ. ನೇತ್ರ ಕಸಿಗಳು ಪ್ರಸಿದ್ಧವಾಗಿವೆ. ಮೂತ್ರಪಿಂಡ ಕಸಿ ಜನರನ್ನು ತಲ್ಲಣಗೊಳಿಸುತ್ತ ಆಗೊಮ್ಮೆ ಈಗೊಮ್ಮೆ ಹೃದಯ ಕಸಿ ಕೇಳಿ ಬರುತ್ತದೆ. ಇದೇ ದಾರಿಯಲ್ಲಿ ಯಕೃತ್ತಿನ ಕಸಿ ಅಸ್ಥಿ ಮಜ್ಜೆ ಕಸಿ ಕೂಡ ಕೇಳುತ್ತೇವೆ. ತ್ವಚೆಯ ಕಸಿಯಂತೂ ಈಗ ಎಲ್ಲೆಡೆಯಲ್ಲಿ ಸಾಮಾನ್ಯವಾಗಿ ಬಿಟ್ಟಿದೆ.

ಇನ್ನೊಂದು ಕಸಿ ಈಗ ಒಂದು ಹಂತಕ್ಕೆ ತಲುಪುತ್ತಲಿದೆ. ಅದೇ ಕೈ ಕಸಿ. ಅದರ ಕಥೆಯನ್ನು ಇಲ್ಲಿ ಬರೆಯಲಾಗಿದೆ.

ಡೆನಿಸ್ ಚಟೆಲಿಯರ್ ಎಂಬ ಹೆಸರಿನ ವ್ಯಕ್ತಿ ಫ್ರಾನ್ಸ್ ದೇಶದವ. ಅವನು ವಿಜ್ಞಾನದಲ್ಲಿ ಮತ್ತು ವೈಜ್ಞಾನಿಕ ಪ್ರಯೋಗಗಳಲ್ಲಿ ಆಸಕ್ತನು. ಅವನಿಗೆ ರಾಕೆಟ್ ಮಾಡಿ ಹಾರಿಸುವ ಹುಚ್ಚು(೧೯೯೬). ಒಂದು ದೊಡ್ಡ ರಾಕೆಟ್ ತಯಾರಿಸಿದ ಅದನ್ನು ಹಾರಿಸಲು ಎಲ್ಲ ಸಿದ್ಧತೆಗಳನ್ನು ಮಾಡಿದ. ಹಾರಿಸಲೆಂದು ಅದರ ಬತ್ತಿಗಳಿಗೆ ಕಿಡಿ ಇಟ್ಟ. ದುರ್ದೈವದಿಂದ ರಾಕೆಟ್ ಹಾರಲಿಲ್ಲ. ಆದರೆ ದೊಡ್ಡ ಶಬ್ದದೊಂದಿಗೆ ಆಸ್ಫೋಟಗೊಂಡಿತು. ಆಸ್ಫೋಟದಲ್ಲಿ ಅವನ ಎರಡೂ ಕೈಗಳು ಸುಟ್ಟು ಹೋದುವು. ವೈದ್ಯರು ಅವನ ಕೈಗಳೆರಡನ್ನೂ ಕತ್ತರಿಸಿದರು. ಅಂದಿನಿಂದ ಅವನು ಮೊಂಡಗೈಗಳನ್ನು ಹೊತ್ತು ತಿರುಗಬೇಕಾಯಿತು. ಹಲವಾರು ಪ್ರಕಾರದ ಕೃತಕ ಕೈಗಳನ್ನು ಬಳಸುತ್ತ ಜೀವಿಸುತ್ತಿದ್ದ.

ಪಶ್ಚಿಮ ಫ್ರಾನ್ಸಿನ ಒಂದು ಆಸ್ಪತ್ರೆಯಲ್ಲಿ ಕೆಲವು ಶಸ್ತ್ರ ವೈದ್ಯರು ಇವನ ಬಗ್ಗೆ ವಿಚಾರಿಸತೊಡಗಿದರು. ಅವನಿಗೆ ಬೇರೆಯವರ ಕೈಗಳನ್ನು ಯಾಕೆ ಕಸಿ ಮಾಡಬಾರದೆಂದು ವಿಚಾರಿಸಿದರು. ಪ್ರಯತ್ನಮಾಡಲು ನಿಶ್ಚಯಿಸಿದರು.

ಡೆನಿಸ್ ಚಟೆಲಿಯರ್‌ನಿಗೆ ಸರಿಹೊಂದುವ ದಾನಿಯನ್ನು ಹುಡುಕಿದರು. ಈ ದಾನಿ ಬೇರೆ ಒಂದು ರೋಗದಿಂದ ಮರಣ ಹೊಂದುವವನಿದ್ದ. ಅವನಿಗೆ ಎಲ್ಲ ವಿವರ ಕೊಟ್ಟು ಮೃತನಾದ ಮೇಲೆ ಅವನ ಎರಡೂ ಮುಂಗೈಗಳನ್ನು ದಾನ ಮಾಡಲು ವಿನಂತಿಸಿದರು. ಅವನು ಒಪ್ಪಿ ಅನುಮತಿಯನ್ನು ಬರೆದು ಕೊಟ್ಟ. ಎಣಿಸಿದಂತೆ ಅವನು ಮರಣ ಹೊಂದಿದ ತತ್‌ಕ್ಷಣ ವೈದ್ಯರು ಅವನ ಎರಡೂ ಮುಂಗೈಗಳನ್ನು ಕತ್ತರಿಸಿ ತೆಗೆದರು. ಇನ್ನೊಂದು ಶಸ್ತ್ರ ಚಿಕಿತ್ಸಾ ಕೋಣೆಯಲ್ಲಿ ಮೊಂಡು ಕೈ ಪಡೆದ ಡೆನಿಸ್ ಚಾಟೆಲಿಯರ್‌ನನ್ನು ಸಜ್ಜು ಮಾಡಿ ಮಲಗಿಸಿದ್ದರು. ದಾನಿಯ ಕೈಗಳು ಬಂದ ಒಡನೆ ಒಂದೊಂದಾಗಿ ಎರಡೂ ಮುಂಗೈಗಳನ್ನು ಮೊಂಡ ಕೈಗಳಿಗೆ ಕಸಿ ಮಾಡಿದರು. ಈ ಕಸಿ ಮಾಡಲು ಶಸ್ತ್ರ ವೈದ್ಯರ ತಂಡಗಳು ಹದಿನೇಳು ತಾಸುಗಳವರೆಗೆ ಶ್ರಮಿಸಬೇಕಾಯಿತು. ಈ ಗುಂಪಿನ ಶಸ್ತ್ರ ವೈದ್ಯರ ಮುಖ್ಯಸ್ಥರು ಮೈಕೆಲ್ ಡುಬೆರ್ನಾರ್ಡ್ ಎಂಬುವರು.

ಕಸಿ ಮಾಡಿದ್ದೇನೋ ಮುಗಿಯಿತು. ಈಗ ಡೆನಿಸ್ ಚಾಟೆಲಿಯರ್ ಕಸಿ ಮಾಡಿದ ಮುಂಗೈಗಳನ್ನು ತಿರಸ್ಕರಿಸುವನೋ ಅಥವಾ

ಹೊಂದಿಕೊಳ್ಳುವನೋ ಎಂಬ ಯಕ್ಷ ಪ್ರಶ್ನೆ ನಿಂತಿತ್ತು.

ಶಸ್ತ್ರ ಕ್ರಿಯೆ ನಡೆಸಿ ೨೫ ದಿನಗಳವರೆಗೆ ವೈದ್ಯರು ಸೂಕ್ಷ್ಮವಾಗಿ ಪ್ರತಿ ಬದಲಾವಣೆ ದಾಖಲಿಸುತ್ತ ಹೋದರು. ಅನಂತರ ಕಟ್ಟಿದ ಎಲ್ಲ ಬ್ಯಾಂಡೇಜಗಳನು ಬಿಚ್ಚಿದರು. ಎಲ್ಲಿಯೂ ತಿರಸ್ಕರಿಸುವ ಲಕ್ಷಣಗಳು ಕಾಣಲಿಲ್ಲ. ಎಲ್ಲರೂ ಖುಷಿಪಟ್ಟರು. ಮುಂದಿನ ಸಂಗತಿಯೆಂದರೆ ಕಸಿ ಮಾಡಿದ ಕೈಯಲ್ಲಿ ಜೀವ ತುಂಬಬೇಕು.

ಡೆನಿಸ್ ಚಾಟಲಿಯರ್ ತನ್ನ ಬೆರಳುಗಳನ್ನು ಚಲಿಸಲು ಪ್ರಯತ್ನಿಸಿದ ಅಬ್ಬಾ: ನಿಜವಾಗಿ ಅವನ ಬೆರಳುಗಳು ಚಲನವಲನ ತೋರಿದುವು. ಮುಟ್ಟಿದರೆ ಅರಿವು ಆಗುತ್ತಿತ್ತು. ಡೆನಿಸ್ ಚಾಟೆಲಿಯರ್‌ಗೆ ಹಿಡಿಸಲಾರದಷ್ಟು ಸಂತೋಷ. ಜೋರಾಗಿ ಕೂಗಿದನು. ''ಸಂತೋಷ ಅತಿ ಸಂತೋಷ'' ನಿಜವಾಗಿಯೂ ನನಗೆ ಕೈಗಳು ಬಂದವು ಎಂದು ಚೀರಿದ. ನಾನು ನನ್ನ ಬೆರಳುಗಳಿಂದ ಮಕ್ಕಳಿಗೆ ಕಚಗುಳಿ ಆಡಿಸಬಲ್ಲೆ ಎಂದು ಸಂತೋಷಪಟ್ಟ.

ಒಂದು ವರ್ಷದ ಹಿಂದೆ ಬೇರೊಂದು ಆಸ್ಪತ್ರೆಯಲ್ಲಿ ಒಂಟಿ ಕೈಯನ್ನು ಕಸಿ ಮಾಡಿದ್ದರು. ಈ ಸಲ ಮಾಡಿದ್ದು ಎರಡೂ ಕೈಗಳು. ಇಂಥ ಪ್ರಯತ್ನ ಜಗತ್ತಿನಲ್ಲಿಯೇ ಪ್ರಥಮ ಎನ್ನಲಾಗುತ್ತಿದೆ.

ಏರಿರದ ಬಂಡೆಗಳು ಧರೆಯೊಳಗೆ ನೂರಾರು
ಏರಲಾಗದ ಬಂಡೆಗಳು ಸೃಷ್ಟಿಯಲ್ಲಿಲ್ಲ
ದಾರಿ ಕಡಿಯುತ ಹೆಜ್ಜೆ ಇಡುವಾತ ದಿಟ್ಟ ದಾಶ್
ದಾರಿ ದಾರಿಗು ಹೊಸತ ಕಾಣುವನು ಅತ್ರಿಸೂನು

೩. ಸುಶಿಕ್ಷಿತರ ಮಿದುಳು

ಅಮೇರಿಕೆಯ ಒಂದು ವಿಶ್ವವಿದ್ಯಾಲಯದಲ್ಲಿ ಒಂದು ಸಂಶೋಧನೆ ನಡೆಯಿತು. ಇದರಲ್ಲಿ ಸುಮಾರು ೩.೦೦ಕ್ಕಿಂತ ಹೆಚ್ಚು ಸ್ತ್ರೀ ಹಾಗೂ ಪುರುಷರನ್ನು ಪರೀಕ್ಷಿಸಲಾಯಿತು. ಈ ಎಲ್ಲ ಜನರೂ ಒಂಟಿಯಾಗಿದ್ದವರು. ಯಾರ ಕೃಪಾಶ್ರಯದಲ್ಲಿಯೂ ಬದುಕದೆ ಸ್ವತಂತ್ರವಾಗಿ ಜೀವನ ನಡೆಸುತ್ತಿದ್ದರು.

ಸಂಶೋಧಕರು ಇವರನ್ನು ಎಂ.ಆರ್.ಐ. (ಮ್ಯಾಗ್ನೆಟಿಕ್ ರೆಸೋನೆನ್ಸ್ ಇಮೇಜಿಂಗ್) ಉಪಕರಣದಿಂದ ಪರೀಕ್ಷಿಸಿದರು. ಈ ಉಪಕರಣದ ಬಳಕೆಯಿಂದ ವ್ಯಕ್ತಿಗಳ ಮಿದುಳಿನ ಗಾತ್ರವನ್ನು ಅಳೆಯಲು ಬರುತ್ತದೆ. ಎಲ್ಲರ ಮಿದುಳಿನ ಗಾತ್ರವನ್ನು ಅಳೆದು ಪರೀಕ್ಷಿಸಿದಾಗ ಒಂದು ಸ್ವಾರಸ್ಯಕರ ಸಂಗತಿ ಬೆಳಕಿಗೆ ಬಂದಿತು. ಅದನ್ನು ಕೆಳಗಿನ ಸಾಲುಗಳಲ್ಲಿ ಸಂಕ್ಷಿಪ್ತವಾಗಿ ಹೇಳಲಾಗಿದೆ.

ಸುಶಿಕ್ಷಿತರ ಮಿದುಳು ಜಾಸ್ತಿ ಉಡುಗುತ್ತದೆ. ಅಂದರೆ ಗಾತ್ರದಲ್ಲಿ ಕಡಿಮೆಯಾಗುತ್ತದೆ. ಸಂಶೋಧಕರು ಎಲ್ಲ ವ್ಯಕ್ತಿಗಳ ಶಿಕ್ಷಣದ ಪ್ರಮಾಣವನ್ನು ವರ್ಗೀಕರಿಸಿದರು. ಶಿಕ್ಷಣವನ್ನು ಎಷ್ಟು ವರ್ಷಗಳವರೆಗೆ ಪಡೆದರು ಎಂಬುದನ್ನು ದಾಖಲಿಸಿದರು. ಜಾಸ್ತಿ ಶಿಕ್ಷಣವನ್ನು ಪಡೆದ ವ್ಯಕ್ತಿಯ ಮಿದುಳು ಜಾಸ್ತಿ ಉಡುಗುವುದು ಎಂಬುದು ಖಚಿತವಾಯಿತು. ಕಡಿಮೆ ಶಿಕ್ಷಣ ಪಡೆದ ವ್ಯಕ್ತಿಯ ಮಿದುಳು ಕಡಿಮೆ ಉಡುಗುವುದು ಎಂದು ತಿಳಿಯಿತು.

ಮಿದುಳು ಉಡುಗುವಿಕೆ ಜಾಸ್ತಿ ಶಿಕ್ಷಣ ಪಡೆದವರಲ್ಲಿ ಜಾಸ್ತಿ ಎಂದು ಗೊತ್ತಾದ ಮೇಲೆ ಇನ್ನೊಂದು ಅಧ್ಯಯನ ನಡೆಸಿದರು. ಮಿದುಳು ಉಡುಗಿದವರ ವಿಚಾರ, ನಡತೆ , ನೆನಪು ಮುಂತಾದವುಗಳಲ್ಲಿ ಏನಾದರೂ ಬದಲಾವಣೆ ಕಂಡು ಬರುವುದೋ ಹೇಗೆ? ಯಾವುದೇ ತರದ ಬದಲಾವಣೆಗಳು ಕಂಡು ಬರಲಿಲ್ಲ. ಇದೊಂದು ಬಲು ಸಮಾಧಾನದ ಸಂಗತಿ ಎನಿಸಿತು.

ಹಾಗಾದರೆ ಜಾಸ್ತಿ ಶಿಕ್ಷಣ ಪಡೆದವರಲ್ಲಿ ಮಿದುಳು ಉಡುಗುವಿಕೆಯ ಅರ್ಥವೇನು? ಅದರ ಮಹತ್ವ ಏನು? ಈ ಅಧ್ಯಯನ ನಡೆಸಬೇಕಾದ ವಿಷಯವಾಗಿದೆ.

ನಾಲಗೆ ಕೈ ಕೊಟ್ಟಿತು

ಟಿ.ಎಸ್.ಸಂಜೀವರಾವ್
ಇ.ಡಬ್ಲ್ಯೂ.ಎಸ್.೪೩೪, ಕೆ.ಎಚ್.ಬಿ.
ಕಾಲೋನಿ, ೨ನೇ ಹಂತ, ೪ನೇ ಮುಖ್ಯ
ರಸ್ತೆ, ಬಸವೇಶ್ವರ ನಗರ,
ಬೆಂಗಳೂರು-೫೬೦ ೦೭೯

ಈಗ ಎಂಭತ್ತು ವರ್ಷಗಳಿಗೂ ಹಿಂದಿನ ಮಾತು. ಆಗ್ಗೆ ಅಮಲ್ದಾರರೆಂದರೆ ಒಂದು ತಾಲೂಕಿಗೇ ರಾಜ. ಅವರು ಜಮಾಬಂದಿಗೆ ಹೊರಟರೆ ರಾಜರು ದಿಗ್ವಿಜಯಕ್ಕೆ ಹೊರಟ ಹಾಗೆ. ಅವರು ಬರುತ್ತಾರೆಂದರೆ ಹಳ್ಳಿಯ ಪಟೇಲ, ಶ್ಯಾನುಭೋಗ, ತಲಾಟಿ ಥರಥರ ನಡುಗಿ ನೀರಾಗುತ್ತಿದ್ದರು. ಬಂದಾಗ ಅವರಿಗೆ ಷೋಡಶೋಪಚಾರಗಳು ಆಗಬೇಕು.

ಎಲ್ಲ ಅಮಲ್ದಾರರೂ ಜರ್ಬಿನವರೇ. ಆದರೆ ಜರ್ಬಿನಲ್ಲಿ ಜರ್ಬಿನವರು ಎಂದರೆ ಕ್ರಿಷ್ಣರಾಯರು. ಹೌದು ಅವರ ಅಂಕಿತ ನಾಮವೇ ಕ್ರಿಷ್ಣರಾಯ! ಅವರು ನೋಡುವುದಕ್ಕೂ ಹಾಗೇ ಇದ್ದರು. ಆರಡಿ ಎತ್ತರ; ಎತ್ತರಕ್ಕೆ ತಕ್ಕ ಗಾತ್ರ. ಕೆಂಪಗೆ ತೊಳೆದ ತಾಮ್ರದಂತೆ ಹೊಳೆವ ಮೈ ಬಣ್ಣ. ಕೆಂಡದಂತೆ ಕಿಡಿ ಕಾರುವ ಕಣ್ಣುಗಳು. ಆಕೃತಿಗೂ ಅಧಿಕಾರ ಮರ್ಯಾದೆಗೂ ತಕ್ಕಂಥ ವೇಷಭೂಷಣ. ಜರಿಪೇಟ, ಕೋಟು, ಪ್ಯಾಂಟು, ಟೈ, ಬೂಸ್. ಒಳ್ಳೆ ಬೊಟ್ಟೆಯವರಿಗಿಂತ (ಬಿಳಿಯರು) ಚೊಟ್ಟೆಯಾಗಿ ಕಾಣುತ್ತಿದ್ದರು, ಪೇಟ ಒಂದು ತೆಗೆದುಬಿಟ್ಟರೆ.

ಕ್ರಿಷ್ಣರಾಯರು ಬಹಳ ಕಟ್ಟುನಿಟ್ಟಿನವರು. ಎಲ್ಲಿ ಹೋದರೂ ಸಂಧ್ಯಾವಂದನೆ, ದೇವರ ಪೂಜೆ ತಪ್ಪಿಸುತ್ತಿರಲಿಲ್ಲ. ಮನೆ ಬಿಟ್ಟಮೇಲೆ ತಮ್ಮ ಕೈ ಅಡುಗೆಯೇ ಆಗಬೇಕು; ಬೇರೆಯವರು ಮಾಡಿದ ಅನ್ನ ಉಣ್ಣುತ್ತಿರಲಿಲ್ಲ.

ತಮ್ಮ ರಾಜಕಾರ್ಯದಲ್ಲೂ ಹಾಗೆಯೇ. ಲೆಕ್ಕಪತ್ರಗಳಲ್ಲಿ ಒಂದಿಷ್ಟು ವ್ಯತ್ಯಾಸ ಬಂದರೂ ಪಟೇಲ-ಶ್ಯಾನುಭೋಗರ ಬೆವರಿಳಿಸಿ ಬಿಡುತ್ತಿದ್ದರು. ಯಾವಾಗಲೂ ಶ್ರೀಮದ್ ಗಾಂಭೀರ್ಯದಿಂದ ಮುಖ ಬಿಗಿದು ಕೊಂಡೇ ಇರುತ್ತಿದ್ದರು. ಇಂಥವರು ಅತಿ ಹಾಸ್ಯಾಸ್ಪದ ಸ್ಥಿತಿಯಲ್ಲಿ ಸಿಕ್ಕಿಬಿದ್ದು ನಗೆಗೀಡಾಗಬೇಕಾದ ಪ್ರಸಂಗ ಒಂದು ಸಾರಿ ಬಂತು.

ಕ್ರಿಷ್ಣರಾಯರು ಜಮಾಬಂದಿಗೆಂದು ಚೆನ್ನವಳ್ಳಿ ಗ್ರಾಮಕ್ಕೆ ಹೊರಟಿದ್ದರು. ಪರಿವಾರವನ್ನೆಲ್ಲಾ ಮುಂಚೆಯೇ ಕಳಿಸಿ, ಹಿಂದೆ ತಾವು ಹೊರಟರು. ಆಗ ಇನ್ನೂ ಕಾರುಗಳ ಉಪಯೋಗವಿರಲಿಲ್ಲ; ಕಾರೇನು ಸೈಕಲ್ಲುಗಳೂ ಅಪರೂಪವೇ. ಅಮಲ್ದಾರರ ಸಂಚಾರಕ್ಕೆ ಕುದುರೆಯೇ ವಾಹನ. ಕ್ರಿಷ್ಣರಾಯರ ಹತ್ತಿರ ಒಬ್ಬ ಇಂಗ್ಲಿಷ್ ಸಾಹೇಬ ಬಹುಮಾನವಾಗಿ ಕೊಟ್ಟಿದ್ದ ಒಂದು ತಟ್ಟು ಇತ್ತು. ಅದನ್ನು ಮರಿಯಾಗಿದ್ದಾಗಲಿಂದ ಕ್ರಿಷ್ಣರಾಯರೇ ಹುಲ್ಲು ಹುರುಳಿ ಕೊಟ್ಟು ಸಾಕಿದ್ದರು. ಅದು ಅವರಿಗೆ ತುಂಬ ಅಚ್ಚುಮೆಚ್ಚಾಗಿ ಅವರ ಇಂಗಿತವನ್ನೂ ತಿಳಿದು ಕೊಳ್ಳುತ್ತದೆ ಎನ್ನುವಷ್ಟು ತರಬೇತಾಗಿತ್ತು. ಈ ತಟ್ಟನ್ನೇ ಹತ್ತಿ ಅವರು ಚೆನ್ನವಳ್ಳಿಗೆ ಹೊರಟಿದ್ದು.

ಪರಿವಾರವನ್ನು ಮುಂದೆ ಕಳಿಸಿ ತಾವು ಒಂಟಿ ಹೊರಟಿದ್ದಕ್ಕೆ ಒಂದು ಕಾರಣ ಇತ್ತು. ಕ್ರಿಷ್ಣರಾಯರಿಗೆ ಒಂದೇ ಒಂದು ಚಪಲ. ನೇರಳೆ ಹಣ್ಣೆಂದರೆ ಅವರಿಗೆ ಪಂಚಪ್ರಾಣ. ಆದರೆ ಅದನ್ನು ಎಲ್ಲರೆದುರಿಗೆ ಮಕ್ಕಳಂತೆ ತಿಂದು ಬೀಜ ಉಗುಳುವುದಕ್ಕೆ ಅವರ ಶ್ರೀಮದ್ಗಾಂಭೀರ್ಯಕ್ಕೆ ಕುಂದು! ಆದ್ದರಿಂದ ತಮ್ಮ ಚಪಲವನ್ನು ಹೇಗೋ ನಿಗ್ರಹಿಸಿ ಕೊಂಡಿದ್ದು, ಜಮಾಬಂದಿಗೆ ಹೊರಡುವಾಗ ತಾವೊಬ್ಬರೆ ಹೊರಟು ಊರಾಚೆಯಿದ್ದ ಕಾಡಿನ ದಾರಿಯಲ್ಲಿ ಸಾಗಿ, ಅಲ್ಲಿ ನೇರಳೇ ಮರದ ಕೆಳಗೆ ಉದುರಿ ಬಿದ್ದಿದ್ದ ಹಣ್ಣುಗಳನ್ನು ಆಯ್ದು

ತಿಂದು, ತಿರುಪಿನ ತಂಬಿಗೆಯಲ್ಲಿ ತಂದಿದ್ದ ಹೊಳೆ ನೀರಿನಿಂದ ಹಲ್ಲು ನಾಲಗೆ ಸ್ವಚ್ಛಮಾಡಿಕೊಂಡು, ಮುಂದೆ ಸಾಗುವುದು ಅವರ ವಾಡಿಕೆ. ಮಳೆಗಾಲ ಆದೇ ತಾನೆ ಪ್ರಾರಂಭವಾಗಿತ್ತು. ಒಳ್ಳೆ ನೇರಳೆ ಹಣ್ಣಿನ ಕಾಲ ಅದು. ಹಣ್ಣಿನ ರುಚಿನೋಡಿ ಆಗಲೇ ವರ್ಷ ಆಗಿ ಹೋಗಿತ್ತು. ಆತುರಾತುರದಿಂದ ಕೃಷ್ಣರಾಯರು ತಮಗೆ ಪರಿಚಿತವಿದ್ದ ಕಾಡಿನ ದಾರಿಯಲ್ಲಿ ತಟ್ಟನ್ನು ಓಡಿಸಿಕೊಂಡು ಹೋದರು.

ಮರಗಳಲ್ಲೇನೋ ಹಣ್ಣು ತುಂಬ ಬಿಟ್ಟಿದ್ದುವು. ಕಡುನೀಲಿ ಬಣ್ಣದ ಕಳಿತ ಹಣ್ಣುಗಳು, ಕೆಂಪು ನೀಲಿ ಮಿಶ್ರಿತ ದೋರಗಾಯಿಗಳು, ಹಸಿರು ಬಣ್ಣದ ಚಟ್ಟೆಗಳು ಅಂದಚೆಂದದ ಲೋಲಾಕುಗಳಂತೆ ರೆಂಬೆಗಳಿಂದ ತೂಗಾಡುತ್ತಿದ್ದುವು.

ಆದರೆ, ಅದೇನು ಗಾಳಿ ಜೋರಾಗಿ ಬೀಸಿರಲಿಲ್ಲವೋ ಮಳೆ ಬಿರುಸಾಗಿ ಹೊಡೆದಿರಲಿಲ್ಲವೋ, ಅಥವಾ ಬಿದ್ದ ಹಣ್ಣುಗಳನ್ನೆಲ್ಲಾ ಕರಡಿ, ಕಾಡು ಹಂದಿಗಳು ಧ್ವಂಸಮಾಡಿದ್ದವೋ, ಮರಗಳ ಕೆಳಗೆ ನೆಲದಮೇಲೆ ಒಳ್ಳೇ ಹಣ್ಣುಗಳು ಒಂದೂ ಕಾಣಲಿಲ್ಲ.

ಕೃಷ್ಣರಾಯರಿಗೆ ಆಸೆ ನಿರಾಶೆಯಾಯಿತು. ಕಾಡೆಲ್ಲ ಸುತ್ತಿ ಹುಡುಕಿದರು. ಹತ್ತಾರು ಮಣ್ಣು ಕಲ್ಲು ಹರಳು ಮೆತ್ತಿಕೊಂಡಿದ್ದ ಜಜ್ಜಿಹೋದ ಹಣ್ಣುಗಳು ಸಿಕ್ಕವೇ ಹೊರತು ಒಳ್ಳೆ ಹಣ್ಣು ಒಂದೂ ಸಿಗಲಿಲ್ಲ. ಕೃಷ್ಣರಾಯರು ಅತಿ ನಾಜೂಕಿನವರು, ಕುಸುಬಲವೃಷ್ಟಿಯವರು. ಅಂಥಿಂಥ ಹಣ್ಣು ತಿನ್ನುವವರಲ್ಲ. ಮರ ಹತ್ತಿದರೇ ಒಳ್ಳೆ ಹಣ್ಣು ಸಿಗುವುದು. ಆದರೆ ಅವರಿಗೆ ಮರ ಹತ್ತಲು ಬರುತ್ತಿರಲಿಲ್ಲ. ಹಾಗೆಯೇ ಯೋಚನೆ ಮಾಡುತ್ತ ನಿಂತರು. ಬಿಸಿಲೇರುತ್ತಿತ್ತು. ಕೊನೆಗೆ, ತೀರ ಕೆಳಗಿನ ಕೊಂಬೆಗಳಲ್ಲೇ ಜಗ್ಗಿ ಹಣ್ಣು ಬಿಟ್ಟಿದ್ದ ಒಂದು ಜಂಬುನೇರಳೆಮರ ಅವರ ಕಣ್ಣಿಗೆ ಬಿತ್ತು. ಕುದುರೆಯನ್ನು ನಡೆಸಿಕೊಂಡು ಅದರ ಹತ್ತಿರ ಹೋದರು. ಅಲ್ಲೂ ಅವರ ಅದೃಷ್ಟ ಖೋಟಿ ಆಗಿತ್ತು. ಹಣ್ಣುಗಳು ಅವರ ಕೈಗೆ ಎಟುಕುವಷ್ಟು ತಗ್ಗಿನಲ್ಲಿರಲಿಲ್ಲ. ಸ್ವಲ್ಪ ಎತ್ತರದಲ್ಲಿದ್ದುವು. ಅಲ್ಲದೆ ಮರದ ಕೆಳಗೆಲ್ಲ ಜಾಲಿ ಮುಳ್ಳಿನ ಗಿಡಗಳು ದಟ್ಟವಾಗಿ ಬೆಳೆದಿದ್ದು ಕಾಲಿಡಲು ಜಾಗವಿರಲಿಲ್ಲ.

ಕೊನೆಗೊಂದು ಉಪಾಯ ಅವರಿಗೆ ಹೊಳೆಯಿತು. ಮೆಲ್ಲಗೆ ಕುದುರೆ ಮೇಲೇ ಕುಳಿತು ಮುಳ್ಳಿನ ಗಿಡಗಳ ನಡುವೆಯೇ ಜಾಗಮಾಡಿಕೊಂಡು ಚೆನ್ನಾಗಿ ಜಗ್ಗಿ ತೂಗುತ್ತಿದ್ದ ರೆಂಬೆಯೊಂದರ ಕೆಳಗೆ ಕುದುರೆಯನ್ನು ನಿಲ್ಲಿಸಿದರು. ಕುದುರೆಮೇಲೆ ಕೂತೇ ಲಗಾಮನ್ನು ಅದರ ಕತ್ತಿನ ಸುತ್ತ ಹಾರದಂತೆ ಹಾಕಿದರು. ರಿಕಾಬಿನಿಂದ ಕಾಲು ತೆಗೆದು ಷೂಸ್ ಬಿಚ್ಚಿ ಚೀಲಕ್ಕೆ ಸೇರಿಸಿದರು. ಕುದುರೆಯ ಕೊರಳನ್ನು ತಬ್ಬಿಕೊಂಡು ಮೆಲ್ಲಗೆ ಕಾಲುಗಳೆರಡನ್ನೂ ಜೀನಿನ ಮೇಲೆ ತಂದುಕೊಂಡು ಮೇಲೆ ಎದ್ದು ನಿಂತರು. ಆಜಾನುಬಾಹುವಾದ ಅವರಿಗೆ ಈಗ ನೇರಳೆ ಹಣ್ಣುಗಳು ಕೈಗೆ ಎಟುಕುವಂತಾದವು. ಚೆನ್ನಾಗಿ ಪಕ್ವವಾದ ದೊಡ್ಡ ದೊಡ್ಡ ಹಣ್ಣುಗಳನ್ನು ಕಿತ್ತು ತಿಂದು ಬೀಜಗಳನ್ನು ಪುಕ ಪುಕನೆ ಉಗುಳಿದರು.

ಕುದುರೆಗೆ ಇದೆಲ್ಲ ಅರ್ಥವಾಗದೇ ಇದ್ದರೂ, ಇದ್ದ ಜಾಗದಲ್ಲೇ ಮಿಸುಕಾಡದೆ ತನ್ನ ಬೆನ್ನಮೇಲೆ ನಿಂತಿದ್ದ ಕೃಷ್ಣರಾಯರ ಶ್ರೀಮಗ್ಗಾಂಭೀರ್ಯಕ್ಕಿಂತ ಹೆಚ್ಚಿನ ಗಾಂಭೀರ್ಯದಿಂದ ನಿಂತಿತ್ತು. ''ಭಲೆ ಗರುಡ! ಭಲೆ ಗರುಡ !'' ಎಂದು ಕೃಷ್ಣರಾಯರು ತಮ್ಮ ಮನಸ್ಸಿನಲ್ಲೇ ತಮ್ಮ ಕುದುರೆಯನ್ನು ಹೊಗಳಿದರು. ಇಷ್ಟು ಹೊತ್ತಿಗಾಗಲೇ ಅವರ ಸುವಿಶಾಲವಾದ ಉದರ ಕೋಶದಲ್ಲಿ ನೂರಾರು ಜಂಬು ನೇರಳೆಗಳು ಬೀಜಗಳಿಂದ ಬೇರ್ಪಡಿಸಲ್ಪಟ್ಟು ಜೀರ್ಣಿಸಿಕೊಳ್ಳಲ್ಪಡುತ್ತಿದ್ದುವು.

ಕೃಷ್ಣರಾಯರ ತುಟಿ ಹಲ್ಲು, ನಾಲಿಗೆಗಳು ಕಡುನೀಲಿ ಬಣ್ಣಕ್ಕೆ ತಿರುಗಿ, ಅವರು ಭಯಂಕರವಾಗಿ ಕಾಣುತ್ತಿದ್ದರು. ಚಾಪಲ್ಯ ತೃಪ್ತಿ ಹೊಂದಿತ್ತು. ''ಆಹ! ಎಂಥ ವಿಷವಾದ ತಟ್ಟು! ಅರ್ಧಗಂಟೆ ಅದರ ಮೇಲೆ ನಿಂತಿದ್ದರೂ ಒಂದು ಚೂರೂ ಮಿಸುಕಾಡಲಿಲ್ಲವಲ್ಲ! ನನ್ನ ಅದೃಷ್ಟವೂ ಚೆನ್ನಾಗಿದೆ ಎನ್ನಬೇಕು. ಯಾರಾದರೂ ಈ ಕಡೆಬಂದು ''ಹೆಪ್ ಗರುಡ!'' ಎಂದು ಕೂಗಿದ್ದರೆ ಏನು ಗತಿ? ಎಂದು ಮನಸ್ಸಿನಲ್ಲೇ ಅಂದುಕೊಳ್ಳುತ್ತ ಯಾವುದೇ ಮರವಿನಲ್ಲಿ 'ಹೆಪ್ ಗರುಡ!'' ಎಂದು ಗಟ್ಟಿಯಾಗೇ ಉಚ್ಚರಿಸಿದರು.

ಆ ಮಾತುಗಳು ಕಿವಿಗೆ ಬಿದ್ದೊಡನೆಯೇ ಅತಿ ಶಿಸ್ತಿನಲ್ಲಿ ತರಪೇತಾಗಿದ್ದ ಗರುಡ ತಾನು ಹೋಗುವುದಕ್ಕೆ ಆಜ್ಞೆ ಎಂದು ತಿಳಿದುಕೊಂಡು ಮುಂದೆ ಹೋಯಿತು. ಆರಡಿ ಎತ್ತರ ಮೂರಡಿ ಅಗಲದ ಕೃಷ್ಣರಾಯರು ಆಯತಪ್ಪಿ ಧೊಪ್ಪನೆ ಮುಳ್ಳಿನ ಮೆದೆಯಲ್ಲಿ ಬಿದ್ದರು!

ತೀಕ್ಷ್ಣವಾದ ಜಾಲಿ ಮುಳ್ಳುಗಳು ಕೃಷ್ಣರಾಯರ ದಿರಸಿನ ಎಲ್ಲ ಕಡೆಗಳಿಂದಲೂ ತೂರಿಕೊಂಡು ಸೊಂಪಾಗಿ ಬೆಳೆದಿದ್ದ ಅವರ ಮೈಯನ್ನು ಚುಚ್ಚಿದುವು. ನೋವು ತಡೆಯಲಾರದೆ ಅವರು ನರಳಿದರು. ಅಲುಗಾಡಿದರೆ ಮುಳ್ಳುಗಳು ಇನ್ನೂ ಒಳಗೆ ನಾಟಿ ನೋವು ಹೆಚ್ಚಾಗುತ್ತಿತ್ತು.

''ಅಯ್ಯೋ ದೇವರೆ, ಕೊನೆಗೂ ಗರುಡ ಚಕ್ಕರ್ ಕೊಟ್ಟನಲ್ಲ!'' ಎಂದು ತಮ್ಮ ತಟ್ಟನ್ನು ಶಪಿಸಿದರು. ಹಾ ಹೂ ಎಂದು ನರಳುತ್ತಾ ಏಳಲು ಆಗದೆ ಹಾಗೇ ಬಿದ್ದುಕೊಂಡಿದ್ದರು.

ಗರುಡನಿಗೆ ರಾಯರು ಬಿದ್ದಿದ್ದನ್ನು ಕಂಡು ಗಾಬರಿಯಾಯಿತು. ಹುಚ್ಚು ಹುಚ್ಚಾಗಿ ಕೆನೆಯುತ್ತಾ ಓಡಿ ಹೋಗಿ ಮನೆ ಸೇರಿತು. ಅಸ್ತವ್ಯಸ್ತವಾಗಿ ರಾಯರಿಲ್ಲದೆ ಬರಿದೆ ಬಂದ ತಟ್ಟನ್ನು ನೋಡಿ ಎಲ್ಲರೂ ಗಾಬರಿಯಾಗಿ ಮನೆಮಂದಿ, ಸ್ನೇಹಿತರು, ಊರಿನ ಗಣ್ಯ ವ್ಯಕ್ತಿಗಳು ಎಲ್ಲರೂ ಜೊತೆಗೆ ಗರುಡನನ್ನೂ ಕರೆದುಕೊಂಡು ರಾಯರು ಬೆಳಿಗ್ಗೆ ಹೊರಟಿದ್ದ ದಾರಿ ಹಿಡಿದು ಹೊರಟರು.

ಆ ಕಡೆ ಜಮಾಬಂದಿಗೆ ಸೇರಿದ್ದ ಚೆನ್ನಹಳ್ಳಿಯ ಪರಿವಾರ ರಾಯರು ಎಷ್ಟು ಹೊತ್ತಾದರೂ ಬರದಿದ್ದನ್ನು ಕಂಡು, ಊರಿನ ಪಟೇಲ, ಶ್ಯಾನುಭೋಗ,ತಲಾಟಿ, ಪಂಚರು ಎಲ್ಲರನ್ನೂ ಕರೆದುಕೊಂಡು ಬಂದ ದಾರಿಯಲ್ಲೇ ವಾಪಸು ಬಂದರು.

ಕಾಡಿನ ಒಳಗೆ ಬಂದಾಗ,'' ಯಾರಿದ್ದೀರಾ. ಬನ್ರೋ, ಸಾಯ್ತಾ ಇದ್ದೀನಿ'' ಎಂದು ನರಳುವ ಧ್ವನಿಕೇಳಿ ಎಲ್ಲರೂ ನೇರಳೇ ಮರದ ಹತ್ತಿರ ಬಂದರು. ಅವರು ಕಂಡದ್ದೇನು ? ಜರಿಪೇಟ ಎಲ್ಲೋ ಬಿದ್ದು ಹೋಗಿ ರಾಯರ ಬೋಳು ತಲೆ, ಮುಳ್ಳುಗಳು ಗೀರಿದ್ದರಿಂದ, ರಕ್ತಸಿಕ್ತವಾಗಿ ಭಯಾನಕವಾಗಿ ಕಾಣುತ್ತಿತ್ತು. ರಾಯರು ಮುಳ್ಳಿನ ಹಾಸಿಗೆಯಲ್ಲಿ ಕುಯ್ಯೋ ಮರ್ರೋ ಎನ್ನುತ್ತಾ ನೀಲಿ ತುಟಿ, ನೀಲಿ ಹಲ್ಲು, ನೀಲಿ ನಾಲಿಗೆಗಳಿಂದ ರಾಕ್ಷಸರ ಹಾಗೆ ಕಾಣುತ್ತಾ ಪವಡಿಸಿದ್ದರು. ಎರಡೂ ಕಡೆಯಿಂದ ಬಂದ ಜನರಿಗೆ ಅಳಬೇಕೋ ನಗಬೇಕೋ ತಿಳಿಯಲಿಲ್ಲ.

ನಗುವನ್ನು ತಡೆಹಿಡಿದುಕೊಂಡು ದುಃಖ ನಟಿಸಿದವರು ಎಷ್ಟೋಮಂದಿ! ಕೊನೆಗೆ ಬಹುಪ್ರಯಾಸದಿಂದ ರಾಯರನ್ನು ಮುಳ್ಳಿನ ಹಾಸಿಗೆಯಿಂದ ಬಿಡಿಸಿದ್ದಾಯಿತು.

ಕೃಷ್ಣರಾಯರ ಶ್ರೀಮದ್ಗಾಂಭೀರ್ಯ ಹಾರಿ ಹೋಗಿತ್ತು. ತಮ್ಮನ್ನೇ ದೃಷ್ಟಿಸಿ ನೋಡುತ್ತಿದ್ದ ಎಲ್ಲರ ಕಣ್ಣುಗಳಿಂದ ಹೇಗೋ ಪಾರಾಗಿ ಮನೆ ಸೇರಿದರೆ ಸಾಕಪ್ಪ ಎನಿಸಿತ್ತು ಅವರಿಗೆ.

''ನಾಲಿಗೆಯನ್ನು ಹಿಡಿತದಲ್ಲಿಡಬೇಕು ! ನಾಲಿಗೆಯನ್ನು ಹಿಡಿತದಲ್ಲಿಡಬೇಕು!'' ಎಂದು ಸಾರಿ ಸಾರಿ ಕೃಷ್ಣರಾಯರು ಮನಸ್ಸಿನಲ್ಲೇ ಜಪಿಸಿದರು.

''ನೇರಳೇ! ನನ್ನ ನಾಲಿಗೆಗೆ ಬಾರಳೇ! ಚಾಪಲ್ಯಕ್ಕೆ ಬರೆ ಹಾಸಳೇ!''

ಅಕೃತ್ರಿಮ ಪ್ರೀತಿಯೇ ಸರ್ವ ರೋಗಹಾರಿಣಿ

ಜಿ.ಕೆ. ಚಂದ್ರಶೇಖರ
೧೯೯, ೧೦ನೇ ಅಡ್ಡರಸ್ತೆ, ಮೊದಲ ಮುಖ್ಯರಸ್ತೆ,
ರಾಜರಾಜೇಶ್ವರಿ ನಗರ, ಬೆಂಗಳೂರು-೫೬೦ ೦೯೮

ನಾನಿದ್ದ ವಾಹನ ಇದೇ ಎಲ್ಕ್‌ಪಾಯಿಂಟ್ ನಗರ ಎಂದು ನನ್ನನ್ನು ಇಳಿಸಿ ಹೋಯಿತು. ನಾನು ಈ ನಗರದಲ್ಲೇ ನನ್ನ ಭವಿಷ್ಯವನ್ನು ಕಟ್ಟಬೇಕಿತ್ತು. ಸ್ಥಳದ ಅಗಾಧತೆಯನ್ನಳೆಯಲು ಸುತ್ತಲೂ ತಿರುಗಿ ನೋಡಿದೆ. ಫುಸ್! ಅಲ್ಲೇನಿದೆ ತಿರುಗಿ ನೋಡುವುದಕ್ಕೆ. ಇರುವುದು ಒಂದೇ ದೃಷ್ಟಿ. ಒಂದೇ ರಸ್ತೆ. ಈ ತುದಿಯಿಂದ ನೋಡಿದರೆ ನಗರದ ಇನ್ನೊಂದು ತುದಿ ಕಾಣಿಸುತ್ತಿತ್ತು. ಒಂದೇ ದಿನಸಿ ಅಂಗಡಿ, ಬೆರಳೆಣಿಕೆಯಷ್ಟು ಮನೆಗಳು, ಒಂದು ನೀರು ಸಂಗ್ರಹಣಾ ಗೋಪುರ-ಇವಿಷ್ಟೇ ನನ್ನ ಕಣ್ಣಿಗೆ ಗೋಚರಿಸುತ್ತಿದ್ದುದು.

ಆ ಕ್ಷಣವಲ್ಲೇ ಒಂಟಿತನದ ಭಾವನೆಯೊಂದು ನನ್ನೊಳಗೆಲ್ಲಾ ತುಂಬಿ ಹೋಯಿತು.

ಉಗಾಂಡದ ಮನೆಯಿಂದ ೧೩,೦೦೦ ಕಿ.ಮೀ. ದೂರದಲ್ಲಿ, ಅಪರಿಚಿತ ಬಿಳಿಯರ ನಾಡಿನಲ್ಲಿ ಈ ಕರಿಯ ನಿಂತಿದ್ದ. ಅವನಿಗೆ ತಾನು ತನ್ನ ಕೆಲಸದಲ್ಲಿ ಯಶಸ್ವಿಯಾದೇನು ಎಂಬ ನಂಬಿಕೆಯೇ ಇರಲಿಲ್ಲ.

ಅಕಟಾ! ಇದ್ಯಾವ ದುಃಸ್ಥಿತಿಯನ್ನು ನಾನೇ ತಂದುಕೊಂಡೆ ! ಇಲ್ಲಿಗೆ ಬರುವುದಕ್ಕೆ ಎರಡು ವಾರಗಳ ಮೊದಲಿನ ನನ್ನ ವಿದ್ಯಾರ್ಥಿ ಜೀವನದ ನೆನಪಾಯಿತು. ವಿಶ್ವವಿದ್ಯಾಲಯದಲ್ಲಿ ಮೂರನೇ ವರ್ಷದ ಪಶುವೈದ್ಯಶಾಸ್ತ್ರದ ವಿದ್ಯಾರ್ಥಿಯಾಗಿದ್ದೆ. ಒಂದು ದಿನ ಕುಲಪತಿಗಳ ಕಛೇರಿಯಿಂದ ಕರೆ ಬಂತು. ಅಲ್ಲಿ ನನ್ನನ್ನು ಕಾಣಬಯಸಿದವರು ಓರ್ವ ಎತ್ತರದ ಕಪ್ಪು ಮನುಷ್ಯ.

"ನಾನು ಡಾ. ಎಲ್ಬರ್ಟ್, ನೀನು ನನ್ನನ್ನು 'ಡಾಕ್' ಎಂದು ಕರೆಯಬಹುದು" ಎನ್ನುತ್ತಾ ನನ್ನ ಕೈ ಕುಲುಕಿದರು. "ನಿನ್ನ ಇಂಟರ್ನ್‌ಶಿಪ್ ಅನ್ನು ನನ್ನ ಚಿಕಿತ್ಸಾಲಯದಲ್ಲಿ ಈ ಬೇಸಿಗೆಯಿಂದ ಪ್ರಾರಂಭಿಸಬಹುದು."

ನನಗೆ ನನ್ನ ಅಂತಿಮ ವರ್ಷದ ವಿದ್ಯಾಭ್ಯಾಸವನ್ನು ಯಾವುದಾದರೊಂದು ಮಹಾನಗರದಲ್ಲಿ ಮಾಡಬೇಕೆಂದಿತ್ತು. ಆದರೆ, ಆ ಮನುಷ್ಯನ ಆಹ್ವಾನದ ರೀತಿ, ಮಾತಿನ ಧಾಟಿ, ಆತನ ಮಾತಿಗೆ ತಲೆದೂಗುವಂತೆ ಮಾಡಿತ್ತು.

ಅಂದು ಎಲ್ಕ್‌ಪಾಯಿಂಟ್‌ನಲ್ಲಿ ಕಳೆದ ಪ್ರಥಮ ರಾತ್ರಿಯಲ್ಲಿ ನನಗೊಂದು ವಿಷಯ ಖಾತ್ರಿಯಾಗಿ ಹೋಗಿತ್ತು. "ನಾನೊಂದು ಅತಿ ದೊಡ್ಡ ತಪ್ಪು ಮಾಡಿಕೊಂಡು ಬಿಟ್ಟಿದ್ದೇನೆ."

ದೂರದ ಉಗಾಂಡಾದಿಂದ ನನ್ನ ವಿಧಿ ನನ್ನನ್ನು ಇಲ್ಲಿಗೆ ಎಳೆತಂದಿತ್ತು. ಉಗಾಂಡಾದ ರಾಜಧಾನಿ ಕಂಪಾಲದ ಬೀದಿಯಲ್ಲಿ ನಡೆದು ಹೋಗುತ್ತಿದ್ದಾಗ, "ಯುನೈಟೆಡ್ ರಾಷ್ಟ್ರದಲ್ಲಿ ಕಲಿಕೆಯ ಅವಕಾಶಗಳು" ಎಂಬ ಫಲಕವನ್ನು ನೋಡಿದೆ. ಆ ಕ್ಷಣದ ಹುರುಪಿನಲ್ಲಿ ಅಲ್ಲಿ ವಿಚಾರಿಸಿ ಪ್ರವೇಶ ಪರೀಕ್ಷೆ ಬರೆದೆ, ಆಯ್ಕೆಯೂ ಆಗಿಹೋದೆ. ನನಗೆ ಸಿಕ್ಕಿದ ಅವಕಾಶ ಎಂದರೆ ಉಚಿತ ಶಿಕ್ಷಣ ಹಾಗೂ ವಸತಿ. ಅನಿರೀಕ್ಷಿತವಾಗಿ ಉಗಾಂಡದಿಂದ ಟಸ್ಕಗಿ ವಿಶ್ವವಿದ್ಯಾಲಯಕ್ಕೆ ಹಾರಿಬಿಟ್ಟಿದ್ದೆ.

ಎಲ್ಕ್‌ಪಾಯಿಂಟ್‌ನಲ್ಲಿ ಪ್ರಥಮ ದಿನದ ಆರಂಭವನ್ನು ಆತಂಕದಿಂದ ಎದುರುಗೊಂಡೆ. ೧೯೬೦ರ ಆ ಸಮಯದಲ್ಲಿ ಜನಾಂಗೀಯ ದ್ವೇಷದ ಬಿಸಿ ಇನ್ನೂ ಆರಿರಲಿಲ್ಲ. ನಾನು ಕೆಲಸ

೧೯೯೯ರ ಮೇ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಲೇಖನದ ಅನುವಾದ.

ಕಲಿಯಬೇಕಾಗಿದ್ದ ಜಾಗದಲ್ಲಿ ಡಾಕ್ಟರ್ ಕುಟುಂಬ ಬಿಟ್ಟರೆ ಎಲ್ಲರೂ ಅಪರಿಚಿತ ಬಿಳಿಯರೆ. ಪರಿಚಿತ ವಾತಾವರಣ ಇದ್ದಾಗ ಮೂಡುವ ಸಹಜ ಅನಿಸಿಕೆ, ಜನಗಳು ಸ್ನೇಹಪರರಾಗಿ ಸಹಕರಿಸುತ್ತಾರೆ ಎಂಬುದು. ಹಿಂದುಮುಂದು ಗೊತ್ತಿಲ್ಲದ ಜಾಗದಲ್ಲಿ, ದ್ವೇಷ, ಹೀಗಳಿಕೆಯ ಪರಿಸರಗಳಲ್ಲಿ ಪ್ರಥಮ ಪ್ರವೇಶ ಮಾಡುವ ವ್ಯಕ್ತಿ ಅನುಭವಿಸಬಹುದಾದ ಎಲ್ಲ ಕೀಳರಿಮೆ, ಅನಿಶ್ಚಯತೆಯನ್ನು ಅಂದು ಅನುಭವಿಸಿದೆ. ಬಿಳಿಯರು ಕರಿಯನ ಮೂರ್ಖತೆಯನ್ನು ಅಪಹಾಸ್ಯ ಮಾಡಿ ಹೀಗಳೆಯುವ ಕಲ್ಪನೆ ನನ್ನಲ್ಲೊಂದು ಭಯಾನಕ ಅನುಭೂತಿಯನ್ನುಂಟು ಮಾಡಿತು. ನಡುಗುವ ಹೃದಯದೊಂದಿಗೆ ಡಾಕ್ಟರ್ ಷಾಪಿಗೆ ಹೋದೆ. ಅಲ್ಲಿಗೆ ಭೇಟಿ ನೀಡಿದ ಪ್ರಾಣಿಗಳ ಮಾಲೀಕರಿಗೆಲ್ಲಾ ನನ್ನ ಪರಿಚಯ ಮಾಡಿಕೊಡಲಾಯಿತು. ಅವರುಗಳ ಮುಖದಲ್ಲಿ ವ್ಯಂಗ್ಯ, ಅಪಹಾಸ್ಯದ ನಗು ಅರಳುವುದನ್ನು ನಿರೀಕ್ಷಿಸುತ್ತಿದ್ದೆ. ಆದರೆ ಎಲ್ಲರಲ್ಲೂ ಲಾಸ್ಯವಾಡಿದ್ದು ಸಂತೋಷದ, ಆತ್ಮೀಯತೆಯ ನಗು! ತಮ್ಮ ನೆಚ್ಚಿನ ವೈದ್ಯರಿಗೆ ಸಹಾಯಕ ಸಿಕ್ಕಿದ ಎಂದು!

ಹೀಗೆ, ನನ್ನ ಆತಂಕ ಸಂಜೆಯಾಗುತ್ತಿದ್ದಂತೆಯೇ ಕಡಿಮೆಯಾಗುತ್ತಾ ಬಂತು. ಸಂಜೆ ನನ್ನ ಕೊಠಡಿಗೆ ಹಿಂದಿರುಗುವ ತಯಾರಿಯಲ್ಲಿದ್ದ ನನ್ನನ್ನು ಡಾಕ್ಟರ್ ತಮ್ಮ ಮನೆಗೆ ರಾತ್ರಿಯೂಟಕ್ಕೆ ಕರೆದರು. ಇದೊಂದು ಅನಿರೀಕ್ಷಿತ ಸಂತೋಷ ನನಗೆ. ಕಲ್ಪನೆಯ ಕಷ್ಟಗಳು ವಾಸ್ತವದ್ದಕ್ಕಿಂತ ಘೋರ ಅಲ್ಲವೆ?

ಸಾಯಂಕಾಲ ಡಾಕ್ಟರ್ ತಮ್ಮ ಮನೆಯಲ್ಲಿ ಪತ್ನಿ ಕೆರಿನ್, ಆಕೆಯ ತಾಯಿ, ತಮ್ಮ ಮಕ್ಕಳು ಸಿಡ್ ಮತ್ತು ಡಿಬಿಯರ ಪರಿಚಯ ಮಾಡಿಸಿದರು. ಹೆಂಗಸರಿಬ್ಬರು ರಾತ್ರಿಯೂಟದ ತಯಾರಿ ನಡೆಸಿದ್ದಂತೆಯೇ ನಾನು ಮಕ್ಕಳೊಡನೆ ಆಟವಾಡುತ್ತಾ ಕಾಲಕಳೆದೆ. ರಾತ್ರಿ ಭೋಜನಾನಂತರದ ಮಾತುಕತೆಯಲ್ಲಿ ಹದಿನಾಲ್ಕು ಮಕ್ಕಳಲ್ಲಿ ಎರಡನೆಯವರಾಗಿದ್ದ ಡಾಕ್ಟರ್, ತಮ್ಮ ಒಂಭತ್ತನೆಯ ವರುಷದಿಂದಲೇ ತಮ್ಮ ತಂದೆಯ ಫಾರ್ಮ್‌ನಲ್ಲಿದ್ದ ಅಸ್ವಸ್ಥ ಜಾನುವಾರುಗಳು, ಕೋಳಿಮರಿಗಳನ್ನು ಉಪಚರಿಸುವುದರ ಮೂಲಕ ಪಶುವೈದ್ಯ ಶಾಸ್ತ್ರಕ್ಕೆ ತಮ್ಮ ಪ್ರವೇಶವಾದ ಬಗೆಯನ್ನು ಹೇಳಿಕೊಂಡರು.

ಸರ್ವಶ್ವೇತ ನಗರ : ಟಸ್ಕಗಿ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ ಬಳಿಕ ಡಾಕ್ಟರರು ವೃತ್ತಿ ಜೀವನಾರಂಭಕ್ಕೆ ಜಾಗವೊಂದನ್ನು ಹುಡುಕತೊಡಗಿದರು. ಆಗ ಅವರಿಗೆ ಕಂಡದ್ದು ಎಲ್ಕ್‌ಪಾಯಿಂಟ್. ಅದು ವ್ಯವಸಾಯಾಧಾರಿತ ಕುಟುಂಬಗಳಿಂದ ಕೂಡಿದ್ದ ಪುಟ್ಟ ಪಟ್ಟಣ. ಅಲ್ಲಿಯ ಸರಹದ್ದಿನಲ್ಲಿ ಎರಡು ಕುದುರೆ ಓಟದ ಅಂಕಣಗಳಿದ್ದುವು. ಪ್ರಯೋಗಕ್ಕೆ ಬೇಕಾದ ಸಹಕಾರ ಕೊಡಲು ಒಂದು ವೈದ್ಯಕೀಯ ಕಾಲೇಜು ಹತ್ತಿರದಲ್ಲೇ ಇತ್ತು.

ಎಲ್ಕ್‌ಪಾಯಿಂಟ್‌ನಲ್ಲಿ ನೆಲಸುವ ನಿರ್ಧಾರ ಕೈಗೊಳ್ಳುವ ಮುನ್ನ ಡಾಕ್ಟರ್ ಮತ್ತು ಕೊರಿನ್ ನಿದ್ರೆಯಿರದ ಅನೇಕ ರಾತ್ರಿಗಳನ್ನು ಕಳೆಯಬೇಕಾಯಿತು. ೧೯೫೭ರ ಆ ಸಮಯದಲ್ಲಿ ಮೂಲನೆಲೆಯಿಂದ ೧೯೦೦ ಕಿ.ಮೀ ದೂರದಲ್ಲಿ, ಪೂರ್ಣ ಬಿಳಿಯರೇ ಇರುವ, ಜನಾಂಗೀಯ ದ್ವೇಷದ ವಾತಾವರಣದಲ್ಲಿ ಬಹು ಸೂಕ್ಷ್ಮವಾಗಿ ಗಮನಿಸಲ್ಪಡುತ್ತಾ ಬದುಕಬೇಕು ಎಂಬ ಅಂಶ ಆ ದಂಪತಿಗಳಿಗೆ ಚೆನ್ನಾಗಿ ಮನದಟ್ಟಾಗಿತ್ತು. ಈ ತಡೆಯನ್ನು ದಾಟುವ ಬಗೆ ಹೇಗೆ?

ಮೊದಲ ಹೆಜ್ಜೆಯಾಗಿ ಡಾಕ್ಟರ್ ಅಲ್ಲಿ ತಮ್ಮ ದವಾಖಾನೆಯನ್ನು ತೆರೆದರು. ತಾಳ್ಮೆಯ ಪ್ರಯತ್ನಕ್ಕೆ ಯಶಸ್ಸು ಅದೃಷ್ಟದ ರೂಪದಲ್ಲಿ ಅನಿರೀಕ್ಷಿತವಾಗಿ ಒಲಿದು ಬರುತ್ತದೆ. ಒಬ್ಬ

ಹುಡುಗ ಕಾಲುಮುರಿದ ರಾಕೂನ್ (ಅಮೆರಿಕಾದಲ್ಲಿ ಕಾಣಸಿಗುವ ಮುದ್ದಿಗಾಗಿ ಸಾಕುವ ಚೂಪುಮೂತಿಯ ಪ್ರಾಣಿ) ಒಂದನ್ನು ಕರೆತಂದ. ಡಾಕ್ಟರರು. ಆ ಕಾಲಿಗೊಂದು ಮರದ ಪಟ್ಟಿ ಇಟ್ಟು ನಾಜೂಕಾದ ಕಟ್ಟು ಕಟ್ಟಿದರು. ಅವರ ಅಂಥಃಕರಣದಿಂದ ಕೂಡಿದ ಕುಶಲತೆಯಿಂದ ಎರಡೇ ದಿನಗಳಲ್ಲಿ ಆ ಮುದ್ದು ಪ್ರಾಣಿ ಚೇತರಿಸಿಕೊಂಡಿತು. ಅದಕ್ಕೆ ಶುಶ್ರೂಷೆ ಉಚಿತ. ಹೊಸ ಪಶುವೈದ್ಯ ರಾಕೂನನ್ನು ಗುಣಪಡಿಸಿದ್ದು ಪಟ್ಟಣದ ದೊಡ್ಡ ಸುದ್ದಿಯಾಗಿತ್ತು. ಡಾಕ್ಟರ್ ಎಲ್ಕ್ ಪಟ್ಟಣಿಗರ ಮನಸ್ಸಿನಲ್ಲಿ ಪ್ರವೇಶ ಪಡೆದದ್ದು ಹೀಗೆ.

ವ್ಯಕ್ತಿಯ ಯಶಸ್ಸು ಆತನಿಗೆ ಕೆಲಸದ ಮೇಲಿರುವ ಶ್ರದ್ಧೆ. ಪ್ರಾಮಾಣಿಕತೆ. ಜೀವನದ ಕುರಿತಾಗಿನ ನಿಲುವು ಇವನ್ನು ಅವಲಂಬಿಸಿದೆ. ಡಾಕ್ಟರ್‌ರ ವೃತ್ತಿ ಜೀವನವೇ ಅದಕ್ಕೊಂದು ನಿದರ್ಶನ. ತಮ್ಮ ವೃತ್ತಿಜೀನವದ ಆರಂಭದಲ್ಲೇ ಅವರು ಒಂದು ಉತ್ತಮ ಅಭ್ಯಾಸ ಕ್ರಮವನ್ನು ಬೆಳೆಸಿಕೊಂಡಿದ್ದರು. ತುರ್ತು ಕರೆಗಳಿಗೆ ತತ್‌ಕ್ಷಣವೇ ಸ್ಪಂದಿಸುತ್ತಿದ್ದರು. ಎಷ್ಟೇ ತಡವಾಗಿರಲಿ, ಎಷ್ಟೇ ದೂರವಿರಲಿ, ಕರೆ ಬಂದ ಕೂಡಲೇ ಆ ಭಾಗಕ್ಕೆ ಧಾವಿಸುತ್ತಿದ್ದರು. ನೊಂದಪ್ರಾಣಿಯ ಬಗ್ಗೆ ಅವರ ಅಂತಃಕರಣ ಮಿಡಿಯುತ್ತಿತ್ತು.

ಅವರು ದವಾಖಾನೆ ತೆರೆದು ತಿಂಗಳಾಗುವಷ್ಟರಲ್ಲಿ ಒಬ್ಬ ಹೈನುದಾರನಿಂದ ಜ್ವರಪೀಡಿತ ಹಸುವಿನ ಚಿಕಿತ್ಸೆಗಾಗಿ ಕರೆಬಂತು. ಇವರು ಕೂಡಲೇ ಅಲ್ಲಿಗೆ ಹೋಗಿ, ಅದರ ಆರೈಕೆಯನ್ನು ಆರಂಭಿಸಿದರು. ರಾತ್ರಿಯಿಡೀ ಕಣ್ಣೆವೆ ಮುಚ್ಚದೆ ಸಾಧ್ಯವಿರುವ ಎಲ್ಲ ಪ್ರಯತ್ನ ಮಾಡಿದರೂ ಇವರ ಕಣ್ಣೆದುರಿನಲ್ಲೇ ಆ ಪ್ರಯತ್ನಗಳೆಲ್ಲಾ ವಿಫಲವಾಗಿ ಹಸು ಸತ್ತಿತು. ಇವರಿಗೆ ಉಂಟಾದ ವೇದನೆ, ಭಯ, ಆತಂಕಗಳು ಅವರ್ಣನೀಯ. ಬಡಪ್ರಾಣಿ ಮರಣಿಸಿದ್ದು, ವೃತ್ತಿಯ ಆರಂಭದಲ್ಲೇ ಅಪಶಕುನದಂತೆ ಅಂಕುರಿಸಿದ ವಿಫಲತೆ, ಬಿಳಿಯರು ಅಪಹಾಸ್ಯಮಾಡಿ ಅಸಮರ್ಥ ಎಂಬ ಸುದ್ದಿ ಹರಡುವ ಭಯ-ಹೀಗೆ.

ಜೇಬಿನಿಂದ ಇಪ್ಪತ್ತು ಡಾಲರ್ ನೋಟನ್ನು ತೆಗೆದು ಆ ರೈತನಿಗೆ ಕೊಡಹೋದರು. ಆಶ್ಚರ್ಯಚಕಿತನಾದ ರೈತ ಯಾಕೆಂದು ಪ್ರಶ್ನಿಸಿದ.

''ಮೊದಲು ನಾನಿದ್ದ ಜಾಗದಲ್ಲಿ ವೈದ್ಯನೇನಾದರೂ ಪ್ರಾಣಿಯನ್ನು ಬದುಕಿಸಲು ವಿಫಲನಾದರೆ ಆ ಪ್ರಾಣಿಯ ಬೆಲೆಯನ್ನು ಅವನೇ ತೆರಬೇಕಿತ್ತು''.

''ಅಯ್ಯಾ ಮನುಷ್ಯ ಮೊದಲು ಹೊರಹೋಗು'' ಎಂದನಾ ರೈತ ಇವರ ಚಿಕಿತ್ಸೆಗೆ ಪಾವತಿ ಮಾಡುತ್ತಾ.

''ಆ ಕ್ಷಣದಲ್ಲಿ ನನಗೆ ವೇದ್ಯವಾಯ್ತು, ನಾನು ಇದೇ ಜಾಗದಲ್ಲಿ ಮುಂದುವರೆಯುವನಿದ್ದೇನೆ'' ಎಂದುಡಾಕ್ಟರ್ ಹೇಳಿದರು.

ಮಿಲ್ಬರ್ನ್ ದಂಪತಿಗಳು ಕ್ರಮೇಣ ಪಟ್ಟಣದ ಎಲ್ಲಾ ಚಟುವಟಿಕೆಗಳಲ್ಲೂ ಪಾಲ್ಗೊಳ್ಳುತ್ತಾ ಬಂದು, ಗಣ್ಯವ್ಯಕ್ತಿಗಳಾದರು. ಕೊರೈನ್ ಸ್ಥಳೀಯ ಶಾಲೆಯೊಂದರಲ್ಲಿ ವಿಜ್ಞಾನ ಶಿಕ್ಷಕಿಯಾದರು. ಅಲ್ಲಿಯ ಕ್ಯಾಥೊಲಿಕ್ ಚರ್ಚಿನ ಚಟುವಟಿಕೆಗಳಲ್ಲಿ ದಂಪತಿಗಳ ಪಾತ್ರ ಗಣನೀಯವಾಗಿತ್ತು.

ಜನಾಂಗೀಯ ದ್ವೇಷದ ಅನುಭವ ಇವರಿಗೆ ಒಮ್ಮೆ ಸ್ವಲ್ಪ ಮಾತ್ರ ತಟ್ಟಿತು. ಡಾಕ್ಟರ್‌ರ ಕ್ಲಿನಿಕ್‌ಗೆ ಒಬ್ಬ ವ್ಯಕ್ತಿ ಒಂದು ಕಪ್ಪು ಲಾಬ್ರಡಾರ್ ನಾಯಿಯೊಂದನ್ನು ಕರೆದು ಕೊಂಡು ಬಂದ. ಅಲ್ಲಿ ಸರದಿಗೆ ಕಾಯುತ್ತಿದ್ದ ಸಂದರ್ಭದಲ್ಲಿ ಅದು ಅಲ್ಲೇ ಮುದುರಿ ಮಲಗಿತ್ತು. ಇವರ ಸರದಿ ಬಂದಾಗ ಡಾಕ್ಟರ್ ಅದನ್ನು ಒಳಭಾಗಕ್ಕೆ ಕರೆದುಕೊಂಡು ಬರಲು ಹೇಳಿದರು. ಮನುಷ್ಯ

ನಾಯಿಗೆ ಹೇಳಿದ, ''ಬಾ ನಾಯಿ'' ನಾಯಿ ಮಿಸುಕಾಡಲಿಲ್ಲ. ಈ ಪ್ರಯತ್ನ ಎರಡು ಮೂರು ಬಾರಿ ನಡೆಯಿತು. ಡಾಕ್ಟರ್ ಹೇಳಿದರು, ''ಅದರ ಹೆಸರಿನಲ್ಲಿ ಕರೆಯಿರಿ, ಆಗ ಮಾತ್ರ ಅದು ಬಂದೀತು.''

ಅಲ್ಲಿದ್ದ ಇತರರು ಮುಖ ಮುಖ ನೋಡಿಕೊಂಡು ಮುಸಿನಗತೊಡಗಿದರು. ಆ ಮನುಷ್ಯನ ಮುಖ ಕೆಂಪಾಯ್ತು. ಕೊನೆಗೆ, ವಿಧಿಯಿಲ್ಲದೆ ಹೇಳಿದ-''ನಿಗ್ಗರ್, ಬಾ ಹೊರಡುವ'. ನಾಯಿ ತತ್ ಕ್ಷಣ ಎದ್ದು ಹೊರಡಲಣಿಯಾಯಿತು. (ನೀಗ್ರೋ ಜನಾಂಗದವರನ್ನು ನಿಂದನಾತ್ಮಕವಾಗಿ ನಿಗ್ಗರ್ ಎನ್ನುತ್ತಾರೆ) ಡಾಕ್ಟರ್ ಈ ವಿಚಾರದಲ್ಲಿ ನಿರ್ಲಿಪ್ತರಾಗಿದ್ದರು. ಅವಮಾನಕರವಾದ್ದು ಏನೂ ನಡೆದೇ ಇಲ್ಲವೇನೋ ಎಂಬಂತೆ ಆ ವ್ಯಕ್ತಿಯೊಡನೆ ವ್ಯವಹರಿಸಿದರು. ಸ್ವಲ್ಪ ಹೊತ್ತಿನಲ್ಲೇ ಈ ವಿಷಯ ಪಟ್ಟಣದಲ್ಲೆಲ್ಲಾ ಹರಡಿತು. ಅನಂತರದ ದಿನಗಳಲ್ಲಿ ಇಂತಹ ಘಟನೆಗಳು ಪುನರಾವರ್ತಿಸದಂತೆ ಪಟ್ಟಣಿಗರೆಲ್ಲಾ ಎಚ್ಚರಿಕೆ ವಹಿಸಿದರು.

ತಾವು ಎಲ್ಕ್‌ಪಾಯಿಂಟ್‌ನಲ್ಲಿ ಬೆಳೆದು ಬಂದ ರೀತಿಯನ್ನು ವಿವರಿಸುತ್ತಾ ಡಾ.ಮಿಲ್ಬರ್ನ್‌ರು ಅಂದು ನನ್ನಲ್ಲಿ ಧೈರ್ಯ ತುಂಬಿದ ವಿಧಾನ ಇದು.

ಕೆಲವು ಮುಖ್ಯ ಪಾಠಗಳು: ತರುವಾಯದ ದಿನಗಳಲ್ಲಿ ಡಾಕ್ಟರ್ ಮಿಲ್ಬರ್ನ್‌ರ ಬಳಿ ಕೆಲಸ ಮಾಡುತ್ತಿದ್ದಂತೆಯೇ ಯಶಸ್ವಿ ಜೀವನದ ಮುಖ್ಯ ಪಾಠವೊಂದನ್ನು ಕಲಿತೆ. ಅವರು ಅದನ್ನು ಬೋಧನಾಕ್ರಮವಾಗಿ ಅಲ್ಲದೆ, ಒಂದು ಜೀವನಕ್ರಮವಾಗಿ ಕಲಿಸಿದರು. ಅದನ್ನು ನನ್ನ ಮೇಲೆ ಹೇರಲಿಲ್ಲ. ತೋರಿಸಿ ಕೊಟ್ಟರು. ಅಲ್ಲಿ ನನಗೊಂದು ಸತ್ಯದರ್ಶನ ವಾಯಿತು. ಮನುಷ್ಯರು ಹೊಸ ಕೆಲಸದಲ್ಲಿ ತೊಡಗಲು ಹಿಂಜರಿಯುವುದು ಆ ಕೆಲಸದಲ್ಲಿಯ ಕಷ್ಟಗಳ ಕಲ್ಪನೆಯಿಂದ. ಆ ತಡೆಯನ್ನು ಭೇದಿಸಿ ಮುಂದೆ ಸಾಗಿದರೆ ಆ ಕಷ್ಟಗಳು ಎದ್ದು ತೋರುವಷ್ಟು ಕಷ್ಟವಲ್ಲ. ಮೊದಲಹೆಜ್ಜೆ ವಿಶ್ವಾಸದಿಂದ ಕೂಡಿರಬೇಕಷ್ಟೆ. ಡಾ.ಮಿಲ್ಬರ್ನ್ ''ಎಂಥ ಅಡೆತಡೆಗಳನ್ನೂ ನೀನು ದಾಟಬಲ್ಲೆ, ಆ ವಿಶ್ವಾಸ ನಿನ್ನ ಮೇಲೆ ನನಗಿದೆ'' ಎನ್ನುವ ಮೂಲಕ ನನ್ನಲ್ಲಿ ಆತ್ಮ ವಿಶ್ವಾಸ , ಹೊಸ ಹುರುಪು ತುಂಬಿದರು. ಅಲ್ಲಿ ಕೆಲಸ ಆರಂಭಿಸಿದ ಮೊದಲನೇ ವಾರದಲ್ಲಿ ಪ್ರಾಣಿಗಳ ಗಾಯಗಳಿಗೆ ಚಿಕಿತ್ಸೆ ನೀಡುವುದರಲ್ಲಿ ಸಹಾಯ ಮಾಡಿದೆ. ಎರಡನೇವಾರ, ಕ್ಲಿನಿಕ್‌ಗೆ ಹೋಗುತ್ತಿದ್ದಂತೆ ಶಸ್ತ್ರಚಿಕಿತ್ಸೆ ಮಾಡುವ ಚಾಕೊಂದನ್ನು ಕೈಗೆ ಕೊಟ್ಟು, ''ಇಂದು ನೀನೊಂದು ಆಪರೇಷನ್ ಮಾಡಬೇಕು'' ಎಂದರು. ಆಗ ನನಗುಂಟಾದ ತಳಮಳ ಅಪಾರ. ''ನಾನಿನ್ನೂ ಮಾನಸಿಕವಾಗಿ ಇದಕ್ಕೆ ತಯಾರಾಗಿಲ್ಲ'' ಎಂದು ನನ್ನ ಸಂಶಯ ವ್ಯಕ್ತಪಡಿಸಿದೆ. ''ಖಂಡಿತವಾಗಿ ನೀನಿದಕ್ಕೆ ತಯಾರಾಗಿರುವೆ, ನೀನು ತಿಳಿದುಕೊಂಡಿರುವುದಕ್ಕಿಂತಲೂ ಚೆನ್ನಾಗಿ ನೀನೀ ಕೆಲಸವನ್ನು ಮಾಡಬಲ್ಲೆ ಎಂಬುದನ್ನು ನಾನು ಬಲ್ಲೆ '' ಎಂದು ಹೇಳಿದ ಡಾಕ್ಟರ್, ನನ್ನಲ್ಲಿ ಧೈರ್ಯ ತುಂಬುತ್ತಾ ''ನಿನ್ನ ಮೇಲೆ ನನಗೆ ಪೂರ್ಣ ಭರವಸೆ ಇದೆ'' ಎಂದರು. ಆ ಮಾತು ನನಗೊಂದು ಹುಮ್ಮಸ್ಸು ಕೊಟ್ಟಿತು.

ಆ ಶಸ್ತ್ರಚಿಕಿತ್ಸೆಯನ್ನು ಪೂರೈಸಿದೆ. ಅದನ್ನು ಪರಿಶೀಲಿಸಿದ ಡಾಕ್ಟರ್ ಒಪ್ಪಿಗೆಯ ನಗು ಬೀರಿದರು. ಆ ನಗು ನನಗೆ ಪ್ರಪಂಚದಲ್ಲೇ ಅತಿ ಸುಂದರ ಎಂಬಂತೆ ತೋರಿತು. ಎರಡು ಮುಖ್ಯ ಪಾಠಗಳನ್ನು ಕಲಿತೆ.

ನಾನು, ನಾನು ನಂಬಿರುವುದಕ್ಕಿಂತಲೂ ಸಮರ್ಥನಿದ್ದೇನೆ. ಸವಾಲುಗಳನ್ನೆದುರಿಸಿ ಗೆಲ್ಲುವುದರಲ್ಲಿರುವ ಸಂತೋಷ ಬೇರ್ಯಾವುದರಲ್ಲಿಯೂ ಇಲ್ಲ.

ನನ್ನ ಹಿಂದಿನ ವರ್ಷಗಳಲ್ಲಿ ಹೇಸರಗತ್ತೆ

ಯೊಂದನ್ನು ಪರೀಕ್ಷಿಸುವಾಗ ಬಲವಾದ ಒದೆತ ತಿಂದು, ನನಗೆ ಕುದುರೆ ಕತ್ತೆಗಳು ಒಗ್ಗಿಬರುವುದಿಲ್ಲ ಎಂಬ ನಂಬುಗೆಯನ್ನು ಬೆಳೆಸಿಕೊಂಡಿದ್ದೆ. ನನ್ನ ಭಯವನ್ನು ಡಾಕ್ಟರ್‌ರೊಂದಿಗೆ ಒಮ್ಮೆ ಹೇಳಿಕೊಂಡಿದ್ದೆ. ಅವರೋ ಹೆದರಿಕೆ, ಹಿಂಜರಿಕೆಗಳ ವಿರುದ್ಧ ಹೋರಾಡಲು ಅತ್ಯುತ್ಸಾಹಿಗರು. ಅನಿರೀಕ್ಷಿತವಾಗಿ ಒಂದು ದಿನ ಹೇಳಿದರು.

''ನೀನು ಒಂದು ಓಟದ ಕುದುರೆಯನ್ನು ಉಪಚರಿಸಬೇಕಾಗಿದೆ''.

ನನಗೆ ಉದ್ವೇಗ ಉಕ್ಕಿತು.

ನನಗೆ ಕತ್ತೆ, ಕುದುರೆಗಳು ಆಗಿಬರದು ಎಂದು ನಿಮಗೆ ಗೊತ್ತು. ಅವುಗಳ ಬಗ್ಗೆ ನನಗೇನೂ ಗೊತ್ತಿಲ್ಲ.

''ನಿನಗೆ ಕುದುರೆಗಳ ಮಾಲೀಕರಿಗಿಂತ ಚೆನ್ನಾಗಿ ಅವುಗಳ ಬಗ್ಗೆ ಗೊತ್ತು ಎಂಬುದು ನನಗೆ ಗೊತ್ತು, ಅಲ್ಲಿ ಎಲ್ಲರೂ ಕಾಯುತ್ತಿದ್ದಾರೆ, ತತ್‌ಕ್ಷಣ ಹೊರಡು'' ಎಂದರು ಡಾಕ್ಟರ್.

ಆ ಜಾಗಕ್ಕೆ ತಲುಪಲು ೨೦ ನಿಮಿಷ ಬೇಕಾಯಿತು. ದಾರಿಯುದ್ದಕ್ಕೂ ತಳಮಳಿಸುತ್ತಲೇ ಇದ್ದೆ. ನನ್ನನ್ನು ಮುಂದೆ ತಳ್ಳುತ್ತಿದ್ದ ಏಕೈಕ ಮಂತ್ರ ''ನನಗೆ ನಿನ್ನಲ್ಲಿ ಪೂರ್ಣ ಭರವಸೆಯಿದೆ''. ಅದನ್ನು ಹುಸಿಗೊಳಿಸುವ ಕಲ್ಪನೆಯೇ ನನಗೆ ನಾಚಿಕೆಯನ್ನುಂಟುಮಾಡುತ್ತಿತ್ತು.

ಆ ಜಾಗದಲ್ಲಿ ಎಲ್ಲರೂ ಕಾತುರದಿಂದ ಪಶುವೈದ್ಯನನ್ನು ನಿರೀಕ್ಷಿಸುತ್ತಿದ್ದರು. ನನ್ನನ್ನು ಕಂಡೊಡನೆಯೇ ''ಡಾಕ್ಟರ್ ಬಂದರು'' ಎಂದು ಸಡಗರ ತೋರಿದರು. ನನಗೋ, ಒಳಗೇ ಪುಕಪುಕ.

ಕುದುರೆಯನ್ನು ಉಪಚರಿಸಲೇಬೇಕಾಯ್ತು, ಉಪಚರಿಸಿದೆ. ಭಯದಿಂದ ಕೆಲಸ ಮಾಡಿದ್ದರಿಂದ ಸ್ವಲ್ಪ ಜಾಸ್ತಿ ಸುಸ್ತಾಯ್ತು.

ಸ್ವಲ್ಪ ಧೈರ್ಯವೂ ಬಂದಿತು. ಆ ಕುದುರೆಯ ದೈನಂದಿನ ಉಪಚಾರ ನನ್ನ ದಿನಚರಿಯ ಭಾಗವಾಯಿತು. ಸ್ವಲ್ಪ ಸಮಯದ ಬಳಿಕ ಕುದುರೆ ಪೂರ್ಣವಾಗಿ ಚೇತರಿಸಿಕೊಂಡಿತು.

''ನೀನೀಗ ಕುದುರೆಗಳ ವೈದ್ಯ'' ಎಂದರು ಡಾಕ್ಟರ್. ''ಆಹ್, ದಯವಿಟ್ಟು ಬೇಡ, ಇನ್ನಾವ ಕುದುರೆಗಳೂ ಬೇಡ'' ನಾನೆಂದೆ. ಆದರೆ, ಮುಂದೆ ಎಲ್ಲಾ ಕತ್ತೆ ಕುದುರೆಗಳ ಶುಶ್ರೂಷೆಗೂ ನನ್ನನ್ನೇ ಕಳಿಸುತ್ತಿದ್ದರು.

ಡಾಕ್ಟರ್ ಬಳಿ ನನ್ನ ವಿದ್ಯಾಭ್ಯಾಸದ ಹರಹು ಹೆಚ್ಚುತ್ತಾ ಹೋಗುತ್ತಿತ್ತು. ನನ್ನ ಪ್ರತಿ ಸಣ್ಣ ಪ್ರಗತಿಯನ್ನೂ ಅವರು ಗಮನಿಸಿ ಮನಃಪೂರ್ವಕವಾಗಿ ಆನಂದಿಸುತ್ತಿದ್ದರು. ಹೀಗೆಯೇ ಒಂದು ದಿನ ಬೆಳಿಗ್ಗೆ, ''ಇವತ್ತು ನಾನು ಊರಿಗೆ ಹೋಗಲಿದ್ದೇನೆ, ನೀನು ಕ್ಲಿನಿಕ್ ನೋಡಿಕೊಳ್ಳಬೇಕು '' ಎಂದರು. ನನ್ನ ಪ್ರಥಮ ಹಿಂಜರಿಕೆ ತಲೆ ಎತ್ತಿತು. ''ನಾನೊಬ್ಬನೇ ಇದನ್ನೆಲ್ಲಾ ನಿಭಾಯಿಸಲಾರೆ'' ಮತ್ತೆ ಅವರು ಬೀಜಮಂತ್ರ ''ನಿನ್ನಲ್ಲಿ ನನಗೆ ನಂಬಿಕೆ ಇದೆ'' ಎಂದುಸುರಿದಾಗ ನನ್ನ ಹಿಂಜರಿಕೆ ದೂರವಾಯಿತು.

ಅಲ್ಲಿ ಎದುರಾದ ಪ್ರತಿಯೊಂದು ಸಮಸ್ಯೆಯನ್ನೂ ಯಶಸ್ವಿಯಾಗಿ ಪರಿಹರಿಸತೊಡಗಿದೆ. ಆತಂಕಿತ ಮುಖಗಳಲ್ಲಿ ನೆಮ್ಮದಿ ನೆಲಸುವುದನ್ನು ನೋಡುವುದಕ್ಕಿಂತ ಬೇರಾವ ಸಂತೋಷವಿದೆ? ಅನುಭವಾನಂದ ಅವರ್ಣನೀಯ.

ಯೋಗ್ಯ ಮಾನವನಲ್ಲಿರಬೇಕಾದ ಅನೇಕ ಗುಣಗಳು ಡಾಕ್ಟರ್‌ರ ವ್ಯಕ್ತಿತ್ವದ ಅಂಶವಾಗಿತ್ತು. ಅವರ ಶಿಕ್ಷಣ ಬಾಯ್ಮಾತಿನಲ್ಲಲ್ಲದೆ ಆಚರಣೆಯ ಮೂಲಕ ನಡೆಯುತ್ತಿತ್ತು. ಪ್ರಾಮಾಣಿಕತೆಯಿಂದ ಬರುವ ಋಜುತ್ವ, ಅನುಭವದ ಜ್ಞಾನ, ಲೋಕಜ್ಞಾನ ಅವರ ಗುಣಸಂಪತ್ತಿನಲ್ಲಿತ್ತು.

ಅವರ ವಿಶೇಷ ಆಸಕ್ತಿಯಿದ್ದುದು ಸಣ್ಣ ಮಕ್ಕಳಲ್ಲಿ. ಅವರ ಬಳಿ ಬರುವ ಯಾವ ಸಣ್ಣ ಬಾಲಕನೂ ನಿರಾಶನಾಗಿ ಹೋದದ್ದಿಲ್ಲ. ಇವರ ಸೇವೆಗೆ ಪ್ರತಿಫಲ ನೀಡಬಂದರೆ, "ನನಗೋಸ್ಕರ ಶಾಲೆಯಲ್ಲಿ ಹೆಚ್ಚು ಕೆಲಸ ಮಾಡು, ಸಮಾಜಕ್ಕೆ ಒಳ್ಳೆಯದು ಮಾಡು' ಎನ್ನುತ್ತಿದ್ದರು.

ಟಾಡ್ ವೆಸ್ಪಿನ್ ಅಂಥ ಒಬ್ಬ ಬಾಲಕ. ಅವನು ಅಳಿಲುಮರಿಗಳು, ಹಕ್ಕಿಗಳು, ತನ್ನ ಕಣ್ಣಿಗೆ ಬಿದ್ದ ಯಾವುದೇ ಅಸಹಾಯಕ ಪ್ರಾಣಿಗಳನ್ನು ಇವರ ಬಳಿ ತರುತ್ತಿದ್ದ. ಅದಕ್ಕೆ ಪ್ರತಿಫಲವಾಗಿ, ಅವನಿಗೆ ಡಾಕ್ಟರ್ ಮಾಡುವ ಶಸ್ತ್ರಚಿಕಿತ್ಸೆಯನ್ನು ನೋಡುವ ಅವಕಾಶ ದೊರೆಯುತ್ತಿತ್ತು. ಮುಂದೊಮ್ಮೆ ಇವರೆಲ್ಲ ಉತ್ತಮ ಪಶುವೈದ್ಯರಾಗಬಹುದು' ಇದು ಅವರ ನಂಬುಗೆ . ಪ್ರಾಣಿದಯೆ, ಅವುಗಳ ಶುಶ್ರೂಷೆಯಲ್ಲಿಯ ಆನಂದ ಇದನ್ನು ಮಕ್ಕಳಿಗೆ ಉದಾಹರಣೆಯ ಸಹಿತ ಮನಮುಟ್ಟಿಸುತ್ತಿದ್ದರು.

ಅವರ ಕಡು ಪ್ರಾಮಾಣಿಕ ಮನೋಭಾವ ನನ್ನಲ್ಲೊಂದು ಮಹತ್ತರವಾದ ಬದಲಾವಣೆಯನ್ನು ಉಂಟುಮಾಡಿತು. ತಮ್ಮ ವಿಶ್ಲೇಷಣೆಯಲ್ಲಿ ಲೋಪವುಂಟಾದರೆ ಅದನ್ನು ಯಾವ ಹಿಂಜರಿಕೆಯೂ ಇಲ್ಲದೆ, ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಿದ್ದರು. "ಸುಳ್ಳಿನ ಭ್ರಮೆಯ ಬದುಕಿಗಿಂತ, ಸತ್ಯದ ಸರಳ ಜೀವನ ಸುಲಭ, ಆನಂದದಾಯಕ" ಇದು ಅವರು ಯಾವಾಗಲೂ ಹೇಳುತ್ತಿದ್ದ ಮಾತು.

ನಾನು ಕ್ಲಿನಿಕ್ ನಿರ್ವಹಿಸುತ್ತಿದ್ದ ದಿನಗಳಲ್ಲಿ ಈ ಮಾತು ಪ್ರತ್ಯಕ್ಷ ಅನುಭವಕ್ಕೆ ಬಂತು. ತೊಂಬತ್ತೈದು ಮೈಲಿ ದೂರದಿಂದ, ಮಹಿಳೆಯೊಬ್ಬಳು ತನ್ನ ನಾಯಿಯನ್ನು ಚಿಕಿತ್ಸೆಗಾಗಿ ಕರೆದುಕೊಂಡು ಬಂದಳು. ಅವರಿಬ್ಬರ ನಡುವಿನ ಗಾಢಸಂಬಂಧ ಅವಳು ನಾಯಿಯನ್ನು ನೋಡುತ್ತಿದ್ದ ದೃಷ್ಟಿಯಿಂದ ವೇದ್ಯವಾಗುತ್ತಿತ್ತು. ನಾನು ಅವಳಿಗೆ ಆ ಮುದ್ದುಪ್ರಾಣಿಗೆ ಏನೂ ಆಗುವುದಿಲ್ಲವೆಂಬ ಭರವಸೆಯನ್ನು ಕೊಟ್ಟೆ. 'ಇದೊಂದು ಸಣ್ಣ ಆಪರೇಷನ್ ನಾಯಿ ಬೇಗ ಸುಧಾರಿಸಿಕೊಳ್ಳುತ್ತದೆ." ಆಕೆ ಅಪಾರವಾದ ನೆಮ್ಮದಿಯಿಂದ ತನ್ನೂರಿಗೆ ಹಿಂತಿರುಗಿದಳು.

ಆದರೆ, ಆ ಶಸ್ತ್ರಕ್ರಿಯೆಯ ಆರಂಭದಲ್ಲೇ ಅನಸ್ತೇಷಿಯಾದ ಪ್ರಭಾವದಲ್ಲಿದ್ದ ನಾಯಿಯು ನನ್ನ ಯಾವುದೇ ಪ್ರಯತ್ನಗಳಿಗೂ ಸ್ಪಂದಿಸದೆ ಕೊನೆಯುಸಿರೆಳೆಯಿತು. ನನ್ನ ಕೈಕಾಲು ನಡುಗಿ ಮುಂದೇನು ಎನ್ನುವುದು ಬೃಹದಾಕಾರವಾಗಿ ನಿಂತಿತು. ಆ ಮಹಿಳೆಗೆ ತನ್ನ ಮುದ್ದಿನ ಪ್ರಾಣಿಯ ಮೇಲಿದ್ದ ಅತೀವ ಮಮಕಾರ ನನ್ನ ಕಣ್ಣೆದುರು ಭೂತನರ್ತನ ಮಾಡಲಾರಂಭಿಸಿತು. ಈಗ ಅತಿ ವಿಷಮ ಪ್ರಶ್ನೆಯೊಂದು ನನ್ನನ್ನು ಕಾಡತೊಡಗಿತು. ಅವಳಿಗೆ ಈ ವಿಷಯವನ್ನು ಹೇಳುವ ಬಗೆ ಹೇಗೆ? ನನ್ನೊಳಗೆ ಹುಟ್ಟಿದ ತರಾವರಿ ಕಾರಣಗಳು ನಾನೊಂದು ನಿರ್ಧಾರಕ್ಕೆ ಬರುವಂತೆ ಮಾಡುವಲ್ಲಿ ವಿಫಲವಾದುವು. ಸಿಹಿಲೇಪನದ ಸುಳ್ಳುಗಳು ಸತ್ಯದ ಒರಟು ಒರೆಗಲ್ಲಿನ ಮೇಲೆ ಜೀವಕಳೆದುಕೊಳ್ಳುತ್ತವೆಯಲ್ಲವೆ?

ಈ ಸನ್ನಿವೇಶದಿಂದ ದೂರ, ಬಲುದೂರದ ಉಗಾಂಡಕ್ಕೆ ಓಡಿಹೋಗಿಬಿಡಲೆ? ಅಲ್ಲಿಯೂ ನನ್ನನ್ನು ಹಿಡಿಯುತ್ತಾರಾದರೆ ನಾಯಿ ಹೋದ ಆ ಲೋಕಕ್ಕೆ ಹೋಗಿಬಿಟ್ಟರೆ? ಹೀಗೆ, ಪಲಾಯನದ ನೂರೆಂಟು ದಾರಿಗಳ ಮಧ್ಯೆ ನನ್ನನ್ನೇ ದೂಡಿಕೊಂಡು ನನ್ನನ್ನು ನಾನೇ ಹಿಗ್ಗಾಮುಗ್ಗಾ ಎಳೆದಾಡಿ ಕೊಳ್ಳುತ್ತಿರುವಾಗ, ಮೇಲಿನ ಲೋಕದಿಂದ ನನ್ನ ಸಹಾಯಕ್ಕೆಂತಲೇ ಬಂದ ದೇವದೂತರಂತೆ ಬಂದರು ಡಾ॥ಮಿಲ್ಲರ್. ಅವರ ಮುಖ ನೋಡುತ್ತಲೇ ನನಗೆ ಭರವಸೆಯ ಎಳೆಯೊಂದು ಗೋಚರಿಸಿದಂತಾಯಿತು.

'ನಾನು ಆಕೆಯ ನಾಯಿಯನ್ನು ಕೊಂದು ಬಿಟ್ಟೆ. ಆ ಆಪರೇಶನ್ ಕೆಲಸಕ್ಕೆ ನಾನು ಅಯೋಗ್ಯ' ಎಲ್ಲೆ ಮೀರಿದ ದುಗುಡದಿಂದ ಪ್ರಥಮಬಾರಿಗೆ ಅವರಿಂದ ಮಾತಿನ ಕೂರಂಬುಗಳನ್ನು ನಿರೀಕ್ಷಿಸುತ್ತಾ ಹೇಳಿದೆ.

''ಪಶುವೈದ್ಯ ದೇವತೆಯಲ್ಲ, ಕೆಲವೊಮ್ಮೆ ಹೀಗಾಗುವುದುಂಟು''. ಡಾಕ್ಟರ್ ಮೆಲುದನಿಯಲ್ಲಿ ಸಾವಧಾನದಿಂದ ಹೇಳಿದರು. ''ಬದುಕಿದೆ'' ನಾನೆಂದುಕೊಂಡೆ. ''ಹಾಗಾದರೆ ಈ ವಿಷಯವನ್ನು ನೀವು ಅವಳಿಗೆ ಹೇಳುತ್ತೀರಲ್ಲವೆ?''

''ಇಲ್ಲ''

ಸಮುದ್ರದಲೆಗಳಿಂದ ದಡಕ್ಕೆ ನಿತ್ರಾಣನಾಗಿ ಬಿದ್ದವನು ಆಯತಪ್ಪಿ ಕಡಲಿಗೆ ಬಿದ್ದಂತಾಯಿತು.

''ಅವಳಿಗೆ ನಾನೇನು ಹೇಳಲಿ?''

''ನಿನ್ನ ಕೆಲಸ ನೀನು ಮಾಡುವಾಗ ಏನಾಯ್ತೋ ಅದನ್ನು ಹೇಳು.''

ಅಂದು ರಾತ್ರಿ ಅವಳು ಕ್ರೂರಕಣ್ಣುಗಳಿಂದ ನನ್ನನ್ನು ಶಪಿಸಿದಂತೆ, ನನ್ನನ್ನು ಕೋರ್ಟಿನ ಕಟಕಟೆಯಲ್ಲಿ ನಿಲ್ಲಿಸಿ ಮುಖದ ನೀರಿಳಿಸಿದಂತೆ, ಜನರು ಸಿಕ್ಕಿದ್ದನ್ನು ನನ್ನೆಡೆಗೆ ಎಸೆದಂತೆಲ್ಲಾ ಸ್ವಪ್ನಗಳು ಬಿದ್ದುವು. ''ಕರುಣಾಳು ಕತ್ತಲೆಯೇ, ತಾಯೀ ಕಂದನನ್ನು'' ಮನಸಾ ಪ್ರಾರ್ಥಿಸಿದೆ. ಹುಲುಮಾನವನ ಸಂಕಟದ ಪರಿವೆ ನಿರ್ದಯಿ ಪ್ರಕೃತಿಗೆಲ್ಲಿಯದು? ಎಂದಿನಂತೆ ಬೆಳಗಾಯಿತು. ಅತಿ ದುರ್ದಮ ಕೆಲಸವನ್ನು ನಾನು ಮಾಡಬೇಕಿತ್ತು. ಅವಳಿಗೊಂದು ಫೋನ್ ಮಾಡಿ ವಿಷಯ ವನ್ನು ತಿಳಿಸಬೇಕಿತ್ತು. ನಡುಗುವ ಹೃದಯ ದೊಂದಿಗೆ ಆ ಕಠಿಣ ಕರೆಯನ್ನು ಮಾಡಿದೆ. ದೈನ್ಯಾತಿದೈನ್ಯ ದನಿಯಲ್ಲಿ ಇದ್ದ ವಿಷಯವನ್ನು ಇದ್ದಂತೆಯೇ ಅರುಹಿದೆ.

ಆ ಬದಿಯಲ್ಲಿ ಕ್ಷಣಕಾಲ ನಿಶ್ಶಬ್ದ. ಅನಂತರ ಅಣೆಕಟ್ಟು ಒಡೆದಂತೆ ಅಳು. ನಾನೇನು ಮಾಡಬಹುದಿತ್ತು? ಆ ಶೋಕಕ್ಕೆ ನನ್ನದನ್ನೂ ಸೇರಿಸುವುದನ್ನು ಬಿಟ್ಟು.

ಅಳುತ್ತಳುತ್ತಾ ಆಕೆ ಮತ್ತೆ ತನ್ನ ಮುದ್ದು ಪ್ರಾಣಿಯ ಕೊನೆಯ ಗಳಿಗೆಗಳ ಬಗ್ಗೆ ಕೇಳಿದಳು. ನಾನು ನಾಯಿ ಉಸಿರಾಡುತ್ತಿದ್ದಾಗ ಎಷ್ಟು ಸ್ನಾಯುಗಳು ಅಲುಗಾಡುತ್ತಿದ್ದುವು, ಬಾಲ ಯಾವ ದಿಕ್ಕಿಗೆ ಹೊರಳಿತ್ತು, ಕಾಲು ಯಾವ ಕಡೆಗಿತ್ತು ಇತ್ಯಾದಿ ವಿವರಗಳನ್ನೂ ಬಿಡದೇ ಹೇಳಿದೆ. ಈ ವಿವರಗಳು ಬಹುಶಃ ಅವಳ ಆಘಾತಕ್ಕೆ ಶಮನಕಾರಿಯಾಗಿರಬೇಕು. ಇದ್ದದ್ದನ್ನು ಮುಚ್ಚಿಡದೆ ಹೇಳಿದ್ದಕ್ಕೆ ನನಗೆ ಕೃತಜ್ಞತೆ ಹೇಳಿದಳು. ಹೌದು, ಸತ್ಯ ಅಂತ್ಯದಲ್ಲಿ ಸರಳ, ಸುಲಭ, ಆರಂಭದಲ್ಲಿ ಕಠಿಣ, ದುರ್ದಮ. ಹರಿಶ್ಚಂದ್ರ ವಿಶ್ವಾಮಿತ್ರ ಪರೀಕ್ಷೆ ಗೆದ್ದಂತೆ.

ಡಾಕ್ಟರ್‌ರಲ್ಲಿ ನನ್ನ ಇಂಟರ್ನ್‌ಶಿಪ್ ಮುಗಿಯಿತು. ನನ್ನ ಶಿಕ್ಷಣ ಪೂರೈಸಿದ ಅನಂತರ ತಮ್ಮಲ್ಲಿಗೆ ಬರುವಂತೆ ಅವರು ಕೇಳಿದರು. ನಾನು ಒಪ್ಪಿದೆ. ನಾನು ವಾಪಾಸು ಬರುತ್ತಿದ್ದಂತೆ ಅಪ್ರತಿಭನಾಗುವಂಥ ಸುದ್ದಿ ಕಾದಿತ್ತು. ಡಾಕ್ಟರ್ ದಂಪತಿಗಳು ಎರಡು ತಿಂಗಳ ಮಟ್ಟಿಗೆ ಯುರೋಪ್ ಪ್ರವಾಸ ಕೈಗೊಳ್ಳುವವರಿದ್ದರು.

''ಕ್ಲಿನಿಕ್ ನಡೆಸುವವರು ಯಾರು?''

''ನೀನು, ನಿನ್ನಲ್ಲಿ ನನಗೆ ನಂಬಿಕೆಯಿದೆ.''

ಈ ಸಲ ನನಗೂ ನನ್ನಲ್ಲಿ ನಂಬಿಕೆಯಿತ್ತು. ಅವರು ವಾಪಸ್ ಬಂದಾಗ ನಾನು ವರದಿಯೊಪ್ಪಿಸಿದೆ. 'ನಾನು ಒಬ್ಬ ರೋಗಿಯನ್ನೂ ಕಳೆದುಕೊಂಡಿಲ್ಲ!'' ಅವರು ಸಂತೋಷದಿಂದ ಬೀಗಿದರು.

ಮುಂದೆ ಡಾಕ್ಟರ್‌ರೊಡನೆ ನಾಲ್ಕು ತಿಂಗಳಿದ್ದೆ. ಅನಂತರ ಒಂದು ವರ್ಷ ಮೊದಲಿನ ಒಪ್ಪಂದದಂತೆ ಉಗಾಂಡಾದಲ್ಲಿರಬೇಕಾಯಿತು. ಎಲ್ಕ್‌ಪಾಯಿಂಟ್‌ನಲ್ಲಿಂದ

ಮುನ್ನೂರು ಮೈಲಿ ದೂರದಲ್ಲಿಯ ಯುನಿವರ್ಸಿಟಿಯಲ್ಲಿ ಸ್ನಾತಕೋತ್ತರ ಪದವಿಗಾಗಿ ಅಧ್ಯಯನ ನಡೆಸಿದೆ. ಆ ಸಮಯದಲ್ಲಿ ಡಾಕ್ಟರ್ ತಮ್ಮ ಸಹಭಾಗಿಯಾಗಿರುವಂತೆ ಕೇಳಿದರೂ ವಿದ್ಯಾಭ್ಯಾಸದ ತೊರೆಯ ಕಾರಣ ಅದು ಸಾಧ್ಯವಾಗಲಿಲ್ಲ. ನಾನು ಪ್ರಾಧ್ಯಾಪಕ ಪಟ್ಟಕ್ಕೆ ಏರಿದನಂತರ ಡಾಕ್ಟರ್ ಕೆಲವು ವಿಚಾರಗಳಲ್ಲಿ ನನ್ನ ಸಲಹೆಯನ್ನು ಕೇಳುತ್ತಿದ್ದರು. ಆಗ ನನ್ನೊಳಗಿನ ಸಂತೋಷದ ಚಿಲುಮೆ ಚಿಮ್ಮುತ್ತಿತ್ತು.

ಡಿಸೆಂಬರ್ ೨೪ರಲ್ಲಿ ದಾರುಣ ವಾರ್ತೆ ಅಪ್ಪಳಿಸಿತ್ತು. "ಡಾಕ್ಟರ್ ಇನ್ನಿಲ್ಲ", ಅವರ ೬೭ನೆಯ ವಯಸ್ಸಿನಲ್ಲಿ ಹೃದಯಾಘಾತಕ್ಕೆ ಬಲಿಯಾಗಿದ್ದರು.

ಅಂತ್ಯಕ್ರಿಯೆಯ ಸಂದರ್ಭದಲ್ಲಿ ಚರ್ಚಿನಲ್ಲಿ ಪಾದ್ರಿಗಳು "ನಾವೆಲ್ಲರೂ ಅವರನ್ನು ಪ್ರೀತಿಸುತ್ತಿದ್ದೆವು" ಎಂದಾಗ ನಮ್ಮೆಲ್ಲರ ಧ್ವನಿ ಹೊರಡದೇ ಬರೀ ತಲೆಯಾಡಿಸಬೇಕಾಯಿತು.

ಪ್ರೀತಿಯ ಬೀಜ ಸಮೃದ್ಧ ಫಲ ಕೊಡುತ್ತಿದೆ. ಇಂದು ಡಾಕ್ಟರ್ ಬದುಕಿದ್ದಿದ್ದರೆ ಅತ್ಯಂತ ಸಂತೋಷಪಡುತ್ತಿದ್ದರು. ಅಂದಿನ ಸಣ್ಣ ಹುಡುಗ ಟಾಡ್ ವೆಸ್ಟಿನ್ ಇಂದು ಪಶುವೈದ್ಯಶಾಸ್ತ್ರವನ್ನು ಕಲಿಯುತ್ತಿದ್ದಾನೆ. ಅಂದು ನಾನಿದ್ದಲ್ಲಿ ಇಂದು ಅವನಿದ್ದಾನೆ. ನಾನು, ಡಾಕ್ಟರ್‌ರಿಂದ ಕಲಿತ ರೋಗ ವಿಶ್ಲೇಷಣಾಕ್ರಮ, ವಾತ್ಸಲ್ಯ, ಪ್ರಯತ್ನಶೀಲತೆ, ದೌರ್ಬಲ್ಯದ ವಿರುದ್ಧದ ಹೋರಾಟ ಮುಂತಾದ ಸತ್ವಪರಂಪರೆಯನ್ನು ಮುಂದಿನ ಪೀಳಿಗೆಗೆ ಹಸ್ತಾಂತರಿಸುವ ಕೆಲಸ ಮಾಡುತ್ತಿದ್ದೇನೆ. ಆಶ್ಚರ್ಯಕರವಾಗಿ, ಇಲ್ಲಿ ಚರಿತ್ರೆ ಪುನರಾವರ್ತಿಸುತ್ತಿದೆ. ನಾನು ಅವರಿಗೆ ಸ್ವತಂತ್ರ ನಿರ್ವಹಣೆ ಕೊಟ್ಟಾಗ ಅವರು ಹಿಂಜರಿಯುತ್ತಾರೆ. ಆಗ ನಾನು ಗುರೂಪದೇಶದ ಮಂತ್ರವನ್ನುಚ್ಚರಿಸುತ್ತೇನೆ. "ನಿನ್ನಲ್ಲಿ ನನಗೆ ಪೂರ್ಣ ನಂಬುಗೆಯಿದೆ, ನೀನು ಈ ಕೆಲಸ ಮಾಡಿಯೇ ಮಾಡುತ್ತೀಯಾ"

ಕಲ್ಪನೆಯ ಕಷ್ಟಗಳು ವಾಸ್ತವವ ಮೀರಿ ನಿ
ನ್ನಲ್ಪತೆಯ ನಿನಗೆತ್ತಿ ಕಾಣಿಸವು ತಳಿಧೈರ್ಯ
ಕಲ್ಪನೆಯೊ ಕಟ್ಟುವ್ರೊ ನಡೆಮುಂದೆ ಕಾದಿಹುದು
ತಲ್ಪ ನಿನ್ನನು ಸ್ವಾಗತಿಸಲೆಂದು ಅತ್ರಿಸೂನು



ಗಾಳಿಯಿಂದ ವಿದ್ಯುಚ್ಛಕ್ತಿ ಉತ್ಪಾದನೆ

ಪ್ರೊ. ಎಂ.ಎಸ್. ಗೋಪಾಲನ್
೫೩, ಮಾರುತಿ ದೇವಸ್ಥಾನ ರಸ್ತೆ
೪ನೇ ಮುಖ್ಯ ರಸ್ತೆ, ಕುವೆಂಪುನಗರ,
ಮೈಸೂರು -೫೭೦ ೦೦೯

ಸೂರ್ಯನಿಂದ ನಮ್ಮ ಭೂಮಿಗೆ ಪ್ರತಿ ಘಂಟೆಗೆ ೧೦ ಲಕ್ಷ ಕೋಟಿ (೧ರ ಬಲಕ್ಕೆ ೧೪ ಸೊನ್ನೆ) ಕಿಲೊ ವ್ಯಾಟ್ ಗಂಟೆಯಷ್ಟು ಶಕ್ತಿ ತಲುಪುತ್ತಿದೆ. ಇದರಲ್ಲಿ ಶೇಕಡ ೧ ರಿಂದ ೨ರಷ್ಟು ಗಾಳಿ ಶಕ್ತಿಯಾಗಿ ಪರಿವರ್ತನೆಗೊಳ್ಳುತ್ತದೆ. ಅಮೆರಿಕಾ ದೇಶದ ವಿಜ್ಞಾನಿ ಆರ್.ಬಕ್‌ಮಿನ್ಸ್ಟರ್ ಫುಲ್ಲರ್‌ರ ಪ್ರಕಾರ, ವ್ಯವಸಾಯ ಕ್ಷೇತ್ರದಲ್ಲಿ, ಗಾಳಿ ಶಕ್ತಿಯಷ್ಟು ಪ್ರಮುಖವಾದದ್ದು ಬೇರೊಂದಿಲ್ಲ. ಇದು ಹೇಗೆ ಉತ್ಪಾದನೆಗೊಳ್ಳುತ್ತದೆ ? ಗಾಳಿಯು ಭೂಮಿಯ ಮೇಲೆ ಆಗುವಂತಹ ಅಸಮಾನ ಉಷ್ಣತೆಯಿಂದ ಉದ್ಭವವಾಗುತ್ತದೆ. ಈ ಇದರಿಂದಾಗಿ, ತಣ್ಣಗಿನ ಮತ್ತು ಹೆಚ್ಚು ಸಾಂದ್ರತೆಯುಳ್ಳ ಗಾಳಿಯು ಬೀಸಿ, ಬೆಚ್ಚಗಿನ ಮತ್ತು ಕಡಿಮೆ ಸಾಂದ್ರತೆಯುಳ್ಳ ಗಾಳಿಗೆ ಅವಕಾಶ ಮಾಡಿಕೊಡುತ್ತದೆ.

ಮಾನವ ಗಾಳಿ ಶಕ್ತಿಯನ್ನು ಹಲವಾರು ಶತಮಾನಗಳಿಂದಲೂ ಹಡಗುಗಳನ್ನು ನಡೆಸಲು , ಪಂಪಿನಲ್ಲಿ ನೀರೆತ್ತಲು ಮತ್ತು ಗಾಳಿಯಂತ್ರಗಳಿಂದ ಧಾನ್ಯಗಳನ್ನು ಬೀಸಿ ಪುಡಿ ಮಾಡಲು ಉಪಯೋಗಿಸುತ್ತಾ ಬಂದಿದ್ದಾನೆ. ಯೂರೋಪ್ ಖಂಡದ ಹಾಲೆಂಡ್ ದೇಶ ಗಾಳಿಯಂತ್ರಗಳ ತವರೂರೆಂದೇ ಹೆಸರುವಾಸಿಯಾಗಿದೆ. ಅಲ್ಲಿ ಗಾಳಿಯಂತ್ರಗಳ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿ, ನೀರೆತ್ತುವ ಪಂಪುಗಳನ್ನು ನಡೆಸುತ್ತಾರೆ. ಆದರೆ, ಕಳೆದ ಶತಮಾನದಲ್ಲಿ, ಕಲ್ಲಿದ್ದಲು, ಡೀಸೆಲ್, ಪೆಟ್ರೋಲ್ ಮತ್ತು ಅನಿಲಗಳ ಪ್ರಭಾವದಿಂದಾಗಿ, ಗಾಳಿಯಂತ್ರಗಳು ತಮ್ಮ ಪ್ರಭಾವವನ್ನು ಕಳೆದುಕೊಂಡಿದ್ದುವು. ಆದರೆ ೧೯೭೩.ರಲ್ಲಿ ಪ್ರಪಂಚದಲ್ಲಿ ಶಕ್ತಿಕೊರತೆಯುಂಟಾಗಿ, ಗಾಳಿಯಿಂದ ಚಲಿಸುವ ವಿದ್ಯುಜ್ಜನಕಗಳು ಮತ್ತೆ ಬಳಕೆಗೆ ಬಂದುವು.

ಪೌಲ್ ಲಾ ಕೌರ್(೧೮೪೬-೧೯೦೮) ಎಂಬಾತ ಗಾಳಿ ತಿರುಬಾನಿಗಳಿಂದ ಚಲಿಸುವ ವಿದ್ಯುಜ್ಜನಕ ಗಳನ್ನು ಶೋಧಿಸಿದ ವಿಜ್ಞಾನಿಗಳಲ್ಲಿ ಅಗ್ರಜ. ಇಂಥ ವಿದ್ಯುಜ್ಜನಕಗಳಿಂದ ಉತ್ಪಾದಿಸಲ್ಪಟ್ಟ ವಿದ್ಯುಚ್ಛಕ್ತಿಯ ಖರ್ಚು ಇತ್ತೀಚೆಗೆ ಗಮನಾರ್ಹ ವಾದ ರೀತಿಯಲ್ಲಿ ಕಡಿಮೆಯಾಗುತ್ತಿದೆ. ವಿಜ್ಞಾನದಲ್ಲಿ ಸಾಕಷ್ಟು ಪರಿಶೋಧನೆಯಾಗಿರುವುದೇ ಇದರ ಕಾರಣ.

ಗಾಳಿಯಿಂದ ಉತ್ಪಾದಗೊಂಡ ಶಕ್ತಿ ಮುಖ್ಯವಾಗಿ ಗಾಳಿ ವೇಗ ಮತ್ತು ಗಾಳಿ ಯಂತ್ರದಲ್ಲಿ ಅಳವಡಿಸಿರುವ ರೋಟರ್ ಎಷ್ಟು ಕ್ಷೇತ್ರಫಲದ ಮೇಲೆ ಪ್ರಭಾವ ಬೀರಿದೆ ಎಂಬುದನ್ನು ಅವಲಂಬಿಸಿದೆ. ಗಾಳಿ ಗಂಟೆಗೆ ೧೮ಕಿ.ಮೀ ಅಥವಾ ಅದಕ್ಕಿಂತ ಹೆಚ್ಚಿನ ವೇಗದಲ್ಲಿ ಚಲಿಸಿದರೆ, ಅದರಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದೆಂದು ತಜ್ಞರ ಅಭಿಪ್ರಾಯ. ಆಧುನಿಕ ಗಾಳಿ ತಿರುಬಾನಿಗಳಲ್ಲಿ ನಾನಾ ಬಗೆಗಳಿವೆ. ಅತ್ಯಂತ ಚಿಕ್ಕದಾದದ್ದು ಸುಮಾರು

ಆರ್. ನಾರಾಯಣ ಸ್ವಾಮಿಯವರ ಇಂಗ್ಲಿಷ್ ಭಾಷೆಯ "ಎಲೆಕ್ಟ್ರಿಸಿಟಿ ಫ್ರಂ ದಿ ವಿಂಡ್" ಎಂಬ ಸೈನ್ಸ್ ಎಕ್ಸ್‌ಪ್ರೆಸ್ ಮ್ಯಾಗಸೈನ್ ಮಾರ್ಚ್ ೩೦, ೨೦೦೦ರಲ್ಲಿ ಸಪ್ಲಿಮೆಂಟ್ ಟು ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್ ಡೈಲಿ ನ್ಯೂಸ್ ಪೇಪರ್‌ನಲ್ಲಿ ಪ್ರಕಟವಾದ ಲೇಖನ.

೨೦ವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದರೆ, ಅತ್ಯಂತ ದೊಡ್ಡದಾದದ್ದು ತಿರುಬಾನಿ ಸುಮಾರು ೧.೫ ಮಿಲಿಯನ್ ವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಲ್ಲದು. ಈ ತಿರುಬಾನಿಯಲ್ಲಿ ಮೂರು ಅಲಗುಗಳಿವೆ. ಇವನ್ನು ಮರ, ಅಲ್ಯೂಮಿನಿಯಮ್ ಅಥವಾ ಉಕ್ಕಿನಿಂದ ತಯಾರಿಸುತ್ತಾರೆ. ಕೆಲವೊಮ್ಮೆ ಫೈಬರ್ ಗಾಜಿನಿಂದಲೂ ತಯಾರಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ತಗಲುವ ಖರ್ಚು ಕಮ್ಮಿ.

ಪ್ರಪಂಚದಲ್ಲಿ ಸದ್ಯಕ್ಕೆ ಜರ್ಮನಿ ಮತ್ತು ಅಮೆರಿಕ ದೇಶಗಳು ಪ್ರತಿಯೊಂದೂ ೨೫೦೦ ರಿಂದ ೨೮೦೦ ಮಿಲಿಯನ್ ವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಗಾಳಿಯಂತ್ರಗಳಿಂದ ಉತ್ಪಾದಿಸುತ್ತಿವೆ. ಡೆನ್ಮಾರ್ಕ್ ದೇಶ ೧೩.೫೦ ಮಿಲಿಯನ್ ವ್ಯಾಟುಗಳಷ್ಟು. ಸ್ಪೇನ್ ದೇಶವೂ ಗಾಳಿಯ ಸಹಾಯದಿಂದ ವಿದ್ಯುಚ್ಛಕ್ತಿಯನ್ನು ತಯಾರಿಸಲು ಭರದಿಂದ ಹೆಜ್ಜೆ ಹಾಕುತ್ತಿದೆ. ನಮ್ಮ ದೇಶದಲ್ಲಿ, ಗಾಳಿಯ ಸಹಾಯದಿಂದ ಸುಮಾರು ೧೦೦೦ ಮಿಲಿಯನ್ ವ್ಯಾಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪಾದನೆಯಾಗುತ್ತದೆ. ಇದರಲ್ಲಿ ಸುಮಾರು ನೂರಕ್ಕೆ ಎಪ್ಪತ್ತೆರಡು ಅಂಶ ತಮಿಳುನಾಡು ಮತ್ತು ಸುಮಾರು ನೂರಕ್ಕೆ ಹದಿನೇಳು ಅಂಶ ಗುಜರಾತು ದೇಶಗಳು ಉತ್ಪಾದಿಸುತ್ತಿವೆ.

ಪ್ರಪಂಚದಲ್ಲಿಯೇ ಅತ್ಯಂತ ಹಿರಿದಾದ ಮತ್ತು ಗಾಳಿಯ ಸಹಾಯದಿಂದ ಉತ್ಪಾದಿಸಲ್ಪಡುವ ವಿದ್ಯುಚ್ಛಕ್ತಿ ಯಂತ್ರಗಳನ್ನು ಅಮೇರಿಕಾ ದೇಶದ ಅಯೋವಾ ಪ್ರಾಂತ್ಯದಲ್ಲಿ ಎನ್ರಾನ್ ಎಂಬ ಸಂಸ್ಥೆಯು ಅಳವಡಿಸುತ್ತಿದೆ. ಇದರಲ್ಲಿ ಒಟ್ಟು ೨೫೭ ಗಾಳಿ ತಿರುಬಾನಿಗಳಿದ್ದು, ಪ್ರತಿಯೊಂದೂ ೭೫೦ ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತದೆ.

ವಿಜ್ಞಾನದ ಪ್ರಗತಿಯಿಂದಾಗಿ, ವಿದ್ಯುಚ್ಛಕ್ತಿಯನ್ನು ಒಂದು ಕಿಲೋವ್ಯಾಟು ಘಂಟೆಗೆ ೪ ರಿಂದ ೬ ಸೆಂಟುನಷ್ಟು ಖರ್ಚಿನಲ್ಲಿ ಸರಬರಾಜು ಮಾಡಬಹುದಾಗಿದೆ. ಇದು ೧೯೮೧ರಲ್ಲಿ ತಗಲುತ್ತಿದ್ದ ಖರ್ಚಿಗಿಂತ ಮೂರನೇ ಒಂದು ಪಾಲಿಗಿಂತ ಕಡಿಮೆ ಎಂದು ವಿಜ್ಞಾನಿಗಳ ಅಭಿಪ್ರಾಯ. ಇನ್ನೂ ಕಡಿಮೆ ಸಾಧ್ಯವೆಂದು ಆಶೈಸೋಣ.



ಆತ್ಮ ವಂಚನೆ ಸಲ್ಲದು

ಗೋಪಾಲ ಆಶ್ರಿತ
ಜವಾಹರ ನಗರ
ರಾಯಚೂರು

ಒಬ್ಬ ವ್ಯಕ್ತಿ ಪ್ರಾಮಾಣಿಕ ಅಥವಾ ಅಪ್ರಮಾಣಿಕನಾಗಿರುತ್ತಾನೆ. ಇವೆರಡರ ನಡುವಿನ ಬೇರೆ ದಾರಿಯೊಂದಿಲ್ಲವೆಂದು ನನ್ನ ಅಜ್ಜ-ಅಜ್ಜಿ ನಂಬಿದ್ದರು. ಅವರ ಮನೆಯ ಮಧ್ಯ ಕೋಣೆಯ ಗೋಡೆಯ ಮೇಲೆ; "ನೆಲದ ಮೇಲೆ ಹೊಸದಾಗಿ ಬಿದ್ದ ಹಿಮದಂತೆ ಈ ಜೀವನ . ನಾವು ಯಾವ ಕಡೆ ಹೋಗ ಬಯಸುತ್ತೇವೆಯೋ ಅದನ್ನು ನಮ್ಮ ಪ್ರತಿ-ಹೆಜ್ಜೆ ತೋರಿಸುತ್ತದೆ" ಎಂಬ ಸಾಲುಗಳಿದ್ದವು. ಇದು ಅವರ ಧ್ಯೇಯ ಮಂತ್ರವಾಗಿತ್ತು. ಇದರ ಬಗ್ಗೆ ಅವರು ಮಾತಾಡುತ್ತಿರಲಿಲ್ಲ. ಅವರು ಬಾಳಿದ ರೀತಿಯಿಂದಲೇ ಅವರು ತಮ್ಮ ಧ್ಯೇಯ ಮಂತ್ರವನ್ನು ಸಾಕಾರಗೊಳಿಸಿದ್ದರು.

ನಡತೆ ಮತ್ತು ನೀತಿಶಾಸ್ತ್ರದ ಬಗ್ಗೆ ವ್ಯಕ್ತಿಗತವಾಗಿ ಹಾಕಿಕೊಂಡ ಮಾನದಂಡವೇ ಸಮಗ್ರತೆ. ಸಮಯಕ್ಕನುಸಾರವಾಗಿ ಸಡಿಲುಗೊಳ್ಳುವ ಅಥವಾ ಅನುಕೂಲ ಸಿಂಧುವಿನ ಆಶ್ರಯ ಪಡೆಯುವುದು ಜನರ ಜಾಯಮಾನವಲ್ಲವೆಂಬುದನ್ನು ಅವರು ಚೆನ್ನಾಗಿ ತಿಳಿದುಕೊಂಡಿದ್ದರು. ಸಮಗ್ರತೆ ಎಂಬುವುದು ಒಬ್ಬ ವ್ಯಕ್ತಿಯ ನಡತೆಯನ್ನು ನಿರ್ಣಯಿಸುವ ಮಾನದಂಡ. ದುರ್ದೈವದ ಸಂಗತಿಯೆಂದರೆ, ಸಮಗ್ರತೆ ಇಂದು ದೊರೆಯುತ್ತಿಲ್ಲವಲ್ಲದೆ, ಅಪರೂಪವಾಗ ಹತ್ತಿದೆ. ಆದರೆ ಇದು ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆಯಲ್ಲದೆ ಇದನ್ನು ಹೇಗಾದರೂ ಮಾಡಿ ನಮ್ಮಲ್ಲಿ ಬೆಳಸಿಕೊಳ್ಳಲೇ ಬೇಕಾಗಿದೆ.

'ಸಮಗ್ರತೆಯಮುಕ್ಕೂಟ'ವೆಂದು ಹೆಸರಿಸಲಾದ ಒಂದು ಪರೀಕ್ಷೆಯಲ್ಲಿ ಮೂರು ಮುಖ್ಯ ತತ್ವಗಳಿವೆ. ಅವುಗಳನ್ನು ಪಾಲಿಸುವುದರಿಂದ ನಾವು ಯಶಸ್ವಿಯಾಗಬಹುದು.

೧.ವೈಯಕ್ತಿಕ ಒತ್ತಡವನ್ನೆದುರಿಸಿ ನಮ್ಮ ನಿಲುವನ್ನು ಸಮರ್ಥಿಸಿಕೊಳ್ಳುವುದು :
ಹೆಸರಾಂತ ಆಸ್ಪತ್ರೆಯೊಂದರಲ್ಲಿನ ಶಸ್ತ್ರ ವೈದ್ಯಕೀಯ ಗುಂಪಿಗೆ ಹೊಸದಾಗಿ ಸೇರಿದ್ದ ದಾದಿಯೊಬ್ಬಳು ಹೇಗೆ ವರ್ತಿಸಿದಳೆಂಬುದು ಒಂದು ದಂತ ಕಥೆಯಾಗಿದೆ. ಹೊಟ್ಟೆಗೆ ಸಂಬಂಧಿಸಿದ ಒಂದು ಶಸ್ತ್ರಚಿಕಿತ್ಸೆಯಲ್ಲಿ ಬಳಸಲಾದ ಸಾಧನ-ಸಾಮಗ್ರಿಗಳ ಲೆಕ್ಕವಿಡುವುದು ಅವಳ ಹೊಣೆಯಾಗಿತ್ತು. ಅವಳು ಚಿಕಿತ್ಸಕನಿಗೆ "ನೀವು ಕೇವಲ ೧೧ ಹೀರುಕಟ್ಟುಗಳನ್ನು ಮಾತ್ರ ತೆಗೆದಿರುವಿರಿ. ನಾವು ಬಳಸಿದ್ದು ೧೨. ಆ ಕೊನೆಯದ್ದನ್ನು ನಾವು ಹುಡುಕಬೇಕು" ಎಂದಳು.

"ನಾನು ಅವುಗಳೆಲ್ಲವನ್ನು ತೆಗೆದಿದ್ದೇನೆ.... ಈಗ ನಾವು ಮುಚ್ಚೋಣ" ಎಂದು ವೈದ್ಯ ಹೇಳಿದ.

"ನೀವು ಆ ರೀತಿ ಮಾಡಬಾರದು ಡಾಕ್ಟರ್..., ರೋಗಿಯ ಗತಿಯೇನು?" ಎಂದು ಆ ಹೊಸ ದಾದಿ ಆಕ್ಷೇಪಿಸಿದಳು.

ಅವಳ ಆಕ್ಷೇಪವನ್ನು ಮನ್ನಿಸುವಂತೆ ಆ ಚಿಕಿತ್ಸಕ ತನ್ನ ಪಾದದ ಕೆಳಗೆ ಬಿದ್ದಿದ್ದ ೧೨ ನೇ ಹೀರುಕಟ್ಟನ್ನು ಎತ್ತಿ ಹಿಡಿದು 'ನೀನು ಇಲ್ಲಿ ಅಷ್ಟೇ ಅಲ್ಲ.. ಇನ್ನಾವುದೇ ಆಸ್ಪತ್ರೆಯಲ್ಲಿ ಚೆನ್ನಾಗಿ ಕೆಲಸಮಾಡುವಷ್ಟು ಸಮರ್ಥಳಾಗಿರುವಿ'' ಎಂದು ನಗುತ್ತ ಹೇಳಿದ.

[illegible] ಡೆನಿಸ್ ವೇಟ್ಲಿ ಅವರ "[illegible]

ನೀವು ಮಾಡುತ್ತಿರುವುದು ಸರಿಯೆಂದೆನಿಸಿದಾಗ ನೀವು ಹಿಂಜರಿಯಬಾರದು.

೨. ಇನ್ನೊಬ್ಬರಿಗೆ ಸಲ್ಲ ಬೇಕಾದ ಶ್ರೇಯವನ್ನು ಮುಕ್ತವಾಗಿ ಘೋಷಿಸುವುದು:

ನಮಗಿಂತಲೂ ಉತ್ತಮ ವಿಚಾರಗಳುಳ್ಳವರನ್ನು ಅಥವಾ ಚಾಣಾಕ್ಷರನ್ನು ಕಂಡು ನಾವು ಹೆದರಬಾರದು. ಒಗಿಲ್ವಿ ಐಂಡ್ ಮ್ಯಾಥರ ಜಾಹಿರಾತು ಸಂಸ್ಥೆಯ ಸ್ಥಾಪಕ ಡೇವಿಡ್ ಒಗಿಲ್ವಿ, ಈ ಅಂಶವನ್ನು ಸ್ಪಷ್ಟಪಡಿಸಲು, ತನ್ನ ಸಂಸ್ಥೆಯಲ್ಲಿ ಹೊಸದಾಗಿ ನೇಮಕಗೊಂಡ ಪ್ರತಿಯೊಬ್ಬ ಮುಖ್ಯ ಅಧಿಕಾರಿಗೆ ರಶಿಯನ್ ಗೂಡುಕಟ್ಟುವ ಗೊಂಬೆಯನ್ನು ಕಳಿಸಿದ. ಪ್ರತಿಯೊಂದರಲ್ಲಿ, ಅದಕ್ಕಿಂತ ಚಿಕ್ಕದಾದ ಐದು ಗೊಂಬೆಗಳಿದ್ದವು. ಅತಿ ಚಿಕ್ಕಗೊಂಬೆ ಯೊಳಗೆ ಆತನ ಸಂದೇಶವಿತ್ತು, "ನಾವು ಪ್ರತಿಯೊಬ್ಬರು ನಮಗಿಂತ ಚಿಕ್ಕವರನ್ನು ಕೆಲಸಕ್ಕೆ ತೆಗೆದುಕೊಂಡರೆ ನಮ್ಮದು ಕುಳ್ಳರ ಸಂಸ್ಥೆಯಾಗುತ್ತದೆ. ಆದರೆ ನಮಗಿಂತಲೂ ದೊಡ್ಡವರನ್ನು ಕೆಲಸಕ್ಕೆ ನೇಮಿಸಿಕೊಂಡರೆ ನಮ್ಮದೊಂದು ಪ್ರಚಂಡರ ಸಂಸ್ಥೆಯಾಗುತ್ತದೆ". ಹೆಚ್ಚು ಕಡಿಮೆ ಆ ರೀತಿ ಆಗಿಯೇ ಬಿಟ್ಟಿತು. ಈ ಸಂಸ್ಥೆ ವಿಶ್ವದ ದೊಡ್ಡ ಹಾಗೂ ಗೌರವಾನ್ವಿತ ಜಾಹಿರಾತು ಸಂಸ್ಥೆಗಳಲ್ಲೊಂದೆನಿಸಿಕೊಂಡಿತು.

೩. ಪ್ರಾಮಾಣಿಕತೆ ಮತ್ತು ನಿಷ್ಪಕ್ಷಪಾತ, ಧೋರಣೆ ನಿಮ್ಮದಾಗಿರಲಿ : ಕಪಟ ಮನಸ್ಸಿನ ಜನರು ತಮ್ಮ ತೋರಿಕೆ ಅಥವಾ ಸ್ಥಾನಮಾನದಂಥ ಬಾಹ್ಯಿಕ ಅಂಶಗಳನ್ನವಲಂಬಿಸಿ ತಾವು ಒಳ್ಳೆಯವರೆಂದು ತೋರಿಸಿಕೊಳ್ಳುತ್ತಾರೆ. ಈ ಮುಖಭಾಗವನ್ನು ಕಾಪಾಡಿಕೊಂಡು ಹೋಗಲು ಅವರು ಏನೆಲ್ಲಾ ಮಾಡುತ್ತಾರಾದರೂ, ಆಂತರಿಕವಾಗಿ ಅಭಿವೃದ್ಧಿ ಹೊಂದಲು ಮತ್ತು ವ್ಯಕ್ತಿತ್ವ ಬೆಳೆಸಿಕೊಳ್ಳುವ ದಿಶೆಯಲ್ಲಿ ಅವರೇನೂ ಮಾಡುವುದಿಲ್ಲ.

ಆದ್ದರಿಂದ ಮನುಷ್ಯ ತನ್ನತನ ಬಿಡದಿರಲಿ. ತನಗೆ ಹಿಡಿಸದಂಥ ವಿಷಯಗಳನ್ನು ಮರೆಮಾಡದಿರಲಿ. ಯಾವುದಾದರೂ ಕಠಿಣವಾಗಿದ್ದರೆ, ಅದನ್ನು ಕಠಿಣವಾಗಿ ಎದುರಿಸಬೇಕು. ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ವಾಸ್ತವಿಕತೆಯನ್ನು ಎದುರಿಸಬೇಕು ಮತ್ತು ಒಬ್ಬ ವಯಸ್ಕನಂತೆ ಜೀವನದ ಸವಾಲುಗಳ ಜೊತೆ ಸ್ಪಂದಿಸಬೇಕು.

ಆತ್ಮಗೌರವ ಮತ್ತು ಆತ್ಮಸಾಕ್ಷಿಗಳೇ ಸಮಗ್ರತೆಗೆ ಅವಶ್ಯಕ ಶಕ್ತಿಯುತ ಅಂಗಭಾಗಗಳು . ಮತ್ತು ಅವುಗಳ ಮೂಲಕವೇ ನಾವು ಇತರರೊಡನೆ ನಮ್ಮ ಸಂಬಂಧವನ್ನು ಪುಷ್ಟಿಗೊಳಿಸಬಹುದು.

ಸಮಗ್ರತೆಯೆಂದರೆ, ನಾವು ಮಾಡುವ ಕೆಲಸ ನಮಗೆ ಸರಿಯೆನಿಸಿದ್ದರಿಂದ ಮಾಡುವುದು. ಅದು ಸೊಗಸಾಗಿ ಕಾಣುತ್ತದೆಂದಾಗಲಿ ಅಥವಾ ರಾಜಕೀಯವಾಗಿ ಸರಿಯೆಂದೆನಿಸುತ್ತದೆಂದಾಗಲಿ ಮಾಡುವುದಲ್ಲ. ತತ್ವದಿಂದ ಕೂಡಿದ ಜೀವನ ಮಾತ್ರ ಯಾವಾಗಲೂ ಯಶಸ್ವಿಯಾಗುತ್ತದೆ. ಯಾವುದೊ ಅಗ್ಗದ ನೀತಿಯ ಆಕರ್ಷಣೆಗೆ ಒಳಗಾಗುವುದು ಯಶ ತರುವುದಿಲ್ಲ. ಈ ಅಂಶ ಮಾತ್ರ ನಮ್ಮನ್ನು ೨೧ನೇ ಶತಮಾನಕ್ಕೆ ಒಯ್ಯಬಲ್ಲದು. ಈ ದಾರಿಯಲ್ಲಿ ಸಾಗುವವರಿಗೆ ಹಿಂದಿನ ನೋಟ ತೋರುವ ಕನ್ನಡಿ ಬೇಕಾಗಿಲ್ಲ. ಇದನ್ನೇ ನನ್ನ ಅಜ್ಜ-ಅಜ್ಜಿ ನನಗೆ ಕಲಿಸಿದರು.

ಅಲೆಕ್ಸಾಂಡರ್ ಮತ್ತು ದಾರ್ಶನಿಕರು

ಎಚ್.ಆರ್. ಚಂದ್ರವದನ ರಾವ್
ಪ್ರಾಂಶುಪಾಲರು(ನಿ)
೨೮೭೭/೧೦, ೬ನೇ ಮುಖ್ಯರಸ್ತೆ,
ಚಾಮುಂಡಿಪುರಂ, ಮೈಸೂರು-೫೭೦ ೦೦೪

ಪುರೂರವನನ್ನು ಯುದ್ಧದಲ್ಲಿ ಸೋಲಿಸಿ, ಅನಂತರ ಅವನ ಪರಾಕ್ರಮ ಹಾಗೂ ಅನಿಗಿದ್ದ ಆತ್ಮಗೌರವವನ್ನು ಮೆಚ್ಚಿ, ಅವನಿಗೆ ಅವನ ರಾಜ್ಯವನ್ನೂ ಜೊತೆಗೆ ತಾನು ಗೆದ್ದಿದ್ದ ಅನೇಕ ನಗರ ಮತ್ತು ಹಳ್ಳಿಗಾಡುಗಳನ್ನು ಕೊಟ್ಟು, ಅವನನ್ನು ಅಧೀನ ರಾಜನನ್ನಾಗಿ ಮಾಡಿ ಕೊಂಡ ಮೇಲೆ, ಗಂಗಾ ನದಿಯನ್ನು ದಾಟ ಹೋಗಬೇಕೆಂಬ ಅವನ ಮಹಾಕಾಂಕ್ಷೆಯನ್ನು ಗೆಳೆಯರು ಮತ್ತು ಸೈನಿಕರು ವಿರೋಧಿಸಿದ್ದರಿಂದ ಜಗದೇಕ ವೀರನೆನೆಸಿದ್ದ ಅಲೆಕ್ಸಾಂಡರ್ ಹಿಂದಿರುಗ ಬೇಕಾಯಿತು ಎಂಬುದನ್ನು ನಾವು ಇತಿಹಾಸದಲ್ಲಿ ಓದುತ್ತೇವೆ.

ಅವನು ತನ್ನ ಪ್ರಯಾಣದಲ್ಲಿ ಸೆರೆಹಿಡಿದು ತಂದಿದ್ದ ಹತ್ತು ಜನ ಭಾರತೀಯ ದಾರ್ಶನಿಕರನ್ನು ಅವರ ಜಾಣ್ಮೆಯನ್ನರಿಯಲು ಪ್ರಶ್ನಿಸುತ್ತಾನೆ. ಅವರು ಕೊಡುವ ಉತ್ತರ ಸರಿಯೋ ತಪ್ಪೋ ಎಂದು ನಿರ್ಧರಿಸಲು ಅವರ ಪೈಕಿ ಹಿರಿಯವನನ್ನು ತೀರ್ಪುಗಾರನನ್ನಾಗಿ ನೇಮಿಸಿ, ತಪ್ಪು ಉತ್ತರ ಕೊಟ್ಟವರಿಗೆ ಮರಣದಂಡನೆ ಎಂದು ಎಚ್ಚರಿಸುತ್ತಾನೆ. ಮಹಾಭಾರತದಲ್ಲಿ ಬರುವ 'ಯಕ್ಷಪ್ರಶ್ನೆ' ಪ್ರಸಂಗವನ್ನು ನೆನೆಪಿಗೆ ತರುವ ಇದನ್ನುಪ್ಲೂಟಾರ್ಕ್ ತನ್ನ 'ಗ್ರೀಕ್ ಮತ್ತು ರೋಮನ್ ಮಹಾಶಯರ ಜೀವನ 'ಪುಸ್ತಕದಲ್ಲಿ ಅಲೆಕ್ಸಾಂಡರ್ ಬಗ್ಗೆ ಬರೆಯುತ್ತಾ ತಿಳಿಸುತ್ತಾನೆ.

ಅಲೆಕ್ಸಾಂಡರ್ ಜಿಮ್ನೋ ಸೋಫಿಸ್ಟ್‌ರನ್ನು (ದಾರ್ಶನಿಕರನ್ನು) ಒಬ್ಬರ ಅನಂತರ ಒಬ್ಬರನ್ನು ಕೇಳಿದ ಪ್ರಶ್ನೆ ಅದಕ್ಕೆ ದೊರೆತ ಉತ್ತರ ಹೀಗಿದೆ-

ಪ್ರಶ್ನೆ-೧. ಪ್ರಪಂಚದಲ್ಲಿ ಸತ್ತವರ ಸಂಖ್ಯೆ ಹೆಚ್ಚೋ ಬದುಕಿರುವವರ ಸಂಖ್ಯೆ ಹೆಚ್ಚೋ?

ಉತ್ತರ: ಬದುಕಿರುವವರು ಜಾಸ್ತಿ ಕಾರಣ ಮಡಿದವರು ಲೆಕ್ಕಕ್ಕಿಲ್ಲ.

ಪ್ರಶ್ನೆ-೨ ಯಾವುದು ಹೆಚ್ಚು ಪ್ರಾಣಿಗಳನ್ನು ಸೃಷ್ಟಿಸುತ್ತದೆ-ಭೂಮಿಯೋ, ಸಮುದ್ರವೋ?

ಉತ್ತರ : ಭೂಮಿ, ಸಮುದ್ರ ಭೂಮಿಯ ಒಂದು ಭಾಗ ಮಾತ್ರ.

ಪ್ರಶ್ನೆ-೩ಅತ್ಯಂತ ಕುತಂತ್ರಿ ಪ್ರಾಣಿ ಯಾವುದು?

ಉತ್ತರ: ಮಾನವನಿಗೆ ಅದು ಇನ್ನೂ ಸಿಕ್ಕಿಲ್ಲ.

ಪ್ರಶ್ನೆ-೪ ಶಬ್ಬಾಸ್ ನನ್ನ ಮೇಲೆ ದಂಗೆ ಏಳುವಂತೆ ಮಾಡಲು ಅವನಿಗೆ ನೀನು ಏನು ಹೇಳಿದೆ?

ಉತ್ತರ: ನೀನು ಬದುಕುಳಿಯ ಬೇಕು ಅಥವಾ ವೀರ ಮರಣ ಪಡೆಯಬೇಕು.

ಪ್ರಶ್ನೆ-೫ ರಾತ್ರಿ ಮತ್ತು ಹಗಲಿನಲ್ಲಿ ಯಾವುದು ಹಿರಿಯದು?

ಉತ್ತರ: ಹಗಲು, ಇರುಳಿಗಿಂತ ಹಗಲು ಒಂದು ದಿನದ ಮಟ್ಟಿಗಾದರೂ ದೊಡ್ಡದು.

ಪ್ರಶ್ನೆ-೬ ಅತ್ಯಂತ ಜನಪ್ರಿಯನಾಗಲು ಮಾನವ ಏನು ಮಾಡಬೇಕು?

ಉತ್ತರ : ಅತ್ಯಂತ ಬಲಶಾಲಿಯಾಗಬೇಕು, ಆದರೆ ಇತರರು ಭಯಪಡದ ಹಾಗಿರಬೇಕು.

ಪ್ರಶ್ನೆ-೭ ದೇವನಾಗಲು ಮಾನವ ಏನು ಮಾಡಬೇಕು?

ಉತ್ತರ: ಮಾನವರು ಮಾಡಲಾಗದ ಕೆಲಸವನ್ನು

ಮಾಡಿದಾಗ ಮಾನವದೇವ ನೆನೆಸಿ ಕೊಳ್ಳುತ್ತಾನೆ.

ಪ್ರಶ್ನೆ-೮ ಒಬ್ಬ ವ್ಯಕ್ತಿ ಎಲ್ಲಿಯವರೆಗೆ ಮನುಷ್ಯನಂತೆ ಬದುಕ ಬಲ್ಲ?

ಉತ್ತರ: ಬದುಕುವುದಕ್ಕಿಂತ ಸಾವೇ ವಾಸಿ ಅನಿಸುವವರೆಗೆ.

ಪ್ರಶ್ನೆ-೯ ಯಾವುದು ಹೆಚ್ಚು ಬಲಶಾಲಿ- ಜೀವವೇ? ಮೃತ್ಯುವೇ?

ಉತ್ತರ: ಜೀವ. ಕಾರಣ ಅದು ಕಷ್ಟ ಕಾರ್ಪಣ್ಯಗಳನ್ನು ಸಹಿಸುತ್ತದೆ.

ಅಲೆಕ್ಸಾಂಡರ್ ಅನಂತರ ತೀರ್ಪುಗಾರನನ್ನಾಗಿ ಕೂರಿಸಿದ ಹಿರಿಯನನ್ನು, "ಮೃತ್ಯು ದಂಡನೆಗೆ ಅರ್ಹವಾದ ಉತ್ತರ ಯಾವುದು?" ಎಂದು ಕೇಳುತ್ತಾನೆ. ಅದಕ್ಕೆ ಹಿರಿಯನು 'ಒಬ್ಬನ ದಿನ್ನೊಬ್ಬನ ಉತ್ತರಕ್ಕಿಂತ ಕೆಟ್ಟದು' ಎನ್ನುತ್ತಾನೆ.

"ಹಾಗೆ ಹೇಳುವುದರಿಂದ ನೀನೇ ಮೊದಲು ಸಾಯಬೇಕು".

"ಇಲ್ಲ, ಪ್ರಭು, ತಾವು ಯಾವ ಉತ್ತರ ಪೂರ್ಣ ಅಸಮರ್ಪಕ ಎಂದು ಮೊದಲು ಹೇಳಬೇಕು. ಅವನನ್ನು ಮೊದಲು ಗಲ್ಲಿಗೇರಿಸಬೇಕು" ಎಂದು ಹಿರಿಯ ವಾದಿಸಿದ.

ಅಲೆಕ್ಸಾಂಡರ್ ದಾರ್ಶನಿಕರೆಲ್ಲರನ್ನೂ ಕ್ಷಮಿಸಿ ಬಹುಮಾನ ಕೊಟ್ಟು ಬಿಡುಗಡೆ ಮಾಡಿದ.

ಅಲೆಕ್ಸಾಂಡರ್ ಕಂಡು ಕೊಂಡ ಅಗಾಧ ಸತ್ಯ

ಅಲೆಕ್ಸಾಂಡರ್ ಪರ್ಷಿಯಾಕ್ಕೆ ಹೋದಾಗ ಅಲ್ಲಿ ಸಿರಸ್‌ನ ಹಾಳು ಬಿದ್ದ ಗೋರಿ ನೋಡಿದ. ಅಲ್ಲಿದ್ದ ಗೋರಿ ಕಲ್ಲಿನ ಮೇಲೆ ಗ್ರೀಕ್ ಭಾಷೆಯಲ್ಲಿ ಕೆತ್ತಿದ್ದ ಸ್ಮಾರಕ ಲೇಖನವನ್ನು ಓದಿದ- 'ನೀನು ಯಾರೇ ಆಗಲಿ, ಯಾವ ದೇಶದವನೇ ಆಗಲಿ, ತಿಳಿದುಕೋ, ನಾನು ಸಿರಸ್, ಪರ್ಷಿಯಾ ಚಕ್ರಾಧಿಪತ್ಯದ ಸ್ಥಾಪಕ. ನನ್ನ ದೇಹವನ್ನು ಮುಚ್ಚಿರುವ ಇಷ್ಟು ಜಾಗಕ್ಕೆ, ನೀನು ಆಸೆ ಪಡಬೇಡ.'

ಅಲೆಕ್ಸಾಂಡರನಿಗೆ ಅಗಾಧ ಸತ್ಯ ಅರಿವಾಯಿತು- ಮಾನವನ ಜೀವನ ಎಷ್ಟು ಕಾಲ ಹಾಗೂ ಅವನಿಗೆ ಬೇಕಾದುದು ಎಷ್ಟು ಜಾಗ- ಎನ್ನುವುದು.

ಸಿರಸ್‌ನ ಗೋರಿಯನ್ನು ಅಗೆದು ಹಾಳುಮಾಡಿದ್ದು ಪಾಲಿಮೇಯಿಸ್ ಎಂದು ಅನಂತರ ಅಲೆಕ್ಸಾಂಡರನಿಗೆ ಗೊತ್ತಾಯಿತು. ಅವನನ್ನು ಹಿಡಿದು ಗಲ್ಲಿಗೇರಿಸಿದ.

ಸ್ವಾತಂತ್ರ್ಯವನ್ನು ಪಡೆಯಲು ತೆತ್ತಷ್ಟೇ ಬೆಲೆಯನ್ನು ಅದರ ರಕ್ಷಣೆಗಾಗಿಯೂ ತೆರಬೇಕಾಗುವುದು. ಗಳಿಸಿದ ಸ್ವಾತಂತ್ರ್ಯ ತಾನಾಗಿಯೇ ನಮ್ಮ ಕೈಯಲ್ಲಿ ಉಳಿಯಲಾರದು. ಅದನ್ನು ನಾವೇ ಕಾಪಾಡಿಕೊಂಡು ಹೋಗಬೇಕು.

ನೆಹರೂ

ಮನೆಗೆ ಹಿಂತಿರುಗಲೇ ಇಲ್ಲ ಆ ಹುಡುಗ

ಕೆ. ಸುಕನ್ಯ ಭಟ್
ಮಹಿಳಾ ಪ್ರೌ.ಶಾ, ಕದ್ರಿ ಉತ್ಕೃಷ್ಟ
ಮಂಗಳೂರು-೫೭೫ ೦೦೪

ರಾತ್ರಿಯಲ್ಲಿ ಮೂರು ಹುಡುಗರು ಮನೆಗೆ ಮರಳುತ್ತಿದ್ದರು. ನಿರ್ಜನವಾಗಿದ್ದ ಆ ಹಳ್ಳಿ ರಸ್ತೆ ಪೂರ್ತಿ ಕತ್ತಲಾಗಿತ್ತು. ಇಬ್ಬರು ವೆಟ್ಜರ್‌ಲಿಂಗ್ ಮಕ್ಕಳು ಬೈಸಿಕಲ್‌ನ ಮೇಲಿದ್ದರೆ, ಅವರ ಭೇಟಿಗೆ ಬಂದಿದ್ದ ಅವರ ಗೆಳೆಯ ಆ್ಯರನ್ ಮಾತ್ರ ತನ್ನ ಸ್ಕೂಟರನ್ನು ನೂಕುತ್ತ ಬರುತ್ತಿದ್ದ. ಮನೆಯಿಂದ ಒಂದು ಕಿಲೋಮೀಟರ್‌ಗಿಂತ ಸ್ವಲ್ಪ ಹೆಚ್ಚು ದೂರದಲ್ಲಿದ್ದ ಅಂಗಡಿಯಿಂದ ಅದೇ ತಾನೆ ಅವರು ಮೂವಿಯೊಂದನ್ನು ಬಾಡಿಗೆಗೆ ಪಡೆದಿದ್ದರು.

ಮೊದಲ ಬಾರಿ, ರಾತ್ರಿ ಅಂಗಡಿಗೆ ಹೊರಟಿರುವ, ಚಿಕ್ಕ ಸಾಹಸ ಸವಾರಿಗೆ, ನೆರೆಯ ಪಟ್ಟಣಕ್ಕೆ ಡಿನ್ನರ್ ಪಾರ್ಟಿಗೆ ಹೋಗಿದ್ದ ತಂದೆ-ತಾಯಿಯರಾದ ಪ್ಯಾಟ್ ಮತ್ತು ಜೆರ್ರಿ ವೆಟ್ಜರ್‌ಲಿಂಗ್ ರನ್ನು ಒಪ್ಪಿಸಲು, ಅವರು ಮೂರು ಸಲ ಫೋನ್ ಮಾಡಬೇಕಾಯಿತು.

ತಾವು ಮೂವಿ ತರಲು ಅಂಗಡಿಗೆ ಹೋದಾಗ, ತಮ್ಮ ಎಂಟು ವರ್ಷದ ತಂಗಿ ಕಾರ್ಮೆನ್ ನೊಡನೆ ಮನೆಯಲ್ಲಿ ಇರಲು, ಪಕ್ಕದಮನೆಯ ಹದಿನಾಲ್ಕು ವರ್ಷ ಪ್ರಾಯದ ರೋಕೆಲ್‌ನನ್ನು ಕೊನೆಗೂ ಮಗ ಜಾಕೆಟ್ ಒಪ್ಪಿಸಿದ್ದ.

ಆ ನಿರ್ಜನ ಕತ್ತಲಿನ ರಸ್ತೆಯಲ್ಲಿ ತಮ್ಮ ಹುಡುಗರು ಬೈಕಿನಲ್ಲಿ ಹೋದಾಗ, ಇತರ ಡ್ರೈವರ್‌ಗಳಿಗೆ ಕಾಣಿಸದೆ ಇದ್ದರೆ ಎಂಬ ಆತಂಕ ಮಾತ್ರ ಪ್ಯಾಟ್ ಮತ್ತು ಜೆರ್ರಿಯರಿಗಿದ್ದಿತ್ತು. ಹಾಗಾಗಿ ಹುಡುಗರು ಟಾರ್ಚನ್ನು ಹಿಡಿದುಕೊಂಡೇ ಅಕ್ಟೋಬರ್ ತಿಂಗಳ ರಾತ್ರಿ ೮.೩೦ಗೆ ಪೂರ್ಣ ಕತ್ತಲಲ್ಲಿ ಹೊರಟರು.

ಪರಿಚಿತವಾಗಿದ್ದ ಆ ದಾರಿಯಲ್ಲಿ ಮೊದಲೇ ಊಹಿಸಿದಂತೆ ಜನ ಸಂಚಾರವಿರಲಿಲ್ಲ. ದಾರಿ ಉದ್ದಕ್ಕೂ ಆ ಹುಡುಗರು ವಾಹನಗಳನ್ನಾಗಲೀ, ಮನುಷ್ಯರನ್ನಾಗಲೀ ಕಂಡಿರಲಿಲ್ಲ.

ಆದರೆ ಅವರಿಗರಿಯದಂತೆ ಕತ್ತಲಲ್ಲಿ ಒಬ್ಬ ಅಪರಿಚಿತ ವ್ಯಕ್ತಿ ಅವರನ್ನ ಗಮನಿಸುತ್ತಿದ್ದ!

ಮೂವರ ತಂಡ ಮನೆಯ ಕಡೆಗೆ ಬರುತ್ತಿದ್ದಾಗ, ಅವರಿಗೆ, ಎರಡು ರಸ್ತೆಗಳು ಕೂಡುವ, ಅತಿಹೆಚ್ಚು ಕತ್ತಲಿದ್ದ ಜಾಗವೊಂದು ಎದುರಾಯಿತು. ಇದ್ದಕ್ಕಿದ್ದಂತೆ, ಟ್ರೆವರ್ ವೆಟ್ಜರ್‌ಲಿಂಗ್ ಹಿಡಿದಿದ್ದ ಟಾರ್ಚಿನ ಬೆಳಕಲ್ಲಿ, ಒಬ್ಬನು, ರಸ್ತೆ ಬದಿಯಿಂದ ಮಧ್ಯಭಾಗದಲ್ಲಿದ್ದ ತಮ್ಮ ಎದುರಿಗೇ ಬರುವುದು ಅವರಿಗೆ ಕಂಡಿತ್ತು. ದಿಕ್ಕುಗಾಣದೆ ಅವರು ನಿಧಾನಿಸಿದ್ದರು.

''ನಿಲ್ಲಿ''-ಎಂದು ಒರಟಾಗಿ ಆದೇಶಿಸುತ್ತಾ ದೊಡ್ಡಗಾತ್ರದ ಮನುಷ್ಯ ಅವರಿಗಡ್ಡವಾಗಿ ನಿಂತಿದ್ದ. ''ನನ್ನ ಬಳಿ ಗನ್ ಇದೆ. ನಿಮ್ಮ ಟಾರ್ಚ್‌ನ ಬೆಳಕನ್ನ ನಂದಿಸಿ''-ಎಂದಿದ್ದ. ಅವನ ಮುಖವನ್ನು ಮೊಗವಾಡವು ಮರೆಮಾಡಿತ್ತು. ಕೈಯಲ್ಲಿ ಪಿಸ್ತೂಲ್ ಕೂಡ ಇರುವುದನ್ನ ಹುಡುಗರು ನೋಡಿದ್ದರು.

ಅನಂತರ ಆ ಮನುಷ್ಯ -''ನಿಮ್ಮ ಬೈಕುಗಳನ್ನ, ಸ್ಕೂಟರನ್ನ ಅಲ್ಲೇ ಎಸೆಯಿರಿ'' ಎಂದ. ''ಬದಿಯಲ್ಲಿದ್ದ ಕಂದಕದಲ್ಲಿ ಮುಖ ಕೆಳ ಮಾಡಿ ಮಲಗಿರಿ'' ಎಂದೂ ಹೇಳಿದ. ಕೆಳಗೆ ಬಗ್ಗಿ ಅವನು ಮೊದಲು ಟ್ರೆವರ್‌ರ ಮುಖವನ್ನ ಪರೀಕ್ಷಿಸಿ, ನಿನ್ನ ವಯಸ್ಸೆಷ್ಟು? ಎಂದು ಪ್ರಶ್ನಿಸಿದ. ''ಹತ್ತು'' ಎಂದು ಟ್ರೆವರ್ ಹೇಳಿದ.

ಆ ಮನುಷ್ಯ ಅನಂತರ ಆ್ಯರನ್‌ನನ್ನು ಅದೇ ಪ್ರಶ್ನೆ ಕೇಳಿದ, ''ನನಗೆ ಹನ್ನೊಂದು''-ಎಂದ ಆ್ಯರನ್. ಅತ್ತಿತ್ತ ಗನ್ ತಿರುಗಿಸುತ್ತ ಆ ಮನುಷ್ಯ

ಫೆಬ್ರವರಿ ೨೦೦೦ದ ರೀಡರ್ಸ್ ಡೈಜೆಸ್ಟ್‌ನಲ್ಲಿ ಹೆನ್ರಿ ಹರ್ಟ್ನರ್‌ರ 'ದ ಬಾಯ್ ಹೂ ನೆವರ್ ಕೇಮ್ ಹೋಮ್'' ಎಂಬ ಲೇಖನದ ಕನ್ನಡ ಅನುವಾದ

ಜಾಕಬ್‌ನ ಕಡೆ ತಿರುಗಿದ ಮತ್ತು ವಯಸ್ಸನ್ನು ಅವನು ತಿಳಿಸುವಂತೆ ಆದೇಶಿಸಿದ. ಜಾಕಬ್ ತನಗೆ ಹನ್ನೊಂದು ವರ್ಷ ಎಂದ.

ಮುಂದೆ ಆ ಗನ್‌ಮನ್ ಟ್ರೆವರ್‌ನನ್ನು ಮೇಲೇಳುವಂತೆ ಹೇಳಿದ. "ಕಾಡಿನೊಳಗಡೆ ನೀನೀಗ ಓಡು" ಎಂದ ಕಿರುಚಿದ. ಖಾಲಿ ಬಯಲಿನ ಹಿಂದಿದ್ದ ಕಾಡಿನೆಡೆ ಓಡಿದ ಬಳಿಕವೇ ಅವನು ತನ್ನ ಪಿಸ್ತೂಲನ್ನ ಆ್ಯರನ್‌ನ ಕಡೆ ತಿರುಗಿಸಿ ಕಿರುಚಿದ, "ನಿನ್ನ ಕೈಲಾದಷ್ಟು ಜೋರಾಗಿ ಕಾಡಿನೊಳಗೆ ಓಡು. ಇಲ್ಲದಿದ್ದರೆ ಶೂಟ್ ಮಾಡುತ್ತೇನೆ" ಎಂದ.

ಗನ್‌ಮ್ಯಾನ್, ಜಾಕಬ್‌ನ ಜ್ಯಾಕೆಟ್‌ನನ್ನು ಗಟ್ಟಿಯಾಗಿ ಹಿಡಿದದ್ದು ಓಡುವಾಗ ಆ್ಯರನ್ ನೋಡಿದ. ಕೆಲವು ಕ್ಷಣಗಳ ಅನಂತರ ಇಬ್ಬರು ಹುಡುಗರು ಓಡುತ್ತಿರುವಾಗಲೇ ಹಿಂದಕ್ಕೆ ತಿರುಗಿ ನೋಡಿದಾಗ ಅವರಿಗೆ ಗನ್‌ಮ್ಯಾನ್‌ನ ಅಥವಾ ಜಾಕಬ್‌ನ ಸುಳಿವೇ ಅಲ್ಲಿ ಕಾಣಲಿಲ್ಲ.

ಒಂದು ಕಿಲೋಮೀಟರ್‌ನಷ್ಟು ದೂರ ಓಡಿಕೊಂಡೇ ಮನೆ ತಲುಪಿದರು.

"ಹುಡುಗರು ಹಿಸ್ಟೀರಿಕಲ್ ಆಗಿಯೇ ಮನೆಯೊಳಗೆ ನುಗ್ಗಿದ್ದರು" ಎಂದು ರಾಕೆಲ್ ಹೇಳಿದ. "ಕೈಯಲ್ಲಿ ಗನ್ ಹಿಡಿದ ಮನುಷ್ಯ ಜಾಕಬ್‌ನನ್ನ ಕರೆದುಕೊಂಡು ಹೋದ" ಎಂದು ಅವರು ಕಿರುಚುತ್ತಲೇ ಇದ್ದರು ಎಂದೂ ಹೇಳಿದ ರಾಕೆಲ್.

ಟ್ರೆವರ್, ರಾಕೆಲ್‌ನ ತೋಳಿನೊಳಗೆ ಕುಸಿಯುತ್ತ ಹತೋಟಿ ಇಲ್ಲದಷ್ಟು ಅತ್ತ. ಆ್ಯರನ್‌ನಂತೂ ಅಡುಗೆ ಕೋಣೆಯೊಳಗೆ ಇದ್ದ ಮೇಜಿನಡಿ ಅಡಗಿ ಕುಳಿತು ತನ್ನ ಕೈಗಳನ್ನು ಕಚ್ಚಿಕೊಳ್ಳುತ್ತಾ ಅಳುತ್ತಿದ್ದ.

"ಹತ್ತಿರದ ಮನೆಯಲ್ಲಿದ್ದ ನನ್ನ ತಂದೆಯನ್ನ ನಾನು ಕರೆದೆ-" ಎಂದು ರಾಕೆಲ್ ಹೇಳ ತೊಡಗಿದ. "ಒಂದು ನಿಮಿಷದ ಒಳಗೇ ಬಂದು ಅವರು ಪ್ಯಾಟಿ ಮತ್ತು ಜೆರ್ರಿಯನ್ನೂ ಕೂಡಲೇ ಬರುವಂತೆ ಕರೆದರು," ಎಂದ.

ಪೊಲೀಸರು ತಮಗೆ ಕರೆ ಬಂದ ಏಳು ನಿಮಿಷದ ಬಳಿಕ ಅಲ್ಲಿಗೆ ಬಂದರು. ಆಫೀಸರ್‌ಗಳು ಆ್ಯರನ್ ಮತ್ತು ಟ್ರೆವರ್‌ನನ್ನು, ಅಪಹರಣ ನಡೆದ ಜಾಗ ತೋರಿಸುವಂತೆ ಮತ್ತು ನಡೆದ ಘಟನೆಯ ಬಗ್ಗೆ ಹೇಳುವಂತೆ ತಿಳಿಸಿದರು.

ಜಾಕಬ್‌ನನ್ನು ಹುಡುಕಲು ತುಂಬಾ ಪೊಲೀಸರು ಮತ್ತು ಅಗ್ನಿಶಾಮಕ ದಳದವರು ಕೂಡಲೇ ಹೊರಟರು. ಸರ್ಚ್‌ಲೈಟ್ ಇರುವಂತ ಹೆಲಿಕಾಪ್ಟರ್ ಮರಗಳ ಮಧ್ಯೆ, ಬಯಲಿಗೆಲ್ಲ ಬೆಳಕು ಚೆಲ್ಲುತ್ತಾ ಹುಡುಕಾಟ ನಡೆಸಿತು. ಮಾರನೆಯ ದಿನವೂ ತ್ವರಿತಗತಿಯಲ್ಲಿ ಹುಡುಕುವುದು ಮುಂದುವರಿಯಿತು.

ಮೊದಲು ಕೆಲ ಗಂಟೆಗಳಲ್ಲಿ ಪತ್ತೆ ಹಚ್ಚಲು ಬಳಸಿದ ನಾಯಿಯು ಜಾಕಬ್‌ನ ವಾಸನೆ ಹಿಡಿದು ಹುಡುಕುತ್ತಾ ಅವನು ಅಪಹರಿಸಲ್ಪಟ್ಟ ಜಾಗೆಯಿಂದ ಸ್ವಲ್ಪ ದೂರದವರೆಗೆ ಹೋಗಿ ನಿಂತಿತು. ಅಲ್ಲಿ ಪೊಲೀಸರಿಗೆ ಟೈರ್ ಗುರುತುಗಳು ಸಿಕ್ಕಿದ್ದರಿಂದ, ಅಪಹರಣಕಾರ ಜಾಕಬ್‌ನನ್ನ ಅಲ್ಲಿಂದಲೇ ವಾಹನದಲ್ಲಿ ಕರೆದೊಯ್ದಿರಬೇಕೆಂದು ತಿಳಿಯಿತು.

ರವಿವಾರ, ಅಕ್ಟೋಬರ್ ೨೨,೧೯೮೯ ರಂದು ಜೌಕಬ್ ವೆಟ್ಟರ್‌ಲಿಂಗ್‌ನ ಅಪಹರಣವಾಗಿತ್ತು. ಸುಮಾರು ಹತ್ತು ವರ್ಷಗಳೇ ಕಳೆದು ಹೋದರೂ ಗಡುತರವಾದ ಹುಡುಕುವಿಕೆ ಮತ್ತು ಪತ್ತೇದಾರಿಕೆ ನಡೆದರೂ... ಜಾಕಬ್‌ನ ಸುಳಿವು ಸಿಕ್ಕಿರಲಿಲ್ಲ.

ಪ್ಯಾಟಿ ಮತ್ತು ಜೆರ್ರಿ ವೆಟ್ಟರ್‌ಲಿಂಗ್‌ರಿಗೆ ಮಾತ್ರ ಆ ದಿನವೇ, ಅವರ ಜೀವನದ ಕೊನೆ ಎನಿಸಿತ್ತು.

ಚೂರಾದ ಕನಸುಗಳು: ಪ್ಯಾಟಿ ವೆಟ್ಟರ್‌ಲಿಂಗ್ ಚುರುಕಾದ, ನೀಲಕಂಗಳ ಹೆಂಗಸು. ನಕ್ಕಳೆಂದರೆ ಅವಳ ಮುಖವಿಡೀ ಬೆಳಗುತ್ತಿತ್ತು.

ಅವಳ ನಗು, ಡಿಂಪಲ್ಸ್ ಮತ್ತು ಸಂತಸ ಸೂಸುವ, (ನಕ್ಕಾಗ ಕಣ್ಣು ನೆರಿಗೆ ಬೀಳುವ) ಕಣ್ಣುಗಳ ತರಹವೆ ಮಗ ಜಾಕಬ್‌ನ ನಗು, ಕಂಗಳು ಇದ್ದುವು.

ದಿನಂಪ್ರತಿ ಜಾಕಬ್‌ನ ಬರುವಿಕೆಗಾಗಿ ಅವಳು ಕಾಯುತ್ತಾಳೆ. ಬೆನ್ನು ಹುರಿ ಮರ್ದನ ಮಾಡುವ ಕ್ಲಿನಿಕ್ ನಡೆಸುವ ಜೆರ‍್ರಿ ವೆಟ್ಟರ್‌ಲಿಂಗ್ ತನ್ನ ನಾಲ್ಕು ಮಕ್ಕಳನ್ನು ಚೆನ್ನಾಗಿ ಸಾಕುತ್ತಿದ್ದ. ಮಕ್ಕಳು ಹುಟ್ಟುವ ಮೊದಲು ಪ್ಯಾಟಿ ಶಾಲಾಶಿಕ್ಷಕಿ ಆಗಿದ್ದಳು. ತಾಯಿ ಆದನಂತರ ತನ್ನ ಪೂರ್ತಿ ಸಮಯ ಮಕ್ಕಳಿಗಾಗಿ ಮೀಸಲಿಡಬೇಕೆಂದು ಕನಸು ಕಂಡಿದ್ದಳು. ಅವಳ ಜೀವನವೂ ಅವಳಿಚ್ಛಿಸಿದಂತೆ ತನ್ನ ಮಕ್ಕಳ ಮತ್ತು ನೆರೆ-ಹೊರೆ ಮಕ್ಕಳನ್ನ ಒಟ್ಟುಗೂಡಿಸಿ ನಾಟಕ ಮಾಡಿಸುವುದರಲ್ಲಿ ಅವರ ಉಡುಪು ತಯಾರಿಸುವುದರಲ್ಲಿ ಕಳೆಯುತ್ತಿತ್ತು.

ಜಾಕಬ್ ಎಲ್ಲದರಲ್ಲಿ ಭಾಗಿಯಾದರೂ ಫಿಷಿಂಗ್(ಮೀನು ಹಿಡಿಯುವುದು) ಮತ್ತು ಐಸ್ ಹಾಕಿ ಅವನ ಪ್ರೀತಿಯ ಚಟುವಟಿಕೆಗಳಾಗಿದ್ದುವು. ಅವನ ತಂದೆ-ತಾಯಿಯರು ಅವನನ್ನು ಕರೆದುಕೊಂಡು ಹೋಗುವುದರಲ್ಲಿ ಲೆಕ್ಕವಿಲ್ಲದಷ್ಟು ಗಂಟೆಗಳನ್ನ ಕಳೆದದ್ದಿದ್ದರು.

ಜಾಕಬ್‌ನ ಗೆಳೆಯರು ಮತ್ತು ಮನೆಯವರ ಪ್ರಕಾರ-ಬೆಳಕು ಸೂಸುವ ಅವನ ಕಂಗಳು ಪ್ರೀತಿಸಲ್ಪಟ್ಟಿದ್ದಕ್ಕೆ ಮತ್ತು ಭರವಸೆವುಳ್ಳವನಾದದ್ದಕ್ಕೆ ಪ್ರತೀಕವಾಗಿತ್ತು. ಅವನಲ್ಲಿ ಇತರರಿಗಾಗಿ ತುಂಬಾ ಪ್ರೀತಿ ಮತ್ತು ಅನುಕಂಪ ವಿತ್ತು. ಅದನ್ನು ಪ್ರೀತಿಯಿಂದ, ವಿಶ್ವಾಸದಿಂದ ಶಿಸ್ತಿನಿಂದ ಬೆಳೆಸಬೇಕಾಗಿತ್ತು. ಇಲ್ಲದಿದ್ದರೆ ಅದೆಲ್ಲಾ ಕಾಲಕ್ರಮೇಣ ಮುರುಟಿ ಹೋಗುವ ಸಾಧ್ಯತೆ ಇತ್ತು ಎನ್ನುತ್ತಾರೆ ಅವನ ತಾಯಿ-ತಂದೆಯರು.

ಉತ್ತರವಿಲ್ಲದ ಜೀವನ:

ಇದೊಂದು ವಿಚಿತ್ರ ರೀತಿಯ ಅಪಹರಣ ಎಂದು ಮೊದಲ ದಿನವೇ ಪರಿಣಿತರು ಮನಗಂಡಿದ್ದರು.

ಮೊದಲನೆದಾಗಿ, ಇದುವರೆಗೆ ನಮೂದಿಸಲ್ಪಟ್ಟ ಅಪಹರಣ ಕೇಸುಗಳಲ್ಲಿ ಇದು ವಿಚಿತ್ರ ರೀತಿಯದ್ದಾಗಿತ್ತು, ಎರಡನೆಯದಾಗಿ, ಅಪಹರಣಕಾರ ಉಪಯೋಗಿಸಿದ್ದ ಗನ್, ಮೊಗವಾಡ ಮತ್ತು ಅವನು ತನ್ನ ಬಲಿಪಶುವನ್ನಾಗಿ ಆರಿಸಿದ ಹುಡುಗ ಎಲ್ಲ ಬೇರೆ ರೀತಿಯದ್ದಾಗಿತ್ತು.

ಅಚ್ಚರಿಗೊಳಿಸುವ ಪ್ರಶ್ನೆಯೆಂದರೆ, ಅವನೇಕೆ ಟ್ರೆವರ್ ಮತ್ತು ಆ್ಯರನ್‌ನನ್ನು ಆರಿಸದೆ ಜಾಕಬ್‌ನನ್ನೆ ಅಪಹರಿಸಿದ್ದು? ಆ ರಾತ್ರಿ ಅಪಹರಣಕಾರ ಒಂದು ರೀತಿಯ ಗುರಿ ಹೊಂದಿದ್ದ, ಯಾಕೆ? ಎಂದು ಪ್ಯಾಟಿ ವೆಟ್ಟರ್‌ಲಿಂಗ್ ದುಃಖತಪ್ತಳಾಗುತ್ತಾಳೆ.

ಹತ್ತು ವರ್ಷಗಳವರೆಗೆ ಈ ಪ್ರಶ್ನೆಗಳು ಆ ಮನೆಯವರನ್ನ ಕಾಡಿತ್ತು. ಮೊದಲೇ ಅಪಹರಣಕಾರ ಜಾಕಬ್‌ನನ್ನ ಎಲ್ಲಿಯಾದರೂ ಕಂಡಿದ್ದನಾ ? ಯಾರಿಗೂ ತಿಳಿಯದಂತೆ ಜಾಕಬ್‌ನ ವಿಚಾರಗಳೇನಾದರೂ ಅವನಿಗೆ ತಿಳಿದಿತ್ತೆ ? ಅವರು ಆ ದಿನ ರಸ್ತೆಯಲ್ಲಿ ಬರುವುದೂ ಮೊದಲೆ ತಿಳಿದಿತ್ತೆ ? ಅಥವಾ ಎಲ್ಲ ಕಾಕತಾಳೀಯವೊ ?

ಜಾರ್ಲಿಗ್ರಾಫ್ (ಆಗಿದ್ದ ಷರೀಫ್) ಸುಮಾರು ೩೬ ವರ್ಷಗಳು ಆ ಏರಿಯಾದಲ್ಲಿದ್ದವರು. ಹೇಳುವ ಪ್ರಕಾರ, ಅಪಹರಣ ನಡೆದ ಜಾಗೆ ಇರುವುದು ಕೂಡ ಅವರಿಗೇ ಗೊತ್ತಿರಲಿಲ್ಲವಂತೆ. ಅಂಥದ್ದರಲ್ಲಿ ಆ ಅಪಹರಣಕಾರನಿಗೆ ಜಾಗೆ ಮತ್ತು ಹುಡುಗನ ಬಗ್ಗೆ ನಿಖರವಾಗಿ ತಿಳಿದಿತ್ತು. ಆದ್ದರಿಂದಲೇ ಅಪಹರಣ ಪೂರ್ವಯೋಜಿತ.

ಪ್ಯಾಟ ಮತ್ತು ಜೆರ್ರಿ ಯಾವುದನ್ನು ಒಪ್ಪಲು ಸಿದ್ಧರಿರಲಿಲ್ಲ. (ಅನೇಕ ವರ್ಷಗಳು) ಅವರಿಗೆ ಬಂದಂಥ ಹಲವಾರು ಯೋಜನೆಗಳ ಪೈಕಿ ಒಂದು ಮಾತ್ರ ನಿಜವೆನಿಸುವಂತಿತ್ತು. ಕದಿಯಲ್ಪಟ್ಟ ದಿನ ಬೆಳಗ್ಗೆ ಜಾಕಬ್ ಫಿಷಿಂಗ್ ಮುಗಿಸಿ ಐಸ್ ರಿಂಕ್‌ಗೆ ಹೋಗಿದ್ದ. ಅವನು ಅಲ್ಲಿ ಆಡುವುದನ್ನ ಸುಮಾರು ೨೦ಜನರು ನೋಡಿದ್ದರು. ಅನೇಕ ಇಂಥ ಹುಡುಗರು ಅಮುತ್ತಿದ್ದರೂ, ಒಮ್ಮೆ ಜೆರ್ರಿಗೆ ವಿಚಿತ್ರ ಹೆದರಿಕೆ ಆಗಿತ್ತು.

''ಏನೋ ಒಂದು ರೀತಿ ಹೆದರಿಕೆ ಮತ್ತು ಅಪಾಯವಿದೆ ಎಂದು ಆಗ ಅನಿಸಿತು''- ಎನ್ನುತ್ತಾರೆ ಜೆರ್ರಿ. ಸುತ್ತಲೂ ಗಮನಿಸಿಯೂ ಇದ್ದೆ. ಜಾಕಬ್ ಕಣ್ಣಿಗೆ ಬಿದ್ದನಂತರವೇ ಸಮಾಧಾನವಾಗಿತ್ತು. ಅದೊಂದು ವಿಚಿತ್ರ ಅನುಭವ ಎಂದು ಜೆರ್ರಿ ನೆನಪಿಸಿಕೊಳ್ಳುತ್ತಾರೆ.

ಬಹುಶಃ ಆ ಅಪಹರಣಕಾರ ಅಲ್ಲಿ ಜಾಕಬ್‌ನನ್ನು ಕಂಡು ಮೆಚ್ಚಿ, ಕದಿಯಲೆಂದು ಹಿಂಬಾಲಿಸಿರಬಹುದು ಎಂದು ಅವರು ಭಾವಿಸಿಕೊಳ್ಳುತ್ತಾರೆ. ಮೊದಲ ವರ್ಷ ಸುಮಾರು ೨೦,೦೦೦ ಸುಳಿವುಗಳು ಸಿಕ್ಕಿ ಅವನ್ನು ಪರೀಕ್ಷಿಸಿಯೂ ಆಗಿತ್ತು ಮತ್ತೂ ಕೆಲ ಸುಳಿವೂ ಸಿಕ್ಕಿತ್ತು. ಇವತ್ತೂ ಜಾಕಬ್‌ನ ಕೇಸು ಚಾಲನೆಯಲ್ಲಿದೆ.

ಜಿಮ್ ಕೋಸ್ಟೆಬಾ, ಹೊಸ ಷರೀಫ್ ''ಈ ಕೇಸಿನ ಬಗ್ಗೆ ನಾನು ಯೋಚಿಸದ ದಿನವಿಲ್ಲ. ನಾವು ಜಾಕಬ್‌ನ ಪತ್ತೆ ಮಾಡುವ ವಿಚಾರಕ್ಕೆ ಬಿಡುವುದಿಲ್ಲ, ಹುಡುಕುತ್ತೇವೆ.'' ಎಂದು ಹೇಳುತ್ತಾರೆ.

ಹಾರ್ಲೈಕೆಯಲ್ಲಿನ ಏಳು-ಬೀಳು ವೆಟ್ಟರ್ ಲಿಂಗ್‌ರಿಗೆ ಉಸಿರಿನಷ್ಟೆ ಪರಿಚಯವಾಗಿದೆ ಮತ್ತು ಕ್ರಮಬದ್ಧವಾಗಿದೆ. ಕೆಲವು ವರ್ಷಗಳ ಹಿಂದೆ ಮೈ ನಡುಗಿಸುವಂಥ ಕನಸಿನಿಂದಾಗಿ ಪ್ಯಾಟ ಮುಂಜಾನೆ ೩ ಗಂಟೆಗೇ ಎಚ್ಚರಗೊಂಡಿದ್ದಳು. ಕನಸಿನಲ್ಲಿ ಅವಳು ಮಗನನ್ನು ಹೋಟೆಲಿನಲ್ಲಿ ಕಂಡದ್ದು ಸುಂದರ ಯುವಕನಾಗಿದ್ದ ಜಾಕಬ್ ಅವಳೊಡನೆ ಮಾತನಾಡಲಿಚ್ಚಿಸಿದ್ದು ಅಲ್ಲಿಯೇ ಅಪಹರಣಕಾರನಿದ್ದುದು. ಮಧ್ಯದಲ್ಲೆ ಎಚ್ಚರಾದದ್ದು. ಇದನ್ನೆಲ್ಲಾ ಪ್ಯಾಟ ಮಾರನೇ ದಿನ ರಾಬರ್ಟ್ ಲೀಗೆ ಹೇಳಿದ್ದಳು. ೧೯೯೦ರಲ್ಲಿ ಕಳೆದುಹೋದ ಮಕ್ಕಳ ಹುಡುಕುವಿಕೆಗಾಗಿ ಅವಳು ಮತ್ತು ಜೆರ್ರಿ, ಜಾಕಬ್ ವೆಟ್ಟರ್ ಲಿಂಗ್ ಫೌಂಡೇಶನ್ ಒಂದನ್ನು ಸ್ಥಾಪಿಸಿದ್ದರು. ಫೌಂಡೇಶನ್‌ನ ಡೈರೆಕ್ಟರ್ ಲೀ ಹೇಳುವ ಪ್ರಕಾರ, ಪ್ಯಾಟ ಹೇಳಿದ ವಿಷಯ ಯೋಚಿಸುವಂತಿತ್ತು. ಆ ಕನಸು ಜೀವಂತವಾಗಿತ್ತೆಂಬುದಕ್ಕೆ ಸಾಕ್ಷಿಯೂ ಸಿಕ್ಕಿತ್ತು.

ಊಟದ ತರುವಾಯ ಅವರಿಬ್ಬರೂ ಫೌಂಡೇಶನ್ ಆಫೀಸಿಗೆ ಹೋದಾಗ, ಅಲ್ಲಿನ ಕೆಲಸಗಾರ್ತಿ ಆಮಾ ಹಾನ್‌ಸೆನ್- ನೆನ್ನೆ ರಾತ್ರೆ ವಿಚಿತ್ರ ರೀತಿಯ ಫೋನ್ ಕಾಲ್ ಬಂದಿತ್ತು'' ಎಂದು ಹೇಳುತ್ತಾ, ಆನ್ಸರಿಂಗ್ ಮೆಷೀನ್‌ನಲ್ಲಿ ರೆಕಾರ್ಡ್ ಆದ ವಿಷಯವನ್ನ ಪುನಃ ಕೇಳಿ ಎಂದು ಸ್ವಿಚ್ ಆನ್ ಮಾಡುತ್ತಾಳೆ. ಅದರಲ್ಲಿ ಆಗ ಜಾಕಬ್ ವೆಟ್ಟರ್ ಲಿಂಗ್ ಮಾತಾಡಿದ್ದೇನೆ. ನಾನಿನ್ನೂ ಬದುಕಿದ್ದೇನೆ ಎಂದು ನಿಮಗೆ ತಿಳಿಸಬಯಸುತ್ತೇನೆ'' ಎಂದಿತ್ತು.

ಆ ಕಾಲ್ ನ್ಯೂಯಾರ್ಕ್ ನಗರದ್ದೆಂದೂ, ಗಂಟೆ ಆಗ ಬೆಳಗಿನ ಜಾವ ೩ ಗಂಟೆ ಎಂದು ಅವರಿಗೆ ಗೊತ್ತಾಯಿತು.

ಹತ್ತು ವರ್ಷಗಳ ಬಳಿಕ: ಅಪಹರಣದ ಘಟನೆಯ ಅನಂತರ ಟ್ರೆವರ್ ವೆಟ್ಟರ್‌ಲಿಂಗ್ ತಂದೆ -ತಾಯಿಯರ ಕೋಣೆಯಲ್ಲಿ ನೆಲದ ಮೇಲೆ ಮಲಗುತ್ತಿದ್ದ. ನಿದ್ದೆಯಲ್ಲೂ ಹೆದರಿ ಎದ್ದು ಬಿಡುತ್ತಿದ್ದ. ಈಗ ಬಹಳ ಬದಲಾಗಿದ್ದಾನೆ. ಒಬ್ಬನೇ ಇರುತ್ತ, ಕಾಲೇಜಿಗೂ ಹೋಗುತ್ತಿದ್ದಾನೆ.

ಎತ್ತಲೋ ನೋಡುತ್ತಾ , ಅವನು ಹೇಳುತ್ತಾನೆ. ಜಾಕಬ್ ಹೊರಗೆಲ್ಲೋ ಹೋಗಿರಬೇಕೆಂದು ! ಅವನ ಬ್ರೈನ್ ವಾಷ್ ಆಗಿರಬಹುದು. ನಾನೀಗ ಕಂಡರೂ... ಅವನನ್ನು ಗುರುತಿಸಬಲ್ಲೆನೆಂದು ಹೇಳಲಾರೆ- ಎಂದೂ ಹೇಳುತ್ತಾನೆ.

ಜಾಕಬ್‌ನ ಪತ್ತೆ ಮಾಡುವುದು ಸುಲಭವೇನಿಲ್ಲ. ಸೆಕ್‌ಕೈವನ್‌ನ ನಿವೃತ್ತ ಅಧಿಕಾರಿ ನೇಲ್ ಹೇಳುವಂತೆ- ಅಪಹರಣ ಮಾಡಲ್ಪಟ್ಟ ಮಕ್ಕಳಲ್ಲಿ ಕೆಲವರು ಮೂರು ದಿನಗಳಲ್ಲೇ ಜೀವಂತ ಸಿಗುತ್ತಾರೆ, ಉಳಿದವರು ಸಿಗುವುದೇ ಇಲ್ಲ.

ಆದರೆ ಪ್ಯಾಟಿ, ತನ್ನ ಮಗನ ವಿಷಯ ಪೂರ್ತಿ ತಿಳಿಯುವವರೆಗೆ ಸುಮ್ಮನಿರುವವಳಲ್ಲ. ಜತೆಗೆ ಆ ಭಯಂಕರ ರಾತ್ರಿಯಿಂದಾಗಿ, ಅಪಹರಣದಿಂದಾಗಿ ಮಕ್ಕಳನ್ನು ಅಮೇರಿಕಾದಲ್ಲಿ ಕಳಕೊಂಡದ್ದನ್ನ ಪತ್ತೆ ಹಚ್ಚುವ ಸಲುವಾಗಿ ಜಾಕಬ್ ವೆಟ್ಟರ್‌ಲಿಂಗ್ ಪ್ರತಿಷ್ಠಾನದ ಉದಯವಾಗಿದೆ. ಅಲ್ಲಿಯ ಕೆಲಸಗಾರರು- ಸುದ್ದಿಸಂಗ್ರಹಿಸುವಲ್ಲಿ ಮತ್ತು ಮಾನಸಿಕ ಧೈರ್ಯ ತುಂಬುವಲ್ಲಿ ಬಹಳ ಸಹಾಯ ಮಾಡುತ್ತಿದ್ದಾರೆ.

ಒಂದು ಕಾಲದಲ್ಲಿ ನಾಚಿಕೆ ಸ್ವಭಾವದವಳಾಗಿದ್ದ ಪ್ಯಾಟಿ, ಈಗ ಪ್ರತಿಷ್ಠಾನದ ಶಕ್ತಿ ಮತ್ತು ಬೆನ್ನೆಲುಬಾಗಿದ್ದಾಳೆ. ದೇಶಾದ್ಯಂತ ಸಂಚರಿಸುತ್ತಾ ಅವಳು ಕಾನೂನು ಕಾಪಾಡುವ ಸಂಸ್ಥೆಗಳಿಗೆ -ಮಗು ಕಾಣೆಯಾದ ಕೂಡಲೇ ಕಾರ್ಯೋನ್ಮುಖರಾಗಬೇಕು. ಅಮೂಲ್ಯ ಕ್ಷಣಗಳನ್ನ ಹಾಳುಮಾಡದೆ ಪ್ರತಿಯೊಂದು ಜಾಗದಲ್ಲೂ ಹುಡುಕಬೇಕು '' ಎಂದು ತಿಳಿಸುತ್ತಾಳೆ. ತನ್ನಿಂದಾದ ಸಹಾಯ ಮಾಡುತ್ತಾಳೆ.

ಶಾಲಾಮಕ್ಕಳನ್ನು ಆಗಾಗ್ಗೆ ಕಾಣುತ್ತಾ ಧೈರ್ಯತುಂಬುತ್ತಾಳೆ ನೀವು ಯಾರಿಗೂ ಹೆದರಬೇಕಾಗಿಲ್ಲ, ಅಪರಿಚಿತರು ಅಥವಾ ನಿಮಗೆ ಮುಜುಗುರವನ್ನುಂಟು ಮಾಡುವವರು ನಿಮ್ಮನ್ನು ಸಂಪರ್ಕಿಸಿದಾಗ ಮಾತ್ರ ಎಚ್ಚರವಾಗಿರಿ.

ಒಬ್ಬ ತಾಯಿಯ ಹಾರೈಕೆ: ವೆಟ್ಟರ್‌ಲಿಂಗ್‌ರು ಈಗಲೂ ಅದೇ ಮನೆಯಲ್ಲಿದ್ದಾರೆ. ಫೋನ್ ನಂಬರನ್ನೂ ಅದೇ ಇಟ್ಟುಕೊಂಡಿದ್ದಾರೆ. ಜಾಕಬ್‌ಗೆ ನೆನಪಿರುವಂತಹ ಮನೆ, ನಂಬರ್, ಬದಲಾಯಿಸದೆ ಇರುವ ಉದ್ದೇಶ. ಅವನು ಅವರನ್ನು ಸಂಪರ್ಕಿಸಲಿ ಎಂದು! ಪ್ರತಿ ಕ್ರಿಸ್‌ಮಸ್ ಸಂದು ಜಾಕಬ್‌ನ ಸ್ಟಾಕಿಂಗ್‌ನನ್ನು ಬೆಂಕಿಗೂಡಿನ ಬಳಿ ಇರುವ ಕಟ್ಟೆಗೆ ಮೇಲೆ ನೇತುಹಾಕುತ್ತಾಳೆ. ಏನಾದರೂ ಪವಾಡ ನಡೆದಾದರೂ ಅವನು ಹಿಂತಿರುಗಿ ಬರಲೆಂದು ಹಾರೈಸುತ್ತಾ ರಾತ್ರಿ ಎಲ್ಲಾ ಕ್ರಿಸ್‌ಮಸ್ ದಿನ ದೀಪ ಉರಿಸುತ್ತಾರೆ.

ಬೀದಿಯಲ್ಲಿ, ವಿಮಾನ ನಿಲ್ದಾಣಗಳಲ್ಲಿ, ರೈಲುಗಳಲ್ಲಿ ಸಂಚರಿಸುವಾಗ ಸಿಗುವ ಯುವಕರ ಮುಖಗಳಲ್ಲಿ ಪ್ಯಾಟಿ ಮಗನನ್ನು ಹುಡುಕುತ್ತಾಳೆ. ವಾಷಿಂಗ್‌ಟನ್ನಿನ ದಾರಿಗಳಲ್ಲಿ ಡ್ರೈವ್ ಹೋಗುವಾಗಲೂ, ಕೆಲಸಗಾರರ ಮಧ್ಯೆ ಕೂಡ ೨೧ ವರ್ಷದ ಆರಡಿ ಎತ್ತರದ, ಕಂದು ಕೂದಲಿದ್ದು ನೀಲಿಕಂಗಳ ಯುವಕನನ್ನು ಅರಸುತ್ತಾಳೆ.

ಅವನೆಷ್ಟು ಬದಲಾಗಿದ್ದರೂ.. ಯಾವ ಸ್ಥಿತಿಯಲ್ಲಿದ್ದರೂ, ಅವನ ಸುಂದರ ನಗು ಮಾಸಿದರೂ, ಅವಳು ಗುರುತು ಹಿಡಿಯಬಲ್ಲಳು, ಮತ್ತೆ ಅವನನ್ನ ಮೊದಲಿನಂತೆ ಮಾಡಬಲ್ಲೆನೆಂಬ ಆತ್ಮವಿಶ್ವಾಸ ಅವಳಿಗಿದೆ.

ಅವನು ಬದುಕಿದ್ದರೆ ತಮ್ಮನ್ನೇಕೆ ಸಂಪರ್ಕಿಸುತ್ತಿಲ್ಲವೆಂಬ ಪ್ರಶ್ನೆ ಅವಳನ್ನ ಕಾಡುತ್ತಿದೆ. ಬದುಕಿಗಾಗಿ ಏನೆಲ್ಲಾ ದೂಡುತ್ತಿದ್ದಾನೋ? ಅವನು... ತಾನು ಹತ್ತು ವರ್ಷಗಳಲ್ಲಿ ಬದಲಾದ ಬಗೆಗೇ ವ್ಯಾಕುಲನಾಗಿ, ಗೆಳೆಯರು, ತಾಯಿತಂದೆಯರಿಂದ ದೂರಾಗಿದ್ದಾನಾ ? ಏನೇ ಆಗಿದ್ದರೂ ಅವರು ಅವನ ಮಗನೇ...

''ಮೊದಲಿನಂತೆಯೇ , ನಾವು ನಿನ್ನನ್ನು ಪ್ರೀತಿಸುತ್ತಿದ್ದೇವೆ. ನಿನಗೇನಾದರೂ... ಆಗಿರಲಿ, ಎಲ್ಲೇ ನೀನಿರಲಿ, ಏನೇ ಮಾಡುತ್ತಿರಲಿ..ನಿನ್ನ ಮೇಲಿನ ಪ್ರೀತಿ ಕಡಿಮೆಯಾಗಿದೆಯೆಂದು ತಿಳಿಯಬೇಡ. ನಮ್ಮನ್ನು ಸಂಪರ್ಕಿಸು, ಅಥವಾ ಮನೆಗೆ ಬಾ.. ಹೊಸ ಕನಸುಗಳನ್ನ ನಾವು ಕಟ್ಟೋಣ''- ಎಂಬ ಮಾತುಗಳು ಜಾಕಬ್ ಕೇಳುವಂತಾಗಲಿ ಎಂದು ಪ್ಯಾಟಿ ಬಯಸುತ್ತಾಳೆ.

ಕೌಟುಂಬಿಕ ವೈಷಮ್ಯವನ್ನು ಬಗೆಹರಿಸುವುದು ಹೇಗೆ ?

ಸವಿತಾ ಪ್ರಭಾಕರ
ನಂ.೬೬೮, ೧೧ನೇ ಕ್ರಾಸ್,
ಗೋಕುಲಂ, ೩ನೇ ಹಂತ,
ಮೈಸೂರು-೫೭೦ ೦೦೨

೧೯೯೫ರಲ್ಲಿ ಜೇನ್ ಹ್ಯಾಲಿಯವರ ತಂದೆ ತೀರಿಕೊಂಡರು. ಆ ಮುನ್ನ ಅವರು ತಮ್ಮ ಆಸ್ತಿಯನ್ನು ಅಸಮವಾಗಿ ತಮ್ಮ ಮೊಮ್ಮಕ್ಕಳಿಗೆ ಭಾಗ ಮಾಡಿದ್ದರು. ಹೀಗಾಗಿ ಅವರ ಪ್ರೀತಿಪಾತ್ರಳಾದ ಲೀಸಾಗೆ ಸಿಂಹಪಾಲು ದೊರೆಯಿತು. ನಾಲ್ಕು ಮಕ್ಕಳಿಗೂ ಸಮಪಾಲು ದೊರೆಯುವಂತೆ ಮತ್ತೆ ಹೊಸದಾಗಿ ಭಾಗ ಮಾಡಿಕೊಡಬೇಕೆಂದು ಲೀಸಾಳಿಗೆ ಅವಳ ತಾಯಿ ಬಲವಂತ ಮಾಡಿದಳು. ಆದರೆ ಲೀಸಾ ಇದಕ್ಕೆ ಒಪ್ಪಲಿಲ್ಲ. ದಾದಿಯಾಗಿದ್ದ ೩೪ ವರ್ಷದ ಲೀಸಾಳಿಗೆ ಎರಡು ಮಕ್ಕಳಿದ್ದು ಆಕೆಯ ಪತಿ ನಿರುದ್ಯೋಗಿಯಾಗಿದ್ದರಿಂದ ತನಗೆ ನಿಜಕ್ಕೂ ಹಣದ ಅಗತ್ಯವಿದೆಯೆಂದು ತನ್ನ ತಾಯಿಗೆ ತಿಳಿಸಿಬಿಟ್ಟಳು.

ಇದಕ್ಕೆ ಜೇನ್‌ಳ ಪ್ರತಿಕ್ರಿಯೆ ಒರಟಾಗಿತ್ತು. ಈಕೆ ಎಷ್ಟು ಸಿಟ್ಟುಗೊಂಡಿದ್ದಳೆಂದರೆ ಮಗಳ ಜೊತೆ ಯಾವ ಸಂಪರ್ಕಕ್ಕೂ ಮುಂದಾಗಲಿಲ್ಲ.

ಲೀಸಾ ತನ್ನ ತಾಯಿಯ ಮನೆಯ ಹತ್ತಿರವೇ ವಾಸಿಸುತ್ತಿದ್ದರಿಂದ ಅಲ್ಲಿಗೆ ಹೋಗಿ ಕ್ಷಮಾಪಣೆ ಕೇಳಿಕೊಳ್ಳಲು ಪ್ರಯತ್ನಿಸಿದಳು. ಆದರೆ ಜೇನ್ ಯಾವುದಕ್ಕೂ ಒಪ್ಪಲಿಲ್ಲ. ಮತ್ತೆ ಕೆಲವು ವಾರಗಳವರೆಗೆ ಮಗಳ ದೂರವಾಣಿಯ ಕರೆಗಳಿಗೂ ಓಗೊಡಲಿಲ್ಲ. ಲೀಸಾಳಿಗೆ ಈ ಅಗಲಿಕೆ ತುಂಬಾ ನೋವು ಕೊಟ್ಟವು. ತಾಯಿ ಮಗಳು ಎಂದೂ ತುಂಬಾ ಆಪ್ತರಾಗಿದ್ದವರು. ಇಬ್ಬರಿಗೂ ತೋಟಗಾರಿಕೆಯಲ್ಲಿ ಒಲವಿತ್ತು. ಲೀಸಾಳ ಮಕ್ಕಳೂ ಅಜ್ಜಿಯನ್ನು ತುಂಬಾ ಪ್ರೀತಿಸುತ್ತಿದ್ದರು.

ಹೀಗೆ ಕೆಲವು ದಿನಗಳ ಬೇರ್ಪಡಿಕೆಯ ಅನಂತರ ಜೇನ್ ಒಂದು ದಿವಸ ಮಗಳಿಗೆ ದೂರವಾಣಿಯ ಕರೆ ನೀಡಿ ತೋಟಗಾರಿಕೆಯ ಬಗ್ಗೆ ಮಾತನಾಡಿ ಅವಳನ್ನು ಆಶ್ಚರ್ಯಗೊಳಿಸಿದಳು. ತಾಯಿಯ ಧ್ವನಿ ಕೇಳಿದ ಆನಂದದಿಂದಾಗಿ ಅಗಲಿಕೆಯ ಮುನಿಸು ಥಟ್ಟನೆ ಮರೆಯಾಯಿತು. ಅಗಲಿಕೆಯಿಂದ ಉಂಟಾಗಿದ್ದ ಅತೃಪ್ತಿಯನ್ನು ಲೀಸಾ ಮತ್ತೆ ಜ್ಞಾಪಿಸಿಕೊಂಡಳು.

ಇಬ್ಬರೂ ತಮ್ಮ ವೈಷಮ್ಯದ ಬಗ್ಗೆ ಚರ್ಚಿಸುವ ಬದಲು ಭಾವನೆಗಳ ಮೂಲಕ ಬಾಂಧವ್ಯವನ್ನು ಉತ್ತಮಗೊಳಿಸಲು ಪ್ರಯತ್ನಿಸಿದರು. ಅವರ ಭಿನ್ನಾಭಿಪ್ರಾಯವನ್ನು ಪರಿಹರಿಸಿಕೊಳ್ಳಲು ಈ ಹೆಜ್ಜೆ ಅಗತ್ಯವಾಗಿತ್ತು. ''ಹಲವು ಅಂಶಗಳು ಒಟ್ಟಾದಾಗಲೇ ಉಪಶಮನದ ಪ್ರಾರಂಭವಾಗುವುದು. ಮೊದಲೆರಡು ಅಂಶಗಳು : ಪ್ರಕೃತ ವೈಷಮ್ಯದ ಬಗ್ಗೆ ಅಸಮಾಧಾನ ಮತ್ತು ಬದಲಾವಣೆಯ ಬಗ್ಗೆ ಉತ್ಸುಕತೆ.

ವೇದನೆಯನ್ನುಂಟುಮಾಡುವ ಇಂಥ ಕೌಟುಂಬಿಕ ವೈಷಮ್ಯವನ್ನು ಕರಗಿಸಲು ಒಂದಿಷ್ಟು ದೃಢ ಮನಸ್ಸು ಬೇಕಾಗುತ್ತದೆ. ಪ್ರಯತ್ನದಿಂದ ಉಪಶಮನಕ್ಕೆ ಹಲವು ವರ್ಷಗಳೇ ಬೇಕಾಗಬಹುದು. ಮರೆತುಬಿಟ್ಟ ಸಾಲ, ಒಂದು ಬೇಜವಾಬ್ದಾರಿ ಹೇಳಿಕೆ, ಕೊಟ್ಟ ಮಾತನ್ನು ಮುರಿಯುವುದು... ಹೀಗೆ ಬೇರೆ ಬೇರೆ ಕಾರಣಗಳು ಒಡಕನ್ನು ಹುಟ್ಟು ಹಾಕಬಹುದು. ಆದರೂ ಸಣ್ಣಪುಟ್ಟ ಮಗೋಪಾಯಗಳಿಂದಲೇ ಈ ವೈಷಮ್ಯ

ಜನವರಿ ೨೦೦೦ದ ರೀಡರ್ಸ್ ಡೈಜೆಸ್ಟಿನಲ್ಲಿ ಪ್ರಕಟವಾದ ಪಮಿಲಿಬೋಡ ಅವರ 'ಹೌಟು ಹೀಲ್ ಎ ಫ್ಯಾಮಿಲಿ ಫ್ಯೂಡ್' ಲೇಖನದ ಅನುವಾದ

ವನ್ನು ಕರಗಿಸಿಕೊಳ್ಳಬಹುದೆಂದು ಕಾರ್ಟ್ ಮತ್ತು ಇತರ ಅನುಭವಶಾಲಿಗಳು ಹೇಳುತ್ತಾರೆ.

ಇಂಥವನ್ನು ಎದುರಿಸುವುದಕ್ಕೆ ಸಾಕಷ್ಟು ಆತ್ಮ ಸಂಯಮ, ಧೈರ್ಯ ಮತ್ತು ಪ್ರಯತ್ನಗಳು ಬೇಕಾಗುತ್ತವೆ ಎನ್ನುವ ಕಾರ್ಟ್ ಇವು ಫಲಿಸುತ್ತವೆ ಎಂದು ಹೇಳುತ್ತಾರೆ.

ಆದ್ದರಿಂದ ನೀವು ಕುಟುಂಬ ಸದಸ್ಯರಲ್ಲಿ ಮತ್ತೆ ಒಂದಾಗಬೇಕಾದರೆ ಈ ಕೆಳಗಿನ ಮೂಲತತ್ವಗಳು ನಿಮಗೆ ಮಾರ್ಗದರ್ಶಿಯಾಗುತ್ತವೆ:

೧. ಸಮಸ್ಯೆಯನ್ನು ಅವಲೋಕಿಸಿ: ಕುಟುಂಬದ ಒಡಕಿಗೆ ಏಕೈಕ ವ್ಯಕ್ತಿ ಕಾರಣವಾಗುವುದು ವಿರಳ. ''ಹೆಚ್ಚಿನ ವಿವಾದಗಳಲ್ಲಿ ತಪ್ಪುಗಳ ಹೊಣೆಗೆ ಸರ್ವರೂ ಸಮಭಾಗಿಯಾಗಿರುತ್ತಾರೆ'' ಎನ್ನುತ್ತಾರೆ ರೆನಾನಾ ಬ್ರೂಕ್ಸ್ ಎಂಬ ಚಿಕಿತ್ಸಕರು.

ಆದ್ದರಿಂದ ಯಾವುದೇ ಹಗೆತನ ಕೊನೆ ಮುಟ್ಟಬೇಕಾದರೆ ಬೇರೆಯವರ ಅಭಿಪ್ರಾಯವನ್ನೂ ಗಮನಿಸಬೇಕು. ಜೊತೆಗೆ ನಿಮ್ಮ ತಪ್ಪುಗಳನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳಬೇಕು.

ಮ್ಯಾಕ್ಸ್ ಜಾನ್‌ಸನ್ ತನ್ನ ತಾರುಣ್ಯದಲ್ಲಿದ್ದಾಗ ಅವನ ತಾಯಿ ಚರ್ಚಿನ ಉತ್ಸಾಹೀ ಸದಸ್ಯೆಯಾಗಿದ್ದಳು. ಆ ಸಮಯದಲ್ಲಿ ತಾಯಿಯ ಧಾರ್ಮಿಕ ಉತ್ಸುಕತೆಯ ಭಾವನೆಗಳನ್ನು ಜಾನ್‌ಸನ್ ಹಂಚಿಕೊಳ್ಳಲಿಲ್ಲ. ಹಾಗೂ ಆಕೆ ಸೇವೆಗೆಂದು ಅವನನ್ನು ಕರೆದಾಗಲೂ ಅವನು ಸಿಟ್ಟುಗೊಳ್ಳುತ್ತಿದ್ದ. ಕೊನೆಗೆ ತಾಯಿಯ ಮನೆಯಿಂದ ಹೊರಗೆ ಬಂದವನು ಹಲವು ವರ್ಷಗಳವರೆಗೆ ತಾಯಿಯ ಸಂಪರ್ಕವನ್ನೇ ಇಟ್ಟುಕೊಳ್ಳಲಿಲ್ಲ.

ಆದರೆ ಮದುವೆಯಾಗಿ ಮಗುವಿನ ತಂದೆಯಾದ ಬಳಿಕ ಅವನಿಗೆ ಜನ್ಮದಾತರ ಜವಾಬ್ದಾರಿ ಮತ್ತು ಸ್ವಯಂ ಸಂದೇಹಗಳ ಬಗ್ಗೆ ಅರಿವಾಯಿತು. ಅವನು ಯಾವುದೇ ರೀತಿಯ ಕುಂದುಕೊರತೆಗಳಿಲ್ಲದ ತಂದೆ ಎನಿಸಿಕೊಳ್ಳಲು ಆಶಿಸಿದ್ದ. ಆದರೆ ಮುಂದುವರಿಯುವುದಕ್ಕೆ ಒಂದಿಷ್ಟು ಅಪನಂಬಿಕೆಯಾಯಿತು. ಅವನು ತನ್ನ ಸ್ವಂತ ಅನುಭವದಿಂದಾಗಿ ತನ್ನ ತಾಯಿಯನ್ನು ಮೆಚ್ಚಿಕೊಳ್ಳುವಂತಾಯಿತು.

ಈಗ ತಾನು ತನ್ನ ಮಗುವನ್ನು ಬೆಳೆಸುವಾಗ ಅನುಭವಿಸುತ್ತಿರುವ ಯೋಚನೆ ಅನುಮಾನಗಳನ್ನೇ ಆಗ ತನ್ನ ತಾಯಿಯೂ ಅನುಭವಿಸಿದಳು ಎಂಬುದನ್ನು ಗ್ರಹಿಸಿದ. ಧಾರ್ಮಿಕ ಶ್ರದ್ಧೆ ವ್ಯಕ್ತಿಯನ್ನು ಸ್ಥಿರ ಮನುಷ್ಯನನ್ನಾಗಿ ಮಾಡಬಲ್ಲದು ಎಂಬ ತಾಯಿಯ ನಂಬಿಕೆ ಅವನಿಗೀಗ ಮೆಚ್ಚುಗೆಯಾಯಿತು.

ನನ್ನ ತಾಯಿ ನನ್ನನ್ನು ಬೆಳೆಸುವುದಕ್ಕೆ ಅದೆಷ್ಟು ಶಕ್ತಿ ಮತ್ತು ಪ್ರೀತಿಯನ್ನು ಧಾರೆಯೆರೆದಿದ್ದಾಳೆ ಎಂಬುದೀಗ ನನಗೆ ಅರ್ಥವಾಗಿದೆ ಎನ್ನುವ ಅವನೀಗ ತಾಯಿಯನ್ನು ಆಗಾಗ ದೂರವಾಣಿಯ ಮೂಲಕ ಸಂಪರ್ಕಿಸುತ್ತಾನೆ ಮತ್ತು ತಪ್ಪದೇ ಆಕೆಯನ್ನು ಆಗಾಗ್ಗೆ ಭೇಟಿ ಮಾಡುತ್ತಾನೆ.

೨. ಬೆಸುಗೆಯನ್ನು ಬಲಪಡಿಸಿ: ಲೀಸಾಳಿಗೆ ತನ್ನ ತಾಯಿ ಜೀನ್‌ಳಿಂದ ಇದ್ದಕ್ಕಿದ್ದಂತೆಯೇ ಬಂದ ದೂರವಾಣಿಯ ಕರೆ ಅವಳು ಮತ್ತೆ ತನ್ನ ಕುಟುಂಬದ ಇತರರೊಡನೆಯೂ ಸಂಪರ್ಕ ಇಟ್ಟುಕೊಳ್ಳುವಂತಾಯಿತು. ಒಮ್ಮೆ ಅವಳ ಸಹೋದರನೊಬ್ಬನಿಗೆ ಶಾಸನ ಸಂಬಂಧವಾದ ತೊಂದರೆಯುಂಟಾದಾಗ ಲೀಸಾ ವಕೀಲರನ್ನು ಹುಡುಕಿಕೊಟ್ಟಳು. ಮತ್ತೊಮ್ಮೆ ಅವಳ ಸಹೋದರಿಗೆ ವೈವಾಹಿಕ ತೊಂದರೆಯುಂಟಾದಾಗ ಅವಳ ಮಗುವನ್ನು ನೋಡಿಕೊಳ್ಳುವುದರಲ್ಲಿ ಸಹಕರಿಸಿದಳು. ಅವಳ ಈ ನಿಸ್ವಾರ್ಥತೆ ಅವಳ ತಾಯಿಯ ಕಿವಿಗೆ ಬೀಳಲು ತಡವಾಗಲಿಲ್ಲ.

ಅದು ಸಾಮಾನ್ಯವಾಗಿ ಹಾಗೆಯೇ ಆಗುವುದು ಎನ್ನುತ್ತಾರೆ. "ದ ಸಿಬ್ಲಿಂಗ್ ಆಫ್ ಈಚ್ ಅದರ್ : ರೀ ಬಿಲ್ಡಿಂಗ್ ಅವರ್ ಫ್ಯಾಮಿಲೀಸ್" ಪುಸ್ತಕದ ಬರವಣಿಗಾರರು ಮತ್ತು ಮನಃಶಾಸ್ತ್ರಜ್ಞರಾದ ಮೇರಿ ಪಿಫೆರ್. ಕುಟುಂಬದ ಸದಸ್ಯರುಗಳ ಪೈಕಿ ಒಂದಿಬ್ಬರು ಮಾತನಾಡದೇ ಇದ್ದರೂ ಬೇರೆಯವರ ಮೂಲಕವೇ ವ್ಯವಹರಿಸಿಬಿಡುತ್ತಾರೆ. ಅವರಿಬ್ಬರೂ ಮತ್ತೆ ಮಾತನಾಡುವವರೆಗೂ ಈ ವ್ಯವಹಾರ ಹೀಗೆಯೇ ಮುಂದುವರಿಯುತ್ತದೆ.

ಪರಸ್ಪರ ಸಂಪರ್ಕ ಮತ್ತಷ್ಟು ನೇರವಾಗಿರಬಹುದು. ಟಿಮೋಟಿ ಸ್ಟೀವನ್ ಎಂಬಾತ ಬಹಳ ವರ್ಷಗಳ ಹಿಂದೆ ತನ್ನ ಹೆಸರನ್ನು ಬದಲಾಯಿಸಿಕೊಳ್ಳುವ ನಿರ್ಧಾರ ಮಾಡಿದ. ಇದು, ಅವನ ತಂದೆ ಮತ್ತು ಅವನ ಸಂಬಂಧದ ನಡುವೆ ಒಡಕು ಮೂಡಲು ದಾರಿಯಾಯಿತು. ಮಗನ ನಿರ್ಧಾರದಿಂದಾಗಿ ಸಿಟ್ಟಿಗೆದ್ದ ಅವನ ತಂದೆ ದೂರದ ಊರಿನಲ್ಲಿದ್ದರೂ ಫೋನಿನಲ್ಲೇ ಅಬ್ಬರಿಸುತ್ತಾ ಮಗನ ಬಗ್ಗೆ ತಮ್ಮ ಅಸಂತೋಷವನ್ನು ವ್ಯಕ್ತಪಡಿಸಿದ. ಟಿಮೋಟಿಗಂತೂ ತನ್ನ ತಂದೆಯೊಡನೆ ಎಲ್ಲ ಸಂಬಂಧಗಳನ್ನೂ ಕಡಿದುಕೊಂಡು ಬಿಡುವ ಮನಸ್ಸಾಯಿತು. ಆದರೆ ಅದು ಸರಿಯಾದ ಪ್ರತಿಕ್ರಿಯೆಯಲ್ಲ ಎಂಬುದು ಅವನ ಅಂತರಾಳಕ್ಕೆ ಅರಿವಾಯಿತು. ದೂರವಾಣಿಯ ಮೂಲಕ ಬಾಂಧವ್ಯವನ್ನು ಉಳಿಸಿಕೊಳ್ಳಲಾಗದೆಂಬುದೂ ಅವನಿಗೆ ಅರ್ಥವಾಯಿತು. ಏಕೆಂದರೆ ಇಬ್ಬರಿಗೂ ಪರಸ್ಪರ ಮಾತನಾಡುವ ಇಚ್ಛೆ ಇರಲಿಲ್ಲ. ಪರಿಸ್ಥಿತಿಯ ಪರ್ಯಾಲೋಚನೆ ಮಾಡಿದ ಅವನು ತಂದೆಗೆ ನಿಯಮಿತವಾಗಿ ಪತ್ರಗಳನ್ನು ಬರೆಯತೊಡಗಿದ. ತಂದೆ ಆ ಪತ್ರಗಳನ್ನು ಒಪ್ಪಿಕೊಳ್ಳದಿದ್ದರೂ ' ಇವನು ಮಾತ್ರ ಹೇಗಾದರೂ ಅವನ್ನು ಕಳಿಸುತ್ತಲೇ ಇದ್ದ.

"ಮತ್ತೆ ಹೊಂದಿಕೊಳ್ಳುವುದು ನನಗೆ ಬೇಕಾಗಿತ್ತು. ನನಗಂತೂ ನನ್ನ ಜೀವನದ ಒಂದು ಭಾಗವೇ ಕಳಚಿಹೋಗಿದೆ ಅನಿಸುತ್ತಿತ್ತು" ಎನ್ನುತ್ತಾನೆ ಟಿಮೋಟಿ.

ಆ ಮುನಿಸಿನ ಮೌನದ ದಿನಗಳ ಮಧ್ಯೆ ಮಗನ ಹೆಂಡತಿ ಹಡೆದಳು . ವಯಸ್ಸಾಗಿದ್ದ ತಂದೆ ಈ ವಿಷಯವನ್ನು ಪತ್ರದಲ್ಲಿ ಓದುತ್ತಿದ್ದಂತೆಯೇ ಅವನ ರೋಷವೆಲ್ಲವೂ ಕರಗಿಹೋಯಿತು. ಆಗ ತಾನೇ ತಾತ ಆಗಿದ್ದ ಆ ಹಿರಿಯ ತಮ್ಮಿಬ್ಬರ ಮಧ್ಯೆ ಇರುವ ಕಂದಕವನ್ನು ಮುಚ್ಚಿಬಿಡಲು ನಿರ್ಣಯಿಸಿ ತತ್‌ಕ್ಷಣವೇ ಮಗನಲ್ಲಿಗೆ ಹೊರಟ. ಮೊಮ್ಮಗನನ್ನು ಪ್ರೀತಿಯಿಂದ ತಮ್ಮ ಬಾಹುಗಳಲ್ಲಿ ಬಂಧಿಸಿದ.

'ನಾನು ಪಟ್ಟುಬಿಡದೇ ಕಾಗದ ಬರೆದದ್ದಕ್ಕೆ ನನಗೆ ಸಂತಸವಾಗಿದೆ' ಇಂದು ಹರ್ಷದಿಂದ ಟಿಮೋಟಿ ನುಡಿಯುತ್ತಾನೆ.

ಮತ್ತೊಬ್ಬರಿಗೆ ಕಾಗದ ಬರೆದು ಮನಸ್ಸು ತೋರಿಸುವುದು ಕಡಿದು ಹೋಗಿದ್ದ ಬಂಧನವನ್ನು ಮತ್ತೆ ನಿಲ್ಲಿಸಲು ಸೊಗಸಾದ ಮೊದಲ ಪ್ರಯತ್ನ ಎನ್ನುತ್ತಾರೆ ಅನುಭವಶಾಲಿಗಳು. ದೂರವಾಣಿಯ ಸಂಭಾಷಣೆ ಅಥವಾ ಮುಖಾಮುಖಿಯಲ್ಲಿ ಆಲೋಚನಾ ಶಕ್ತಿಯನ್ನೇ ಮಬ್ಬುಗೊಳಿಸುವಂಥ ಆವೇಗ ಉಂಟಾಗಬಹುದು. ಆದರೆ ಅಂಥ ಪರಿಸ್ಥಿತಿಯನ್ನು ಪತ್ರ ಬರೆಯುವ ಪ್ರಯತ್ನದಲ್ಲಿ ಎದುರಿಸಬೇಕಾಗಿಲ್ಲ.

ಪತ್ರವನ್ನು ಬರೆದಾಗ, ಬರೆದವರು ತಮ್ಮ ಅನಿಸಿಕೆಗಳನ್ನು ಮತ್ತು ತಾವು ಹೇಳಬೇಕಾದುದನ್ನು ಮತ್ತೊಮ್ಮೆ ಶೋಧಿಸಿಕೊಳ್ಳಲು ಅವಕಾಶ ದೊರೆಯುತ್ತದೆ. ಪತ್ರವನ್ನು ಪಡೆದುಕೊಂಡವರಿಗೆ ಅದರಿಂದ ಒದಗ

ಬಹುದಾದ ಕಹಿವಿಷಯನ್ನು ಕಡಿಮೆ ಮಾಡಿಕೊಳ್ಳಲು ವೇಳೆ ಸಿಗುತ್ತದೆ.

೩. ಬೇರೆಯವರ ಸಹಾಯದಿಂದಲೂ ಉಪಶಮನವಾಗಲಿ: ಕೌಟುಂಬಿಕ ವೈಷಮ್ಯದ ನೋವು ಹೊರಗಿನ ತನಕವೂ ಹರಡಿಬಿಡುತ್ತದೆ. ವಂಶದ ಕುಡಿಗಳಿಗೆ, ತಂದೆತಾಯಿಗಳಿಗೆ, ಇತರ ಬಂಧುಗಳಿಗೆ ಹಾಗೂ ನಿಕಟ ಸ್ನೇಹಿತರಿಗೆಲ್ಲ ಇದು ಅಸಂತೋಷವನ್ನು ಉಂಟುಮಾಡುತ್ತದೆ. ಸಾಧಾರಣವಾಗಿ ಇವರಿಗೆಲ್ಲ ಹೊಂದಾಣಿಕೆಯನ್ನು ಮತ್ತೆ ಪಡೆದುಕೊಳ್ಳುವ ಇಚ್ಛೆ ಇರುತ್ತದೆ ಮತ್ತು ಪದೇ ಪದೇ ಉತ್ಸಾಹದಿಂದಲೇ ಅದನ್ನು ಸಾಧಿಸಲು ಒತ್ತಾಸೆ ನೀಡುತ್ತಾರೆ.

ರಾಲ್ಫ್ ಮಿಲ್ಲೆರ್ ದರ್ಪವುಳ್ಳವನಾಗಿದ್ದ. ಮಕ್ಕಳು ತನ್ನ ಆದೇಶದಂತೆಯೇ ನಡೆಯಬೇಕೆಂದು ಬಯಸುತ್ತಿದ್ದ. ಆದರೆ ಅವನ ಮಗ ಎಡ್, ತಂದೆಯ ಅವಿಶ್ವಾಸಕ್ಕೆ ಪಾತ್ರವಾಗಿದ್ದ ಕುಟುಂಬದ ಹುಡುಗಿಯೊಬ್ಬಳನ್ನು ಪ್ರೇಮಿಸಿದ. ಇದರಿಂದ ತಂದೆ ಕುಪಿತನಾದರೂ ಮಗನ ಬಗ್ಗೆ ಚಿಂತೆ ಮಾಡತೊಡಗಿದ.

ಕೊನೆಗೂ ಎಡ್ ಮತ್ತು ನ್ಯಾನ್ಸಿಯ ವಿವಾಹ ನಡೆದೇಬಿಟ್ಟಿತು. ಮುಂದಿನ ದಿನಗಳಲ್ಲಿ ಎಡ್‌ನ ಸೋದರ ಸೋದರಿಯರು ಕೂಡ ತಮ್ಮ ಅತ್ತಿಗೆಯ ಕುಟುಂಬದ ಬಗ್ಗೆ ತಮ್ಮ ತಂದೆಗಿದ್ದ ಅಭಿಪ್ರಾಯವನ್ನೇ ಒಪ್ಪಿಕೊಂಡರು. ಒಮ್ಮೆ ಎಡ್‌ನ ಅತ್ತಿಗೆ ಹಾಗೂ ನ್ಯಾನ್ಸಿಯ ನಡುವೆ ಬಿರುಸಾದ ಮಾತುಕತೆ ನಡೆಯಿತು. ಆ ಕೆಟ್ಟ ಘಟನೆಯ ಬಳಿಕ ದಂಪತಿಗಳು ಕುಟುಂಬದ ಯಾವುದೇ ವ್ಯವಹಾರದಲ್ಲೂ ಭಾಗಿಯಾಗಲಿಲ್ಲ. ಈ ಮೌನದ ದಿನಗಳು ಮತ್ತಷ್ಟು ವರ್ಷಗಳ ತನಕ ಮುಂದುವರಿದುವು.

ಆಗ ಇದ್ದಕ್ಕಿದ್ದಂತೆಯೇ ಎಡ್‌ನ ತಂದೆ ರಾಲ್ಫ್ ಮಿಲ್ಲೆರ್ ತೀರಿಕೊಂಡ. ವಿಷಯ ತಿಳಿದ ಎಡ್ ತನ್ನ ತಾಯಿಯನ್ನು ದೂರವಾಣಿಯಲ್ಲಿ ಸಂಪರ್ಕಿಸಿ ತನ್ನ ಸಂತಾಪ ಸೂಚಿಸಿದ. ಆದರೆ ಆಗಲೂ ಅದೇ ತೀವ್ರ ಅಸಮಾಧಾನ. ಉತ್ತರ ಕ್ರಿಯೆಗಳಲ್ಲಿ ಭಾಗವಹಿಸಬಾರದೆಂಬ ಹೇಳಿಕೆ. ಅವನ ರಕ್ತಬಂಧುಗಳ ರೋಷಾವೇಶ ಇನ್ನೂ ಕಡಿಮೆಯಾಗಿರಲಿಲ್ಲ.

ಒಂದು ವರ್ಷದ ಬಳಿಕ ಸಮಾಧಿ ಭೂಮಿಯಲ್ಲಿ ಕುಟುಂಬದವರೆಲ್ಲರೂ ಸೇರಿಕೊಂಡು ಸಂಪ್ರದಾಯದಂತೆ ಕಾರ್ಯ ನೆರವೇರಿಸಲು ನಿರ್ಧರಿಸಿಕೊಂಡರು. ಆದರೆ ಎಡ್‌ನನ್ನು ಆಹ್ವಾನಿಸುವ ಉದ್ದೇಶವೇ ಇರಲಿಲ್ಲ. ಆದರೆ ಎಡ್‌ನ ಚಿಕ್ಕಮ್ಮನಾದ ಬೆಟ್ಟಿ, ಈ ಕುಟುಂಬದ ಸಾಮರಸ್ಯವನ್ನು ಮತ್ತೆ ಹಿಂದಿನಂತೆಯೇ ಸರಿಪಡಿಸಬೇಕೆಂದು ನಿರ್ಧರಿಸಿಕೊಂಡಳು. ಅವಳು ಎಡ್ ದಂಪತಿಗಳನ್ನು ಕರೆದು ಅವನ ತಂದೆಯನ್ನು ಸಾರ್ವಜನಿಕವಾಗಿ ಗೌರವಿಸಲು ಈ ಸಮಾಧಿಭೂಮಿಯ ಮತ ಸಂಬಂಧವಾದ ಆಚರಣೆಯಲ್ಲಿ ಭಾಗವಹಿಸುವುದೊಂದು ಕಡೆಯ ಅವಕಾಶ ಎಂದು ನುಡಿದಳು.

ಸಾಂಪ್ರದಾಯಿಕ ಆಚರಣೆಯ ವೇಳೆ ಅಲ್ಲಿಗೆ ಎಡ್ ಮತ್ತು ನ್ಯಾನ್ಸಿ ಆಗಮಿಸಿದ್ದನ್ನು ಕಂಡು ಕುಟುಂಬದವರಿಗೆಲ್ಲ ದಿಗ್ಭ್ರಮೆಯಾಯಿತು. ಎಡ್‌ನ ತಾಯಿ ಅವನನ್ನು ಸ್ವಾಗತಿಸಲು ಮುಂದೆ ಬಂದಳು. ತಮ್ಮ ಕುಟುಂಬ ಮತ್ತೆ ಒಟ್ಟುಗೂಡಿದ್ದನ್ನು ಕಂಡು ಅವರಲ್ಲಿ ಹುರುಪು ಮೂಡಿತು. ಇಂದು ಎಡ್ ಮತ್ತು ಅವನ ಸಂಬಂಧಿಗಳು ತಮ್ಮ ಕುಟುಂಬ ಸಾಮರಸ್ಯವನ್ನು ಮತ್ತೆ ಬೆಳೆಸಿಕೊಳ್ಳುತ್ತಿದ್ದಾರೆ.

ಕೌಟುಂಬಿಕ ವೈಷಮ್ಯವನ್ನು ಉಪಶಮನ ಗೊಳಿಸಲು ಸಹಕರಿಸುವ ಸ್ನೇಹಿತ ಅಥವಾ

ಕುಟುಂಬದ ಸದಸ್ಯ ಕಡೇಪಕ್ಷ ಮೂರು ಪಾತ್ರಗಳನ್ನಾದರೂ ವಹಿಸಬೇಕಾಗುತ್ತದೆ ಎನ್ನುತ್ತಾನೆ ನೈಲ್‌ಕಾಟ್ಸ್ ಎಂಬ ಚಿಕಿತ್ಸಕ. ಕ್ರಿಯಾಶೀಲರಾಗಿ ಕಾರ್ಯವನ್ನು ಸುಗಮ ಮಾಡಬಹುದು ಅಥವಾ ಕಾದಾಡುವ ಇಬ್ಬರ ನಡುವೆ ಮಧ್ಯಸ್ಥಿಕೆ ವಹಿಸಬಹುದು ಅಥವಾ ವೈಷಮ್ಯ ಕರಗಿಹೋಗುವಂತೆ ಪ್ರೋತ್ಸಾಹಿಸಲೂ ಬಹುದು.

೪. ವಿವಾದವನ್ನು ನಿರೀಕ್ಷಿಸಬೇಡಿ: ಕೌಟುಂಬಿಕ ವೈಷಮ್ಯವನ್ನು ಕೊನೆಗಾಣಿಸಲು ಹಿಂದಿನ ಭಿನ್ನಾಭಿಪ್ರಾಯದ ಬಗ್ಗೆ ಈಗ ವಿಶ್ಲೇಷಿಸುವುದು ನಿಮ್ಮ ಉದ್ದೇಶವಾಗ ಬಾರದು. ಒಂದು ವೇಳೆ ಸಂಪೂರ್ಣವಾಗಿ ವೈಷಮ್ಯವನ್ನು ನಿವಾರಿಸ ಲಾಗದಿದ್ದರೂ ನಿಸ್ಸಂದೇಹವಾಗಿ ಸ್ವಲ್ಪ ಮಟ್ಟಿ ಗಾದರೂ ಒಪ್ಪಂದವೇರ್ಪಡಿಸಲು ಸಾಧ್ಯವಾಗ ಬಹುದು. ಜನ್ಮದಾತರ ಹುಟ್ಟಿದ ಹಬ್ಬವನ್ನು ಎಲ್ಲರೂ ಸೇರಿಕೊಂಡು ಆಚರಿಸುವಂಥ ಸಣ್ಣಪುಟ್ಟ ಸಾಧನೆಗಳೇ ಸಂಬಂಧವನ್ನು ಮತ್ತೆ ಸೇರಿಸಲು ಆಧಾರವಾಗುತ್ತದೆ.

ಕುಟುಂಬದ ವೈಷಮ್ಯವನ್ನು ಬಗೆಹರಿಸಲು ಯಾರು ತಪ್ಪಿತಸ್ಥರು ಎಂದು ಬೆರಳು ತೋರಿಸು ವುದಕ್ಕಿಂತಲೂ ಸಾಮರಸ್ಯದ ಪುನಸ್ಥಾಪನೆಯೇ ಮುಖ್ಯ ಎನ್ನುತ್ತಾನೆ ಮನಃಶಾಸ್ತ್ರಜ್ಞ ಸೂಸನ್ ಹೈಟರ್.

ಹಲವು ಸಂದರ್ಭಗಳಲ್ಲಿ ಕೌಟುಂಬಿಕ ವೈಷಮ್ಯ ಶಾಶ್ವತ ಬದಲಾವಣೆಗಳಿಗೆ ಕಾರಣ ವಾಗಬಹುದು. ಅವನ್ನು ಒಪ್ಪಿಕೊಳ್ಳಿ, ಅರ್ಥ ಮಾಡಿಕೊಂಡು ಅಂಥ ಘಟನೆಗಳ ಪುನರಾ ವರ್ತನೆ ಆಗದಂತೆ ತಡೆಯಿರಿ. ತಂದೆ ಮಕ್ಕಳ ನಡುವಿನ ವೈಷಮ್ಯವನ್ನು ಕೊನೆಗಾಣಿಸಲು ಬಲಪ್ರಯೋಗ ಬೇಕಾಗಬಹುದು. ಆದರೆ ಆ ಪ್ರಯತ್ನಕ್ಕೆ ಯುಕ್ತ ಪ್ರತಿಫಲವಂತೂ ದೊರೆಯುತ್ತದೆ.

ಜೇನ್ ಹ್ಯಾಲಿ ಮತ್ತು ಅವರ ಮಗಳು ಲೀಸಾ ಮನಸ್ಸಿಗೆ ಹಿತವಲ್ಲದಂಥ ತಮ್ಮ ವಿವಾದವನ್ನು ಉತ್ಪ್ರೇಕ್ಷೆ ಮಾಡದೇ ಬಗೆಹರಿಸಿ ಕೊಂಡರು. ಪಿತ್ರಾರ್ಜಿತವಾದ ಹಣವನ್ನು ಭಾಗ ಮಾಡುವುದರಲ್ಲಿ ಅವರ ಮಧ್ಯೆ ಏಕಾಭಿ ಪ್ರಾಯ ಇರದಿದ್ದರೂ ಅವರು ಅದರ ಬಗ್ಗೆ ಮತ್ತೆ ಮತ್ತೆ ಚರ್ಚೆ ಮಾಡಬಾರದೆಂದು ಒಪ್ಪಂದ ಮಾಡಿಕೊಂಡರು. ಈ ರೀತಿಯ ಒಪ್ಪಂದ ಅವರ ಪುನರ್ಮಿಲನಕ್ಕೆ ಅವಕಾಶ ವನ್ನು ಕಲ್ಪಿಸಿತು.

ಈಗ ಲೀಸಾ ಭಾವಚಿತ್ರವೊಂದನ್ನು ತೋರಿಸುತ್ತಾಳೆ. ಅದು ಅವರ ಕುಟುಂಬದ ಸಂತೋಷಕೂಟವೊಂದರಲ್ಲಿ ತೆಗೆದದ್ದು. ಆ ಭಾವಚಿತ್ರದಲ್ಲಿ ನಗುನಗುತ್ತಾ ಅಕ್ಕಪಕ್ಕ ನಿಂತಿರುವ ತಾಯಿ ಮತ್ತು ಮಗಳ ಬಾಹುಗಳು ಪರಸ್ಪರ ಹೆಣೆದುಕೊಂಡಿವೆ.

'ನಿಮ್ಮ ಕುಟುಂಬ ಮತ್ತೆ ನಿಮ್ಮ ಹೃದಯ ದೊಳಕ್ಕೆ ಬರಬೇಕೆಂದು ನಿಮ್ಮ ತಿಳುವಳಿಕೆ ಯಾಗಬೇಕು.' ಎನ್ನುವ ಲೀಸಾ 'ನಾವು ಹಾಗೆಯೇ ಕಾರ್ಯಗತ ಮಾಡಿ ತೋರಿಸಿ ದೆವು' ಎಂದೂ ಸೇರಿಸುತ್ತಾಳೆ.

ಧರ್ಮವೇ ಜಯವೆಂಬುದಿದು ದಿವ್ಯಮಂತ್ರ
ಮರ್ಮವನು ಅರಿತು ಆಚರಿಸುವುದು ತಂತ್ರ
ಕರ್ಮದಲಿ ಹೃದಯಕ್ಕೆ ಸಲ್ಲಲಿ ಪ್ರಾಧಾನ್ಯ
ಧರ್ಮ-ಕರ್ಮ ಸಂಯೋಗದಲಿ ನೀನಾಗುವೆ ಧನ್ಯ!

ವೃತ್ತಿ ರಂಜನೆ? -ಪತ್ರಿಕೋದ್ಯಮದಲ್ಲಿ

ಜಿ.ಎನ್. ಅಶೋಕವರ್ಧನ
ಅತ್ರಿ ಬುಕ್ ಸೆಂಟರ್, ೪ ಶರಾವತಿ ಕಟ್ಟಡ,
ಬಲ್ಮಠ, ಮಂಗಳೂರು -೫೭೫ ೦೦೧

ನನ್ನ ವೃತ್ತಿ ರಂಜನೆಯ ಕೆಲವು ಉತ್ತಮ ತುಣುಕುಗಳನ್ನು ಈಗ ಮಾರುಕಟ್ಟೆಯಲ್ಲಿರುವ ನನ್ನದೇ ಪುಸ್ತಕ 'ಪುಸ್ತಕ ಮಾರಾಟ ಹೋರಾಟ'ದಲ್ಲಿ ಸಂಕಲಿಸಿದ್ದೇನೆ. ಅಲ್ಲಿಯ ರಂಜನೆಯ ಚೌಕಟ್ಟಿನಲ್ಲಿ ಬಂದ ವ್ಯಕ್ತಿ, ಸನ್ನಿವೇಶ ಹಲವು ಭಾವಗಳನ್ನು ತಂದರೂ ಪ್ರೇರಣೆ ಕೇವಲ ಆಕಸ್ಮಿಕ ಅಥವಾ ಅನುದ್ದೇಶಿತ ಎನ್ನುವುದನ್ನು ಗಮನಿಸಬೇಕು. ಹಾಗಲ್ಲದವು ಅಂದರೆ, ಹಾಸ್ಯಮೀರಿದ ವ್ಯಂಗ್ಯ ನಗು ಹೊಮ್ಮಿಸುವ ಕೆಲವು ಸತ್ಯಘಟನೆಗಳನ್ನು ಇಲ್ಲಿ ನಿರೂಪಿಸುತ್ತೇನೆ. ಇಲ್ಲಿ ಹೆಚ್ಚಿನ ಸಂದರ್ಭಗಳಲ್ಲಿ ಹೆಸರುಗಳನ್ನು ಮರೆಮಾಚಿದ್ದೇನೆ. ಪ್ರತಿಯೊಂದರಲ್ಲೂ ನಿಮಗೇ ಹೊಳೆಯುವ ನೀತಿ ಪಾಠದ ಘಾಟು ಅತಿ ಎನಿಸಿದರೆ ಕ್ಷಮಿಸಿ, ಸತ್ಯ ಇರುವುದೇ ಹೀಗೆ!

-ಲೇಖಕ

ವಿದ್ಯೆ ಕಂಡಿರೇ?

★ಗ್ರಂಥಾಲಯ ವಿಜ್ಞಾನದ ಬುರುಡೆದಾಸರೊಬ್ಬರು ತನ್ನ ಮಿತ್ರ ವಾಣಿಜ್ಯಶಾಸ್ತ್ರದ ಘಾಕಡಪ್ಪನೊಡನೆ ತೀರ ಆಕಸ್ಮಿಕವಾಗಿ ನನ್ನ ಅಂಗಡಿಗೆ ಬಂದರು. ಅವರು ಪರಿಚಯ ಹೇಳಿಕೊಂಡದ್ದರಿಂದ ನಾನು ಸಹಜವಾಗಿ 'ಪುಸ್ತಕ ಮಾರಾಟ ಹೋರಾಟ' ಎಂಬ ನಾನೇ ಬರೆದು ಪ್ರಕಟಿಸಿದ ಪುಸ್ತಕ ಅವರೆದುರು ಇಟ್ಟೆ. ಅದರಲ್ಲಿ ಪುಸ್ತಕೋದ್ಯಮದ ಅರೆಕೊರೆಗಳನ್ನು ಒಕ್ಕಿ, ಸಲಹೆ ಸಾಧ್ಯತೆಗಳನ್ನು ನನ್ನ ಎರಡು ದಶಕಕ್ಕೂ ಮಿಕ್ಕ ಅನುಭವದ ನೆಲೆಯಲ್ಲಿ ಕ್ರೋಢೀಕರಿಸಿದ್ದೇನೆ. ಗ್ರಂಥಾಲಯ ವಿಜ್ಞಾನಿ ಅದನ್ನು ಇಷ್ಟರಲ್ಲೇ ಓದಿರಬೇಕು, ತಪ್ಪಿ ಹೋಗಿದ್ದರೆ ಇನ್ನಾದರೂ ನೋಡಲಿ ಎನ್ನುವುದಷ್ಟೇ ನನ್ನ ಉದ್ದೇಶವಿತ್ತು. ಆದರೆ ಆದದ್ದೇ ಬೇರೆ!

ವಿದ್ಯಾವಿಧ್ವಂಸಕ: ವಿಧ್ವಂಸರ ಕಣ್ಣರಳಿತು, ಕೈ ಹಿಂಜರಿಯಿತು! ಸಿಕ್ಕಿ ಬಿದ್ದ ಸುಳ್ಳ 'ನಿಜ' ನುಡಿದಂತೆ ''ಇಲ್ಲ ಇಲ್ಲ, ಪುಸ್ತಕ ಮಾರಾಟ ನಮ್ಮ ಸಿಲೆಬಸ್ಸಿನಲ್ಲೇ ಇಲ್ಲ'' ಅಂತ ಗೊಣಗಿದರು. ಮರುಕ್ಷಣದಲ್ಲಿ ಅದ್ಭುತ ಹೊಳೆದ ಗೆಲಿಲಿಯೋನಂತೆ ''ರ್ರೀ ಘಾಕ್ಡಪ್ಪಾ, ಮಾರಾಟ -marketing ಊ, ನಿಮ್ದೂ!! ನೋಡ್ರೀ'' ಎಂದರು. ಬುರುಡೆದಾಸ ಸೇರಾದರೆ ಘಾಕಡಪ್ಪ ಸವ್ವಾಸೇರು. ''ಮಾರ್ಕೆಟಿಂಗಾ sssss. ನೋಡೋಣಾ. ಕೊಡ್ರೀ ಕಾಂಪ್ಲಿಮೆಂಟ್ರಿ ಕಾಪಿ ಕೊಡ್ರೀ.'' ಸುಂದರ ವಠಾರದಲ್ಲಿ, ಭವ್ಯ ಕಟ್ಟಡಗಳಲ್ಲಿ ಕಂಡಿರೇ, ವಿದ್ಯೆ ನೀವು ಕಂಡಿರೇ?

★'ದೇವರು' ಪುಸ್ತಕಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದ್ದ ಕಾಲ. ಮಾಧ್ಯಮಗಳಲ್ಲೆಲ್ಲ ಎ.ಎನ್. ಮೂರ್ತಿರಾಯರು ವ್ಯಾಪಿಸಿದ್ದರು. ಆಗ ಕನ್ನಡ ಎಂ.ಎ. ಪಿಎಚ್‌ಡಿ ಮಾಡಿದ ಅಧ್ಯಾಪಕರೊಬ್ಬರು ನನ್ನಲ್ಲಿ ಕೇಳಿದ ಪ್ರಶ್ನೆ ''ಸಾರ್, ಈ ಮೂರ್ತಿರಾಯರು ಯಾರು?'' ಸಿರಿಗನ್ನಡಂ ಗೆಲ್ಗೆ! ಬೆರಗು ಹುಟ್ಟಿಸುವ ಪದವಿ, ಉಪಾಧಿಗಳಲ್ಲಿ ಕಂಡಿರೇ, ವಿದ್ಯೆ ನೀವು ಕಂಡಿರೇ?

★ಸುಭಾಷಿತ, ಗಾದೆಮಾತು, ನೀತಿಪಾಠ ಮೊದಲಾದವನ್ನು ರಸವತ್ತಾಗಿ ನಿರೂಪಿಸುವ, ಪುಸ್ತಕರೂಪದಲ್ಲೂ ತಂದಿರುವ ಶಾಲೆಯೊಂದರ ಉಪಾಧ್ಯಾಯರೊಬ್ಬರು ಅಂಗಡಿಗೆ ಬಂದರು. ಅಂದು ಅವರು ಖಾಸಗಿಯಾಗಿ ಬಂದದ್ದಲ್ಲ! ತನ್ನದೇ ವಿದ್ಯಾಸಂಸ್ಥೆ? ಗ್ರಂಥಾಲಯಕ್ಕೆ ಪುಸ್ತಕ ಆರಿಸಲು ೧ ಕಿಲೊಮೀಟರ್ ದೂರದ ಶಾಲೆಯಿಂದ ನನ್ನಂಗಡಿಯವರೆಗೆ ಪ್ರಯಾಣಿಸಿದ್ದರು. ಅದರಿಂದ ಅವರಿಗಾದ ನಷ್ಟವನ್ನು ನನ್ನಲ್ಲಿ ತೋಡಿಕೊಳ್ಳುತ್ತಾ ''ಸಾರ್, ಇದಕ್ಕೆ ಶಾಲೆ ಟೀಯೆಕೊಡುತ್ತಿಲ್ಲ. ನೀವಾದ್ರೂ, ಬಿಲ್ಸಿನಲ್ಲಿ ಅಡ್ಜಸ್ಟ್ ಮಾಡ್ ಕೊಡ್ತೀರಾ'' ಎಂದರು. ಆಗ ಅವರು ಸಂಕಲಿಸಲು ಬಿಟ್ಟಿರಬಹುದಾದ ಗಾದೆಯೊಂದು ನನಗೆ

ನೆನಪಿಗೆ ಬಂತು 'ಹೇಳುವುದು ಶಾಸ್ತ್ರ ಇಕ್ಕುವುದು ಗಾಳ'! ಇವರ ಅನುದಾರ ಚರಿತೆ ಬಹುಳಾದರೂ ಅವರ ಬಳಿ ಮಕ್ಕಳಿಗೆ ಕೊಡಲು ಇರಬಹುದು ಜಾಣ್ನುಡಿ 'ನಾ ಹೇಳಿದ್ದು ಮಾಡು; ಮಾಡಿದ್ದು ಬಿಡು'. ಇದನ್ನೇ ಇಂಗ್ಲಿಷ್ ಮಾಧ್ಯಮದವರ ಅನುಕೂಲಕ್ಕೆ ಹೀಗೂ ಹೇಳಬಹುದು "Do what I say. But not what I do" ದೊಡ್ಡ ಹೆಸರಿನಲ್ಲಿ ಖ್ಯಾತಿ ಜನಪ್ರಿಯತೆಯಲ್ಲಿ ಕಂಡಿರೇ, ವಿದ್ಯ ನೀವು ಕಂಡಿರೇ?

ಕೂಪನ್ ಸಂಗ್ರಹ

ವಿದ್ಯಾಸಂಸ್ಥೆಗಳು, ಪುಸ್ತಕ ಪ್ರೇಮಿಗಳು ಉಡುಗೊರೆಗೂ ಪುಸ್ತಕ ನೀಡುವುದು ಹೊಸಮಾತೇನಲ್ಲ. ಆದರೆ (ವ್ಯಕ್ತಿಗಳನ್ನು ಬಿಡಿ) ಸಂಸ್ಥಾ ಮಟ್ಟದಲ್ಲಿ ಈ ತತ್ವ, ಪುಸ್ತಕ ಪ್ರೀತಿಯಿಲ್ಲದ ವ್ಯಕ್ತಿಗಳ ಕೈಯಲ್ಲಿ ವಿಪರೀತ ಬಳಲುತ್ತವೆ (ವಿವರಗಳಿಗೆ ನನ್ನ 'ಪುಸ್ತಕ ಪಾರಾಟ ಹೋರಾಟ' ಪುಸ್ತಕದ 'ಪುಸ್ತಕ ಉಡುಗೊರೆ' ಅಧ್ಯಾಯ ನೋಡಿ). ವಿವಿಧ ವಿದ್ಯಾರ್ಥಿಗಳ ಆಸಕ್ತಿ ಮತ್ತು ಬಹುಮಾನಕ್ಕೆ ನಿಗದಿಪಡಿಸಲ್ಪಟ್ಟ ಮೊತ್ತ ಇರುತ್ತದೆ. ಅವನ್ನು ಸಂಭಾಳಿಸಿಕೊಂಡು ಪುಸ್ತಕ ಆಯ್ದು, ಗುರುತಿಟ್ಟು ಸರಿಯಾಗಿ ವಿತರಿಸುವ ಕೆಲಸದಲ್ಲಿ ಹೆಚ್ಚಿನವರು ಕಳೆದುಬಿಡುತ್ತಾರೆ. first, second, third ಎಂಬ ಮೂರು ಸ್ತರದಲ್ಲಿ ಹಣ ಹಂಚಿ ಹಾಕಿಕೊಂಡು ಜನರಲ್ ನಾಲೆಡ್ಜ್ ಪಟ್ಟಿಕೋಶಗಳೋ ಗುಡ್ಡೆ ಹಾಕಿ, ಒಂದೊಂದರ ಪಟ್ಟೆಂಟು ಪ್ರತಿ ಕೊಂಡು ಸುಧಾರಿಸಿಬಿಡುತ್ತಾರೆ. ಇದರಿಂದ ಒಂದಕ್ಕೂ ಮಿಕ್ಕು ಬಹುಮಾನಿತ ವ್ಯಕ್ತಿ ಒಂದೇ ಜಾತಿಯ ಹಲವು ಪುಸ್ತಕಗಳ ಸಂಗ್ರಹಕಾರನಾಗುತ್ತಾನೆ. ಇದನ್ನು ನಿವಾರಿಸಲು ನಾನು ಬಹು ಹಿಂದೆಯೇ 'ಉಡುಗೊರೆ-ಪತ್ರ' ಅಥವಾ gift of coupon ಗಳನ್ನು ಪ್ರಚಾರಕ್ಕೆ ತಂದಿದ್ದೇನೆ. ಬಹುಮಾನ ಕೊಡುವ ಸಂಸ್ಥೆ ಅಥವಾ ವ್ಯಕ್ತಿ ಬೇಕಾದ ಮೌಲ್ಯದ ಈ ಪತ್ರಗಳನ್ನು ದುಡ್ಡು ಕೊಟ್ಟು ಕೊಂಡು ಸಮಾರಂಭದಲ್ಲಿ ಪಾತ್ರರಾದವರಿಗೆ ವಿತರಿಸಿದರೆ ಮುಗಿಯಿತು. ಅವರು ವಿರಾಮದಲ್ಲಿ ಬಂದು ಅವರಿಗೆ ಬೇಕಾದ ಪುಸ್ತಕವನ್ನು ಆಯ್ದು, ಹೆಚ್ಚಿನ ಹಣವಾದ್ದಾದರೆ ವ್ಯತ್ಯಾಸ ಕೊಟ್ಟು ಸಂಗ್ರಹಿಸಿಕೊಳ್ಳಬಹುದು ಎಂಬುದು ಈ ವ್ಯವಸ್ಥೆಯ ಉದ್ದೇಶ.

ಒಂದು ಕಾಲೇಜು ನನ್ನ ಉಡುಗೊರೆ-ಪತ್ರಗಳನ್ನು ಕೆಲವು ವರ್ಷಗಳಿಂದ ನೆಚ್ಚಿ ಬಂದಿತ್ತು. ಅವರು ಸಾಕಷ್ಟು ಮುಂಚಿತವಾಗಿ ನನಗೆ ದೂರವಾಣಿ ಮೂಲಕ ಎಷ್ಟು ಮೌಲ್ಯದ ಕೂಪನ್ನುಗಳು ಎಷ್ಟು ಬೇಕು ಎಂದು ಸೂಚಿಸುತ್ತಿದ್ದರು. ಮತ್ತೆ ಅದಕ್ಕೆ ತಾವೆಷ್ಟು ಮೌಲ್ಯದ ಪಾವತಿ ಚೆಕ್ ಕಳಿಸಬೇಕೆಂದೂ ತಿಳಿದುಕೊಂಡು ದೂತನೊಡನೆ ಚೆಕ್ ಕಳಿಸಿ ಕೂಪನ್ನು ಸಂಗ್ರಹಿಸುತ್ತಿದ್ದರು. ವರ್ಷಕ್ಕೊಬ್ಬ ಹಿರಿಯ ಅಧ್ಯಾಪಕ ಕೂಪನ್ನುಗಳ ನಿರ್ವಾಹಕ. ಅದೊಂದು ವರ್ಷದ ನಿಯುಕ್ತಿ ಪ್ರೊ. ರೂಪರಾಜನಿಗೆ ಬಂತು. ಈತ ಅಧ್ಯಾಪನದ ಹೊರತಾಗಿ ಎರಡು ಆಟೋರಿಕ್ಷಾಗಳ ಯಜಮಾನನಾಗಿ ಬಾಡಿಗೆಗೆ ಚಾಲಕರನ್ನು ನೇಮಿಸಿದ್ದ. ಸ್ವತಃ ಹಳೆ ಹಾಳುಗಳೆಯದೆ 'ಕುಂಠ' ನಡೆಸುತ್ತಿದ್ದ! ಒಟ್ಟಾರೆ ಹಣದ ಪರಿಪಾಟದಲ್ಲಿ ಈತ ಜಾಣ. ಆತ ಫೋನಿಸಿ ಮೂರು ಮಜಲುಗಳ ವಿವಿಧ ಸಂಖ್ಯೆಗಳ ಕೂಪನ್ನು ಬೇಡಿಕೆ ಮಂಡಿಸಿದ. ನಾನು ಎಂದಿನಂತೆ ನಿವ್ವಳ ಮೊತ್ತ ತಿಳಿಸಿದೆ. ಕೂಪನ್ ಸಂಖ್ಯೆಯಲ್ಲಾಗಲೀ ಪಾವತಿ ಚೆಕ್ಕಿನಲ್ಲಾಗಲೀ ರೂಪರಾಜನಿಗೆ ಕೈವಾಡ ಸಾಧ್ಯವಿರಲಿಲ್ಲ. ಸಕಾಲಕ್ಕೆ ದೂತ ಬಂದು ಚೆಕ್ಕು ಕೊಟ್ಟು ಕೂಪನ್ನು ಸಂಗ್ರಹಿಸಿಕೊಂಡು ಹೋದ. ಮಾರನೇ ದಿನ ಸಂಜೆ ರೂಪರಾಜನಿಂದ ಫೋನ್ "ಇನ್ನೂರು ರೂಪಾಯಿಯ ಎರಡು

ಕೂಪನ್ ಕಡಿಮೆ ಬಂದಿವೆ. ಜನ ಕಳಿಸುತ್ತೇನೆ, ಕೊಟ್ಟು ಬಿಡಿ''! ನಾನು ಫೋನು ಹಿಡಿದಂತೇ ಮತ್ತೆ ಕೂಪನ್ನುಗಳ ದ್ವಿಪ್ರತಿಯನ್ನು ತನಿಖೆ ಮಾಡಿ ''ಲೆಕ್ಕ ಸರಿಯಿದೆ. ಅಲ್ಲೇ ಎಲ್ಲಾದರೂ ಬಿದ್ದಿರಬಹುದು, ಯಾರಿಗಾದರೂ ಹೆಚ್ಚು ಕೊಟ್ಟು ಹೋಗಿರಬಹುದು, ನಿಮ್ಮ ಸಹಾಯಕಾ...'' ಆತಂಕರದಲ್ಲೇ ಹೇಳಿದೆ.

ಮಹೋಪಾಧ್ಯಾಯರು ಯಃಕಶ್ಚಿತ್ ವ್ಯಾಪಾರಿಯಿಂದ ಪಾಠ ಕೇಳಲು ತಯಾರಿರಲಿಲ್ಲ. ''ನೀವು ಅಂಟಿಸಿಕೊಟ್ಟ ಕವರನ್ನು ತೆರೆದವನು ನಾನೇ. ಮತ್ತೆ ಕೂಪನ್ ಹಂಚಿದವನೂ ನಾನೇ. ನಿಮ್ಮ ಕಾರಣಾಗೀರಣಾ ಬೇಡ, ಎರಡು ಕೂಪನ್ ಕಳಿಸಿಕೊಡಿ'' ಎಂದವರೇ ಫೋನ್ ಕುಕ್ಕಿದರು. ನನಗೆ ನಾನೂರು ರೂಪಾಯಿಗಿಂತಲೂ ನನ್ನ ವಿಶ್ವಾಸಾರ್ಹತೆ ಸಂದೇಹಿಸಲ್ಪಟ್ಟದ್ದು ಸುಂಗಲಾಗಲಿಲ್ಲ. ಯೋಚಿಸಿ, ನಡೆ ಸ್ಪಷ್ಟಪಡಿಸಿಕೊಂಡು ದೂತ ಬಂದರೆ ಖಾಲಿ ಕಳಿಸುವುದೆಂದೂ ಫೋನ್ ಬಂದರೆ ಮುದ್ದರೆಯುವುದೆಂದೂ ಕಾದೆ. ಮಾರನೇ ದಿನ ಬೆಳಿಗ್ಗೆ ರೂಪರಾಜನೇ ಮತ್ತೆ ದೂರವಾಣಿ ಕಿಣಕಿಣಸಿದ. ನಾನು ಕಳಿಸಿಕೊಟ್ಟ ರೂ ೨೦೦ರ ಕೂಪನ್ನುಗಳ ಕ್ರಮಸಂಖ್ಯೆ ತಿಳಿಸಿ ''ನಿಮಗೆ ಸಿಗದ ಸಂಖ್ಯೆ ತಿಳಿಸಿ. ನಾನದನ್ನು ಇಲ್ಲಿ ರದ್ದುಪಡಿಸಿ ಬದಲಿ ಕೊಡುತ್ತೇನೆ. ಮತ್ತೆ ಕದ್ದು ಬರುವವರನ್ನು ವಿಚಾರಿಸಿಕೊಳ್ಳುತ್ತೇನೆ'' ಸಮಾಧಾನದಲ್ಲಿ ಹೇಳಿದೆ. ನಾನೂರು ರೂಪಾಯಿಯ ಕೂಪನ್ ಕಳ್ಳದಾರಿಯಲ್ಲಿ ಸ್ವಂತಕ್ಕೆ ಲಾಭಮಾಡಿಕೊಳ್ಳಲು ಹೊರಟ ರೂಪರಾಜ ತಗ್ಗದೆ ''ಕೂಪನ್ ಸಂಖ್ಯೆ ದಾಖಲಿಸಿಕೊಳ್ಳದೆ ಕೆಲವರಿಗೆ ಕೊಟ್ಟದ್ದಾಗಿದೆ. ಈಗ ಯಾವುದು ಇಲ್ಲಾಂತ ನೋಡಲು ಅವರನ್ನೆಲ್ಲ ಹಿಂದೆ ತರಿಸುವುದು ಆಗದ ಮಾತು. ನೀವು ಸುಮ್ಮನೆ...'' ಎಂದು ದಪ್ಪ ಧ್ವನಿ ತೆಗೆದ. ನಾನು ''ಸರಿ. ರೂ೨೦೦ರ ಕೂಪನ್ ಪಡೆದವರ ಮತ್ತು ಪಡೆಯಲಿರುವವರ ಪೂರ್ಣ ಪಟ್ಟಿಯನ್ನಷ್ಟೇ ದೂತನ ಜತೆ ಕಳಿಸಿಕೊಟ್ಟು ಎರಡು ಕೂಪನ್ ಸಂಗ್ರಹಿಸಿಕೊಳ್ಳಿ'' ಎಂದು ವಿಚಲಿತನಾಗದೆ ಹೇಳಿ ಫೋನಿಟ್ಟೆ. ಎರಡು ದಿನ ಕಳೆದರೂ ರೂಪರಾಜನ ದೂತ ಬರಲಿಲ್ಲ. ನಾನು ಹೆಚ್ಚಿನ ಕೂಪನ್ನು ಬರೆಯಲೂ ಇಲ್ಲ. ನೀವು ಬಾಲ್ಯದಲ್ಲಿ ಕಾಗಕ್ಕ ಗುಬ್ಬಕ್ಕನ ಕತೆ ಕೇಳಿರಲೇ ಬೇಕು. ಬಹುಶಃ ಪ್ರೊ. ರೂಪರಾಜ ಆ ಕಾಗಕ್ಕನಂತೆ ನಾನು ಕೊಟ್ಟ ಬಿಸಿಬೆಣ್ಣೆ ನುಂಗಿ ಕೂಪನ್ನು ವಾಂತಿಮಾಡಿರಬೇಕು, ಲೆಕ್ಕ ಸರಿಯಾಗಿರಬೇಕು ಅಲ್ಲವೇ ?

ಅವ್ಯವಹಾರಿ ನಿರ್ಮಲಚಿತ್ತ

ಕಳೆದ ತಿಂಗಳು ಉಡುಪಿಯಲ್ಲಿ ಪ್ರೊ. ಎಸ್.ವಿ. ಪರಮೇಶ್ವರಭಟ್ಟರಿಗೆ ಅನೌಪಚಾರಿಕವಾಗಿ ಮೈಸೂರಿಗೆ ವಿದಾಯ ಕೋರುವ ಆತ್ಮೀಯ ಕೂಟ ಒಂದು ನಡೆಯಿತು. ಅಲ್ಲಿ ಈ ಮಾತನ್ನು ಪ್ರೀತಿಯಿಂದ ಪ್ರೊ. ಎಸ್. ವಿ. ಪರಮೇಶ್ವರಭಟ್ಟರ ಬಗ್ಗೆ ಶ್ರೀ ಅ. ಬಾಲಕೃಷ್ಣ ಶೆಟ್ಟಿ ಪೊಳಲಿ ಹೇಳಿದ್ದರು ಎಂಬ ಉಲ್ಲೇಖ ಬಂತು. ವ್ಯತಿರಿಕ್ತವಾಗಿ ಅಂದಿನ ಸಭಾಧ್ಯಕ್ಷತೆ ವಹಿಸಿದ್ದ ಶ್ರೀ ಕೆ.ಕೆ. ಪೈ ಅವರು ಎಸ್ವೀಪಿಯವರ ವ್ಯವಹಾರ ಚಾತುರ್ಯವನ್ನು ಕೊಂಡಾಡಿದರು. ಆಗ ಅಲ್ಲಿ ನನ್ನನ್ನು ಕಾಡಿದ ನೆನಪಿನ ಒಂದು ತುಣುಕು.

ಕೆಲವು ವರ್ಷಗಳ ಹಿಂದಿನ ಮಾತು. ಎಸ್ವೀಪಿಯವರಲ್ಲಿ ಕನ್ನಡ ಕಾಳಿದಾಸ ಸಂಪುಟದ ಪ್ರತಿಗಳು ಮುಗಿಯುತ್ತ ಬಂದಿದ್ದುವು ಅಂದ ಮಾತ್ರಕ್ಕೆ ಪೂರ್ಣ ಆರ್ಥಿಕ ಪ್ರತಿಫಲ ಅವರು ಪಡೆದಿದ್ದರು ಎಂದಲ್ಲ! ಪ್ರಕಟಣಪೂರ್ವ ಹಣಕೊಟ್ಟವರು ರಸೀದಿ ತಂದರುಂಟು, ತಾರದೆ ಕೇಳಿದರೂ ಉಂಟು. ಮೊದಲು ದುಡ್ಡು ಕೊಡದೆಯೂ ಕೊಟ್ಟವರಂತೆ ತೋರಿಕೆ ಹಾಕಿದವರಿಗೂ ಇವರು ಪುಸ್ತಕ ಕೊಟ್ಟ

ದ್ದುಂಟು. ಜೊತೆಗೆ ಭಾಸ ಸಂಪುಟಕ್ಕೆ ಸಂಪುಟದೊಳಗಿಟ್ಟು ಇವರು ಮರೆತದ್ದು, ಮತ್ತೆ ಯಾರೋ ಕಾಳಿದಾಸ ಸಂಪುಟ ಕೇಳಿದಾಗ ಆ ನೋಟುಗರ್ಭಿತ ಸಂಪುಟವನ್ನೇ ಇವರು ದಾಟಿಸಿದ್ದು ಅವರ ಬಾಯಿಯಿಂದಲೇ ಕೇಳಿದ್ದೇನೆ. ಚೆಕ್ ಪಡೆದು ಕಳೆದುಕೊಂಡರೂ ಲೆಕ್ಕಸಿಗದ, ಕಳೆದದ್ದು ತಿಳಿದರೂ ಕೊಟ್ಟವರಲ್ಲಿ ಬದಲಿ ಕೇಳದ ದಾಕ್ಷಿಣ್ಯಕ್ಕೆ ಎಸ್ಕೇಪಿಗೆ ಎಸ್ಕೇಪಿಯೇ ಸಾಟಿ! ಕಳಶಪ್ರಾಯವಾಗಿ ಪುಸ್ತಕೋದ್ಯಮಿಯೇ ಒಬ್ಬರು ಇವರಲ್ಲೀದ ಕಾಳಿದಾಸ ಸಂಪುಟಗಳನ್ನು ಶೇಕಡಾ ಐವತ್ತರ ರಿಯಾಯಿತಿಯಲ್ಲಿ ಖರೀದಿಸುವ ಆಶ್ವಾಸನೆ ಕೊಟ್ಟರಂತೆ. ಪ್ರತಿಗಳನ್ನೇನೋ ಅವರು ಪಡೆದುಕೊಂಡರು. ಆದರೆ ಪಾವತಿಗಾಗುವಾಗ ವರ್ಷಕಾಲ ಸತಾಯಿಸಿ ಕೊನೆಗೆ ಶೇಕಡಾ ನೂರರ ರಿಯಾಯಿತಿ ದಕ್ಕಿಸಿಕೊಂಡರು. ಇವರಿಗೆ ಪುಸ್ತಕವೂ ಇಲ್ಲ, ಹಣವೂ ಇಲ್ಲ! ಇದನ್ನೂ ನನಗೆ ಎಸ್ಕೇಪಿಯವರೇ ವಿಷಾದದ ನಗೆಯೊಡನೆ ಹೇಳಿದ್ದರು.

ಕಾಳಿದಾಸನ ಮೇಲೆ ಭಾಸನ ಬಡ್ಡಿ ಬೆಳೆದು ಮಾನಸಿಕ ಒತ್ತಡ ದೈಹಿಕ ಕಾಯಿಲೆಯಾಗಿ ಇವರನ್ನು ಕಂಗಾಲಾಗಿಸಿತ್ತು. ಆಗ ಇವರ ಅಮೆರಿಕಾದಲ್ಲಿದ್ದ ಅಳಿಯ ಪರೋಕ್ಷವಾಗಿ ತಿಳಿದು, ಉದಾರಿಯಾಗಿ ಡಾಲರ್ ಕಳಿಸಿದ್ದರಿಂದ ಬ್ಯಾಂಕ್ ಸಾಲವಿಮುಕ್ತರಾದರು ಎಂಬುದು ಬಹುಶಃ ಕೆ.ಕೆ.ಪೈ ಅವರಿಗೆ ತಿಳಿದಿಲ್ಲ. ಅದು ಬಿಡಿ.

ಕನ್ನಡ ಭಾಸ ಮಹಾಸಂಪುಟದ ಬ್ಯಾಂಕ್ ಸಾಲ ನಿಜಕ್ಕೂ ಮಹತ್ತಿನದಾಗಿ ಎಸ್ಕೇಪಿಯವರನ್ನು ಕಾಡುತ್ತಿದ್ದ ಕಾಲಕ್ಕೆ ಬನ್ನಿ. ಆಗ ಅವರ ಅಭಿಮಾನಿಯೊಬ್ಬರು ''ಸಗಟು ಖರೀದಿ ಯೋಜನೆಗೆ ನಿಮ್ಮ ದೊಡ್ಡ ಬೆಲೆಯ ಗ್ರಂಥಗಳನ್ನು ಹಾಕಿ ನೋಡಿ'' ಎಂದು ಸಲಹೆ ನೀಡಿದರು. ಇವರು ವಿವರಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ತಮ್ಮ ಬಳಿ ಹೆಚ್ಚು ಪ್ರತಿಗಳಿರುವ ತಮ್ಮೆಲ್ಲಾ ಪ್ರಕಟಣೆಗಳ ತಲಾ ಎರಡೋ ಮೂರೋ ಪ್ರತಿ ತಂದು ನನ್ನ ಅಂಗಡಿಗೆ ಹಾಕಿದರು. ಅವನ್ನು ಯುಕ್ತ ಪತ್ರಗಳೊಡನೆ ಆಯ್ಕೆ ಸಮಿತಿಗೆ ಕಳಿಸುವ ಕೆಲಸ ಅವರು ನನಗೆ ವಹಿಸಿದರು. ಆಗ ನನ್ನ ಪುಸ್ತಕೋದ್ಯಮದ ಅನುಭವ ವಾದರೂ ಎಳತು; ಅವರು ಹೇಳಿದ್ದನ್ನು ಮಾಡಿದೆ. ರೂ. ಮೂರರ 'ಯಜ್ಞಫಲ' - ಪಥ್ಯ ಆವೃತ್ತಿಯಿಂದ ರೂ ನೂರಾರರವರೆಗಿನ 'ಭಾಸ ಸಂಪುಟ'ದವರೆಗೆ ವಿವಿಧ ಪುಸ್ತಕಗಳನ್ನು ಸಗಟು ಖರೀದಿ ಆಯ್ಕೆ ಸಮಿತಿಗೆ ಕಳಿಸಿದೆ.

ನಿಧಾನವಾಗಿ ಆದರೆ ನಿರಾಶಾದಾಯಕವಾಗಿ ಆದೇಶವೇನೋ ಬಂತು. ಸಾಲದ ಹೊರೆಯೋ, ಬಡ್ಡಿಪೆಟ್ಟೋ ತಪ್ಪಿಸುವಂತೆ ದೊಡ್ಡ ಪುಸ್ತಕಕ್ಕಲ್ಲ; ಕೇವಲ ಮೂರು ರೂಪಾಯಿಯ ಮುನ್ನೂರು ಪ್ರತಿಗೆ ಮಾತ್ರ! ಗಾಯದ ಮೇಲೆ ಬರೆಯಂತೆ ಅದಕ್ಕೆ ಹತ್ತೆಂಟು ಶರತ್ತುಗಳು, ಎಲ್ಲಾ ಖರ್ಚಿನ ಮತ್ತು ನಷ್ಟದ ಖಾತೆಗೇ ಬೀಳುವಂಥದ್ದು. ನಾನು ಸಹಜವಾಗಿ 'ಇದರ ಪೂರೈಕೆ ಬೇಡ'' ಎಂದೆ. ಅವ್ಯವಹಾರಿ ಎಸ್ಕೇಪಿ ಒಪ್ಪಲಿಲ್ಲ. ಅವರು ತಮ್ಮ ದಾಸ್ತಾನು ಹುಡುಕಿ ಸಿಕ್ಕಿದಷ್ಟು ಪ್ರತಿ ನನ್ನಲ್ಲಿಗೆ ತಂದು ಹಾಕಿ ''ವ್ಯವಸ್ಥೆಯೆಲ್ಲ ನಿಮ್ಮದು. ನೀವು ನಷ್ಟ ಮಾಡಿಕೊಳ್ಳಬೇಡಿ. ಕೊನೆಗೆ ಬಂದ ಪಾವತಿಯಲ್ಲಿ ಶೇಕಡಾ ಐವತ್ತು ನಿಮ್ಮದು'' ಎಂದು ಬಿಟ್ಟರು. ನನ್ನ ಅನುಭವ ಮತ್ತು ಅವರ ಹಿರಿತನಕ್ಕೆ ನಾನು ಸೋತೆ.

ಸಗಟು ಖರೀದಿ ಆದೇಶ ಪತ್ರದ ನಿರ್ದೇಶನದಂತೆ ವಿವಿಧ ಜಿಲ್ಲಾ ಕೇಂದ್ರ ಗ್ರಂಥಾಲಯಗಳಿಗೆ ವಿವಿಧ ಸಂಖ್ಯೆಗಳಲ್ಲಿ 'ಯಜ್ಞಫಲ'ವನ್ನು ನನ್ನದೇ ಖರ್ಚಿನಲ್ಲಿ ಕಳಿಸಿ

ಸ್ವೀಕೃತಿ ಪತ್ರ ಕೋರಿದೆ. ಕೆಲವು ಬಂತು, ಮತ್ತೆ ಕೆಲವು ನೆನಪಿನೋಲೆ ಕಂಡ ಮೇಲೆ ಬಂತು. ಮೂರ್ನಾಲ್ಕು ಕೇಂದ್ರಗಳಿಂದ ಏನೂ ಬರಲಿಲ್ಲ! ನಿಯಮ ಪ್ರಕಾರ ಕೊನೆ ತಾರೀಕು ಬರುವ ಮೊದಲು ಬಂದಷ್ಟು ಸ್ವೀಕೃತಿ ಪತ್ರಗಳನ್ನು ಲಗತ್ತಿಸಿ ಮತ್ತೆ ನಿಯಮಪ್ರಕಾರವೇ ಶೇಕಡಾ ೨೭ರ ರಿಯಾಯಿತಿ ದರದಲ್ಲಿ (ಮರೆಯಬೇಡಿ ಪುಸ್ತಕದ ಬೆಲೆ ಮೂರೇ ರೂಪಾಯಿ!) ಬಿಲ್ಲು ಮಾಡಿ ಮತ್ತೆ ನನ್ನದೇ ವೆಚ್ಚದಲ್ಲಿ ಕಳಿಸಿಕೊಟ್ಟೆ. ಮತ್ತೆ ಎಲ್ಲಾ ಸರಕಾರೀ ವ್ಯವಸ್ಥೆಯಂತೆ ನನ್ನ ನೆನಪಿನೋಲೆಗಳಿಗೆ ಬೆಲೆ ಇಲ್ಲದಂತೆ, ಯಥಾ ಸಾವಕಾಶದಿಂದ (ಸುಮಾರು ಮೂರು ತಿಂಗಳು ಕಳೆದು) ಕಲ್ಕತ್ತದ ಚೆಕ್ ಬಂತು. ಅದರಲ್ಲಿ ಬ್ಯಾಂಕ್ ವೆಚ್ಚ ಹೋಗಿ ನಗದು ಬಂದ ಮೊತ್ತದಲ್ಲಿ ಶೇಕಡಾ ಐವತ್ತು ನಿಜದಲ್ಲಿ ನಾನು ಮಾಡಿದ ಖರ್ಚು ಹುಟ್ಟಿಸಲಿಲ್ಲ. ಮತ್ತಿನ ಶೇಕಡಾ ಐವತ್ತು ಪಡೆದ ಎಸ್ವೀಪಿಯವರಿಗೆ ಒಂದು ಸಾಮಾನ್ಯ ದಿನವಹಿ ಖರ್ಚಿಗೂ ಒದಗಿರಲಿಕ್ಕಿಲ್ಲ. ಆದರೂ ಈತ ನಿರ್ಮಲಚಿತ್ತ-ಹಾಲಾಹಲ ಕೊರಳಿಗಿಳಿಸಿದರೂ ನಲುಗದ ಪರಮೇಶ್ವರ! ಶಬ್ದಾರ್ಥಕ್ಕೂ ಭಟ್ಟ !! (ಭಟ್ಟ=ವಿದ್ವಾಂಸ, ಕವಿ, ಪಂಡಿತ ಇತ್ಯಾದಿ)

ಕರಿನಾಯಿ ಬಿಳಿನಾಯಿ ಕತೆ : ಸದ್ಯದ ನಮ್ಮ ಕಥಾನಾಯಕ ಅಧ್ಯಾಪಕರೇನೋ ಹೌದು, ಆದರೆ ಇವರ ಪ್ರೊಫೆಸರ್‌ಗಿರಿ ಸ್ವಯಂ ಘೋಷಿತ. ಸಮಾಜ ಸೇವೆ ಇವರ ಪಾಠದ ವಿಷಯ, ಹಾಗೇ ತೋರಿಕೆಗೆ ಜೀವನ ಕ್ರಮವೂ ಹೌದು! ಸಿಟಿಬಸ್ಸು, ಬಿಟ್ಟಿ ಹಿಂದಿನ ಸೀಟಿನ ಸವಾರಿಯಲ್ಲಿ ಇವರನ್ನು ಧಾರಾಳ ಕಂಡವರುಂಟು. ಆದರೆ ಅವರೇ ಹೇಳಿಕೊಳ್ಳುವಂತೆ ಶ್ರೀಲಂಕಾ ಇವರಿಗೆ ನೆರೆಮನೆ, ಆಫ್ರಿಕಾ ವಾರಾಂತ್ಯದ ನೆಲೆ ; ಅವರಿಗೇ ಗೊತ್ತಿಲ್ಲದ ಊರಿಗೂ ಅವರು ಖಾಯಂ ವಿಸಿಟಿಂಗ್ ಪ್ರೊಫೆಸರ್ ! ಏರೋಪ್ಲೇನ್ ಹೆಲಿಕಾಪ್ಟರ್ ಇವರಿಗೆ ನಿತ್ಯ ರೂಢಿ. ಅಂತೆ ! ಪ್ರಧಾನಿಗಳು ಇವರ ಸಲಹೆ ಬಯಸಿ ಹಾಟ್‌ಲೈನ್ ಹೊಡೆಯುವುದು, ರಾಷ್ಟ್ರಪತಿಗಳು ಇವರ ನೆರೆಕೆರೆಯವರಿಗೆ ತಿಳಿಯದಂತೆ ಇವರ ಮನೆಯ ಟೀ ಸೇವನೆಗೆ ಬರುವುದು ಹಲವರಿಗೆ ಕೇಳಿ ಗೊತ್ತು. ಜೆಕೆಯ ಬಲಗೈ, ಬಾಬಾನ ಎಡಗೈ ಇತ್ಯಾದಿ ಮಹಿಮಾನ್ವಿತರ್ ಈ ಕರಿಯಪ್ಪನವರು. ನಾನು ಪುಸ್ತಕದಂಗಡಿ ತೆರೆದ ಹೊಸತರಲ್ಲಿ ನನ್ನ ಮೇಲೂ ಇವರು ಕರುಣಾ ಕಟಾಕ್ಷ ಬೀರಿದ ಪರಿಯನ್ನು ನಾನೆಂತು ವರ್ಣಿಸಲಿ!

ಅದೊಂದು ಶುಭ ದಿನ , ಶುಭ ಮುಹೂರ್ತದಲ್ಲಿ ನನ್ನಂಗಡಿಗೆ ಇವರ ಬರೋಣವಾಯ್ತು. "ಮಿಸ್ಟರ್ ಅಶೋಕ್, ನನ್ನ ಅಸಂಖ್ಯ ಹೊಣೆಗಾರಿಕೆಗಳಲ್ಲಿ ಮೀನುಗಾರಿಕಾ ಕಾಲೇಜಿನ ಸಲಹಾ ಮಂಡಳಿಯ ಸದಸ್ಯತ್ವವೂ ಒಂದು ಎಂದು ನಿಮಗೆ ಈಗಾಗಲೇ ತಿಳಿದಿರಬಹುದು" ಕರಿಯಪ್ಪ ಉವಾಚ. ನನ್ನ ಅಲ್ಪಮತಿಗೆ ವಿಷಾದಿಸಿದೆ "ಕ್ಷಮಿಸಿ ಸಾರ್, ನನಗೆ ಗೊತ್ತಿರಲಿಲ್ಲ". ಕರಿಯಪ್ಪನವರು ಮುಂದುವರಿಸಿದರು, "ನನ್ನ ಬಳಿಯಿರುವ ಅಮೂಲ್ಯ ಪುಸ್ತಕ ಸಂಗ್ರಹದಿಂದ ಕೆಲವು ಪುಸ್ತಕ ಅವರ ಗ್ರಂಥಾಲಯಕ್ಕೆ ಬರಲೇಬೇಕೆಂಬ ಅವರ ಒತ್ತಾಯವನ್ನು ನಾನೀಗ ಸಾಮಾಜಿಕ ಹಿತವನ್ನು ಅನುಲಕ್ಷಿಸಿ ಪೂರೈಸಲು ನಿರ್ಧರಿಸಿದ್ದೇನೆ. ಅವುಗಳ ಪಟ್ಟಿ ಇಲ್ಲಿದೆ. ಎಲ್ಲ ವಿದೇಶೀ ಪರಮೋಚ್ಚ ಆಕರ ಗ್ರಂಥಗಳು. ನೀವು ಈ ಡಾಲರ್, ಪೌಂಡ್ ಇತ್ಯಾದಿಗಳನ್ನು ಸದ್ಯದ ಭಾರತೀಯ ಮೌಲ್ಯಕ್ಕೆ ಪರಿವರ್ತಿಸಿಕೊಂಡು ಅವರಿಗೊಂದು ಬಿಲ್ಲು ಬರೆಯಿರಿ. ಪುಸ್ತಕ

ಅವರೇ ನನ್ನ ಮನೆಯಿಂದ ಸಂಗ್ರಹಿಸಿ ಕೊಳ್ತಾರೆ. ಪಾವತಿ ಚೆಕ್ ನಿಮಗೇ ಬರುತ್ತದೆ. ಆಮೇಲೆ ನಿಮ್ಮ ವ್ಯಾಪಾರಿ ವಟ್ಟಾ ಎಷ್ಟಾದರೂ ಮುರಿದುಕೊಂಡು ನನಗೆ ಪಾವತಿ ಕೊಟ್ಟರೆ ಸಾಕು." ನನ್ನ ಅನನುಭವ, ಕರಿಯಪ್ಪನವರ ಬಗೆಗಿನ ಬೆರಗು ಕೆಲಸ ಮಾಡಿತು. ಬಿಲ್ ಹೋಯ್ತು, ಚೆಕ್ ಬಂತು, ಕರಿಯಪ್ಪನವರಿಗೆ ಪಾವತಿಯೂ ಕೊಟ್ಟೆ.

ಅದೊಂದು ದುರ್ದಿನ. ಪೆದ್ದ ಬುದ್ಧನಾದ ದಿನ! ಮೀನುಗಾರಿಕಾ ಕಾಲೇಜಿನ ಗ್ರಂಥಪಾಲ ಎಂಟು ಹಾಳೆಯ ಒಂದು ಪ್ರಚಾರಪತ್ರ ಹಿಡಿದು ನನ್ನಲ್ಲಿಗೆ ಬಂದು "ಸಾರ್, ನೀವು ಕೊಟ್ಟ ಈ ಪುಸ್ತಕವೂ ಸೇರಿದಂತೆ ಹೆಚ್ಚಿನವಕ್ಕೆ ಮುದ್ರಿತ ಬೆಲೆ ಇಲ್ಲ. ಇದಕ್ಕಂತೂ ಪುಸ್ತಕದ ಲಕ್ಷಣವೇ ಇಲ್ಲ. ನಮ್ಮ ಪ್ರೊ. ಮರಿಯಣ್ಣ ನವರ ಒತ್ತಾಯಕ್ಕೆ ಹಾಕಿಸಿಕೊಂಡ ಈ ರದ್ದಿಯಿಂದ ನಾನು ಸಂದಿಗ್ಧಕ್ಕೆ ಬಿದ್ದಿದ್ದೇನೆ. ಒಂದು ಬೆಲೆ ದೃಢೀಕರಣ ಪತ್ರ ಮಾಡಿ ಕೊಡ್ತೀರಾ?" ಏಕಕಾಲಕ್ಕೆ ಹಲವು ಗುಳ್ಳೆಗಳು ಒಡೆದು ನಾನು ಕಂಗಾಲು! ಕರಿಯಪ್ಪನಿಗೆ ಮೀನುಗಾರಿಕಾ ಕಾಲೇಜಿನಲ್ಲಿ ಸ್ಥಾನವೇನೂ ಇಲ್ಲ. ಪ್ರೊ. ಮರಿಯಣ್ಣ ಕರಿಯಪ್ಪನ ಪ್ರಥಮ ಭೇಟಿಯಲ್ಲಿ ಮೋಡಿಗೊಳಗಾದ ಪರಿಣಾಮ ಈ ಗ್ರಂಥಾಲಯ ವ್ಯವಹಾರ. 'ಅತ್ಯುನ್ನತ ಮೌಲ್ಯದ ಆಕರ ಗ್ರಂಥ'ಗಳೆಲ್ಲ ಯಾವುದೇ ಅಧ್ಯಾಪಕ ನಾಲ್ಕೆಂಟು ಸೆಮಿನಾರು ಗಳಲ್ಲಿ ಅಯಾಚಿತವಾಗಿ ಒಟ್ಟು ಮಾಡಬಹು ದಾದ ಸಾಂದರ್ಭಿಕ ನೆರಳಚ್ಚು ಸಂಗ್ರಹಗಳು, ಹೆಚ್ಚೆಂದರೆ ಯಾವುದೋ ಮಹಾಗ್ರಂಥದ ಪರಿಚಯಾತ್ಮಕ ಕಿರುಪುಸ್ತಿಕೆಗಳು.

ನಾನು ಮಾಡಿದ ಪಾಪ ತಿಂದು ಪರಿಹಾರ ಮಾಡಿಕೊಳ್ಳಬೇಕಾದ್ದು ಇಪ್ಪತ್ತು ವರ್ಷಕ್ಕೂ ಹಳೆಯ ಮಾತಾದರೂ ಅದರ ವಿಷಾದ ಬಿಟ್ಟಿಲ್ಲ. ಕಳ್ಳರು, ವಂಚಕರು, ಕೊಲೆಗಾರರೂ ಉನ್ನತ ಮೌಲ್ಯಗಳ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿ ದೇಶಕೋಶಗಳನ್ನು ನಿಭಾಯಿಸುತ್ತಿರುವ ನಾಡಿನ ಪ್ರಜೆಯಾಗಿ ನನಗಷ್ಟೊಂದು ಪಾಪ ಪ್ರಜ್ಞೆ ಹೆಚ್ಚೋ ಏನೋ!

ಅಡ್ಡದಾರಿಯ ಹಿಡಿದು ಅತಿ ಶೀಘ್ರ ವೇಳೆಯಲಿ
ದುಡ್ಡು ಮಾಡುವೆನೆಂದು ಹೊರಟಾತ ಬದುಕಿನಲಿ
ದಡ್ಡನಾಗುವುದು ದಿಟಃ ಸ್ವರ್ಗಕ್ಕೆ ಒಳದಾರಿ
ಹೆಡ್ಡನೆದುರಿನಲಿ ಬಿದ್ದ ಹೆಬ್ಬಾವು ಅತ್ರಿಸೂನು

ಅಪಾಯಕ್ಕೆ ಅಂಜುತ್ತೀರಾ? ಅದು ನಿಮ್ಮ ಜನ್ಮದೊಂದಿಗೇ ನಿಮ್ಮನ್ನು ಹೊಂದಿಕೊಂಡು ಬಂದಿದೆ. ಅಪಾಯವಿರುವಲ್ಲೆಲ್ಲ ಆನಂದವಿದೆ. ಆನಂದವಿರುವಲ್ಲೆಲ್ಲಾ ಅಪಾಯವಿದೆ ಎಂಬುದನ್ನು ಮಾತ್ರ ಮರೆಯದಿರಿ. ಅವೆರಡೂ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

-ಜೆ. ಪಿ. ರಿಚಾರ್ಡ್

ಮುಕ್ತಿ ಮಾರ್ಗ

ಟಿ.ಎಸ್. ಲಲಿತ
೭೦೨, ೧ನೇ ಮಹಡಿ, ೧೭ನೇ ಮುಖ್ಯ
ರಸ್ತೆ, ಸರಸ್ವತಿಪುರಂ,
ಮೈಸೂರು-೫೭೦ ೦೦೯

ಪೊಲೀಸ್ ತನ್ನ ಕೆಂಪು ಪೇಟದ ಬಗ್ಗೆ, ಹೆಣ್ಣು ತನ್ನ ಆಭರಣಗಳ ಬಗ್ಗೆ, ವೈದ್ಯ ಸಾಲಾಗಿ ಕಾದು ಕುಳಿತ ರೋಗಿಗಳ ಬಗ್ಗೆ ಹೆಮ್ಮೆ ಪಡುವಂತೆ, ರೈತನಿಗೆ ತನ್ನ ಹೊಲದ ಬಗ್ಗೆ, ಅದರಲ್ಲೂ ಬೆಳೆ ಬೆಳೆದು ನಿಂತ ಹೊಲದ ಬಗ್ಗೆ ಹೆಮ್ಮೆ. ಜಂಗರ್‌ಗಂತೂ ತನ್ನ ಹೊಲ ನೋಡುತ್ತಿದ್ದಂತೆ ಹೆಮ್ಮೆಯ ಅಮಲೇರುತ್ತದೆ. ಮೂರು 'ಬಿಘಾ' ಕಬ್ಬಿನ ಬೆಳೆಗೆ ಕಡೇ ಪಕ್ಷ ಏನಿಲ್ಲವೆಂದರೂ ೩೦೦ರೂ. ಸಿಗಲೇಬೇಕು. ದೇವರ ದಯೆಯಿಂದ ಬೆಲೆಗಳೇರಿದರೆ ಆಗ ಹಣಕ್ಕೆ ಕೊರತೆಯೇ ಇರುವುದಿಲ್ಲ. ಅವನ ಎತ್ತುಗಳು ಮುದಿಯಾಗಿದ್ದು, ಬರುವ ಬಟೇಶ್ವರ ಜಾತ್ರೆಯಲ್ಲಿ, ಹೊಸದೊಂದು ಎತ್ತಿನ ಜೋಡಿ ಕೊಳ್ಳಲು ಅವನಾಗಲೇ ಯೋಜನೆ ಹಾಕಿದ್ದ. ಮತ್ತೆರಡು ಬಿಘಾ ಜಮೀನನ್ನೂ ಕೊಳ್ಳಬಹುದು. ಆದರೆ, ಒಂದಲ್ಲ ಒಂದು ಕಾರಣಕ್ಕೆ ತಾನು ಜಗಳವಾಡದಿದ್ದ ವ್ಯಕ್ತಿಯೊಬ್ಬರೂ ಹಳ್ಳಿಯಲ್ಲಿಲ್ಲ.

ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡು, ಮನೆಯ ಬಾಗಲಲ್ಲಿ ಕುಳಿತ ಜಂಗರ್‌ಗೆ ಆ ಸಂಜೆ, ಕುರಿಮಂದೆಯೊಂದು ತನ್ನತ್ತ ಬರುವುದು ಕಂಡಿತು. "ಅದು ಆ ಭಡವಾ ಬುದ್ಧೋನದೇ ಇರ್ಬೇಕು. ಇವತ್ತವ್ನಿಗೆ ಸರಿಯಾಗಿ ಬುದ್ಧಿ ಕಲಿಸ್ಲೇಬೇಕು. ಕುರಿ ಮಂದೆ ಹೊಲದೊಳ್ಗೆ ತರೋದೆ? ಅವನ ಗರ್ವ ನೋಡು. ನಾನಿಲ್ಲಿ ಕೂತಿರೋದು ಅವನ್ಗೆ ಕಾಣ್ತಾ ಇದ್ರೂ, ಆ ಕುರಿಗಳ್ನ ಹಿಂದಕ್ಕೆ ಹೊಡೀತ ಇಲ್ಲ. ಹೂಂ, ಯಾವಾಗ್ಲಾದ್ರೂ ನಂಗೇನು ರಿಯಾಯಿತಿ, ತೋರ್ಸಿದಾನಾ ? ಒಂದ್ಕುರಿ ಕೇಳಿದ್ರೆ ೫ರೂ ಹೇಳ್ತಾನೆ. ಕಂಬ್ಳಿನೇ ೪ರೂಪಾಯಿಗೆ ಮಾರಾಟ ಆಗ್ತಿರೋವಾಗ ಇವ್ನಿಗೆ ೫ರೂ ಬೇಕಂತೆ" ಎಂದು ಮನದಲ್ಲೇ ಅಂದುಕೊಂಡ ಜಂಗರ್.

ಕುರಿಗಳು ಹೊಲಕ್ಕೆ ತೀರಾ ಹತ್ತಿರ ಬಂದ್ವು. "ಎಲ್ಲಿ ಹೋಗ್ತಿದೀನಿ ಅಂತ ತಿಳ್ಕೊಂಡಿದೀಯಾ? ಹೊಲ ಕಾಣ್ತಾ ಇಲ್ವ? "ಜಂಗರ್ ಕೂಗಿದ.

ತಪ್ಪೊಪ್ಪಿಕೊಳ್ಳುವಂತೆ ಬುದ್ಧೋ ಹೇಳಿದ "ಮಹತು, ಗದ್ದೆಯ ಬದುವಿನ ಮೇಲೆ ಅವುಗಳನ್ನು ನಡೆಸ್ಕೊಂಡು ಹೋಗ್ತೀನಿ. ಹಿಂದೆ ಹೋಗ್ಬೇಕಾದ್ರೆ ೧ ಮೈಲಿ ಬಳಸು ದಾರೀಲಿ ಹೋಗ್ಬೇಕು".

"ನಿನ್ನ ದಾರಿ ತಡೆ ಮಾಡೋಕೆ, ನನ್ನ ಹೊಲ ತುಳಿಸ್ಕೋಬೇಕಾ ? ಹಿಂದಕ್ಕೆ ಹೊಡಿ ಕುರಿಗಳ್ನ."

ಬುದ್ಧೋ ಕೇಳಿಕೊಂಡ "ದಯವಿಟ್ಟು ಇದೊಂದ್ಸಲ ಬಿಟ್ಬಿಡು. ಇನ್ನೊಮ್ಮೆ ಈ ದಾರೀಲಿ ಬರಲ್ಲ."

"ಹೇಳ್ಳಿಲ್ವಾ, ಕುರಿಗಳ್ನ ಹಿಂದಕ್ಕೆ ತಗೊ. ನಿನ್ನ ಒಂದೇ ಒಂದು ಕುರಿ ಬದುವಿಗೆ ಕಾಲಿಡೊಂದ್ರೆ, ಆಗೋ ಪರಿಣಾಮಕ್ಕೆ ನೀನೇ ಜವಾಬ್ದಾರನಾಗ್ತೀಯೊ."

"ನಿನ್ನ ಒಂದೇ ಒಂದು ಗಿಡಕ್ಕೆ ಅಪಾಯವಾಗ್ದ ಹಾಗೆ ನೋಡ್ಕೋತೀನಿ ಅನ್ನೋ ಭರವಸೆ ನಾನು ಕೊಡ್ತೀನಿ". ವಿನಯವಾಗಿ ಮಾತಾಡ್ತಿದ್ರೂ, ಹಿಂದೆ ಹೋಗೋದು ತನ್ನ ಮರ್ಯಾದೆಗೆ ಕುಂದೆಂದು ಭಾವಿಸಿದ ಬುದ್ಧೋ. ಇಂಥ ಬೆದರಿಕೆಗೆಲ್ಲಾ ನಾನು ಬಗ್ಗಿದ್ರೆ ಕುರಿ ಕಾಯೋದೇ ಕಷ್ಟವಾಗತ್ತೆ. ಎಲ್ಲರೂ ತನ್ನನ್ನು ಹಿಂದೆ ಕಳಿಸ್ತಾರೆ.

ಮುನ್ಷಿ ಪ್ರೇಮಚಂದರ ಹಿಂದಿ ಕಥೆಯ ಅನುವಾದ

ಸೊಗಸಾಗಿ ಬೆಳೆದಿತ್ತು. ಕುತೂಹಲ ತಡೆಯಲಾರದೆ ಟಾಮ್ ಕೇಳಿದ, ''ಇಲ್ಲಿ ಈ ಮರಗಳು ಇನ್ನೂ ಬದುಕಿ ಉಳಿದಿವೆಯಲ್ಲ? ಕಾರಣ ವೇನು?''

ಚಾರ್ಲಿ ಉತ್ತರಿಸಿದ, ''ಹಲವು ವರ್ಷಗಳ ಹಿಂದೆ ಈ ತೊರೆಯ ಇಕ್ಕೆಲಗಳಲ್ಲಿ ಭೂಸವೆತವನ್ನು ತಡೆಯುವುದಕ್ಕಾಗಿ ನಾನೇ ಈ ಗಿಡಗಳನ್ನು ನೆಟ್ಟು ಬೆಳೆಸಿದೆ. ಈಗ ಅವು ಬೆಳೆದು ಮೀನುಗಳ ಮರಿಗಳಿಗೆ ಅಗತ್ಯವಿರುವ ತಂಪುನೆಳಲನ್ನು ನೀಡುತ್ತಿವೆ.''

''ಏನು...! ಮೀನುಗಳೆ !'' ಟಾವನ್ ಆಶ್ಚರ್ಯದಿಂದ ಉದ್ಗರಿಸಿದ.

''ಹೌದು! ಈಗ ತಾನೇ ಮೊಟ್ಟೆಯೊಡೆದು ಬಂದ ಈ ಪುಟ್ಟ ಮರಿಗಳು ಬೆಳ್ಳಿಯ ಕಡ್ಡಿಗಳಂತೆ ಹೊಳೆಯುತ್ತಿವೆ. ಆದರೆ ವರ್ಷದಿಂದ ವರ್ಷಕ್ಕೆ ಇವುಗಳ ಸಂಖ್ಯೆ ಕ್ಷೀಣಿಸುತ್ತಿದೆ.'' ಚಾರ್ಲಿ ಉತ್ತರಿಸಿದ.

ಕೆಲವು ವರ್ಷಗಳ ಹಿಂದೆ ಪೆಟಲೂಮಾದಿಂದ ಕೆಲವು ಮೈಲು ದೂರದಲ್ಲಿ ತೊರೆಯ ಹರಿವಿನ ಮೇಲ್ಭಾಗದಲ್ಲಿ ಒಂದು ಅಣೆಕಟ್ಟೆಯನ್ನು ಕಟ್ಟಿದ ಮೇಲೆ ವರ್ಷದ ಎಲ್ಲ ಋತುಗಳಲ್ಲೂ ಸಮೃದ್ಧವಾಗಿ ನೀರು ಹರಿಯುತ್ತಿದ್ದ ಈ ತೊರೆ ಬೇಸಿಗೆಯಲ್ಲಿ ಬತ್ತಿ ಹೋಗುತ್ತಿದೆ. ಇದರಿಂದಾಗಿ ಟ್ರೌಟ್ ಮೀನಿನ ಸಂತತಿ ಕ್ಷೀಣಿಸುತ್ತ ಬಂದಿತ್ತು. ಚಾರ್ಲಿ ನಡೆಸಿದ ಈ ಒಂದು ಪುಟ್ಟ ಪ್ರಯತ್ನದಿಂದಾಗಿ ಈ ಜೀವಸಂಕುಲ ಸಂಪೂರ್ಣವಾಗಿ ನಾಶವಾಗದೆ ಉಳಿದಿತ್ತು.

ನೀರಿನಲ್ಲಿ ನಿಂತ ಚಾರ್ಲಿಯ ಕಾಲುಗಳ ಸುತ್ತಲೂ ಆಟವಾಡುತ್ತಿದ್ದ ಟ್ರೌಟ್ ಮೀನುಗಳ ಮೋಹಕ ಮರಿಗಳನ್ನು ನೋಡುತ್ತಿದ್ದಂತೆ 'ಚಾರ್ಲಿಯಂತಹ ವೃದ್ಧನೊಬ್ಬ ಏಕಾಕಿಯಾಗಿ ಇಂಥ ಒಂದು ಪುನರುಜ್ಜೀವನ ಕಾರ್ಯವನ್ನು ಮಾಡಬಹುದಾದರೆ ನಮ್ಮ ಜನರೆಲ್ಲ ಸಂಘಟಿತರಾದರೆ ಹತ್ತು ಕಿಲೋಮೀಟರ್ ಉದ್ದದ ಈ ತೊರೆಗೆ ಮತ್ತೆ ಜೀವಕಳೆ ತುಂಬಲು ಸಾಧ್ಯವಿಲ್ಲವೆ?' ಎಂದು ಟಾವನ್ ಯೋಚಿಸತೊಡಗಿದನು.

ಬಿಡುವಿನ ವೇಳೆಯಲ್ಲಿ ಗುಡ್ಡಕಾಡುಗಳಲ್ಲಿ, ನದೀತೀರಗಳಲ್ಲಿ ಅಲೆಯುವುದು ಹಾಗೂ ಅಲ್ಲಿನ ಜೀವ ಸಂಕುಲವನ್ನು ಹತ್ತಿರದಿಂದ ನೋಡುವುದು ಟಾವನ್‌ನ ಹವ್ಯಾಸವಾಗಿತ್ತು. ಇದಲ್ಲದೆ ಕಾಲೇಜು ವ್ಯಾಸಂಗದ ಸಮಯದಲ್ಲಿ ಬೇಸಗೆಯ ರಜಾದಿನಗಳಲ್ಲಿ ಅರಣ್ಯ ಸಂರಕ್ಷಕನಾಗಿ ಕೆಲಸಮಾಡಿದ ಅನುಭವವೂ ಅವನಿಗಿತ್ತು. ಹೀಗಾಗಿ ಅವನು ಪೆಟಲೂಮಾದಲ್ಲಿರುವ ಕಾಸಾ ಗ್ರಾಂಡ್ ಪ್ರೌಢಶಾಲೆಯ ಶಿಕ್ಷಕನಾಗಿ ನೇಮಕಗೊಂಡಾಗ ವನ್ಯ ಜೀವಶಾಸ್ತ್ರ ಮತ್ತು ಅರಣ್ಯಶಾಸ್ತ್ರಗಳನ್ನು ಬೋಧಿಸಲು ಒಪ್ಪಿಕೊಂಡ. ಮುಂದೆ ಸುಮಾರು ಒಂದೂವರೆ ವರ್ಷಕಾಲ ಅವನು ಅಮೇರಿಕದ ಪಶ್ಚಿಮ ಕರಾವಳಿಯ ಹೊಳೆಹಳ್ಳಗಳ ಬಗ್ಗೆ ಮತ್ತು ಅವನ್ನು ಆಶ್ರಯಿಸಿದ ಜೀವಜಾತಿಗಳ ಬಗ್ಗೆ ಅಧ್ಯಯನ ನಡೆಸಿ ೧೯೮೩ರ ಏಪ್ರಿಲ್ ತಿಂಗಳಲ್ಲಿ ಒಂದು ಮಹತ್ಕಾರ್ಯಕ್ಕಾಗಿ ತನ್ನ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಿದ.

ಜೀವಶಾಸ್ತ್ರದ ವಿದ್ಯಾರ್ಥಿಗಳು ತರಗತಿಯ ಕೋಣೆಯೊಳಗೆ ಕಲಿಯುವುದಕ್ಕಿಂತಲೂ ತರಗತಿಯ ಹೊರಗೆ ಕಲಿಯುವುದು ಸಾಕಷ್ಟಿರುತ್ತದೆಂದು ಹೇಳಿ ಒಂದು ದಿನ ಟಾವನ್ ತನ್ನ ವಿದ್ಯಾರ್ಥಿಗಳೊಂದಿಗೆ ಎಡೋಬ್ ಕೊಳ್ಳದ ಕಡೆ ಹೊರಟು ಅಲ್ಲಿಯ ತೊರೆಯ ದುರಂತ ಕತೆಯನ್ನು ಹೇಳಿದನು. ''ಎಡೋಬ್ ಕೊಳ್ಳದ ತೊರೆ ಇನ್ನೂ ಅವಸಾನ ಗೊಂಡಿಲ್ಲ; ಚಾರ್ಲಿಯಂತಹ ಒಬ್ಬ ವೃದ್ಧ ಏಕಾಕಿಯಾಗಿ, ಇಲ್ಲಿ ವಿನಾಶದ ಅಂಚಿನಲ್ಲಿರುವ ತೊರೆಯನ್ನೇಕೆ ರಕ್ಷಿಸಬಾರದು?''

ಎಂದು ಟಾಮ್ ತನ್ನ ವಿದ್ಯಾರ್ಥಿಗಳಿಗೆ ಸವಾಲೆಸೆದನು.

ಆಗ ಹನ್ನೆರಡನೆಯ ತರಗತಿಯ ವಿದ್ಯಾರ್ಥಿನಿ ಆನ್ನಾ ಕಾಸ್ನರ್ ''ಸರ್, ನಾವೇನು ಮಾಡಬೇಕೆಂದು ನೀವು ಅಪೇಕ್ಷಿಸುತ್ತೀರಿ ?'' ಎಂದು ಕೇಳಿದಳು. ಅದಕ್ಕುತ್ತರವಾಗಿ ಟಾಮ್'ನನ್ನ ಅಪೇಕ್ಷೆ ಏನೆಂಬುದು ಇಲ್ಲಿ ಮುಖ್ಯವಲ್ಲ; ಟ್ರೌಟ್ ಜಾತಿಯ ಮೀನುಗಳು ಈಗ ವಿನಾಶದ ಅಂಚಿನಲ್ಲಿವೆ. ಅವುಗಳ ಉಳಿವು ಅಳಿವು ನಿಮ್ಮ ಪೀಳಿಗೆಗೆ ಸಂಬಂಧಿಸಿದೆ, ನನಗಲ್ಲ. ಆದುದರಿಂದ ನೀವೇ ಈ ಸಮರದಲ್ಲಿ ನಾಯಕತ್ವ ವಹಿಸಬೇಕು'' ಎಂದು ಹೇಳಿದನು.

ಸುಮಾರು ೩೦ ವಿದ್ಯಾರ್ಥಿಗಳು ಈ ಯೋಜನೆಯಲ್ಲಿ ಸ್ವಯಂಸೇವಕರಾಗಿ ದುಡಿಯಲು ಮುಂದೆ ಬಂದರು. ಮುಂದಿನ ಕೆಲವು ದಿನಗಳಲ್ಲಿ ಟಾಮ್ ಈ ಸ್ವಯಂ- ಸೇವಕರೊಡನೆ ಎಡೋಬ್‌ಕ್ರೀಕ್‌ನ ತೊರೆಯ ಇಕ್ಕೆಲಗಳಲ್ಲಿಯೂ ಸುತ್ತಾಡಿ ಅಲ್ಲಿ ಒಂದುಕಾಲದಲ್ಲಿ ಓಕ್ ವೃಕ್ಷಗಳೂ ಹುಲ್ಲುಗಾವಲುಗಳೂ ಜನಸಸ್ಯಗಳೂ ಸಮೃದ್ಧವಾಗಿದ್ದು ತೊರೆಯುದ್ದಕ್ಕೂ ಅಲ್ಲಲ್ಲಿ ಉಂಟಾದ ಕೊಳಗಳಿಗೆ ತಂಪಿನ ನೆಳಲು ನೀಡುತ್ತಿದ್ದುವೆಂದೂ ಪೆಸಿಫಿಕ್ ಸಾಗರದಿಂದ ಟ್ರೌಟ್ ಜಾತಿಯ ಮೀನುಗಳು ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಮೊಟ್ಟೆಗಳನ್ನಿಡಲು ಇಲ್ಲಿ ಬರುತ್ತಿದ್ದುವೆಂದೂ ತಿಳಿಯ ಹೇಳಿದ. ಈಗ ಅಲ್ಲಿ ಬಿದ್ದಿರುವ ತ್ಯಾಜ್ಯ ವಸ್ತುಗಳ ರಾಶಿಯನ್ನೂ ತೋರಿಸಿ ಈ ತೊರೆಯ ಹರಿವಿನ ಪಾತ್ರವನ್ನು ಸ್ವಚ್ಛಗೊಳಿಸಿದರೆ ಮತ್ತೆ ಮೊದಲಿನಂತೆ ಇಲ್ಲಿ ಜೀವಸಂಕುಲ ನಳನಳಿಸಬಹುದೆಂದು ವಿವರಿಸಿದನು. ಕೂಡಲೇ ಹಲವು ವಿದ್ಯಾರ್ಥಿಗಳು ತಮ್ಮ ಮನೆಗಳಿಂದ ಲಾರಿಗಳನ್ನು ತಂದರು. ತೊರೆಯನ್ನು ಸ್ವಚ್ಛಗೊಳಿಸುವ ಕಾರ್ಯ ಅಂದೇ ಪ್ರಾರಂಭವಾಯಿತು.

ಈ ನಡುವೆ ಟಾಮ್ ಒಂದು ದಿನ ಕೆಲವು ವಿದ್ಯಾರ್ಥಿಗಳನ್ನು ಕರಕೊಂಡು ಸೊನೊಮಾ ಪರ್ವತಪ್ರದೇಶದಲ್ಲಿ ಅಡ್ಡಾಡಿ ಅಲ್ಲಿ ಬೀಜ ಪ್ರಸರಣದಿಂದ ಬೆಳೆದ ಚಿಕ್ಕಚಿಕ್ಕ ಗಿಡಗಳನ್ನು ಸಂಗ್ರಹಿಸಿ ಎಡೋಬ್ ತೊರೆಯ ಇಕ್ಕೆಲಗಳಲ್ಲಿಯೂ ಅವುಗಳನ್ನು ನೆಡಲು ಪ್ರೇರೇಪಿಸಿದ. ವರ್ಷಕ್ಕೆ ಸುಮಾರು ೧೨೦೦ ಗಿಡಗಳಂತೆ ಮೂರುವರ್ಷಗಳ ಕಾಲ ಸತತವಾಗಿ ಗಿಡನೆಡುವ ಕೆಲಸ ಮುಂದುವರೆಯಿತು. ನೋಡನೋಡುತ್ತಿದ್ದಂತೆ ಎಲ್ಲೆಲ್ಲೂ ಹಸಿರು ಕಂಗೊಳಿಸತೊಡಗಿತು.

ವಿದ್ಯಾರ್ಥಿಗಳು ಕೈಗೊಂಡ ಈ ಸಾಹಸಗಾಥೆ ಬಹುಬೇಗನೆ ಸುತ್ತಮುತ್ತಲಿನ ಹಳ್ಳಿ ಪಟ್ಟಣಗಳನ್ನು ತಲುಪಿತು. ಹೆಚ್ಚು ಹೆಚ್ಚು ವಿದ್ಯಾರ್ಥಿಗಳು ಈ ಕೆಲಸದಲ್ಲಿ ಸೇರಲು ಪ್ರಾರಂಭಿಸಿದರು. ವಿದ್ಯಾರ್ಥಿಗಳ ತಂದೆ ತಾಯಂದಿರೂ, ಹಿತೈಷಿಗಳೂ ವಾರದ ರಜಾ ದಿನಗಳಲ್ಲಿ ಇವರನ್ನು ಸೇರಿದರು. ಹಿರಿಯ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮುಗಿಸಿ ಶಾಲೆಯನ್ನು ಬಿಟ್ಟು ಹೋದರೂ ರಜಾ ದಿನಗಳಲ್ಲಿ ಇಲ್ಲಿಗೆ ಬಂದು ಈ ಕೆಲಸದಲ್ಲಿ ಭಾಗಿಯಾಗ ತೊಡಗಿದರು. ಸೈನಿಕರೂ ತಮ್ಮ ರಜೆಯ ಅವಧಿಯಲ್ಲಿ ಈ ಮಹತ್ತರ ಕಾರ್ಯದಲ್ಲಿ ಸೇರತೊಡಗಿದರು.

ಇಷ್ಟೆಲ್ಲ ಪುನರುಜ್ಜೀವನ ಕಾರ್ಯ ನಡೆದರೂ ಇದು ಶಾಶ್ವತವಾಗಿ ಉಳಿಯಬೇಕಾದರೆ ಈ ತೊರೆಯಲ್ಲಿ ಸರ್ವಋತುಗಳಲ್ಲಿಯೂ ನೀರು ಹರಿಯುವಂತಾಗಬೇಕು. ಇದಕ್ಕಿರುವ ಒಂದೇ ಮಾರ್ಗವೆಂದರೆ ಮೇಲಿನ ಅಣೆಕಟ್ಟೆಯಿಂದ ತೊರೆಗೆ ಸತತವೂ ನೀರು ಬಿಡುವಂತೆ ಮಾಡುವುದು. ಜ್ಯೂಲಿ ಲ್ಯಾಂಬರ್ಟ್ ಎಂಬ ಉತ್ಸಾಹೀ ವಿದ್ಯಾರ್ಥಿನಿ ಈ ಬಗ್ಗೆ ಅಧ್ಯಯನ ಪ್ರಾರಂಭಿಸಿದಳು. ಈ ಬಗ್ಗೆ ಪೆಟಲೂಮಾದ ಮುನಿಸಿಪಾಲಿಟಿಯ ಕಡತ

ಗಳನ್ನು ಪರಿಶೀಲಿಸಲು ಅವಳು ಅನುಮತಿ ಪಡೆದು ತನ್ನ ಅಧ್ಯಯನ ಪ್ರಾರಂಭಿಸಿದಳು. ಈ ಕಡತಗಳನ್ನು ಪರಿಶೀಲಿಸಿದಾಗ ಅವಳಿಗೆ ಒಂದು ನಿಧಿಯೇ ಸಿಕ್ಕಿದಷ್ಟು ಸಂತೋಷವಾಯಿತು.

ಎಡ್ಡೋಬ್ ತೊರೆಗೆ ಅಡ್ಡವಾಗಿ ಬಹಳ ವರ್ಷಗಳ ಹಿಂದೆ ಕಟ್ಟಿದ್ದ ಲಾಲರ್ ಜಲಾಶಯದಿಂದ ಪೆಟಲೂಮಾ ನಗರಕ್ಕಾಗಲಿ ಅಥವಾ ಇನ್ನಾವ ಹಳ್ಳಿ, ಪಟ್ಟಣಗಳಿಗಾಗಲಿ ನೀರು ಸರಬರಾಜಾಗುತ್ತಿರಲಿಲ್ಲ. ಜ್ಯೂಲಿಯ ನಾಯಕತ್ವದಲ್ಲಿ ಕೆಲವು ವಿದ್ಯಾರ್ಥಿಗಳು ಮುನಿಸಿಪಲ್ ಅಧಿಕಾರಿಗಳನ್ನು ಭೇಟಿಯಾಗಿ ಈ ನಿರುಪಯುಕ್ತ ಜಲಾಶಯದ ತೂಬುಗಳನ್ನು ತೆರೆದು ತೊರೆಯಲ್ಲಿ ಸತತವೂ ನೀರು ಹರಿಯುವಂತೆ ಮಾಡಬೇಕೆಂದು ಒತ್ತಾಯಿಸಿದರು. ಆದರೆ ತುರ್ತುಪರಿಸ್ಥಿತಿಯಲ್ಲಿ ಪೆಟಲೂಮಾ ನಗರಕ್ಕೆ ಈ ಜಲಾಶಯದ ಆವಶ್ಯಕತೆಯೆಂದು ತಿಳಿಸಿ ಅಧಿಕಾರಿಗಳು ತೂಬು ತೆರೆಯಲು ನಿರಾಕರಿಸಿದರು. ಜ್ಯೂಲಿ ಲ್ಯಾಂಬರ್ಟ್ ತನ್ನ ಪ್ರಯತ್ನವನ್ನು ಬಿಡಲಿಲ್ಲ. ಅವಳು ''ಈಗ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ಈ ತೊರೆಯನ್ನು ನಂಬಿಕೊಂಡ ಜೀವಸಂಕುಲ ವಿನಾಶದ ಅಂಚಿನಲ್ಲಿದೆ'' ಎಂದು ವಾದಿಸಿದಳು. ಅದಕ್ಕೆ ಮುನಿಸಿಪಲ್ ಅಧಿಕಾರಿ ''ನಾನು ಹೇಳುವುದು ಅಂಥ ತುರ್ತು ಪರಿಸ್ಥಿತಿಯನ್ನಲ್ಲ. ಶತ್ರುಗಳು ನಮ್ಮ ಮೇಲೆ ಪರಮಾಣು ಬಾಂಬ್ ದಾಳಿ ಮಾಡಿದಾಗ ಈ ನೀರಿನ ಸಂಗ್ರಹ ಬೇಕಾಗುತ್ತದೆ'' ಎಂದು ಹೇಳಿದರು. ಆಗ ಜ್ಯೂಲಿ ಸಿಟ್ಟಿನಿಂದ ''ಮಾನ್ಯ ಅಧಿಕಾರಿಗಳೇ, ನಮ್ಮ ಮೇಲೆ ಪರಮಾಣ ಬಾಂಬ್ ಬಿದ್ದರೆ ನಮಗಾರಿಗೂ ನೀರಿನ ಅಗತ್ಯವಿರುವುದಿಲ್ಲ'' ಎಂದು ಮಾರ್ಮಿಕವಾಗಿ ನುಡಿದಳು. ಆದರೆ ಮುನಿಸಿಪಲ್ ಅಧಿಕಾರಿಗಳು ತಮ್ಮ ಹಠವನ್ನು ಬಿಡಲಿಲ್ಲ.

ವಿದ್ಯಾರ್ಥಿಗಳಿಗೆ ಒಂದು ಹೊಸ ಯೋಜನೆ ಹೊಳೆಯಿತು. 'ನಾವೆಲ್ಲ ಸೇರಿ ನಮ್ಮ ಶಾಲೆಯ ಆವರಣದಲ್ಲಿ ಒಂದು ಮೀನಿನ ಮರಿ ಸಾಕಣಾ ಕೇಂದ್ರವನ್ನೇಕೆ ಸ್ಥಾಪಿಸಬಾರದು? ಮುನಿಸಿಪಲ್ ಅಧಿಕಾರಿಗಳು ಅಣೆಕಟ್ಟೆಯ ತೂಬುಗಳನ್ನು ತೆರೆಯುವವರೆಗೆ ನಾವು ಈ ಕೇಂದ್ರದಲ್ಲಿ ಮರಿಗಳನ್ನು ಸಾಕಿ ಅವು ದೊಡ್ಡವಾದ ಮೇಲೆ ನದಿಯ ಹರಿವಿನ ಕೆಳಭಾಗದಲ್ಲಿ ಅವುಗಳನ್ನು ಬಿಡಬಹುದು ಎಂದು ಯೋಚಿಸಿದರು. ಇದಕ್ಕಾಗಿ ಹಣ ಸಂಗ್ರಹಿಸಲು ವಿದ್ಯಾರ್ಥಿಗಳು ಕಾರುಗಳನ್ನು ತೊಳೆಯುವ, ಕಸಗುಡಿಸುವ, ಪತ್ರಿಕೆಗಳನ್ನು ಮಾರುವ ಮುಂತಾದ ಸಣ್ಣಪುಟ್ಟ ಕೆಲಸಗಳನ್ನು ಮಾಡಿದರು. ಒಂದೆರಡು ತಿಂಗಳಲ್ಲಿ ಮೀನು ಸಾಕಣಾಕೇಂದ್ರವು ಪ್ರಾರಂಭವಾಯಿತು. ಆದರೆ ಅಷ್ಟರಲ್ಲಿ ಒಂದು ಕೆಟ್ಟ ಸುದ್ದಿ ಬಂತು. ಅವರು ಕಟ್ಟಿದ ಮೀನು ಸಾಕಣಾ ಕೇಂದ್ರವು ಕಟ್ಟಡಗಳನ್ನು ಕಟ್ಟುವ ನಿಯಮಾವಳಿಗನುಸಾರವಾಗಿ ರಚಿತವಾಗಿರಲಿಲ್ಲ. ಆದುದರಿಂದ ಅವರು ಕಟ್ಟಿದ ಕಟ್ಟಡವನ್ನು ಕೆಡವಬೇಕಾಯಿತು. ವಿದ್ಯಾರ್ಥಿಗಳು ಹತಾಶರಾದರು.

ಆದರೆ ಜಾಸನ್ ಸಿಮನ್ಸ್ ಎಂಬ ವಿದ್ಯಾರ್ಥಿ ಧೈರ್ಯಗೆಡಲಿಲ್ಲ. ''ನಾವು ಇನ್ನೂ ದೊಡ್ಡ ಪ್ರಮಾಣದಲ್ಲಿ ಮೀನಿನ ಮರಿಸಾಕಣಾ ಕೇಂದ್ರವನ್ನು ನಿರ್ಮಿಸೋಣ. ಅಲ್ಲಿ ನಮ್ಮ ಆಸುಪಾಸಿನಲ್ಲಿರುವ ಎಲ್ಲ ತೊರೆಗಳಲ್ಲೂ ವಿನಾಶದ ಅಂಚಿನಲ್ಲಿರುವ ಮೀನುಗಳ ಮರಿಗಳನ್ನು ತಂದು ಸಾಕಬಹುದು'' ಎಂದು ಹೇಳಿ ಒಂದು ಹೊಸ ನಕ್ಷೆಯನ್ನು ತಯಾರಿಸಿದನು. ಇದರ ನಿರ್ಮಾಣಕ್ಕೆ ಅಪಾರ ಹಣ ಬೇಕಾಗಿತ್ತು. ಇದಲ್ಲದೆ ಇದನ್ನು ನಿರ್ಮಿಸಿದ ಅನಂತರ ಈ ಕೇಂದ್ರವನ್ನು ನಿರ್ವಹಿಸಲು ಪರಿಣತರು ಅಲ್ಲಿರಲಿಲ್ಲ. ಆದುದರಿಂದ ಮುಂದಿನ ಬೇಸಗೆಯ ರಜೆಯಲ್ಲಿ ಟಾಮ್ ಫೂರರ್ ಅಲಾಸ್ಕಾದಲ್ಲಿರುವ ಒಂದು ಬೃಹತ್

ಮೀನುಸಾಕಣಾ ಕೇಂದ್ರಕ್ಕೆ ತೆರಳಿ ಅಲ್ಲಿ ಕಾರ್ಯ ನಿರ್ವಹಿಸಿ ಸಾಕಷ್ಟು ಪರಿಣತಿಯನ್ನು ಪಡೆದು ಹಿಂದಿರುಗಿದನು.

ಮುಂದೆ ಎರಡುವರ್ಷಗಳ ಕಾಲ ಹಣವನ್ನು ಸಂಗ್ರಹಿಸುವ ಕೆಲಸ ಮುಂದುವರೆಯಿತು. ಕ್ಯಾಲಿಫೋರ್ನಿಯಾ ರಾಜ್ಯ ಸರಕಾರವು ೫೦ ಸಾವಿರ ಡಾಲರ್ ಅನುದಾನವನ್ನು ಪ್ರಕಟಿಸಿ ಮೀನು ಮರಿಸಾಕಣಾ ಕೇಂದ್ರದ ಸಾಮರ್ಥ್ಯವನ್ನು ತಗ್ಗಿಸಲು ಸಲಹೆ ನೀಡಿತು. ಆದರೆ ವಿದ್ಯಾರ್ಥಿಗಳು 'ವಿನಾಶದ ಅಂಚಿನಲ್ಲಿರುವ ಸಾಲ್ಮನ್ ಎಂಬ ಜಾತಿಯ ಮೀನಿನ ಮರಿಗಳನ್ನೂ ನಾವಿಲ್ಲಿ ರಕ್ಷಿಸುತ್ತೇವೆ'' ಎಂದು ಸರ್ಕಾರಕ್ಕೆ ತಿಳಿಸಿದರು. ಈ ವಿದ್ಯಾರ್ಥಿಗಳ ಉತ್ಸಾಹ.ಹಾಗೂ ಪ್ರಾಮಾಣಿಕ ಕಳಕಳಿಯನ್ನು ಮನಗಂಡ ಸರಕಾರವು ತನ್ನ ಅನುದಾನದ ಮೊತ್ತವನ್ನು ಒಂದು ಲಕ್ಷ ಡಾಲರ್‌ಗೆ ಏರಿಸಿತು. ವಿದ್ಯಾರ್ಥಿಗಳ ಈ ನಿಃಸ್ವಾರ್ಥ ಸೇವೆಯನ್ನೂ ಅವರ ಪರಿಸರ ಕಾಳಜಿಯನ್ನು ಗಮನಿಸುತ್ತಿದ್ದ ಕೆಲವು ಶ್ರೀಮಂತ ರೈತರೂ ಧನ ಸಹಾಯ ನೀಡಿ ಪ್ರೋತ್ಸಾಹಿಸಿದರು. ಒಂದು ಸಂಸ್ಥೆ ಕಟ್ಟಡ ನಿರ್ಮಾಣ ಸಾಮಗ್ರಿಯನ್ನೂ ಇನ್ನು ಕೆಲವರು ಯಂತ್ರೋಪಕರಣಗಳನ್ನೂ ಉಚಿತವಾಗಿ ನೀಡಿದರು.

ತಮ್ಮ ಪ್ರತಿಯೊಂದು ಪ್ರಯತ್ನದಲ್ಲೂ ಈ ರೀತಿಯಾಗಿ ಯಶಸ್ಸು ದೊರೆಯುತ್ತಲೇ ಇದ್ದರೂ ಮುನಿಸಿಪಲ್ ಅಧಿಕಾರಿಗಳನ್ನು ಹೇಗಾದರೂ ಮಾಡಿ ದಾರಿಗೆ ತರಬೇಕೆಂಬ ಛಲ ವಿದ್ಯಾರ್ಥಿಗಳ ಹೃದಯದಲ್ಲಿ ಅಡಗಿಕೊಂಡಿತ್ತು. ಇದಕ್ಕಾಗಿ ಭೂವಿಜ್ಞಾನದಲ್ಲಿ ವಿಶೇಷ ಆಸಕ್ತಿಯುಳ್ಳ ಇಬ್ಬರು ವಿದ್ಯಾರ್ಥಿಗಳು ಆ ಪ್ರದೇಶದ ಭೂಸ್ತರಗಳ ನಕ್ಷೆಗಳನ್ನು ತಮ್ಮ ಶಾಲೆಗೆ ತಂದು ತರಗತಿಯ ನೆಲದಮೇಲೆ ಹರಡಿ ಒಂದೊಂದಾಗಿ ಜೋಡಿಸತೊಡಗಿದರು. ನೋಡನೋಡುತ್ತಿದ್ದಂತೆ ಅವರ ಕಣ್ಣುಗಳಲ್ಲಿ ಹೊಳಪು ಕಾಣಿಸಿತು. ಕೂಡಲೇ ಅವರು ತಮ್ಮ ನೆಚ್ಚಿನ ಅಧ್ಯಾಪಕ ಟಾಮ್‌ನನ್ನು ಕರೆದು ಲಾಲರ್ ಅಣೆಕಟ್ಟಿನ ಕೆಳಗೆ ಭೂಸ್ತರದಲ್ಲಿರುವ ಒಂದು ದೊಡ್ಡ ಬಿರುಕನ್ನು ತೋರಿಸಿದರು. ಟಾಮ್‌ಗೆ ಬಹಳ ಸಂತೋಷವಾಯಿತು. ''ಈಗ ಮುನಿಸಿಪಲ್ ಅಧಿಕಾರಿಗಳು ಏನನ್ನುತ್ತಾರೆಂದು ನೋಡೋಣ'' ಎಂದು ಅವನು ಉದ್ಗರಿಸಿದನು.

ಈ ಪ್ರದೇಶದಲ್ಲಿ ಭೂಕಂಪ ಉಂಟಾದರೆ ಕಂಪನದ ಅಲೆಗಳಿಂದ ಅಣೆಕಟ್ಟೆಯನ್ನು ರಕ್ಷಿಸಲು ಲಕ್ಷಾಂತರ ಡಾಲರ್ ಹಣ ಬೇಕಾಗಬಹುದೆಂದು ತಜ್ಞರು ಅಭಿಪ್ರಾಯಪಟ್ಟರು. ಮುನಿಸಿಪಲ್ ಅಧಿಕಾರಿಗಳು ಇದನ್ನು ಅನುಮೋದಿಸಿದರು. ಆದರೆ ಮುನಿಸಿಪಲ್ ಕೌನ್ಸಿಲ್ ಇದನ್ನು ವಿರೋಧಿಸಿ ಈ ನಿರುಪಯೋಗಿ ಅಣೆಕಟ್ಟೆಯನ್ನು ಒಡೆಯಬೇಕೆಂಬ ನಿರ್ಣಯವನ್ನು ಅಂಗೀಕರಿಸಿತು. ಇದರ ಫಲವಾಗಿ ಅಕ್ಟೋಬರ್ ೧೯೯೨ರಲ್ಲಿ ಎಡೋಬ್‌ಕ್ರೀಕ್ ತೊರೆ ಮತ್ತೆ ತನ್ನ ಪ್ರಾಚೀನ ವೈಭವವನ್ನು ಪಡೆಯಿತು. ಇದಾದ ಕೆಲವು ತಿಂಗಳುಗಳಲ್ಲೇ ವಿದ್ಯಾರ್ಥಿಗಳು ಅಲ್ಲಿ ಒಂದು ಪವಾಡವನ್ನೇ ನೋಡಿದರು. ಟ್ರೌಟ್ ಮೀನುಗಳು ತಂಡೋಪತಂಡವಾಗಿ ಈ ತೊರೆಗೆ ಬಂದು ಇಲ್ಲಿ ಮೊಟ್ಟೆಯಿಟ್ಟು ಹಿಂದಿರುಗುವುದನ್ನೂ ಈ ಮೊಟ್ಟೆಗಳೊಡೆದು ಬೆಳ್ಳಿಯ ಕಡ್ಡಿಗಳಂಥ ಸುಂದರ ಮರಿಗಳು ಆ ತೊರೆಯ ಕೊಳಗಳಲ್ಲಿ ಬೆಳೆಯುತ್ತಿರುವುದನ್ನೂ ಕಂಡು ಈ ವಿದ್ಯಾರ್ಥಿಗಳಿಗೆ ರೋಮಾಂಚನವಾಯಿತು.

೧೯೯೩ರ ಏಪ್ರಿಲ್ ೨೫ರಂದು ಮೀನು ಮರಿಗಳ ಸಾಕಣಾಕೇಂದ್ರವು ಉದ್ಘಾಟಿಸಲ್ಪಟ್ಟಿತು. ವಿದ್ಯಾರ್ಥಿಗಳು ''ಸಂಘಟಿತರಾಗಿ

ನಾವು ಪ್ರಪಂಚವನ್ನೇ ಪರಿವರ್ತಿಸೋಣ'' ಎಂಬ ಧ್ಯೇಯ ವಾಕ್ಯವಿರುವ ಧ್ವಜವನ್ನು ಮೇಲೇರಿಸಿದರು. ಆದರೆ ಟ್ರೌಟ್ ಮೀನುಗಳಿಗೆ ಈಗ ಈ ಕೇಂದ್ರದ ಅವಶ್ಯಕತೆಯಿರಲಿಲ್ಲ. ಆದುದರಿಂದ ವಿನಾಶದ ಅಂಚಿನಲ್ಲಿರುವ ಸಾಲ್ಮನ್ ಮೀನಿನ ಮರಿಗಳಿಗೆ ಇದು ಆಶ್ರಯ ತಾಣವಾಯಿತು.

ಇದಾಗಿ ಐದು ವರ್ಷಗಳನಂತರ ಟಾಮ್ ಫ್ರೂರರ್ ಒಂದು ಸಂಜೆಯ ಹೊತ್ತು ಎಡೋಬ್ ಕ್ರೀಕ್‌ನ ತೊರೆಯ ಬಳಿ ಕುಳಿತು ತೊರೆಯಲ್ಲಿ ನಡೆಯುತ್ತಿರುವ ಚಟುವಟಿಕೆಯನ್ನು ಗಮನಿಸುತ್ತಿದ್ದ. ಕಳೆದ ಸುಮಾರು ಹದಿನೈದು ವರ್ಷಗಳಷ್ಟು ಕಾಲ ಟಾಮ್‌ಗೆ ವೈಯಕ್ತಿಕ ಜೀವನವೆಂಬುದೇ ಇರಲಿಲ್ಲ. ಈ ತೊರೆಯೇ ಅವನ ಸರ್ವಸ್ವವಾಗಿತ್ತು. ಅವನು ತನ್ನ ಸಂಪಾದನೆಯನ್ನೆಲ್ಲ ಇದಕ್ಕಾಗಿ ಧಾರೆಯೆರೆದಿದ್ದನು ''ಈ ಒಂದೂವರೆ ದಶಕದಲ್ಲಿ ನೀನೇನನ್ನು ಗಳಿಸಿದೆ ?'' ಎಂದು ಕೆಲವರು ಅವನನ್ನು ಕೇಳಿದ್ದುಂಟು. ಆಗ ಅವನಿಗೆ ತನ್ನ ನೆಚ್ಚಿನ ವಿದ್ಯಾರ್ಥಿಗಳ ನೆನಪಾಯಿತು. ಕೆಲವರು ಈಗಾಗಲೇ ಉನ್ನತ ಹುದ್ದೆಗಳಲ್ಲಿದ್ದರು. ಕೆಲವರು ಪ್ರತಿಷ್ಠಿತ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗ ಮಾಡುತ್ತಿದ್ದರು. ಅಂತೂ ಎಲ್ಲರೂ ಯಶಸ್ಸಿನ ಹಾದಿಯಲ್ಲೇ ಸಾಗುತ್ತಿದ್ದು ತಾವು ಪೆಟಲೂಮಾ ನಗರದ ಕಾಸಾ ಗ್ರಾಂಡ್ ಪ್ರೌಢಶಾಲೆಯಲ್ಲಿ ಟಾಮ್‌ನ ಮಾರ್ಗ ದರ್ಶನದಲ್ಲಿ ಕಲಿತ ಪರಿಸರ ಪ್ರೀತಿಯನ್ನು ಎಲ್ಲೆಡೆಗೂ ಪಸರುತ್ತಿದ್ದರು. ಇದನ್ನು ನೆನೆದಾಗ ಧನ್ಯತಾ ಭಾವದಿಂದ ಟಾಮ್‌ನ ಮುಖ ಬೆಳಗಿತು. ಕಣ್ಣುಗಳು ತೇವಗೊಂಡು ಎರಡು ಹನಿ ಆನಂದ ಬಾಷ್ಪಗಳು ಕೆಳಗುರುಳಿ ತೊರೆಯ ನೀರಿನಲ್ಲಿ ಬಿದ್ದುವು. ತಮ್ಮ ಉದ್ಧಾರಕನ ಆನಂದ ಬಾಷ್ಪಗಳನ್ನು ಗುರುತಿಸಿದ ಟ್ರೌಟ್ ಮೀನುಗಳ ಬೆಳ್ಳಿಯಂತೆ ಹೊಳೆಯುವ ಪುಟ್ಟಮರಿಗಳು ಸಂತಸದಿಂದ ನರ್ತಿಸ ತೊಡಗಿದುವು.

ಪರಿಸರವ ನಿರೀಕ್ಷಿಸಿದರೆ ಪರಿಸರ ನಿನ್ನ
ಪೊರೆಯುವುದು ಪರಿಸರಕೆ ನೀ ಗಾಸಿ ಮಾಡಿದರೆ
ಪರಿಸರವು ನಿನ್ನ ಸಂಹರಿಸುವುದು ವಿಜ್ಞಾನ
ದುರುಪಯೋಗವೆ ವಿನಾಶಕೆ ನಾಂದಿ ಅತ್ರಿಸೂನು

ಸುಧಾರಣೆಯು ಜೀವನದ ಮಾರ್ಗವನ್ನು ಸುಗಮಗೊಳಿಸುತ್ತದೆ.

-ವಿಲಿಯಮ್ ಬ್ಲ್ಯಾಕ್

ಕನ್ನಡ ಮಾತೆಯ ಮೂಲಕ ಭಾರತ ಮಾತೆಯನ್ನು ಸೇವಿಸಬೇಕು. ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ಉದ್ಧಾರವಾಗುತ್ತಾಳೆ.

ಬಿಎಂಶ್ರೀ

ಬಾಳೆ ಹಣ್ಣು ತಿನ್ನುವುದು ಸುಲಭವೇನಲ್ಲ

ಎ.ಪಿ. ಚಂದ್ರಶೇಖರ
ಇಂದ್ರಪ್ರಸ್ಥ ಜೀವಧಾರಣಾ ಸಸ್ಯವಾಟಿ
ಕಳಲವಾಡಿ, ಉದ್ಬೂರು ಅಂಚೆ
ಮೈಸೂರು - ೫೭೦ ೦೦೮

ಸುಲಭವಾದ ಕೆಲಸವನ್ನು ''ಬಾಳೆ ಹಣ್ಣು ತಿಂದಷ್ಟು ಸುಲಭ'' ಎಂದು ಸರಳ ದೃಷ್ಟಾಂತ 'ದಿಂದ ವಿವರಿಸುವ ಕ್ರಮ ಉಂಟು. ಆದರೆ ಹೊಸ ಸಹಸ್ರಮಾನದ ಈ ದಿನಗಳಲ್ಲಿ ಇದು ಅಷ್ಟು ಸುಲಭವಲ್ಲ. ಬಾಳೆ ಹಣ್ಣು ತಿನ್ನಬೇಕಾದರೂ ಬಹಳ ಕಷ್ಟ ಇದೆ.

ಅಂದು : ಬಾಳೆ ಹಣ್ಣು ತಿನ್ನುವುದು ಎಷ್ಟು ಸುಲಭವೋ ಬಾಳೆಹಣ್ಣು ಬೆಳೆಸುವುದೂ ಅಷ್ಟೇ ಸುಲಭ. ಯಾವುದೇ ಮಣ್ಣು , ಹವಾಗುಣವನ್ನು ಒಗ್ಗಿಸಿ, ಬಗ್ಗಿಸಿ ಬಾಳೆ ಭೆಳೆಯ ಬಲ್ಲುದು. ನೂರಾರು ವೈವಿಧ್ಯಮಯ ರುಚಿಯ ಬಾಳೆಗಳುಂಟು. ಅತ್ಯಂತ ಚುರುಕಾಗಿ, ವೈಭವಯುತವಾಗಿ ಬೆಳೆಯುವ ಕೆಲವೇ ಸಸ್ಯಗಳಲ್ಲಿ ಬಾಳೆ ಪ್ರಧಾನ ಸ್ಥಾನ ಪಡೆಯುತ್ತದೆ. ಆ ಮೂಲಕ ಪ್ರಕೃತಿಗೆ ಚುರುಕು, ವೈಭವವನ್ನು ಕೊಡುತ್ತದೆ. ತನ್ನ ಕೃಷಿಯ , ಜೀವನದ ಅಂಗವಾಗಿ ಬಾಳೆ ಬೆಳೆಯುವುದರಿಂದ ರೈತ ನಿಜವಾಗಿಯೂ ಸಮೃದ್ಧಿ ಕಾಣಲು ಸಾಧ್ಯ. ಈ ಮಾತಿನ ವಿಲೋಮವೂ ನಿಜವೇ. ತನ್ನ ಮನೆ ಸುತ್ತಮುತ್ತ ಬಾಳೆ ಬೆಳೆಸದವನು ರೈತನೇ ಅಲ್ಲ. ತನ್ನ ಜಮೀನಿನಲ್ಲಿ ಬಾಳೆ ಬೆಳೆಸದವನು ಎಂದೂ ಬೆಳಗಲಾರ. ನಂಬಿದವರಿಗೆ ನಾಕ ತೋರಿಸುವ ಅದ್ಭುತ ಸಸ್ಯ ಬಾಳೆ. ಮಣ್ಣನ್ನು ಫಲವತ್ತುಗೊಳಿಸುವ ಕೃತಕ ಉಲುಮೆಯ ಅಗತ್ಯವಿಲ್ಲದಂತೆ ಭೂಮಿಯನ್ನು ಹಸನುಗೊಳಿಸುವ ಪ್ರಾಕೃತಿಕ ವ್ಯವಸ್ಥೆ ಬಾಳೆ. ಭಾರಿಯಾಗಿ ಬೆಳೆ. ಅದಕ್ಕಿಂತ ಹೆಚ್ಚಾಗಿ ಬೆಳೆ ಉಳಿಕೆ ಕೊಟ್ಟು ಭೂಮಿಗೆ ತಂಪಿನ ಕವಚ ಹೊದಿಸುವ ಬಾಳೆ ಕಲ್ಪವೃಕ್ಷವೇ ನಿಜ.

ಸುಲಭವಾಗಿ ಬಾಳೆಹಣ್ಣು ತಿನ್ನುವುದು ನಿಮಗೆ ಗೊತ್ತು. ಆದರೆ ಬಾಳೆಯ ಉಪಯೋಗ ಇಷ್ಟಕ್ಕೇ ಸೀಮಿತವಲ್ಲ. ಒಂದು ಬಾಳೆ ಎಷ್ಟೊಂದು ರುಚಿ ವೈವಿಧ್ಯಗಳನ್ನು ಕೊಡಬಲ್ಲುದು ಗೊತ್ತೇ? ಬಾಳೆಹಣ್ಣಿನಿಂದ ದೋಸೆ, ಇಡ್ಲಿ, ಮಜ್ಜಿಗೆ ಹುಳಿ, ರಸಾಯನ, ಪಾಯಸ, ಹಲ್ವ, ಮಾಂಬೆಳ ಇತ್ಯಾದಿ ಮಾಡಬಹುದು. ಬಾಳೆಕಾಯಿಯಿಂದಲೂ ದೋಸೆ, ಇಡ್ಲಿ, ಹುಳಿ, ಸಾರು, ಪಲ್ಯ, ಚಟ್ನಿ ಇತ್ಯಾದಿ ಮಾಡಬಹುದು. ಬಜ್ಜಿ, ಉಪ್ಪೇರಿಗಳನ್ನು ವಿಶೇಷವಾಗಿ ಮಾಡಬಹುದು. ಹಣ್ಣಾಗಲೀ ಕಾಯಿಯಾಗಲಿ, ಸಿಪ್ಪೆಯನ್ನು ಎಸೆಯ ಬೇಕೆಂದೇನೂ ಇಲ್ಲ. ಹಣ್ಣಿನ ಸಿಪ್ಪೆ ದೋಸೆಗೆ ಶ್ರೇಷ್ಠ. ಕಾಯಿಯ ಸಿಪ್ಪೆ ಚಟ್ನಿಗೆ ಅಗತ್ಯ. ಪಲ್ಯಕ್ಕೆ ಮದುರಂಗ ಬಾಳೆಯೇ ಆಗಬೇಕೆಂದೇನೂ ಇಲ್ಲ. ಗಾಳಿಗೆ ಮುರಿದು ಬಿದ್ದ ಎಳೆ ಬಾಳೆ ಕಾಯಿಗಳು ಎಲ್ಲ ವಿಧದ ಅಡುಗೆಗೂ ಉತ್ಕೃಷ್ಟ. ಎಳೆಬಾಳೆಕಾಯಿ ಉಸಲಿ ಬೆಳಗಿನ ತಿಂಡಿಗೆ ಸಂಭ್ರಮ ಕೊಟ್ಟೀತು. ಬಾಳೆ ಮೋತೆ ಏನೂ ಕಮ್ಮಿಯ ವಸ್ತುವಲ್ಲ. ಎಲ್ಲದಕೂಸ್ಯೆ. ಮೋತೆಯ ಪತ್ರೊಡೆ ಮಹತ್ವ ಪೂರ್ಣವಾದದ್ದು. ಈಗ ಬನ್ನಿ ಬಾಳೆ ದಿಂಡಿಗೆ-ಪಲ್ಯ, ಸಾಂಬಾರು, ಹುಳಿ, ಮೊಸರು ಗೊಜ್ಜು, ದೋಸೆ, ಇಡ್ಲಿ, ರೊಟ್ಟಿಗಳು ಬಾಳೆಯ ಲೋಕದಲ್ಲಿ ವಿಶಿಷ್ಟ ಸಂಪತ್ತುಗಳು. ಇಲ್ಲಿಗೇ ಮುಗಿಯಲಿಲ್ಲ. ಹೆಚ್ಚಾಗಿ ಮೂಡಿದ ಕಂದುಗಳನ್ನು ಕಿತ್ತು ಬಾಳೆಗೆಡ್ಡೆಯಿಂದಲೂ ಎಲ್ಲಾ ರೀತಿಯ ಅಡುಗೆ ಮಾಡಬಹುದು. ಮೂತ್ರ ದೋಷಗಳನ್ನು ದೂರವಿಡಬಹುದು. ವಿಧವಿಧವಾಗಿ , ರುಚಿರುಚಿಯಾಗಿ ಮಾಡಿದ ಬಾಳೆ ಅಡುಗೆ ಯನ್ನು

ಬಾಳೆ ಎಲೆಯಲ್ಲಿ ಊಟಮಾಡುವುದು ವಿಶಿಷ್ಟ ಅನುಭವವೇ ಸರಿ.

ಆದರೆ ಇಂದು : ವೈವಿಧ್ಯಮಯ ಬಾಳೆಗಳನ್ನು, ವೈವಿಧ್ಯಮಯ ಬೆಳೆಗಳೊಂದಿಗೆ ಬೆಳೆಸಿ, ವೈವಿಧ್ಯಮಯ ಅಡುಗೆಗಳ ರುಚಿ ಯುಂಡು, ಸ್ವಾವಲಂಬನೆ, ಸ್ವಂತಿಕೆಗಳಿಂದ ಶ್ರೀಮಂತ ವಾಗಿದ್ದ ಕಾಲ ಬದಲಾಗಿ ಶ್ರೀಮಂತಿಕೆಯನ್ನು ಛಣ ಛಣ ರೂಪಾಯಿ ಗಳಲ್ಲಿ ಮಾತ್ರ ನೋಡುವ ಇಂದಿನ ಸ್ಥಿತಿ ಯಲ್ಲೂ ಅಂದಿನ ಪ್ರಾಕೃತಿಕ ಸ್ಥಿತಿಯಲ್ಲೂ ಒಂದು ಸಾಮ್ಯ ಉಂಟು-"ಎಸೆದ ಬಾಳೆ ಹಣ್ಣಿನ ಸಿಪ್ಪೆಯ ಮೇಲೆ ತಪ್ಪು ಹೆಜ್ಜೆ ಇಟ್ಟರೆ ಜಾರಿ ಬೀಳುತ್ತದೆ."

ಇಂದು ಪಚ್ಚೆ ಬಾಳೆಹಣ್ಣಿನ ಸಿಪ್ಪೆಯಲ್ಲಿ ಎಲ್ಲರೂ ಜಾರಿ ಬೀಳುವವರೆ! ನಮ್ಮ ದೇಶೀ ತಳಿಗಳೆಲ್ಲಾ ತನ್ನ ದೇಹಭಾರದ ಅರೆವಾಸಿ ತೂಕದ ಗೊನೆ ಬಿಡುತ್ತದೆ. (ಬಾಳೆ ಕಂಬದ ತೂಕ ಇಪ್ಪತ್ತು ಕಿಲೋಗ್ರಾಮ್ ಇದ್ದರೆ ಹತ್ತು ಕಿಲೋಗ್ರಾಮಿನ ಗೊನೆ) ಆದರೆ ಆಮದು ಗೊಂಡ ಪಚ್ಚೆಬಾಳೆ ತನ್ನ ಕಂಬದಷ್ಟೇ ತೂಕದ ಗೊನೆ ಕೊಡುವುದು (ಸ್ಥೂಲ ಲೆಕ್ಕಾಚಾರ). ಈ ಅಂಶ ನಮ್ಮ ಹಸುರು ಕ್ರಾಂತಿಯ ಹರಿಕಾರರಿಗೆ ಆಕರ್ಷಣೀಯವಾಯಿತು. ನಮ್ಮ ಮಣ್ಣಿಗೆ, ಜನಕ್ಕೆ ಒಗ್ಗಿಸುವ ಪ್ರಯತ್ನ ನಡೆಯಿತು.

ಮೇಲು ನೋಟಕ್ಕೆ ಉತ್ತಮ ಪ್ರಯೋಗ ವೆಂದು ಕಾಣುವುದು. ಆದರೆ ಪ್ರಕೃತಿ ಧರ್ಮವನ್ನು ಮೀರಿ ಬಾಳೆಗೊನೆ ತೂಕವನ್ನು ಹೆಚ್ಚು ಮಾಡುವುದರಿಂದ ಪ್ರಮಾದ, ಅಪರಾಧ ಪರಂಪರೆಗಳೇ ಸಂಘಟಿಸಿವೆ. ಹತ್ತು ಕಿಲೋ ಬರುವಲ್ಲಿ ಇಪ್ಪತ್ತು ಕಿಲೋ ಹಣ್ಣು, ಹಣ್ಣು ದ್ವಿಗುಣ. ಹಾಗೆಯೇ ಸಿಪ್ಪೆಯೂ ದ್ವಿಗುಣ. ಸಿಪ್ಪೆ ಮೆಟ್ಟಿ ಜಾರುವ ಜನವೂ ದ್ವಿಗುಣಗೊಳ್ಳುತ್ತಾ ಹೋದರು. ನಮ್ಮ ಸಂಸ್ಕೃತಿ, ಸ್ವಾಭಿಮಾನ, ಸ್ವಾವಲಂಬನೆ, ಸರಳತೆ, ಸಂತೃಪ್ತತೆಗಳಿಂದ ಜಾರುತ್ತಾ ಜಾರುತ್ತಾ ತಲುಪಿರುವ ಗಂಭೀರ ಸ್ಥಿತಿಯನ್ನೂ ಗುರುತಿಸ ಲಾರದ ಕತ್ತಲೆಯಲ್ಲಿ ನಾವಿಂದು ಪರಿತಪಿಸು ತ್ತಿದ್ದೇವೆ.

ಕಂಬದಷ್ಟೇ ಭಾರದ ಗೊನೆ, ದೇಹದಷ್ಟೇ ಭಾರದ ತಲೆ ಹೊತ್ತಾಗ ಸ್ವಾಭಾವಿಕ ನಿಯಂತ್ರಣ ಅಸಾಧ್ಯವಾಗಿ ಬಿಡುತ್ತದೆ. ಆಧಾರ ಅಗತ್ಯ ವಾಗುತ್ತದೆ. ಕೃತಕ ಅಗತೆ, ನಾಟಿ, ಕೃತಕ ಗೊಬ್ಬರ, ಕೀಟನಾಶಕ, ಕೃತಕವಾಗಿ ಹಣ್ಣು ಮಾಡುವ, ಸಂಗ್ರಹಿಸುವ ವಿಧಾನಗಳು ವಿಜ್ಞಾನವೆನಿಸುತ್ತವೆ. ಕೃಷಿಕರು ಗ್ರಾಹಕರು ಸಮಾನವಾಗಿ ಅಜ್ಞಾನಿಗಳಾಗಿದ್ದಾರೆ ; ಸುಲಭ ವಾಗಿ ಬೆಳೆಯಬಹುದಾದ ಬಾಳೆಯನ್ನು ಕಷ್ಟ ಗೊಳಿಸಿದ್ದಾರೆ ; ಸುಲಭವಾಗಿ ತಿನ್ನಬಹು ದಾಗಿದ್ದ ಬಾಳೆಹಣ್ಣನ್ನು ತಿನ್ನಲಸಾಧ್ಯಗೊಳಿಸಿ ದ್ದಾರೆ. ಯಾಕೆ? ಹೇಗೆ? ಈಗ ಓದಿ.

ಆಧುನಿಕ ಬಾಳೆ ಕೃಷಿಯ ಒಂದು ಪಕ್ಷಿನೋಟ: ಸುಮಾರು ಮೂವತ್ತು ವರ್ಷಗಳ ಹಿಂದೆ (೧೯೭೦) ಪಚ್ಚೆ ಬಾಳೆ ಆಮದಾಯಿತು ಎನ್ನುವುದಕ್ಕಿಂತ ಹಣದಾಹವನ್ನು ಪ್ರೋತ್ಸಾಹಿ ಸುವ ತಂತ್ರವಿದ್ಯೆ ಆಮದಾಯಿತು ಎನ್ನುವುದೇ ಹೆಚ್ಚು ಯುಕ್ತ. ಹಣ ಮಾಡಲು ಸಾಧ್ಯವಾಗುವು ದಾದರೆ, ಏನಾದರೂ ಮಾಡಬಹುದೆಂಬುದು ಸರ್ವಮಾನ್ಯವಾಗುತ್ತಾ ಆಧುನಿಕ ಕೃಷಿ ಯಲ್ಲಿ ಆಹಾರ ಬೆಳೆಸುವ ಬದಲು, ಆಹಾರದ ಯಾವುದೇ ಲಕ್ಷಣಗಳಿಲ್ಲದ ಆಕಾರದಲ್ಲಿ ಮಾತ್ರ ಸಾಮ್ಯವುಳ್ಳ ವಿಷಭಾಂಡಗಳನ್ನು ಬೆಳೆಸ ಲಾಗುತ್ತಿದೆ.

ಆರಡಿ ಅಂತರದಲ್ಲಿ ಎರಡಡಿ ಗುಂಡಿಗಳು. ಅದಕ್ಕೆ ಇನ್ನೆಲ್ಲೋ ಸಲ್ಲಬೇಕಾದ ಕೊಟ್ಟಿಗೆ ಗೊಬ್ಬರದ ಊಡವೆ. ಔಷಧೀಯ, ಆಹಾರ್ಯ ಗುಣವಿಶೇಷಗಳುಳ್ಳ ಸ್ವಾಭಾವಿಕ ಅಗತೆ, ಗೊಬ್ಬರಗಳಾಗುವ, ಭೂಸವಕಳಿಯನ್ನು ತಪ್ಪಿಸಿ ಜಲಶಕ್ತಿಯನ್ನು ಹೆಚ್ಚಿಸುವ, ನೂರಾರು ಸಸ್ಯಗಳನಾಶ. ಇವುಗಳ ಮೇಲೆ ಕಳೆಗಳೆಂದು

ದ್ವೇಷ. ಏಕಬೆಳೆಯ ಏಕತಾನತೆಯ ಸಮಾವೇಶ ಯುದ್ಧ ಸನ್ನದ್ಧ ಬಿಗು ಹಾಗೂ ಆವೇಶ.

ಬಾಳೆ ಕಂದುಗಳನ್ನು ನೆಡುವ ಮೊದಲು ಪಾದರಸದ ಸಂಯುಕ್ತ ವಿಷದಲ್ಲಿ ಸ್ನಾನ. ಗುಂಡಿಗಳಿಗೆ ಫ್ಯೂರಿಡಾನ್ ವಿಷ ಹರಳುಗಳು. ಹೊಸ ಎಲೆ ಬರುವುದನ್ನೇ ಕಾಯುತ್ತಾ ಹದಿನೈದು ದಿನಗಳ ಬಿಡುವು. ಆಮೇಲೆ ವಾರಕ್ಕೊಂದು ಅಥವಾ ಎರಡು ಬಾರಿ ಬ್ಯಾವಿಸ್ಟಿನ್ ಎಂಬ ಶೀಲೀಂದ್ರನಾಶಕ ವಿಷದ ಸಿಂಪಡನೆ ಕೀಟ ಬಾಧೆಗಾಗಿ ನೆನಪಾದಾಗ ಮಧ್ಯೆ ಮಧ್ಯೆ ಇನ್ನೊಂದು ವಿಷ, ನಾಲ್ಕೈದು ತಿಂಗಳ ಕಾಲ ಪ್ರತಿವಾರವೂ ಎನ್.ಪಿ.ಕೆ. ರಾಸಾಯನಿಕ ಗೊಬ್ಬರಗಳು. ಆಮೇಲೆ ಗೊನೆ ಹಾಕಿ ಬಲಿಯುವವರೆಗೆ ಪೊಟ್ಯಾಷ್ (ಕೆ) ಗೊಬ್ಬರದ ಬಲಕೆ.

ಮಣ್ಣು ಕೆದಕುವುದು, ಏರಿಕಟ್ಟುವುದು. ಕಳೆಗಳ ವಿರುದ್ಧ ಯುದ್ಧ ಮಾಡುವುದು, ನೀರು ಕಟ್ಟುವುದು ಇತ್ಯಾದಿ ಹೇಗಾದರೂ ಇದೆ. ಬಾಳೆಗೆ ನಿಜವಾಗಿ ಏನು ಬೇಕು ? ಏನು ಬೇಡ? ಅದರ ನಿಜ ಸಾಮರ್ಥ್ಯವೇನು? ನಮ್ಮ ಆಧಾರದ ಅಗತ್ಯ ಬಾಳೆಗೆಷ್ಟಿದೆ? ಎಂದು ಪ್ರಶ್ನೆ ಮಾಡಿದವರಿಲ್ಲ. ರೈತ ತಾನು ಯಾರಿಗಾಗಿ, ಯಾಕಾಗಿ ಕಷ್ಟಪಡುತ್ತೇನೆಂದು ಆತ್ಮ ನಿರೀಕ್ಷೆ ನಡೆಸಿಲ್ಲ.

ಆರನೇ ತಿಂಗಳಿನಿಂದ ಲಘು ಪೋಷಕಗಳ ಸಿಂಚನೆ ಪ್ರಾರಂಭವಾಗುತ್ತದೆ. ಕಳೆನಾಶಕ ಔಷಧಿಗಳನ್ನು ಬಳಸುವುದೂ ಇದೆ. ಒಂದೆರಡು ಬಾರಿ ಸತುವೆಂಬ ಲಘು ಗೊಬ್ಬರದ ವಿಶೇಷ ಉಪಚಾರ.

ಗೊನೆ ಬಂದ ಕೂಡಲೇ ಜೇನ್ನೊಣದಿಂದ ಹಿಡಿದು ಬಾವಲಿಗಳವರೆಗೆ ಆಹಾರವಾಗುವ (ಪರ್ಯಾಯವಾಗಿ ಹಲವಾರು ಫಸಲುಗಳಿಗೆ ಪರಾಗಸ್ಪರ್ಶಕ್ಕೆ ಸಹಾಯಕವಾಗುವ) ಮೋತೆಗಳನ್ನು ಕತ್ತರಿಸಿ ಯೂರಿಯಾ ಬುತ್ತಿ ಕಟ್ಟುವುದಿದೆ. ಕಾಯಿ ಅಧಿಕಾಧಿಕವಾಗಿ ಉಬ್ಬಿಕೊಳ್ಳಲು ಹಲವೊಂದು ಚೋದಕಗಳ ಸಿಂಪಡನೆ. ಇಷ್ಟೆಲ್ಲಾ ಸಾಲದೆಂದು, ಬಾಳೆಗೆ ಸ್ವತಃ ಹಣ್ಣಾಗಲು ತಿಳಿಯದೆಂದು ಕಾರ್ಬೈಡ್ ದ್ರಾವಣದಲ್ಲಿ ಅದ್ದಿ ಸೀಮೆಣ್ಣೆ ಹೊಗೆಗೆ ಒಡ್ಡಲಾಗುತ್ತದೆ. ದೊಡ್ಡ ದೊಡ್ಡ ಹಣ್ಣುಗಳು ನಿಮ್ಮ ಬಾಯಂಗಳವನ್ನು ತಲುಪುತ್ತದೆ.

ಬಾಳೆಗೆ ಸರಿಯಾಗಿ ಮರಿ ಮಾಡಲು ಬರುವುದಿಲ್ಲವೆಂಬ ತಿಳುವಳಿಕೆ ಇತ್ತೀಚೆಗೆ ಪ್ರಚಲಿತವಾಗಿದೆ. ಹಾಗಾಗಿ ಅಂಗಾಂಶ ಕಸಿ ಗಿಡಗಳು ಮಹತ್ವ ಪಡೆಯುತ್ತಿವೆ. ಪ್ರಾಕೃತಿಕವಾಗಿ ನಡೆಯುವ ಕೋಶ ವಿಭಜನೆ ಹಾಗೂ ಸಸ್ಯ ಬೆಳವಣಿಗೆಗೆ ವಿರುದ್ಧವಾಗಿ ಕ್ಯಾನ್ಸರ್ ಮಾದರಿಯಲ್ಲಿ ಬಾಳೆಗಿಡಗಳನ್ನು ಸೃಷ್ಟಿಸಿ, ಹತ್ತಾರು ರಾಸಾಯನಿಕ ಮಾಧ್ಯಮಗಳಲ್ಲಿ ಕೆಲವಾರು ತಿಂಗಳು ಬೆಳೆಸಿ ಅಂಗಾಂಶ ಕಸಿಗಿಡಗಳನ್ನು ಪ್ರಯೋಗಶಾಲೆಯಿಂದ ಭೂಮಿಗೆ ತರಲಾಗುತ್ತದೆ. (ರಾಕ್ಷಸ ಲೋಕದಿಂದ ಭೂಲೋಕಕ್ಕೆ)

ಇಂಥಾ ಒಂದು ತೋಟ. ಹದಿನಾರು ಸಾವಿರ ಬಾಳೆಗಳು. ಪ್ರಕೃತಿಯ ವಿರುದ್ಧ ಸಮರ ಹೂಡಿ ಭಾರೀ ನಿಧಿ ಸಂಗ್ರಹಿಸುವ ಸನ್ನಾಹ, ನಮ್ಮ ಹಳ್ಳಿಯಲ್ಲಿ ನಡೆದಿತ್ತು. ಮೊದಲಬಾರಿ ಭಾರಿಯಾಗಿ ಗೊನೆಗಳನ್ನೂ ಬಿಟ್ಟಿದ್ದುವು. ಸಗಟು ವ್ಯಾಪಾರ ಮಾಡುವಾಗ ಮಧ್ಯದಲ್ಲಿ ಒಂದೊಂದು ಗೊನೆಗಳು ಗಿಡದಲ್ಲೇ ಹಣ್ಣಾಗಿ ಬಿಡುತ್ತಿದ್ದುವು.

ಆಹಾ ಗಿಡದಲ್ಲೇ ಆದ ಹಣ್ಣು ತಿಂದು ಒಂದೊತ್ತಿನ ಊಟ ಉಳಿಸೋಣವೆಂದು ತೋಟದ ಆಳುಗಳು ಮ್ಯಾನೆಜರ್ ಪ್ರಯತ್ನಿಸಿದ್ದಿದೆಯಂತೆ. ಆದರೆ ಎರಡು ಹಣ್ಣು ತಿನ್ನುವುದರೊಳಗೆ ಗಂಟಲು ಕಿರಿತವಾಗಿ ಕೆಮ್ಮು ಪ್ರಾರಂಭವಾಗಿ ಬಿಡುತ್ತದೆ. ಹೊಟ್ಟೆಯೊಳಗೆ ಹೋದ ಒಳ್ಳೆಯ ಹಣ್ಣು ಜೀರ್ಣವಾಗಿ ಶಕ್ತಿ

ಬಿಡುಗಡೆಯಾಗಲು ಒಂದು ಗಂಟೆಯಾದರೂ ಬೇಕು. ಆದರೆ ರಾಸಾಯನಿಕವಾದ ಹಣ್ಣು ಗಂಟಲು ದಾಟುತ್ತಲೇ ತನ್ನ ರಾಕ್ಷಸ ಸತ್ವ ತೋರಿಸಿ ಬಿಡುತ್ತದೆ. ನಾನು ಕೂಡ ಈ ಹಣ್ಣಿನ ಸತ್ವ ಪರೀಕ್ಷೆ ಮಾಡಿದ್ದಿದೆ. ಆಧುನಿಕ ಬಾಳೆ ಹಣ್ಣಿನ ಅದ್ಭುತ ವಿಕೃತ ಸಾಮರ್ಥ್ಯಕ್ಕೆ ಸಾಕ್ಷಿಯಾದದ್ದಿದೆ.

ದೊಡ್ಡದಾಗುವ ಪ್ರಕ್ರಿಯೆಯಲ್ಲಿ ಈ ಬಾಳೆ ಹಣ್ಣುಗಳು ರುಚಿಯಲ್ಲಿ ರಾಜಿ ಮಾಡಿಕೊಂಡು ಬಿಡುತ್ತವೆ. ರುಚಿ ಎಲ್ಲಾ ಗಾತ್ರಕ್ಕೆ ವರ್ಗವಾಗಿ ಬಿಡುತ್ತದೆ.(ಗಾತ್ರವಿದೆ ಆದರೆ ರುಚಿ ಇಲ್ಲ) ಹಾಗಾಗಿ ಹಣ್ಣಾದ ಗೊನೆಗಳು ತೋಟದ ಪಹರೆ ನಾಯಿಗಳಿಗೆ ಆಹಾರವಾಯಿತಂತೆ.

ಹಣ್ಣಿನಂಗಡಿಯಲ್ಲಿ ಎರಡು ಬಾಳೆ ಗೊನೆಗಳನ್ನು ನೇಲಿಸಿದ್ದಾರೆ. ಒಂದು ದೊಡ್ಡ ದೊಡ್ಡ ಹಣ್ಣು. ಇನ್ನೊಂದು ಚಿಕ್ಕಚಿಕ್ಕ ಹಣ್ಣು. ನಿಮ್ಮ ಆಯ್ಕೆ ಯಾವುದು? ಖಂಡಿತವಾಗಿ (ಇದು ತನಕ) ದೊಡ್ಡದು ಅಲ್ಲವೇ? ನೀವು ಇಷ್ಟಪಡುವ, ನಿಮ್ಮ ಇಷ್ಟವನ್ನು ಪೂರೈಸುವುದಕ್ಕಾಗಿ ಮೇಲಿನ ಎಲ್ಲಾ ಶ್ರಮವಹಿಸಿ, ವೈವಿಧ್ಯಮಯ ರಾಸಾಯನಿಕಗಳನ್ನು ಬಳಸಿ ಬೆಳೆಸಿರುವ ದೊಡ್ಡ ಬಾಳೆಹಣ್ಣುಗಳನ್ನು (ಕೆಲಸದವರು ಬಿಟ್ಟಿರುವುದನ್ನು) ತೋಟದ ನಾಯಿಗಳು ಮನಸೋ ಇಚ್ಛೆ ತಿಂದವಂತೆ.

ತಿಂಗಳು ಕಳೆಯುತ್ತಿದ್ದಂತೆ ಹತ್ತಾರು ತಿಂಗಳ ಸಂಚಿತ ವಿಷ ತನ್ನ ನಿರ್ದೇಶಿತ ಗುಣ ಪ್ರಕಟಗೊಳಿಸಲು ಪ್ರಾರಂಭಿಸಿತು (ಕೊಲ್ಲುವುದು ತಾನೇ ವಿಷದ ಗುಣ) ರಕ್ತ ಭೇದಿ ಮಾಡುತ್ತಾ ಒಂದಾದ ಮೇಲೊಂದರಂತೆ ತೋಟದ ಒಂಭತ್ತು ನಾಯಿಗಳು ಸ್ವರ್ಗ ಸೇರಿದುವು. ವಿಶೇಷವಾಗಿ ಸಾಕಿದ ಡಾಬರ್ ಮನ್ ನಾಯಿಯೊಂದು ಮಾತ್ರ, ಚಿಕಿತ್ಸೆ ಮಾಡಿದ್ದರಿಂದ, ಬಾಳೆಹಣ್ಣು ಸಿಗದಂತೆ ಕಟ್ಟಿ ಹಾಕಿದ್ದರಿಂದ ಬದುಕುಳಿಯಿತು. ಬಾಳೆ ಹಣ್ಣು ತಿನ್ನದ ಒಂದು ನಾಯಿ ಬದುಕಿತು. ತಿಂದವು ಮಣ್ಣು ತಿಂದವು. ಈಗ ಹೇಳಿ ಬಾಳೆ ಹಣ್ಣು ತಿನ್ನುವುದು ಸುಲಭವೇ? ಕಷ್ಟವೇ? ನಮ್ಮ ಕೃಷಿ ಪ್ರಗತಿ ಭದ್ರ ತಳವೇ? ಜಾರು ನೆಲವೇ?

ಪ್ರಕೃತಿಯಲಿ ಸಹ ಬಾಳ್ವೆ ಸಾಮಾನ್ಯ ನಿಯಮ ಕಾಣ್
ಪ್ರಕೃತಿಪುತ್ರನು ನೀನು. ಬದುಕಿನಲಿ ಮಾಡುತಿರು
ಸುಕೃತಿಯನು ಸ್ವಾರ್ಥಿ ಯಾದರೆ ಧಾತ್ರಿ ಪ[illegible]ಯುಳಿಕೆ
ವಿಕೃತಿಯಾಗುತ ನಾಶವಾಗುವೆಯೊ ಅತ್ರಿಸೂನು

ಪ್ರೀತಿಯು ಸರಿಯಾದ ಬೇಕು ಬೀರುತ್ತಿರುವಾಗ, ಆನಂದವು ಅದಕ್ಕೆ ಹೊಣೆಯಾಗಿರುವಾಗ, ನಮ್ಮ ಸ್ವಭಾವ ಉಲ್ಲಾಸವೂ ಸುಖಕರವೂ ಆಗಿರುವುದು. ನಮ್ಮ ಜೀವನ ಶಾಂತಿಮಯವಾಗಿರುವುದು.

-ವರ್ಡ್ಸ್‌ವರ್ಥ್

ಜಗತ್ತಿನ ಪರಿವರ್ತನೆಗೆ ಒಂದು ಅವಕಾಶ

ಜಿ. ರಾಮನಾಥ ಭಟ್
ಬಿ-೧೮, ಸರ್ವಜ್ಞ ರಸ್ತೆ
ಕುವೆಂಪುನಗರ, ಜೆ-ಬ್ಲಾಕ್,
ಮೈಸೂರು-೫೭೦ ೦೨೩

ಸ್ಯಾನ್ ಫ್ರಾನ್ಸಿಸ್ಕೋ ನಗರದ ಸಮೀಪದಲ್ಲಿರುವ ಗೋಲ್ಡನ್ ಗೇಟ್ ಸೇತುವೆಯನ್ನು ದಾಟಿ ಉತ್ತರಕ್ಕೆ ಹೋದರೆ ಸೊನೊಮಾ ಪರ್ವತ ಶ್ರೇಣಿ ಸಿಗುತ್ತದೆ. ಇದರ ದಕ್ಷಿಣ ಇಳಿಜಾರಿನಲ್ಲಿ ಬಳುಕುತ್ತ ಹರಿಯುವ ಎಡೋಬ್ ಕ್ರೀಕ್ ಎಂಬ ತೊರೆ ಹುಲ್ಲುಗಾವಲುಗಳನ್ನು ದಾಟಿ ಪೆಟಲೂಮಾ ನದಿಯನ್ನು ಸೇರುತ್ತದೆ. ಇಕ್ಕೆಲಗಳಲ್ಲಿಯೂ ಸಮೃದ್ಧ ಸಸ್ಯ ಸಂಪತ್ತಿನ ವೈಭವ. ಒಂದು ಕಾಲದಲ್ಲಿ ಈ ತೊರೆ ಟ್ರೌಟ್ ಎಂಬ ಜಾತಿಯ ಮೀನಿಗೆ ಪ್ರಸಿದ್ಧಿಯನ್ನು ಪಡೆದಿತ್ತು. ಪೆಸಿಫಿಕ್ ಸಾಗರದಲ್ಲಿ ವಾಸಿಸುವ ಈ ಮೀನುಗಳು ಮೊಟ್ಟೆಯಿಡಲು ಸಿಹಿನೀರಿನ ತಾಣವನ್ನರಸುತ್ತ ಗೋಲ್ಡನ್‌ಗೇಟನ್ನು ದಾಟಿ ಸ್ಯಾನ್ ಪಾಬ್ಲೊ ಕೊಲ್ಲಿಯ ಮೂಲಕ ಪೆಟಲೂಮಾ ನದಿಯ ಗುಂಟಸಾಗಿ ಈ ಎಡೋಬ್ ಕ್ರೀಕ್ ತೊರೆಗೆ ಬರುತ್ತಿದ್ದುವು. ಇಲ್ಲಿ ಮೊಟ್ಟೆಗಳೊಡೆದು ಮೀನಿನ ಮರಿಗಳು ಬೆಳೆದ ಮೇಲೆ ಮತ್ತೆ ಸಮುದ್ರವನ್ನು ಸೇರುತ್ತಿದ್ದುವು. ಹೀಗೆ ಈ ಟ್ರೌಟ್ ಮೀನುಗಳ ಜೀವನ ಚಕ್ರ ಸೃಷ್ಟಿಯ ಆದಿಕಾಲದಿಂದಲೂ ನಡೆದು ಬಂದಿತ್ತು.

ಟಾಮ್ ಪೂರರ್‌ಗೆ ತನ್ನ ಬಾಲ್ಯದಲ್ಲಿ ಈ ಎಡೋಬ್ ತೊರೆಯ ಬದಿಯಲ್ಲಿ ಚಾರಣ ಮಾಡುವುದೆಂದರೆ ತುಂಬ ಇಷ್ಟ. ಉನ್ನತ ಶಿಕ್ಷಣಕ್ಕಾಗಿ ದೂರದ ಊರಿಗೆ ಹೋಗಬೇಕಾಗಿ ಬಂದರೂ ಶಿಕ್ಷಣ ಮುಗಿದು ಜೀವವಿಜ್ಞಾನ ಶಿಕ್ಷಕನಾಗಿ ಮತ್ತೆ ತನ್ನ ಊರಾದ ಪೆಟಲೂಮಾಗೆ ಹಿಂದಿರುಗಿದಾಗ ಅವನಿಗೆ ಎಲ್ಲಿಲ್ಲದ ಹಿಗ್ಗು. ೧೯೮೧ರ ಸೆಪ್ಟೆಂಬರ್ ತಿಂಗಳ ಒಂದು ದಿನ ಬೆಳಗ್ಗೆ ಟಾಮ್ ತನ್ನ ಬಾಲ್ಯದ ವಿಹಾರ ತಾಣವನ್ನು ಹುಡುಕುತ್ತ ಎಡೋಬ್ ತೊರೆಯ ದಡದಲ್ಲಿ ನಡೆಯ ತೊಡಗಿದಾಗ ಅವನಿಗ ಅತೀವ ನಿರಾಸೆಯಾದಿತ್ತು. ತನ್ನ ಪ್ರೀತಿಯ ತೊರೆ ನೀರಿಲ್ಲದೆ ಬತ್ತಿಹೋಗಿತ್ತು. ನಗರಪ್ರದೇಶ ಬೆಳೆಯುತ್ತ ಹೋದಂತೆ ನವನಾಗರಿಕತೆಯ ತ್ಯಾಜ್ಯವಸ್ತುಗಳಿಂದ ಈ ತೊರೆ ತುಂಬಿ ಹೋಗಿತ್ತು. ಎಲ್ಲಿ ನೋಡಿದರೂ ನಿರುಪಯೋಗಿ ವಸ್ತುಗಳು, ಕಸಕಡ್ಡಿ, ದುರ್ಗಂಧ...

ಪ್ರಕೃತಿಯ ಮಡಿಲಲ್ಲಿ ನಿರಂತರವಾಗಿ ನಡೆಯುವ ಜೈವಿಕ ಕ್ರಿಯೆಯನ್ನು ತನ್ನ ವಿದ್ಯಾರ್ಥಿಗಳಿಗೆ ತೋರಿಸಬೇಕೆಂದು ಟಾಮ್‌ನ ಅಪೇಕ್ಷೆಯಾಗಿತ್ತು. ಆದರೆ ಅಲ್ಲಲ್ಲಿ ತುಂಬಿದ ಕೊಳಚೆ ನೀರಿನ ಹೊಂಡಗಳು ಹಾಗೂ ಅವುಗಳ ಸುತ್ತಮುತ್ತ ಹಾರುತ್ತಿರುವ ಸೊಳ್ಳೆಗಳನ್ನು ನೋಡಿದಾಗ ತಾನು ಬಾಲ್ಯದಲ್ಲಿ ಕಂಡ ತೊರೆಯನ್ನು ನೆನೆದು ದುಃಖವಾಯಿತು.

ಆದರೆ ಮುಂದಿನ ತಿರುವನ್ನು ದಾಟಿ ಸಾಗಿದಾಗ ಅವನಿಗೊಂದು ಆಶ್ಚರ್ಯ ಕಾದಿತ್ತು. ಜಲಸಸ್ಯಗಳಿಂದ ಆವರಿಸಲ್ಪಟ್ಟ ಒಂದು ತಂಪಾದ ಕುಂಜದಲ್ಲಿ ಚಾರ್ಲಿ ಎಂಬ ವೃದ್ಧನೊಬ್ಬ ಒಂದು ಕೈಯಲ್ಲಿ ಮರಿಗೆ ಹಾಗೂ ಇನ್ನೊಂದು ಕೈಯಲ್ಲಿ ಬುಟ್ಟಿಯಾಕಾರದ ಒಂದು ಬಲೆಯನ್ನು ಹಿಡಿದು ಮೊಣಕಾಲಷ್ಟು ಆಳದ ನೀರಿನಲ್ಲಿ ನಿಂತುಕೊಂಡಿದ್ದನು. ತೊರೆಯ ದಡಗಳಲ್ಲಿ ಮರಗಳ ತೋಪು

ಫೆಬ್ರವರಿ ೨೦೦೦ರ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಮಾಲ್ಕಮ್ ಮೆಕ್ ಕೊನೆಲ್‌ರವರ "ಎ ಚಾನ್ಸ್ ಟು ಚೇಂಜ್ ದಿ ವರ್ಲ್ಡ್" ಲೇಖನದ ಅನುವಾದ

ಬುದ್ದೋ ಸಹ ಸಾಮಾನ್ಯ ಸ್ಥಿತಿವಂತನೇ. ೨೪೦ ಕುರಿಗಳ ಸಾಕಿ ಹಾಲು ಮಾರೋದಲ್ದೆ, ತುಪ್ಪಟದಿಂದ ಕಂಬ್ಳೀನೂ ಮಾಡಿ ಮಾರ್ತಿದ್ದ. ''ಜಂಗರ್ ಸುಮ್ನೆ ನನ್ಮೇಲೆ ಕೋಪ ಮಾಡ್ಕೊತಿದಾನೆ. ನಾನೇನೂ ಅವನ ಆಳಲ್ಲ. ಅವ್ನು ನಂಗೇನು ಮಾಡ್ತಲ್ಲ?

ನಳನಳಿಸುತ್ತಿದ್ದ ಹೊಲದ ಹಸಿರ ತೆನೆ, ಕುರಿಗಳನ್ನು ಆಹ್ವಾನಿಸುವಂತಿತ್ತು. ಬುದ್ದೋ ತಿಳಿಯುವ ಮೊದಲೇ ಅವು ಒಟ್ಟಿಗೆ ಹೊಲಕ್ಕೆ ನುಗ್ಗಿದವು. ಬುದ್ದೋ ಅವುಗಳನ್ನು ಹಿಂದಟ್ಟಲು ಪ್ರಯತ್ನಿಸಿದ. ಒಂದು ಬದಿಯಿಂದ ಹೊಡೆದು ಹೊರಗಟ್ಟಿದರೆ ಮತ್ತೊಂದು ಬದಿಯಿಂದ ಅವು ಹೊಲದೊಳಕ್ಕೆ ನುಗ್ಗುತ್ತಿದ್ದವು. ಜಂಗರ್‌ಗೆ ತಡೆಯದಾಯ್ತು. ಮಗುವನ್ನು ಕೆಳಗಿಳಿಸಿ, ದೊಣ್ಣೆ ಹಿಡಿದು ಹುಚ್ಚನಂತೆ ಹೊಲಕ್ಕೆ ನುಗ್ಗಿದ. ಬಲು ಬೇಗ ಹೊಲವೆಲ್ಲ ಗಾಯಗೊಂಡ, ಸತ್ತ ಸೈನಿಕರನ್ನು ಹಿಂದುಳಿಸಿ ಓಡುವ ಸೈನಿಕರ ರಣರಂಗದಂತಾಯ್ತು. ಭಯದಿಂದ ನೆಲಕ್ಕೆ ಬಿದ್ದ ಕುರಿಗಳು, ಕಾಲು, ಬೆನ್ನು ಮುರಿದುಕೊಂಡಂಥವು ಒಂದೆಡೆ ಜೀವ ಭಯದಿಂದ ಓಡಲೆತ್ನಿಸಿದ ಕುರಿಗಳು. ಅಗಸನೂ ತನ್ನ ಕತ್ತೆಯನ್ನು ಇಷ್ಟು ನಿರ್ದಾಕ್ಷಿಣ್ಯವಾಗಿ ಹೊಡೆಯಲಾರ. ತನ್ನ ಸೇನೆಯ ನಾಶವನ್ನು ನೋಡುವ ಸೇನಾನಾಯಕನಂತೆ, ಬುದ್ದೊ ಮೌನವಾಗಿ ನಿಂತಿದ್ದ. ಎರಡೇ ನಿಮಿಷಗಲಲ್ಲಿ ಯುದ್ಧ ಮುಗಿದಿತ್ತು. ಜಂಗರ್ ಕೂಗಿದ. ''ಈಗ ಹೊರಟು ಹೋಗು. ಮತ್ತೊಮ್ಮೆ ಇತ್ತ ಬಂದೀಯಾ''.

ಬುದ್ದೋ ಗಾಯಗೊಂಡ ತನ್ನ ಕುರಿಗಳತ್ತ ನಂತರ ಜಂಗರ್‌ನತ್ತ ನೋಡಿ ಹೇಳಿದ, ''ಜಂಗರ್, ನೀನು ಒಳ್ಳೆಯ ಕೆಲಸ ಮಾಡಿಲ್ಲ. ಒಂದಲ್ಲ ಒಂದು ದಿನ ನೀನು ಇದಕ್ಕಾಗಿ ಪಶ್ಚಾತ್ತಾಪ ಪಡ್ತೀಯಾ''.

ರೈತನೊಬ್ಬನ ಮೇಲೆ ಸೇಡು ತೀರ್ಸಿಕೊಳ್ಳೋದು, ಬಾಳೆ ಗಿಡ ಕಡಿಯುವುದಕ್ಕಿಂತ ಸುಲಭ. ಬೆಳೆಯೇ ಅವನ ಸಂಪೂರ್ಣ ಆಸ್ತಿ. ಬೆಳೆದ ಬೆಳೆ ಕ್ಷೇಮವಾಗಿ ಕೈ ಸೇರಬೇಕಾದ್ರೆ ಎಷ್ಟೊಂದು ಅಡೆತಡೆಗಳನ್ನೆದುರಿಸಬೇಕು. ಈ ದುರಾದೃಷ್ಟಗಳ ಜೊತೆ ಶತ್ರುತ್ವವೂ ಸೇರಿತೆಂದರೆ, ಆತ ಸುಲಭವಾಗಿ ನಾಶವಾಗ್ತಲ್ಲ.

ಹಳ್ಳಿಯವರಿಗೆ ಈ ಘಟನೆ ತಿಳಿದಾಗ ಅವ್ರೆಲ್ಲಾ ಬುದ್ದೋನಲ್ಲಿ ಕ್ಷಮೆ ಕೇಳುವಂತೆ ಜಂಗರ್‌ಗೆ ಸಲಹೆ ಮಾಡಿದರು. ಇಂಥ ಜಗಳ ಇಡೀ ಹಳ್ಳಿಗೇ ಕೇಡು ತರಬಹುದು. ಜಂಗರ್ ಕೂಡ ಪಶ್ಚಾತ್ತಾಪ ಪಟ್ಟಿದ್ದ. ಬುದ್ಧಿ ತಿಳಿಯಾದಾಗ ''ಕುರಿಗಳು ಒಂದಿಷ್ಟು ತೆನೆ ತಿಂದರೆ, ನಾನೇನು ಬಡವನಾಗಿ ಬಿಡುತ್ತೇನೆಯೇ ? ರೈತನಿಗೆ ವಿನಯವಿದ್ದಷ್ಟೂ ಅವನಿಗೇ ಒಳಿತು'' ಎಂದು ಯೋಚಿಸುತ್ತ ಬುದ್ದೋನ ಕ್ಷಮೆ ಕೇಳಲು ನಿರ್ಧರಿಸಿದ.

ಚಳಿಗಾಲದ ಸಂಜೆಗತ್ತಲು. ಜಂಗರ್ ಬುದ್ದೋನ ಮನೆಯತ್ತ ಹೊರಟಿದ್ದ. ಹಲವು ಗಜ ಹೋಗುವಷ್ಟರಲ್ಲೇ ಇದ್ದಕ್ಕಿದಂತೆ ಒಂದು ಹೊಲದಿಂದ ಬೆಂಕಿಯ ಜ್ವಾಲೆಗಳೇಳುತ್ತಿರುವುದನ್ನು ಕಂಡ. ಅವನ ಹೃದಯ ಕುಸಿಯಿತು. ಸಧ್ಯ ಅದು ತನ್ನ ಹೊಲವಾಗಿಲ್ಲದಿದ್ದರೆ ಸಾಕು'' ಎಂದು ಪ್ರಾರ್ಥಿಸಿಕೊಳ್ಳುತ್ತ, ಕಾಲಿನ ಶಕ್ತಿಯನ್ನೆಲ್ಲಾ ಒಗ್ಗೂಡಿಸಿ, ಸಾಧ್ಯವಾದಷ್ಟು ಜೋರಾಗಿ ಓಡಿದ ಜಂಗರ್. ಆದರೆ ಪ್ರಾರ್ಥನೆ ಫಲ ಕೊಡಲಿಲ್ಲ. ಹತ್ತಿರ ಹೋದಂತೆ ಭರವಸೆ ಕ್ಷೀಣವಾಗಿ, ಭಯ ಬಲವಾಯ್ತು. ಆಗಬಾರದ್ದೆಂದು ಕೊಂಡಿದ್ದು ಆಗಿಯೇ ಬಿಟ್ಟಿತ್ತು. ಅವನ ಹೊಲಕ್ಕೆ ಬೆಂಕಿ ಹಾಕಲಾಗಿತ್ತು. ಬೇಗ, ಬೇಗ ಜನ ಹೊಲದ ಬಳಿ ಜಮಾಯಿಸಿದರು. ಪ್ರಕೃತಿ ಪುರುಷರ ನಡುವೆ ಘರ್ಷಣೆ. ಒಮ್ಮೆ ಅಗ್ನಿದೇವ ಗೆದ್ದಂತೆನಿಸಿದರೂ ಮತ್ತೊಮ್ಮೆ ಬರಿ ಬೆನ್ನಿನ ತೆಳು ರೈತರು. ಕ್ಷಣಕಾಲ ಕಡಿಮೆಯಾದಂತೆ

ಕಂಡ ಜ್ವಾಲೆಗಳು, ಮರುಕ್ಷಣ ಭುಗಿಲೇಳುತ್ತಿದ್ದವು. ಬುದ್ಧೋ ಕೂಡ ಈ ಹೋರಾಟದಲ್ಲಿ ಸೇರಿ, ಧೈರ್ಯವಾಗಿ ಕಾದಿದ. ಕಡೆಗೂ ರೈತರು ಗೆದ್ದರು. ಆದರದು ಗೆಲುವೆ ? ಮೈಲುಮೈಲುಗಳಂತರದವರೆಗೂ ಬೆಳೆದಿದ್ದ ಕಬ್ಬು ಬೂದಿಯಾಗಿತ್ತು. ಅದರೊಂದಿಗೇ ಎಲ್ಲರ ಸಮೃದ್ಧ ಬೆಳೆಯ , ಸಮೃದ್ಧಿಯ ಭರವಸೆ ಕೂಡ ಸುಟ್ಟು ಹೋಗಿತ್ತು.

ಹೊಲಕ್ಕೆ ಬೆಂಕಿ ಹಾಕಿದವರ್ಯಾರೆಂಬ ರಹಸ್ಯ ಹಳ್ಳಿಗರಿಗೆ ತಿಳಿಯದ್ದೇನಲ್ಲ. ಆದರೆ ಹೆಸರು ಹೇಳುವ ಧೈರ್ಯ ಯಾರಿಗೂ ಇಲ್ಲ. ಅದಕ್ಕೆ ಯಾವ ಸಾಕ್ಷಿಯೂ ಇಲ್ಲ. ಸಾಕ್ಷಿಯಿಲ್ಲದೆ ಬೈಯ್ಯುವುದೂ, ವಾದ ಮಾಡುವುದು ವ್ಯರ್ಥ. ಜಂಗರ್‌ಗೀಗ ಮನೆಯ ಹೊರಗೆ ಹೋಗುವುದು ಸಾಧ್ಯವೇ ಇಲ್ಲದ ವಿಷಯ. ಹೋದಲ್ಲೆಲ್ಲಾ ಹೊಲಕ್ಕೆ ಬೆಂಕಿ ಬೀಳಲು ಇವನೇ ಕಾರಣ ಎಂದು ಜನ ಬೆರಳು ಮಾಡಿ ತೋರಿಸುವರು. ತನಗಾದ ನಷ್ಟದ ಬಗ್ಗೆ ಯೋಚಿಸದಿದ್ದರೂ, ಜನರ ಮಾತು ಕೇಳಲು ಕಷ್ಟವಾಗಿ, ಇಡೀದಿನ ತನ್ನ ಮನೆಯಲ್ಲೇ ಕುಳಿತಿರುತ್ತಿದ್ದ.

ತಿಂಗಳುಗಳುರುಳಿದವು. ರಾತ್ರೋ ರಾತ್ರಿ ಕಬ್ಬರೆಯುವ ಧ್ವನಿ ಪ್ರತಿಧ್ವನಿಸಬೇಕಿದ್ದ ಹಳ್ಳಿ, ರುದ್ರಭೂಮಿಯಂತೆ ಮೌನ ತಳೆಯಿತು. ಕಬ್ಬು, ಹಣವನ್ನಷ್ಟೇ ಅಲ್ಲದೆ, ಚಳಿಗಾಲದಲ್ಲಿ ಇನ್ನಿತರ ಸೌಲಭ್ಯಗಳನ್ನು ಒದಗಿಸುತ್ತಿತ್ತು. ಕಬ್ಬಿನ ಬಿಸಿ ಹಾಲು, ಒಣಗಿದ ಗರಿಗಳು ಬೆಂಕಿಯಲ್ಲಿ ಚಳಿ ಕಾಯಿಸಿಕೊಂಡರೆ , ಹಸಿಗರಿಗಳು ಹಸುಗಳಿಗೆ ಮೇವಾಗುತ್ತಿತ್ತು. ಹಿಂದಿನ ವರ್ಷಗಳಲ್ಲಿ ಬೆಚ್ಚಗೆ ಒಲೆಯ ಬಳಿ ಮಲಗುತ್ತಿದ್ದ ನಾಯಿಗಳೀಗ ಚಳಿಯಿಂದ ನಡುಗುತ್ತಿದ್ದವು. ಚಳಿ ಹೆಚ್ಚಿದಂತೆ ಹಳ್ಳಿಯಲ್ಲಿ ನೆಗಡಿ ಕೆಮ್ಮು ಹೆಚ್ಚಿತು. ಈ ಎಲ್ಲ ದುರಾದೃಷ್ಟಕ್ಕೆ ಜಂಗರ್ ಹೊಣೆಗಾರನಾದ. ಕಳೆದುಕೊಳ್ಳಲಾರದ ಜಂಗರ್ ಬುದ್ಧೋನನ್ನೂ ತನ್ನ ಮಟ್ಟಕ್ಕೇ ಇಳಿಸುವ ಪ್ರತಿಜ್ಞೆ ಮಾಡಿದ.

ಬೆಂಕಿಯ ಪ್ರಕರಣದನಂತರ, ಬುದ್ಧೋ, ಜಂಗರ್‌ನ ಆಸುಪಾಸು ಸುಳಿಯುವುದನ್ನೇ ಬಿಟ್ಟಿದ್ದ. ಜಂಗರ್ ಮೆಲ್ಲ ಮೆಲ್ಲಗೆ ಅವನತ್ತ ಬರುತ್ತಿದ್ದ. ಬುದ್ಧೋ ಗದ್ದೆಗೆ ಬೆಂಕಿ ಹಚ್ಚಿದ್ದಾನೆಂಬ ಅನುಮಾನ ಕೂಡ ತನಗಿಲ್ಲವೆಂದು ಅವನು ಬುದ್ಧೋಗೆ ಸ್ಪಷ್ಟಪಡಿಸಬೇಕಿತ್ತು. ಆಗಾಗ್ಗೆ ಹಾಲು, ಕಂಬಳಿ ಕೊಳ್ಳುವ ನೆಪದಲ್ಲಿ ಬುದ್ಧೋನ ಮನೆಗೆ ಹೋಗತೊಡಗಿದ. ಬುದ್ಧೋ ಕೂಡ ಅವನನ್ನು ವಿಶ್ವಾಸದಿಂದ ಬರಮಾಡಿಕೊಳ್ಳುತ್ತಿದ್ದ. ಜಂಗರ್‌ಗೆ ಹಾಲು ಕುಡಿಯಲು ಕೊಡದೆ ಕಳಿಸುತ್ತಲೇ ಇರಲಿಲ್ಲ. ಹಳ್ಳಿಗರು ತಮ್ಮ ಶತ್ರುವಿಗೂ ಕೂಡ ಹುಕ್ಕ ಸೇದಲು ಕೊಡುತ್ತಾರೆ. ಪರಿಸ್ಥಿತಿಯೂ ಇಬ್ಬರನ್ನೂ ಒಟ್ಟಿಗೆ ತರುತ್ತಿತ್ತು. ಜಂಗರ್ ಸೆಣಬಿನ ಕಾರ್ಖಾನೆಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಅವನಿಗೆ ತಿಂಗಳಿಗೊಮ್ಮೆ ಒಟ್ಟಿಗೆ ಸಂಬಳ ಬರುತ್ತಿದ್ದುದರಿಂದ, ದಿನದಿನದ ಖರ್ಚಿಗಾಗಿ ಆಗಾಗ್ಗೆ ಬುದ್ಧೋನಲ್ಲಿ ಸಾಲ ಮಾಡುತ್ತಿದ್ದ.

ಒಂದು ದಿನ ಬುದ್ಧೋ ಕೇಳಿದ. ''ಜಂಗರ್ ನಿಜ ಹೇಳು. ನಿನ್ನ ಹೊಲಕ್ಕೆ ಬೆಂಕಿ ಹಾಕಿದವನು ಸಿಕ್ಕರೆ ಅವನಿಗೆ ನೀನೇನು ಮಾಡುತ್ತಿ ?''

ಜಂಗರ್ ಕುತಂತ್ರದಿಂದ ಉತ್ತರಿಸಿದ. ''ಸೋದರನೆ, ನೀನು ನನ್ಗೊಂದು ಉಪಕಾರ ಮಾಡ್ದೆ. ನೀನಿಲ್ದೆ, ನನ್ನ ಅಹಂಕಾರ ನಷ್ಟವಾಗ್ತಿರ್ಲಿಲ್ಲ ಅಂತ ಹೇಳ್ತಿನಿ.''

''ನಾನೇ ನೀನಾಗಿದ್ದಿದ್ರೆ, ಅವ್ನ ಮನೆ ಸುಟ್ಟು ಹಾಕ್ತಿದ್ದೆ.''

''ಬಿಡು, ಬಿಡು. ಇಷ್ಟು ಅಲ್ಪಾವಧಿಯ ಜೀವನದಲ್ಲಿ . ಯಾರ ಶತ್ರುತ್ವ ಬೆಳೆಸ್ಬೇಕು ? ನಾನಂತೂ ಹಾಳಾದೆ. ಅವ್ನನ್ನೂ ಹಾಳ್ಮಾಡಿದೆ. ಯಾರ್ಗೆ ಒಳ್ಳೇದಾದಂತಾಯ್ತು ?''

''ಹೊಗಳಬೇಕಾದ ನಡತೆ ನಿಂದು

ಜಂಗರ್. ಆದ್ರೆ ಕೋಪ ಮನುಷ್ಯನ್ನ ಹುಚ್ಚನನ್ನಾಗಿಸತ್ತೆ. ಒಳಿತು ಕೆಡಕಿನ ತಾರತಮ್ಯ ಮರೆಸತ್ತೆ'' ಎಂದ ಬುದ್ಧೋ.

ಬಿತ್ತನೆಯ ಕಾಲ ಬಂತು. ರೈತರು ಹೊಲ ಸಿದ್ಧಮಾಡುತ್ತಿದ್ದರು. ಬುದ್ಧೋನ ವ್ಯಾಪಾರ ಜೋರಾಗಿ ನಡೆದಿತ್ತು. ಅವನ ಕುರಿಗಳಿಗೆ ಬೇಡಿಕೆ ಹೆಚ್ಚಿತ್ತು. ಗೊಬ್ಬರಕ್ಕಾಗಿ ಅವರ ಹೊಲಗಳಲ್ಲಿ ತನ್ನ ಕುರಿಗಳನ್ನು ಮಂದೆ ತಡೆಯುವ ಬೆಲೆಯನ್ನು ದುಪ್ಪಟ್ಟು ಹೆಚ್ಚಿಸಿದ. ಯಾರಾದರೂ ಆಕ್ಷೇಪಿಸಿದರೆ, ''ಬೆಲೆ ಹೆಚ್ಚೆನಿಸಿದರೆ ಕುರಿಗಳನ್ನು ಒಯ್ಯಬೇಡಿ. ನಾನೇನೂ ನಿಮಗೆ ಒತ್ತಾಯ ಮಾಡುತ್ತಿಲ್ಲ. ನಾನೊಂದು ಪೈಸೆಯನ್ನೂ ಕಡಿಮೆ ಮಾಡಲಾರೆ ಎನ್ನುತ್ತಿದ್ದ. ಅಗತ್ಯವಿದ್ದುದು ರೈತರಿಗೆ ಬುದ್ಧೋ ಹೇಳಿದಷ್ಟು ಹಣ ತೆತ್ತು ಕುರಿಗಳನ್ನೊಯ್ಯಲು. ಯಾತ್ರಿಕರ ಸುತ್ತ ಸುತ್ತುವ ಪೂಜಾರಿಗಳಂತೆ ಅವನ ಹಿಂದೆ ಸುತ್ತುವರು.

ಹೆಚ್ಚು ಹಣ ಹರಿದು ಬಂದಾಗ ಸಣ್ಣ ಮನೆಯಲ್ಲಿರಲು ಲಕ್ಷ್ಮಿಗೆ ಕಷ್ಟವೇನೋ ಎಂಬಂತೆ ಬುದ್ಧೋ ಮನೆಯನ್ನು ವಿಸ್ತರಿಸ ತೊಡಗಿದ. ಒಂದು ವರಾಂಡ, ಆರು ಕೊಠಡಿ ಗಳು ಕಾಸು ಖರ್ಚಿಲ್ಲದೆ ತಯಾರಾದವು. ರೈತರು ಮರ ಹಾಗೂ ಬಿದಿರೊದಗಿಸಿದರೆ, ಕೊಂಡೊಯ್ದ ಕುರಿ ಮರಿಗಳಿಗೆ ಬದಲಾಗಿ ಗಾರೆ ಕೆಲಸವಾಯ್ತು. ಮನೆಯನ್ನೇ ಪುನಃ ಕಟ್ಟಿದಂತಾಗಿ ಗೃಹಪ್ರವೇಶದ ಸಿದ್ಧತೆ ನಡೆದವು.

ಬುದ್ಧೋ ಐಶ್ವರ್ಯವಂತನಾಗುತ್ತಿದ್ದಂತೆ, ಇಡೀ ದಿನದ ಕೆಲಸದ ನಂತರವೂ, ಜಂಗರ್‌ನಿಗೆ ದಿನದ ಊಟ ಒದಗಿಸಿಕೊಳ್ಳುವುದೇ ಕಷ್ಟವೆನಿಸುತ್ತಿತ್ತು. ಬುದ್ಧೋನ ಸಂಪತ್ತು, ಅವನನ್ನು ಈರ್ಷ್ಯೆಯಿಂದ ಉರಿಯುವಂತೆ ಮಾಡುತ್ತಿತ್ತು. ಒಂದು ದಿನ ಜಂಗರ್ ಕಟುಕರ ವಸತಿಗೆ ಬಂದು, ಹರಿಹರ್‌ನನ್ನು ಕರೆದು ಅವನೊಂದಿಗೆ ಹುಕ್ಕ ಸೇದತೊಡಗಿದ.

ಹರಿಹರ್ ಕಟುಕರ ಮುಖಂಡ. ತನ್ನ ಕುಕೃತ್ಯಗಳಿಗಾಗಿ ಇಡೀ ಹಳ್ಳಿಯಲ್ಲೇ ಹೆಸರವಾಸಿಯಾಗಿದ್ದ. ಪ್ರತಿಯೊಬ್ಬರೂ ಅವನ ಬಗ್ಗೆ ಹೆದರುತ್ತಿದ್ದರು.

''ಈ ವರ್ಷ ಹೋಲಿ ಆಚರಿಸೋದಿಲ್ವೇನು? ಹಬ್ಬದ ಗದ್ದಲವೇ ಇಲ್ಲ?''

''ಇಡೀ ದಿನ ಹೊಟ್ಟೆಗೆ ಹೊಂದಿಸೋದ್ರಲ್ಲೇ ತಾಪತ್ರಯ ಪಡುವಾಗ ಹೋಲಿ ಆಚರಿಸೋದಾದ್ರೂ ಹ್ಯಾಗೆ? ಸಮಯ ಯಾರ್ಗಿದೆ ? ನೀನು ಹೇಗಿದ್ದಿ?'' ಎಂದ ಹರಿಹರ್.

''ನಂದೂ ಅದೇ ಹಳೇ ಗೋಳಿನ ಕಥೆ. ಸಂಜೆ ಊಟಕ್ಕಾಗೋ ಅಷ್ಟು ಗಳಿಸೋಕ್ಕೆ ಇಡೀ ದಿನ ಕಾರ್ಖಾನೇಲೇ ಕಳ್ದೋಗತ್ತೆ. ಈಗ ಹಳ್ಳೀಲಿ ಬುದ್ಧೋ ಒಬ್ನೇ ಐಶ್ವರ್ಯವಂತ. ಹೊಸ ಮನೆ ಕಟ್ಟಿದ್ದಾನೆ. ಹೆಚ್ಚು ಕುರಿ ಕೊಂಡಿದ್ದಾನೆ. ಅದ್ದೂರಿಯಾಗಿ ಗೃಹ ಪ್ರವೇಶದ ತಯಾರಿ ನಡ್ಸಿದ್ದಾನೆ. ಸುತ್ತಲ ಏಳು ಹಳ್ಳಿಯವರಿಗೆ ಆಹ್ವಾನ ಪತ್ರಿಕೆಯ ಜೊತೆ ವೀಳ್ಯಾನೂ ಕಳಿಸ್ತಾನೇಂತ ಕಾಣತ್ತೆ.''

''ಹೌದು, ಹೆಚ್ಚು ಹಣ ಸಂಪಾದ್ನೆ ಮಾಡಿದಾನೆ ಬುದ್ಧೋ ಕೇಳಿದೀಯಾ, ಹಣದೊಂದ್ಗೆ ವಿನಯಾನೂ ಬರತ್ತೇ ಅಂತಾರೆ. ಆದ್ರೆ ಅವ್ನ ನಡ್ತೆ ನೋಡು. ಇನ್ನೂ ಕೆಳಮಟ್ಟಕ್ಕೋಗಿದೆ. ಈಗವ್ನು ಯಾರೊಂದ್ಗೂ ನಯವಾಗಿ ಮಾತೇ ಆಡಲ್ಲ.''

''ಯಾಕೆ ಮಾತಾಡ್ತಾನೆ? ಹಳ್ಳೀಲಿ ಅವ್ನನ್ನ ಸರಿಗಟ್ಟೋರು ಯಾರಿದಾರೆ ? ಇದೆಲ್ಲಾ ನಡ್ಯೋದು ನೋಡ್ತಿರೋ ಆ ದೇವ್ರಿಗೆ ಕಣ್ಣಿಲ್ಲ. ಅವ್ನ ಐಶ್ವರ್ಯದ ಬಗ್ಗೆ ಕೊಚ್ಕೊಳೋದ್ನ ಕೇಳ್ತಾ ನನ್ನ ರಕ್ತ ಕೋಪದಿಂದ ಕುದ್ಯತ್ತೆ. ನಿನ್ನೆ ಹೋಲ್ದಲ್ಲಿ ಕಾಗೆ ಓಡಿಸ್ತಿದ್ದೋನು , ಇವತ್ತು ತುಂಬಾ ಗಣ್ಯವ್ಯಕ್ತಿ ಆಗ್ಬಿಟ್ಟ,'' ಎಂದ ಜಂಗರ್.

''ಅವನ್ನ ಸರಿದಾರಿಗೆ ತರ್ಲೇನು ?''

''ನೀನೇನ್ಮಾಡೋಕಾಗತ್ತೆ? ಆ ಹೆದರಿಕೆ ಬಿಂದ್ಲೇ ಅಷ್ಟು ಹಸುಗಳ್ನ ಇಟ್ಕೊಂಡಿಲ್ಲ.''

''ಓ ಹಸುವಿನ ಮನೆ ಹಾಳಾಯ್ತು. ಕುರಿಗಳಂತೂ ಇದೆ. ಹೌದೋ ಅಲ್ವೋ?''

''ಹೌದು, ಆದ್ರೆ ಉಪಾಯ ಮಾತ್ರ ಯಾರ್ಗೂ ತಿಳೀ ಬಾರ್ದು.'' ಇಬ್ಬರೂ ಗುಟ್ಟಾಗಿ ಮಾತಾಡತೊಡಗಿದರು.

''ಒಳ್ಳೆತನ ದ್ವೇಷ ಹುಟ್ಸಿದ್ರೆ. ಕೆಟ್ಟತನ ಗೆಳೆತನ ಉಂಟು ಮಾಡತ್ತೆ'' ಅನ್ನೋ ವಿಷ್ಯ ವಿಚಿತ್ರ ಅನ್ಸಿದ್ರೂ ಸತ್ಯ. ಪಂಡಿತ ಪಂಡಿತನನ್ನು ಪೂಜಾರಿ ಮತ್ತೊಬ್ಬ ಪೂಜಾರಿಯನ್ನು, ಕವಿ ಮತ್ತೊಬ್ಬ ಕವಿಯನ್ನು ದ್ವೇಷಸ್ತಾನೆ. ಒಬ್ಬರೊಬ್ಬರ ಮುಖ ನೋಡೋದೂ ಅವ್ರಿಗೆ ಬೇಕಿರಲ್ಲ. ಆದ್ರೆ ಜೂಜುಕೋರ ಮತ್ತೊಬ್ಬ ಜೂಜುಗಾರಂಗೆ, ಕುಡುಕ ಕುಡುಕನಿಗೆ, ಕಳ್ಳ ಕಳ್ಳನಿಗೆ ಸಹಾಯ ಮಾಡ್ತಾನೆ. ಆದ್ರೆ, ಒಬ್ಬ ಪಂಡಿತ ಕತ್ತಲಲ್ಲಿ ಎಡ್ವಿ ಬಿದ್ರೆ, ಮತ್ತೊಬ್ಬ ಪಂಡಿತ ಅವನಿಗೆರ್ಡು ಏಟು ಹಾಕಿ ಮತ್ತೆ ಅವ್ನ ಮೇಲೇಳದ ಹಾಗೆ ಮಾಡ್ತಾನೆ. ಕೆಟ್ಟದ್ದನ್ನು ಎಲ್ರೂ ದ್ವೇಷಿಸ್ತಾರೆ. ಆದ್ರೆ ಕೆಟ್ಟತನ ಪರಸ್ಪರ ಗೌರವವನ್ನೂ ಹುಟ್ಸತ್ತೆ.

ಜಿಂಗರ್ ಹಾಗೂ ಹರಿಹರ್ ಪಿತೂರಿಯ ವಿವರಗಳನ್ನೆಲ್ಲಾ ಯೋಜಿಸಿದರು. ಸಮಯ, ಜಾಗ ರೀತಿ ಎಲ್ಲವೂ ಖಚಿತವಾದವು. ಜಿಂಗರ್ ಹರ್ಷದಿಂದ ಮನೆಗೆ ಹಿಂತಿರುಗಿದ. ಸೇಡು ತೀರಿಸುವ ಅವನ ಯೋಜನೆ ಯಶಸ್ವಿಯಾಗುವು ದರಲ್ಲಿತ್ತು.

ಮರುದಿನ ಜಿಂಗರ್ ಕೆಲಸಕ್ಕೆ ಹೋಗುವ ಮೊದಲು ಬುದ್ಧೋನ ಮನೆಗೆ ಹೋಗಿ ''ನಿನ್ನ ಕುರಿಗಳ ಜೊತೆ ಮೇಯೋಕೆ ನನ್ನ ಕರೂನ್ನೂ ಕರ್ಕೊಂಡ್ಹೋಗು . ನಾನು ಇಡೀ ದಿನ ಮನೆ ಹೊರ್ಗೆ ಇರ್ತೀನಿ. ಆ ಬಡಪಾಯಿಗೆ ತಿನ್ನೋಕ್ಕೆ ಏನೂ ಇರಲ್ಲ'' ಎಂದ.

''ನನ್ನದೇನೂ ಅಭ್ಯಂತರವಿಲ್ಲ. ಆದ್ರೆ ಕಟುಕರ ವಿಷ್ಯ, ಅದ್ರಲ್ಲೂ ಆ ಹರಿಹರ್ ಗೊತ್ತಲ್ಲ. ಕಳೆದ ವರ್ಷ ನನ್ನ ಎರಡು ಹಸುಗಳನ್ನ ಕೊಂದ. ಆಗ್ಲಿಂದ ನಾನು ಒಂದೂ ಹಸು ಇಟ್ಕೋಬಾರ್ದೂಂತ ತೀರ್ಮಾನ ಮಾಡ್ದೆ. ಆದ್ರೆ ನಿಂದೇನೋ ಒಂದು ಸಣ್ಣ ಕರು. ಅದ್ರಿಂದ ಯಾರ್ಗೇನು ಪ್ರಯೋಜ್ನ ? ಆಯ್ತು. ಅದಕ್ಕೇನು ? ನಿಂಗಿಷ್ಟ ಬಂದಾಗ ಇಲ್ಲಿ ತಂದ್ಬಿಡು. '' ಎನ್ನುತ್ತ ಬುದ್ಧೋ ಜಿಂಗರ್‌ನನ್ನು ಮನೆಯೊಳಗೆ ಕರೆದೊಯ್ದು ಗೃಹಪ್ರವೇಶಕ್ಕೆ ಮಾಡಿದ್ದ ಸಿದ್ಧತೆಯನ್ನೆಲ್ಲಾ ತೋರಿಸಿದ. ತುಪ್ಪ , ಸಕ್ಕರೆ ಹಿಟ್ಟು ತರಕಾರಿ ಎಲ್ಲವೂ ಸಿದ್ಧವಾಗಿತ್ತು. ಇನ್ನು ಕೇವಲ ಸತ್ಯನಾರಾಯಣ ಕಥೆ ಆಗಬೇಕಿತ್ತು. ಜಿಂಗರ್‌ಗೆ ತನ್ನ ಕಣ್ಣನ್ನೇ ನಂಬಲಾಗಲಿಲ್ಲ. ಹಿಂದೆಂದೂ ಇಷ್ಟು ಭಾರಿಯ ಸಿದ್ಧತೆಗಳನ್ನು ಕಂಡಿರಲಿಲ್ಲ ಅವನು.

ಮನೆಗೆ ಹಿಂತಿರುಗಿ ತನ್ನ ಕರುವನ್ನು ತಂದು ಬುದ್ಧೋನ ಕುರಿಯ ಮಂದೆಯ ಜೊತೆ ಬಿಟ್ಟ. ಸಂಜೆ ಶುರುವಾದ ಸತ್ಯನಾರಾಯಣ ಕಥೆ ಮುಗಿದು ಮರುದಿನ ಬೆಳಗಿನ ಜಾವದ ತನಕ ಊಟ ನಡೆಯಿತು. ಬುದ್ಧೋ ಇನ್ನೂ ಊಟ ಮಾಡಿ ಏಳುತ್ತಿರುವಷ್ಟರಲ್ಲಿ, ಜಿಂಗರ್‌ನ ಕರು, ಕತ್ತಿಗೆ ಕಟ್ಟಿದ ಹಗ್ಗದೊಂದಿಗೆ ಹೊಲದಲ್ಲಿ ಸತ್ತು ಬಿದ್ದಿದೆ ಎಂಬ ವಾರ್ತೆ ಬಂತು. ಬುದ್ಧೋ ದಿಗ್ಭ್ರಮೆಗೊಂಡ. ಮೂರ್ಛೆ ಹೋಗುವವನಂತೆ ನಟಿಸಿದ, ಜಿಂಗರ್ ''ಅಯ್ಯೋ ನನ್ನ ಬಡ ಕರುವೆ'' ಎಂದು ಗೋಳಿಡುತ್ತ ಹೇಳಿದ. ''ಹೋಗಿ ನೋಡೋಣ. ನಿನ್ನ ಕುರಿಗಳೊಂದಿಗೆ ಬಿಟ್ಟಾಗ ನಾನು ಕರುವಿಗೆ ಹಗ್ಗ ಕಟ್ಟಿರಲಿಲ್ಲ. ನೀನು ಯಾವಾಗ ಹಗ್ಗ ಕಟ್ದೆ ?''

''ಭಗವಂತನೇ ಸಾಕ್ಷಿ. ನಾನು ಹಗ್ಗಾನೂ

ನೋಡಿಲ್ಲ. ರಾತ್ರಿ ಎಲ್ಲಾ ಕರುವಿನ ಬಳಿಗೂ ಹೋಗಿಲ್ಲ'' ಎಂದ ಬುದ್ದೋ.

''ನೀನು ಹೋಗ್ದೇ ಇದ್ರೆ ಹಗ್ಗ ಯಾರು ಕಟ್ಟಿದ್ರು? ನೀನೇ ಕಟ್ಟಿರ್ಬೇಕು. ಬಹುಶಃ ಮರೆತಿದ್ದೀ ಅಂತ ಕಾಣತ್ತೆ.''

ಅಲ್ಲೇ ಇದ್ದ ಬ್ರಾಹ್ಮಣನೊಬ್ಬ ಹೇಳಿದ 'ಅದು ನಿನ್ನ ಕುರಿಗಳ ಮಧ್ಯೆ ಸತ್ತೋಗಿದೆ ಆದ್ರಿಂದ ಜವಾಬ್ದಾರಿ ನಿಂದು''.

''ಅವ್ನು ಹಗ್ಗ ಕಟ್ತಿದ್ದನ್ನ ನಿನ್ನೆ ಸಂಜೆ ನಾನು ನೋಡ್ದೆ'' ಅಂದ ಹರಿಹರ್.

''ನಿಜ್ವಾ ನೋಡ್ದ್ಯಾ?''

''ಹೆಗ್ಲ ಮೇಲೆ ಕೋಲಿಟ್ಕೊಂಡು, ಕರು ಕಟ್ಟಿದ್ದು ನೀನಲ್ವಾ?''

''ನೀನು ಸತ್ಯಹರಿಶ್ಚಂದ್ರ ಹರಿಹರ್. ನಾನು ಕರು ಕಟ್ತಾ ಇದ್ದಿದ್ದನು ನೀನು ನೋಡಿದ್ದು ತುಂಬಾ ನಿಜ!''

''ಓ ದಯವಿಟ್ಟು ಕೋಪ ಮಾಡ್ಕೋಬೇಡ. ನೀನು ಕಟ್ಟಿಲ್ಲ ಅನ್ತ?''

''ವಿಷಯ ಗಂಭೀರವಾಗಿದೆ. ಇದನ್ನ ಸರ್ಯಾಗಿ ವಿಚಾರಿಸ್ಬೇಕು. ಹಸುವನ್ನು ಕೊಂದಿದ್ದಕ್ಕಾಗಿ ಆರೋಪಿಗೆ ಸರ್ಯಾದ ಶಿಕ್ಷೆ ಆಗ್ಲೇಬೇಕು'' ಎಂದ ಬ್ರಾಹ್ಮಣ.

''ಮಹಾರಾಜ್, ಅದು ಉದ್ದೇಶಪೂರ್ವಕವಾಗಿ ಮಾಡಿದ್ದಲ್ಲ'' ಎಂದ ಜಂಗರ್.

''ಅದು ಮುಖ್ಯವಲ್ಲ. ಹಸು ಕೊಲ್ಲೋದು ಮಹಾ ಪಾಪ. ಏನೇ ಆದ್ರೂ, ಹಸೂನ ಕೊಂದಾಗಿದೆ. ಹಸುಗಳ್ನ ಯಾರಾದ್ರೂ ಉದ್ದೇಶಪೂರ್ವಕವಾಗಿ ಕೊಲ್ತಾರೇಂದ ತಿಳ್ಕೊಂಡಿದೀರಾ? ಅದು ಬ್ರಾಹ್ಮಣ ಹತ್ಯೆಗಿಂತ ಹೆಚ್ಚಿನ ಪಾಪ ಅಂತ ನಮ್ಮ ಶಾಸ್ತ್ರಗಳು ಹೇಳೋದು ನಿಮ್ಗೆ ತಿಳೀದಾ?''

''ಹೌದು, ಎಷ್ಟಾದ್ರೂ ಅದೊಂದು ಹಸು. ಆದ್ರೆ ಮಹಾರಾಜ್ ಅದು ಕೇವಲ ನಿರ್ಲಕ್ಷ್ಯದಿಂದಾಗಿದ್ದು. ಆದಷ್ಟೂ ಕಡಿಮೆಯಾದ ಯಾವ್ದಾದ್ರೂ ಪರಿಹಾರವಿದ್ರೆ ಹೇಳಿ ಅವನನ್ನು ಪಾರುಮಾಡಿ'' ಎಂದ ಜಂಗರ್.

ಇದನ್ನೆಲ್ಲಾ ಕೇಳ್ತಾ ನಿಂತಿದ್ದ ಬುದ್ದೋಗೆ ಇದ್ರಲ್ಲಿ ಜಂಗರ್‌ನ ಕೈವಾಡವಿದೆ ಎಂದು ತಿಳಿದಿದ್ರೂ ಅವ್ನು ಅಸಹಾಯಕನಾಗಿದ್ದ. ತಾನು ಮಾಡಿಲ್ಲಾಂತ ಎಷ್ಟೇ ನಂಬಿದ್ರೂ, ತಾನು ಶಿಕ್ಷೆ ತಪ್ಪಿಸ್ಕೊಳ್ಳೋಕೆ ಹೀಗೇಳ್ತೀನೀಂತ ತಿಳ್ಕೋತಾರೆ ಜನ.

ಆ ಬ್ರಾಹ್ಮಣ ಅರೆ ದೇವತೆಗೂ ಆ ಶಿಕ್ಷೆಯಿಂದ ಲಾಭವಿತ್ತು. ಅಂಥ ಅವಕಾಶವನ್ನು ಅವ್ನಾದ್ರೂ ಹೇಗೆ ಕಳ್ಕೋತಾನೆ? ಪರಿಣಾಮ- ಕರುವಿನ ಕೊಲೆಗೆ ಬುದ್ದೋನೇ ಕಾರಣ ಅನ್ನುವ ತೀರ್ಮಾನವಾಯ್ತು. ಶಿಕ್ಷೆಯಾಗಿ, ಬುದ್ದೋ ಮೂರು ತಿಂಗಳು ಭಿಕ್ಷಾಟನೆ ಮಾಡಿ, ೭ ತೀರ್ಥಕ್ಷೇತ್ರಗಳ ಯಾತ್ರೆ ಮಾಡಿ, ೫೦೦ ಮಂದಿ ಬ್ರಾಹ್ಮಣರಿಗೆ ಸಂತರ್ಪಣೆ ಮಾಡಿ ೫ ಹಸುಗಳನ್ನು ದಾನ ಕೊಡಬೇಕೆಂದಾಯ್ತು. ಬುದ್ದೋ ದಿಗ್ಭ್ರಮೆಯಿಂದ ಅಳತೊಡಗಿದ. ಆದರೆ ಈ ವಿಚಾರಣೆಯ ಮುಂದೆ ಅವನ ಕಣ್ಣೀರು ಪ್ರಯೋಜನಕ್ಕೆ ಬರಲಿಲ್ಲ. ಸಿಕ್ಕ ರಿಯಾಯಿತಿ ಎಂದರೆ ಭಿಕ್ಷಾಟನೆಯಲ್ಲಿ ಒಂದು ತಿಂಗಳ ಕಡಿತ. ಮತ್ತಾವ ದಯೆ ಕರುಣೆ ಇಲ್ಲದೆ ಅಂತಿಮ ತೀರ್ಮಾನವನ್ನವನು ಒಪ್ಪಲೇಬೇಕಿತ್ತು.

ಈಗ ಬುದ್ದೋನ ಕುರಿಗಳಿಗೆ ದೇವರೇ ದಿಕ್ಕು. ಅವನ ಮಕ್ಕಳಿನ್ನೂ ಚಿಕ್ಕವರು. ಅವನ ಬಡ ಹೆಂಡತಿಯಾದ್ರೂ ಏನ್ಮಾಡೋಕೆ ಸಾಧ್ಯ? ಇಡೀ ದಿನ ಮನೆ ಮನೆ ತಿರುಗಿ, ಅರ್ಧಮುಖ ಮುಚ್ಚಿ, ಭಿಕ್ಷಾಪಾತ್ರೆ ಹಿಡಿದು ಗೋಹತ್ಯೆ ಮಾಡಿದ ಪಾಪಿಗೆ ಭಿಕ್ಷೆ ನೀಡಿ ಎಂದು ಕೇಳಬೇಕಿತ್ತು. ಇದವನಿಗೆ ಬೇಸರವಿಲ್ಲ, ಕಾರಣ ಮೊದಲುಕೂಡ ಇಡೀದಿನ ಕುರಿ

ಮೇಯಿಸಲು ಹೊರಗೇ ಇರುತ್ತಿದ್ದ. ಊಟ ತಾನು ಮನೆಯಲ್ಲಿ ತಿನ್ನುತ್ತಿದ್ದುದಕ್ಕಿಂತ ಕೆಟ್ಟದೇನಲ್ಲ. ಆದರೆ ಬೇಸರದ ವಿಷಯವೆಂದರೆ ಭಿಕ್ಷೆ ನೀಡುವಾಗ ಕೆಲ ಹೆಂಗಸರು ''ಜೀವನ ಕಳೆಯೋಕ್ಕೆ ಇದೊಳ್ಳೆ ಸುಲಭದ ಹಾದಿ'' ಎಂದು ಹಂಗಿಸುತ್ತಿದ್ದುದು.

ಎರಡು ತಿಂಗಳ ನಂತರ ಬುದ್ಧೋ ಮನೆಗೆ ಹಿಂತಿರುಗಿದಾಗ ತುಂಬಾ ದುರ್ಬಲನಾಗಿದ್ದ. ಉದ್ದ ಗಡ್ಡ, ಕ್ಷೌರ ಕಾಣದ ಮುಖ, ಅರವತ್ತು ವರ್ಷದವನಂತೆ ಕಾಣುತ್ತಿದ್ದ ಈಗ. ಯಾತ್ರೆಗೆ ಹಣ ಹೊಂದಿಸಬೇಕಿತ್ತು. ಕುರುಬನಿಗೆ ಯಾರು ಸಾಲಕೊಡುತ್ತಾರೆ.? ಕುರಿಗಳ ಮೇಲೆ ಹೇಗೆ ಭರವಸೆ ಇಡುವುದು ? ಕೆಲವೊಮ್ಮೆ ಒಂದೇ ರಾತ್ರಿಯಲ್ಲಿ ಇಡೀ ಮಂದೆಯೇ ಖಾಯಿಲೆಯಿಂದ ನಾಶವಾಗುತ್ತದೆ. ಬೇಸಿಗೆ ಬೇರೆ, ಕಡೆಗೂ ರೂಪಾಯಿಗೆ ಎರಡಾಣೆ ಬಡ್ಡಿಯಂತೆ ದಲ್ಲಾಳಿಯೊಬ್ಬ ಸಾಲಕೊಡಲೊಪ್ಪಿದ. ೮ ತಿಂಗಳಲ್ಲಿ ಬಡ್ಡಿ ಅಸಲಿಗೆ ಸಮನಾಗುತ್ತದೆ. ಇದನ್ನು ಒಪ್ಪಿಕೊಳ್ಳಲಾಗದ ಬುದ್ಧೋ ತನ್ನ ಕುರಿಗಳನ್ನೇ ಮಾರಿಬಿಡಲು ನಿರ್ಧರಿಸಿದ . ಕಟುಕನೊಬ್ಬನನ್ನು ಕರೆದು ೫೦೦ ರೂಗಳಿಗೆ ಎಲ್ಲ ಕುರಿಗಳನ್ನೂ ಮಾರಿಬಿಡಲು ನಿರ್ಧರಿಸಿದ. ೨೦೦ ರೂಗಳನ್ನು ತಾನಿಟ್ಟುಕೊಂಡು ಉಳಿದದ್ದನ್ನು ಹಿಂತಿರುಗಿ ಬಂದಮೇಲೆ ಬ್ರಾಹ್ಮಣರಿಗೆ ಸಂತರ್ಪಣೆ ನಡೆಸಲು ತೆಗೆದಿಟ್ಟ.

ಜಿಂಗರ್ ಈಗ ಹತ್ತಿರದ ಪಟ್ಟಣವೊಂದರಲ್ಲಿ ಕಟ್ಟುತ್ತಿದ್ದ ಛತ್ರದಲ್ಲಿ ಕೂಲಿಕಾರನಾಗಿ ಸೇರಿಕೊಂಡ. ವಾರಾಂತ್ಯದಲ್ಲಿ ಹಳ್ಳಿಗೆ ಬಂದು, ಒಂದು ರಾತ್ರಿ ತಂಗಿದ್ದು ಮರುದಿನ ಮತ್ತೆ ಹೋಗುತ್ತಿದ್ದ . ಬುದ್ಧೋ ಯಾತ್ರೆಯಿಂದ ಹಿಂತಿರುಗಿ ಬಂದ ನಂತರ, ಆ ಕಟ್ಟಡದಲ್ಲೇ ತಾನೂ ಕೂಲಿಕಾರನಾಗಿ ಸೇರಿದ. ಒಂದು ದಿನ ಇಬ್ಬರೂ ಪರಸ್ಪರ ಸಂಧಿಸಿದಾಗ ಒಬ್ಬರನ್ನೊಬ್ಬರು ಅಭಿನಂದಿಸಿ ತಮ್ಮ ತಮ್ಮ ಕೆಲಸಕ್ಕೆ ಹೋದರು. ಸಂಜೆ ಜಿಂಗರ್ ಬುದ್ಧೋನನ್ನು ಭೇಟಿಯಾದಾಗ ಕೇಳಿದ ''ನೀನೇನಾದ್ರೂ ಅಡ್ಗೆ ಮಾಡ್ತೀಯಾ ?''

''ಅಡ್ಗೆ ಮಾಡ್ದೆ , ಊಟ ಮಾಡೋಕೆ ಇನ್ನೇಗೆ ಸಾಧ್ಯ ಅಂದ್ಕೊಂಡಿದೀಯ ನೀನು?'' ಎಂದ ಬುದ್ಧೋ.

''ಸರಿ, ನಾನು ದಿನಕ್ಕೆ ಒಂದೇ ಸಲ ಊಟ ಮಾಡೋದು. ಆ ಊಟಕ್ಕೂ ಬರೀ ಸತು (ಗಂಜಿ) ಕುಡೀತೀನಿ'' ಎಂದ ಜಿಂಗರ್.

''ಕಟ್ಟಿಗೆ ಒಟ್ಟು ಮಾಡು. ನನ್ಹತ್ರ ಸ್ವಲ್ಪ ಹಿಟ್ಟಿದೆ. ಕೆಲವು ಚಪಾತಿ ಮಾಡ್ಬೋದು. ಆದ್ರೆ ನಾನು ಮಾಡಿದ ಚಪಾತಿ ನೀನು ತಿನ್ನೋಲ್ಲ. ಸರಿ. ಆದ್ರಿಂದ ನೀನೇ ಮಾಡು. ಇಬ್ರೂ ತಿನ್ನೋಣ''.

ಬೆಂಕಿ ಹೊತ್ತಿತು. ಬುದ್ಧೋ ನೀರು ತಂದ. ಜಿಂಗರ್ ಚಪಾತಿ ಮಾಡಿದ. ಇಬ್ಬರೂ ಈರುಳ್ಳಿ, ಮೆಣಸಿನ ಕಾಯೊಂದಿಗೆ ಚಪಾತಿ ತಿಂದರು. ನೆಲದ ಮೇಲೆ ಹುಕ್ಕೆ ಇಟ್ಟು ಸೇದುತ್ತ ಕುಳಿತರು. ಇದ್ದಕ್ಕಿದ್ದಂತೆ ಬುದ್ಧೋ ಹೇಳಿದ''. ನಾನು ನಿನ್ನ ಕಬ್ಬಿನ ಗದ್ದೆಗೆ ಬೆಂಕಿ ಹಚ್ಚಿದೆ''.

'ನಂಗೊತ್ತು' ಎಂದ ಜಿಂಗರ್. ಸ್ವಲ್ಪ ಕಾಲದ ನಂತರ 'ನಾನು ನಿನ್ನ ಕರೂನ ಕಟ್ಟೆ. ಹರಿಹರ್ ಅದನ್ನ ಕೊಂದ' ಎಂದ.

''ನಂಗದು ಗೊತ್ತು'' ಎಂದ ಬುದ್ಧೋ . ಇಬ್ಬರೂ ನಿದ್ರೆಯೊಳಕ್ಕಿಳಿದರು!

ಪುಸ್ತಕ ಪರಿಚಯ

ನಾಲ್ಕು ನಾಟಕ ಸಂಕಲನಗಳು : ಬರೆದವರು ಎ. ಮನೋರಮಾ ಭಟ್ ೧. ಆಯ್ಕೆ ಮತ್ತು ಇತರ ರೇಡಿಯೋ ನಾಟಕಗಳು : ಬೆಲೆ ರೂ ೩೬ ೨. ಹೊಸ ಹಾದಿ ಮತ್ತು ಇತರ ರೇಡಿಯೋ ನಾಟಕಗಳು: ಬೆಲೆ ರೂ ೩೦ ೩. ಬಲಿ ಮತ್ತು ಇತರ ರೇಡಿಯೋ ನಾಟಕಗಳು : ಬೆಲೆ ರೂ ೩೦ ೪. ನಿರ್ಧಾರ ಮತ್ತು ಇತರ ರೇಡಿಯೋ ನಾಟಕಗಳು : ಬೆಲೆ ರೂ ೩೦;ಪ್ರಕಾಶಕರು : ಕನ್ನಡ ಪ್ರಪಂಚ ಪ್ರಕಾಶನ; ದರ್ಭೆ, ಪುತ್ತೂರು, ದಕ್ಷಿಣ ಕನ್ನಡ

ಈ ನಾಲ್ಕು ನಾಟಕ ಸಂಕಲನಗಳಲ್ಲಿಯ ಒಟ್ಟು ೩೧ ನಾಟಕಗಳು ಆಕಾಶವಾಣಿಯ ವನಿತಾ ವಾಣಿ ವಿಭಾಗಕ್ಕಾಗಿಯೇ ರಚನೆಗೊಂಡಿವೆ ಮತ್ತು ಪ್ರಸಾರವಾಗಿವೆ. ಸ್ತ್ರೀಯರ ನಿತ್ಯ ಜೀವನದ ಸಮಸ್ಯೆಗಳ ಮೇಲೆ ಪ್ರಕಾಶ ಬೀರುವುದು, ಅದಕ್ಕೆ ಉತ್ತಮ ಪರಿಹಾರದೊಂದಿಗೆ ಮನೋರಂಜನೆಯನ್ನೊದಗಿಸುವುದು ; ಸಮಾಜ ಶಿಕ್ಷಣದ ಉದ್ದೇಶವನ್ನೂ ಪೂರ್ತಿಗೊಳಿಸುವುದು. ಈ ಎಲ್ಲ ನಾಟಕಗಳ ಮೂಲ ಹಿನ್ನೆಲೆ.

ಇಲ್ಲಿ ರೇಡಿಯೋ ನಾಟಕಗಳೆಂದರೆ 'ಅದೃಶ್ಯ'ವಾದ, ಕೇವಲ ಶ್ರವಣೇಂದ್ರಿಯ ಒಂದನ್ನೇ ಆಶ್ರಯಿಸಿರುವ ಮಾಧ್ಯಮವಷ್ಟೆ? ಸಾಹಿತ್ಯ ಪ್ರಕಾರಗಳಲ್ಲೇ ನಾಟಕ ರಚನೆಯು ಪರಿಪೂರ್ಣ ಸೃಜನಾತ್ಮಕ ವಾದುದು. ಅಂತೆಯೇ ಕ್ಲಿಷ್ಟವಾದುದೂ ಹೌದು. ಅದರಲ್ಲೂ ಶ್ರವ್ಯನಾಟಕವು ಪ್ರಭಾವಶಾಲಿಯಾಗಬೇಕಿದ್ದರೆ ಬಹಳ ಚಾತುರ್ಯದ ಅಗತ್ಯವಿದೆ. ಸಮಾಜ ಶಿಕ್ಷಣದ ಹೊಣೆಗಾರಿಕೆ ಬೇರೆ ಇದೆ. ಸೀಮಿತ ಅವಧಿಯೊಳಗೆ ಜನಮಾನಸವನ್ನು ತಟ್ಟಿ ಎಚ್ಚರಿಸುವ ಕಾರ್ಯವನ್ನು ರಂಜನೀಯವಾಗಿ, ರಸವತ್ತಾಗಿ ಮಾಡಬೇಕಿದೆ. ಇಂಥ ಮಹತ್ವಪೂರ್ಣ ಉದ್ದೇಶ ಹೊಂದಿದ ರೇಡಿಯೋ ನಾಟಕಗಳ ರಚನೆ ಸಾಮಾನ್ಯ ಕೆಲಸವಲ್ಲ. ಮನೋರಮೆಯವರು ಈ ನಿಟ್ಟಿನಲ್ಲಿ ಸಾಕಷ್ಟು ಯಶಸ್ಸು ಹೊಂದಿದ್ದಾರೆ.

ಇವರ ನಾಟಕಗಳನ್ನು ವಿಮರ್ಶಿಸುವಾಗ ನಮ್ಮ ಮನಸ್ಸು ಮತ್ತು ದೂರದೃಷ್ಟಿಕೋಣವನ್ನು ಮೂವತ್ತು ವರ್ಷಗಳಷ್ಟು ಹಿಂದಕ್ಕೆ -ಎಂದರೆ ಇಂದಿನ ಟಿ.ವಿ. ಧಾರಾವಾಹಿಗಳ ಮಹಾಪೂರ ಬರುವುದರ ಮೊದಲಿನ- ರೇಡಿಯೋ ಯುಗಕ್ಕೆ ವರ್ಗಾಯಿಸಿಕೊಳ್ಳಬೇಕು. ಆಗಲೇ ಆ ನಾಟಕಗಳ ಮಹತ್ವವನ್ನು ಅರಿಯಬಹುದಷ್ಟೆ. ದೃಶ್ಯನಾಟಕಗಳಲ್ಲಿ ಉದ್ದೇಶಿತ ರಸ ಪುಷ್ಟಿಯ ಅರ್ಧ ಭಾಗವು ತಾನಾಗಿಯೇ ನೆರವೇರುವುದು ಸರ್ವವಿದಿತ. ಆದರೆ ಶ್ರವ್ಯನಾಟಕದಲ್ಲಿ ಹಾಗಿಲ್ಲ. ಉಚಿತ ರೀತಿಯ ಧ್ವನಿ ಸಂಯೋಜನೆಯೊಂದಿಗೆ ವಿಶೇಷ ಜಾಗರೂಕತೆಯಿಂದ ನಾಟಕಗಳ ಧ್ವನಿ ಸುರುಳಿಗಳನ್ನು ಸಿದ್ಧಪಡಿಸಬೇಕು. ಏನಿದ್ದರೂ ನಾಟಕದ ಜೀವಾಳವಿರುವುದೇ ಸಂಭಾಷಣೆಯಲ್ಲಿ. ಆದ್ದರಿಂದ ನಾಟಕ ಯಶಸ್ವಿಯಾಗುವುದು ನಾಟಕರಚನೆ ಚೆನ್ನಾಗಿದ್ದರೆ ಮಾತ್ರ.

ಸಂಪರ್ಕ ಮಾಧ್ಯಮದ ಮೇಲೆ ಟೆಲಿವಿಷನ್‌ನ ಆಕ್ರಮಣ ಮತ್ತು ಆಧಿಪತ್ಯ ಸ್ಥಾಪನೆಗೆ ಮೊದಲಿನ ಆ ಕಾಲದಲ್ಲಿ ಮನೆ ಮನೆಗಳಲ್ಲಿ, ಹಳ್ಳಿ ಹಳ್ಳಿಗಳಲ್ಲಿ ವಿಜೃಂಭಿಸುತ್ತಿದ್ದ ಏಕಾಧಿಪತ್ಯ ವೆಂದರೆ ಬಾನುಲಿ ಕಾರ್ಯಕ್ರಮಗಳು. ಅವುಗಳಲ್ಲಿ ಅತ್ಯಂತ ಆಕರ್ಷಣೀಯವಾದ ನಾಟಕಗಳೆಂದರೆ ತಪ್ಪಾಗದು. ವಾರಕ್ಕೊಂದೋ, ತಿಂಗಳಿಗೊಂದೋ ಬಿತ್ತರಿಸಲಾಗುವವುಗಳು. ಅವುಗಳಿಗಾಗಿ ದಿನವೆಣಿಸುತ್ತಾ ಕಾಯುವ ಶ್ರೋತೃಗಳು-ಮನೆ ಮನೆಗಳ

ದೊಡ್ಡವರು ಚಿಕ್ಕವರೆನ್ನದೆ ಎಲ್ಲ ಮಂದಿ! ನಾಟಕ ಪ್ರಾರಂಭವಾಯಿತೆಂದರೆ ರೇಡಿಯೋವಿನ ಮುಂದೆಯೋ ಹಿಂದೆಯೋ ವಿಶ್ರಮಿಸಿಕೊಳ್ಳುತ್ತಾ ತಲ್ಲೀನತೆಯಿಂದ ಆಲಿಸುವ ಒಂದು ಮಧುರ ಸನ್ನಿವೇಶ! ಇದು ಇಂದು ಕೂಡ ನೆನಪಿಸಿಕೊಳ್ಳಬಹುದಾದ ಘಟನಾವಳಿಗಳಲ್ಲೊಂದೆಂದರೆ ಅತಿಶಯೋಕ್ತಿಯಾಗದು.

ಇಂಥ ಒಂದು ಆಕರ್ಷಣೀಯ ಕಾರ್ಯಕ್ರಮದ ಮೂಲಕ ಕನ್ನಡಿಗರಿಗೆ ಅಪ್ಯಾಯಮಾನ ಮನೋರಂಜನೆಯೊದಗಿಸುವಲ್ಲಿ ಮನೋರಮೆಯವರದು ಶ್ಲಾಘನೀಯ ಕಾರ್ಯವೇ ಸರಿ.

ನಾಟಕಗಳಲ್ಲಿ ವಿಷಯ ವೈವಿಧ್ಯವಿದೆ, ವ್ಯಂಗ್ಯ, ಮೊನಚು ಮಾತುಗಳೂ ಇವೆ. ಯಾವುದೇ ಕಥೆ ನಾಟಕಗಳಲ್ಲಿರಬೇಕಾದ ಅನಿರೀಕ್ಷಿತ ಮುಕ್ತಾಯವೂ ಇಲ್ಲದಿಲ್ಲ. ಮಹಿಳಾ ಲೋಕಕ್ಕಾಗಿಯೇ ಬರೆದಿದ್ದರೂ ಹಲವು ನಾಟಕಗಳಲ್ಲಿ ಆವಶ್ಯಕತೆಗನುಗುಣವಾಗಿ ಪುರುಷಪಾತ್ರಗಳೂ ಸಾಕಷ್ಟು ಬಂದಿವೆ. ಸ್ವತಃ ಶ್ರವ್ಯ ವೇದಿಕೆಯ ಅಭಿನೇತ್ರಿಯಾಗಿರುವ ಮನೋರಮೆಯವರು ನಾಟಕಗಳ ಅಭಿನಯದ ಹಂತದಲ್ಲಾಗಬಹುದಾದ ತೊಡಕುಗಳ, ಅನುಕೂಲ ಅನನುಕೂಲಗಳ ವಾಸ್ತವ ಅನುಭವಗಳಿರುವವರು. ಇದರಿಂದಾಗಿ ಇವರ ದೃಶ್ಯಸಂಯೋಜನೆ, ಫ್ಲಾಶ್ ಬ್ಯಾಕ್ ತಂತ್ರಗಳು ಸಮರ್ಪಕವಾಗಿ ನಾಟಕದ ಪ್ರಖರತೆಯನ್ನು, ಪ್ರಭಾವೀ ಗುಣವನ್ನು ಹೆಚ್ಚಿಸುತ್ತವೆ ಮತ್ತು ದೃಶ್ಯಮಾಧ್ಯಮದಲ್ಲಿ ಅಭಿನಯಿಸಲ್ಪಟ್ಟಾಗಲೂ ಯಶಸ್ವಿಯಾಗಿವೆ. ಆಧುನಿಕ ಮಹಿಳಾ ಮಂಡಲಗಳ ವಾರ್ಷಿಕೋತ್ಸವ ಮುಂತಾದ ಸಂದರ್ಭಗಳಲ್ಲಿ ಕೂಡ, ಯೋಗ್ಯ ನಿರ್ದೇಶನದೊಂದಿಗೆ ಅಭಿನಯಿಸಲು ಯೋಗ್ಯವಾಗಿವೆ ಮತ್ತು ಉತ್ತಮ ಫಲಕಾರಿಯೂ ಆಗಬಲ್ಲುವು.

ಕನ್ನಡ ಸಾಹಿತ್ಯರಂಗದಲ್ಲಿ ಕಥೆ, ಕಾದಂಬರಿ, ಕವನ, ಚುಟುಕಗಳ ಬೆಳೆ ಹುಲುಸಾಗಿ ಬಂದಿದೆ. ಆದರೆ ನಾಟಕರಚನೆಗಳು ಬೆರಳೆಣಿಕೆಯಷ್ಟೇ. ಆದ್ದರಿಂದ ಶ್ರೀಮತಿ ಮನೋರಮೆಯವರ ನಾಟಕಗಳು ಸ್ವಾಗತಾರ್ಹವೂ, ಮಾತ್ರವಲ್ಲ ಆ ಕೊರತೆಯನ್ನು ತುಂಬಿಕೊಡ ಬಲ್ಲ ಯೋಗ್ಯತೆಯುಳ್ಳವೂ ಆಗಿವೆ. ದಿವಂಗತ ಸೇಡಿಯಾಪು ಕೃಷ್ಣಭಟ್ಟರ ಬಹುಮಾನಿತ ಕೃತಿ 'ಪಳಮೆಗಳು' ಎಂಬ ಕಥಾ ಸಂಕಲನದಿಂದ ಆಯ್ದುಕೊಂಡ 'ನಾಗರ ಬೆತ್ತ' ಎಂಬ ಕಥಾನಕವನ್ನು ರೇಡಿಯೋ ನಾಟಕವಾಗಿ ಪರಿವರ್ತಿಸಿ, ಸಂದರ್ಭಕ್ಕೆ ಬೇಕಾಗುವ ಹಿನ್ನೆಲೆ, ಗೆಳತಿಯರ ಸಂಭಾಷಣೆ ಇತ್ಯಾದಿಗಳಿಂದ ಮೆರುಗೇರಿಸಿ ಮಂಗಳೂರು ಆಕಾಶವಾಣಿಯ ಮೂಲಕ ಪ್ರಸ್ತುತ ಪಡಿಸಿದ್ದಾರೆ. ಇದೇ ರೀತಿ ಪ್ರಸಿದ್ಧ ಕತೆಗಾರ್ತಿ 'ಗಂಗಾಪಾವೆಕಲ್' ರವರ 'ಮೌನ ರಾಗಗಳು' ಕತೆಯನ್ನೂ ನಾಟಕರೂಪದಲ್ಲಿ ಪರಿಚಯಿಸಿದ್ದಾರೆ. ಒಟ್ಟಿನಲ್ಲಿ ನಾಟಕ ರಚನಾ ಕೌಶಲ್ಯದಲ್ಲಿ ಇವರು ಪರಿಣತರಾಗಿರುವುದಕ್ಕೆ ಈ ನಾಲ್ಕು ಸಂಕಲನಗಳೇ ಸಾಕ್ಷಿ. ವಸ್ತುಗಳನ್ನು ಜೀವನದ ಸಾಮಾನ್ಯ ಸಣ್ಣಪುಟ್ಟ ಘಟನೆ, ಆಸೆ ಆಮಿಷಗಳಿಂದಲೇ ಆಯ್ದುಕೊಂಡು ಅವನ್ನು ಮನೋರಂಜಕವಾಗಿ ಚಿತ್ರಿಸುವುದರಲ್ಲಿ ಎತ್ತಿದಕೈ ಇವರದು. ಸಂದರ್ಭೋಚಿತವಾದ ಪರಿಕಲ್ಪನೆ, ವ್ಯಂಗ್ಯ, ನವುರಾದ ಹಾಸ್ಯ, ತಿರುಗುಬಾಣ, ಕೋಪತಾಪ, ಮಧುರ ದಾಂಪತ್ಯದ ಸುಮಧುರ ಸಲ್ಲಾಪ, ಶೋಕ, ಮುಂತಾದ ರಸಪಾಕಗಳು ಸ್ವಾಭಾವಿಕವಾಗಿ (ಎಳೆದು ತಾರದೆ) ಮೂಡಿವೆ. ಅಂತೆಯೇ ಕಳೆದ ಮೂವತ್ತೈದು ವರ್ಷಗಳಿಂದ ಶ್ರೀಮತಿಯವರು ಕನ್ನಡನಾಡಿನ ವಿದ್ಯಾವಂತ, ಅವಿದ್ಯಾವಂತ ಸ್ತ್ರೀ ಪುರುಷರ ಹೃದಯವನ್ನು ಸರಿಸಮಾನವಾಗಿ ಆಗಿಂದಾಗ್ಗೆ ಮುಟ್ಟುತ್ತಲೇ, ತಟ್ಟುತ್ತಲೇ ಬಂದಿದ್ದಾರೆ.

ಸರಸ್ವತಿ ಬಡೆಕ್ಕಿಲ
ಮನೆ ಸಂಖ್ಯೆ ೧೨, ದೀಪಾನಗರ,
ಬೋಗಾದಿ, ಮೈಸೂರು-೫೭೦ ೦೦೬

ಪುಸ್ತಕ ವಿಮರ್ಶೆ

'ಬಣ್ಣದ ಕಾಲು' (ಸಣ್ಣ ಕತೆಗಳು) ಲೇಖಕ: ಜಯಂತ ಕಾಯ್ಕಿಣಿ, ಮೊದಲ ಮುದ್ರಣ: ೧೯೯೯, ನವಕರ್ನಾಟಕ ಪ್ರಕಾಶನ, ಬೆಂಗಳೂರು, ಪುಟ-೧೪೪, ಬೆಲೆ-ರೂ ೪೮.

ಕನ್ನಡದ ಮಹತ್ವದ ಕತೆಗಾರ ಜಯಂತ ಕಾಯ್ಕಿಣಿಯವರ ಈಚಿನ ಸಂಕಲನ ಇದು. 'ಬಣ್ಣದಕಾಲು' ಕಥಾ ಸಂಕಲನದಲ್ಲಿನ ಕತೆಗಳು ಮಾನವ ಸ್ವಭಾವದ ವಿವಿಧ ಬಣ್ಣಗಳನ್ನು ಪರಿಚಯಿಸುತ್ತದೆ. ಈ ಸಂಕಲನದ ಹೆಸರು ತುಂಬ ಔಚಿತ್ಯಪೂರ್ಣ.

ಪ್ರಸ್ತುತ ಸಂಕಲನದಲ್ಲಿ ''ಚಂದ್ರಕಾಲಿ', 'ಗಾಳಿಮರದ ನೆಳಲು', 'ತೀರ', 'ಸ್ವಪ್ನ ದೋಷ', 'ಟ್ರೈಸಿಕಲ್', 'ಬಿಡು ಬಿಡು ನನ್ನನು...' 'ಚುಕ್ಕಾಣಿ' 'ಚೌತಿಚಂದ್ರ', 'ಬಣ್ಣದಕಾಲು', 'ಸೇವಂತಿ ಹೂವಿನ ಟ್ರಕ್ಕು', 'ದಿಟ್ಟಬೊಟ್ಟು', 'ಅಪರೂಪ', ಮತ್ತು 'ಹೊಸ್ತಿಲು' - ಈ ಹದಿಮೂರು ಕತೆಗಳಿವೆ. ಒಂದೇ ಬೆಸಕ್ಕಿಗೆ ಇವು ತಮ್ಮನ್ನು ಓದಿಸಿಕೊಳ್ಳುತ್ತವೆ. ಆದರೆ ಇಲ್ಲಿನ ಪಾತ್ರಗಳು ನಮ್ಮನ್ನು ಕಾಡುತ್ತಿರುತ್ತವೆ. ಇದಕ್ಕೆ ಕಾರಣ, ನಮ್ಮ ನಿಮ್ಮೆಲ್ಲರ ಸುತ್ತ ದೈನಂದಿನ ಜೀವನದ ಸನ್ನಿವೇಶದಲ್ಲಿ ಎದುರಾಗುವ ಮಾನವಾಕೃತಿಗಳು, ಎದುರಾಗುವ ಸಂದರ್ಭಗಳೇ ಇಲ್ಲಿ ಪಾತ್ರಗಳಾಗಿರುವುದು. ಈ ದೃಷ್ಟಿಯಿಂದ ಕತೆಗಳು ಗಾತ್ರದಲ್ಲಿ ಸಣ್ಣವಾದರೂ ಪರಿಣಾಮದಲ್ಲಿ ದೊಡ್ಡವು. ಇಲ್ಲಿನ ಕತೆಗಳು ಚೋಟು ಮೆಣಸಿನಂತೆ. ಕತೆಗಳು ಕಾಡುತ್ತವೆ.

ಕನ್ನಡದ ಸಣ್ಣಕತೆಗಳಿಗೆ ಸುದೀರ್ಘ ಇತಿಹಾಸವಿದೆ, ಸಮೃದ್ಧ ವರ್ತಮಾನವಿದೆ, ಭವ್ಯ ಭವಿಷ್ಯವೂ ಇದೆ. ಇಂದಿನವರೆಗೂ ಕನ್ನಡ ಕಥಾಲೋಕ, ವಸ್ತು, ಶೈಲಿ, ಪ್ರೇರಣೆ-ಪ್ರಭಾವ ಮುಂತಾದ ದೃಷ್ಟಿಗಳಿಂದ ಭಿನ್ನ ನೆಲೆಗಳನು ಪಡೆಯುತ್ತಾ, ಬೆಳೆಯುತ್ತಾ ಬಂದಿರುವುದನ್ನು ಗಮನಿಸಬಹುದು. ಸ್ವಾತಂತ್ರ್ಯೋತ್ತರ ದಿನಗಳು ಕಥನಕ್ಕೆ ಹೇರಳ ಸಾಮಗ್ರಿಯ ನ್ನೊದಗಿಸಿದವು. ಸಾಹಿತ್ಯದ ಸಮಾಜಮುಖಿ ಚಲನೆ ಸೃಜನಶೀಲ ಸೃಷ್ಟಿಗೆ ವಸ್ತು ವೈವಿಧ್ಯದ ಭಂಡಾರವನ್ನು ತೋರಿಸಿತು. ಜಾತಿ, ಲಿಂಗ, ವರ್ಣ, ವರ್ಗ ವ್ಯವಸ್ಥೆಗಳು ಸಾಮಾಜಿಕ, ಆರ್ಥಿಕ ಸಿದ್ಧಾಂತಗಳಿಗಿಂತ ಹೆಚ್ಚಾಗಿ ಸಾಹಿತ್ಯದಲ್ಲಿ ಸ್ಥಾನಪಡೆದವು. ಇದರಿಂದಾಗಿಯೇ ಸಾಹಿತ್ಯಕ್ಕೆ ಹೊಸತನವೂ ಪ್ರಾಪ್ತವಾಯಿತು. ಇಂದಿನ ಪ್ರಮುಖ ಕತೆಗಾರರಾದ ರಾಜೇಂದ್ರ ಚೆನ್ನಿ, ಅಮರೇಶ, ಮೊಗಳ್ಳಿಗಣೇಶ, ಕುಂ.ವೀ. ಅರವಿಂದ ಭದ್ರಾವತಿ, ಬಷೀರ್ ಮೊದಲಾದ ಕಥಾಸಾಮಗ್ರಿ, ಸಂವೇದನೆಗಳು ಭಿನ್ನವಾದವು. ಅಂತಹ ಕತೆಗಾರರ ಅನುಭವ ಸಾಧ್ಯತೆಗಳು ಕತೆಗಳಲ್ಲಿ ಒಡಮೂಡುತ್ತವೆ ಯಾದ್ದರಿಂದ ಒಬ್ಬೊಬ್ಬರ ಕತೆಯೂ ವಿಶಿಷ್ಟವೆನಿಸುತ್ತದೆ. ಇವು ಕಾಲದ ಪ್ರಭಾವವನ್ನು ಮೀರಲು ಸಾಧ್ಯವಿಲ್ಲ. ಮಾಸ್ತಿಯವರು ಸಂಗೀತರ ಬಗ್ಗೆ ಆ ಕಾಲದಲ್ಲಿ 'ಸುಬ್ಬಣ್ಣ' ನಂಥವನನ್ನು ಕತೆಯಲ್ಲಿ ಕೊಟ್ಟರು. ಕತೆಯಲ್ಲಿ ಕಂಪ್ಯೂಟರ್, ರೋಬಾಟ್‌ಗಳನ್ನು ಅವರಿಂದ ನಿರೀಕ್ಷಿಸಲು ಸಾಧ್ಯವಿರಲಿಲ್ಲ. ಆದರೆ ಅವರು ಕತೆಯಲ್ಲಿ ಕಟ್ಟಿದ ಮಾನವೀಯ ಸಂವೇದನೆಗಳು ಸರ್ವಕಾಲಿಕವಾದವು. ಪ್ರಸ್ತುತ ಸಂದರ್ಭದಲ್ಲಿ ಇಂಥ ಅಂಶಗಳೇ ಗಮನಾರ್ಹವೆನಿಸುತ್ತವೆ. ಮುಂಬೈಯಂಥ ಮಹಾನಗರಿಯ ದಟ್ಟ ಅನುಭವದ ಕಾಯ್ಕಿಣಿಯವರು ಕರಾವಳಿ ಜನರ, ತಮ್ಮ ಬಾಲ್ಯದ, ಅನುಭವಗಳನ್ನು ಕಥೆಯ ರೂಪಕ್ಕಿಳಿಸುತ್ತಾರೆ. ಇಲ್ಲಿನ ಭಾಷೆಯ ಸೊಗಡು, ಜನರ ಔದಾರ್ಯ, ಸಣ್ಣತನ ಮುಂತಾದವುಗಳೇ ಈ ಸಂಕಲನದ ಕಥಾವಸ್ತುಗಳಾಗಿವೆ. ಮಧ್ಯಮ ವರ್ಗದ ಜನರ ಜೀವನ ವಿಧಾನ ಸಣ್ಣಕಥೆಗಳಿಗೆ, ಒಟ್ಟಾರೆ ಸಾಹಿತ್ಯಕ್ಕೆ ಸಮೃದ್ಧ ವಸ್ತುವನ್ನು ನೀಡಬಲ್ಲದು. ಇಲ್ಲಿ ಹದಿಮೂರು ಕತೆಗಳ ವೈವಿಧ್ಯ ಕಾಣುವುದು ಇಲ್ಲಿಯೇ.

ಚಂದ್ರಶಾಲೆಯ ಮಾಬಲ, ತೀರ ಕಥೆಯ ರುಕ್ಮಾಂಗದ, ಬಿಡುಬಿಡು ನಿನ್ನಯ...ಕತೆಯ ಮಾಸ್ತರರು , ಚುಕ್ಕಾಣಿಯ ಬೇಟ, 'ಬಣ್ಣದ ಕಾಲು' ಕತೆಯ ಚಂದು, 'ಸೇವಂತಿ ಹೂವಿನ ಟ್ರಕ್ಕು' ಕತೆಯ ದುರ್ಗಿ, ಈ ಮುಂತಾದ ಪಾತ್ರಗಳು ನಮ್ಮನ್ನು ಬದುಕಿನ ಒಂದಲ್ಲ ಒಂದು ಸಂದರ್ಭದಲ್ಲಿ ಭೇಟಿಯಾಗುವವರೇ. ಈ ಕಾರಣಕ್ಕಾಗಿ ಕತೆಯನ್ನು ಓದುಗ ಓದಬೇಕಾಗಿಲ್ಲ; ಕತೆಯೇ ಓದಿಸಿಕೊಳ್ಳುತ್ತದೆ.

ಸಣ್ಣ ಪುಟ್ಟ, ನಮ್ಮನಿಮ್ಮೆಲ್ಲರಿಗೆ ಅಲಕ್ಷಿತವಾಗುವ ಅಥವಾ ನಾವೇ. ಉದಾಸೀನ ಮಾಡುವ ವಿವರಗಳು ಕತೆಗಾರರಿಗೆ ಮುಖ್ಯವಾಗುತ್ತದೆ. ಇದು ಕತೆಯನ್ನು ಹೆಚ್ಚು ಸೂಕ್ಷ್ಮ ಹಾಗೂ ಸಂವೇದನಾ ಶೀಲವಾಗುವಂತೆ ಮಾಡಿದೆ. ಈ ಬಗೆಯ ವಿವರ ಚಂದ್ರಶಾಲೆಯ ವಿಶ್ವೇಶ್ವರಯ್ಯ, ಕಾಯಕ್ಕ, ಮಾಬಲರಿಗೆ ಸಂಬಂಧಿಸಿದ ಮಾತುಗಳಲ್ಲಿ ಗಾಳಿನ[illegible]ದ ನೆಳಲು ಕತೆಯ ತುಳಸಿ, ನಾಗಮ್ಮರ ವಿ[illegible]ಲ್ಲಿ ಕಂಡುಬರುತ್ತದೆ. ....ಕಾಯಕ್ಕ ದೇವಸ್ಥಾನದ ನಿರ್ಜನ ಚಂದ್ರಶಾಲೆಯಲ್ಲಿ ಕೂತಿದ್ದಳು. ಗೋಡೆಯಲ್ಲಿ ಗೂಟಗಳಿಗೆ ನೇತುಹಾಕಿದ್ದ ಹಳೇ ವಾದ್ಯ, ಕೊಂಬು, ಕಹಳೆಗಳನ್ನೇ ನೋಡುತ್ತಿದ್ದಳು... ... ನಾಗಮ್ಮನಂತೂ ಗಂಡನ ಒಗೆದ ಅಂಗಿಗಳನ್ನೇ ಮತ್ತೆ ಮತ್ತೆ ಒಗೆಯುತ್ತಿದ್ದಳು. ಮನೆತುಂಬ ಹರಡಿರುವ ವೆಂಕಟೇಶನ ಲುಂಗಿ, ಎಣ್ಣೆ ಬಾಟಲಿ, ದಾಡಿಯ ಸೆಟ್ಟು, ಸಿಗರೇಟಿನ ಪ್ಯಾಕು, ಹಣಿಗೆಗಳನ್ನು ಅತ್ತಿಂದಿತ್ತ ಸರಿಸುತ್ತ ಮುಟ್ಟುತ್ತ...' ಇವು ಒಂದೆರಡು ಉದಾಹರಣೆಗಳಷ್ಟೆ, ಎಲ್ಲ ಕತೆಗಳಲ್ಲೂ ಈ ಬಗೆಯ ವಿವರಗಳು ಬರುತ್ತವೆ.

ಇವೆಲ್ಲಕ್ಕಿಂತ ಹೆಚ್ಚಾಗಿ ಕಾಯ್ಕಿಣಿಯವರ ಕತೆಗಳಲ್ಲಿ ವ್ಯಷ್ಟಿ ಪ್ರಜ್ಞೆ ಮತ್ತು ಸಾಮಾಜಿಕ ಪ್ರಜ್ಞೆಗಳು ಮುಖಾಮುಖಿಯಾಗುವ ಸನ್ನಿವೇಶಗಳು ಅಪ್ತವಾಗುತ್ತವೆ. ಬದುಕಿನ ಹೊಯ್ದಾಟ ಇರುವುದೇ ಇಲ್ಲಿ. ಈ ಸಂದರ್ಭದಲ್ಲಿ ಕಲ್ಪಕತೆಯೊಳಗೆ ಸಾಂಸ್ಕೃತಿಕ ಎಚ್ಚರ ಹಾಳಾಗದಂತೆ ಅವರು ನೋಡಿಕೊಳ್ಳುತ್ತಾರೆ... ಅವನಿಗೆ ತೇರು ಬಿಟ್ಟರೆ ಕಾಣಿಸುತ್ತಿದ್ದುದು ನಾಗಬೀದಿಯ ಸರಸ್ವತಿಯ ಮನೆ ಮಾಡು. ಆ ಮಾಡಿನ ಮೇಲೆ ಹಪ್ಪಳ ಸಂಡಿಗೆಗಳನು ಒಣಗಿಸುವ ಚಾಪೆ ಇತ್ತು. ಚಾಪೆಯ ಬಳಿಕಾಗೆಗಳನ್ನು ಓಡಿಸುವ ಸಮೆಕೋಲು.' ಪು೮)

ಕಾಯ್ಕಿಣಿಯವರ ಕಥನ ಕಲೆಯ ಇನ್ನೊಂದು ಮುಖ್ಯ ಅಂಶ ಚಿತ್ರನಿರ್ಮಿತಿ. ಅವರು ಕಟ್ಟುವ ಶಬ್ದಚಿತ್ರಗಳು ಒಂದು ಬಗೆಯ 'ಸ್ಟಿಲ್ಸ್'(stills)ಗಳಾಗಿ ಮನಸ್ಸಿನಲ್ಲಿ ಅಚ್ಚೊತ್ತುತ್ತವೆ. ತಾಯಿಯ ಉರಿಗಣ್ಣಿಗೆ ಹೆದರಿ ಇಬ್ಬರೂ ಪಟಪಟ ತಲೆಗೆ ಎಣ್ಣೆ ಕುಟ್ಟಿ ಜಡೆ ಹಾಕುವಾಗ ದುರ್ಗಿಯ ಎರಡೂ ಕಂಗಳಲ್ಲಿ ಟ್ಯೂಬ್‌ಲೈಟಿನ ಪುಟಾಣಿ ಬಿಂಬಗಳು ಬೆಳ್ಳಿ ದೀಪಗಳಂತೆ ಅಲ್ಲಾಡುತ್ತಿದ್ದವು. ನಂತರ ದುರ್ಗಿ ವರ್ಷಾಳ ಯಾವುದೋ ಜನ್ಮದಿನದಂದು ಆಕೆ ಎಲ್ಲರೆದುರು ಸುಸ್ಸು ಮಾಡಿದ್ದನ್ನು ಎಲ್ಲರಿಗೂ ನೆನಪಿಸಲು ಕಷ್ಟಪಟ್ಟಳು. ಮುಖದೆದುರು ಪುಟ್ಟ ಕನ್ನಡಿ ಒಡಿಯಲು ಹೇಳಿದಳು....(ಪು೧೧೭) ಪಾತ್ರಗಳಾಗಲಿ, ವಿವರಗಳಾಗಲಿ ಉದ್ದೇಶಪೂರ್ವಕವಾಗಿ ಇಲ್ಲಿನ ಕತೆಗಳಲ್ಲಿ ತೂರಿಕೊಳ್ಳುವುದಿಲ್ಲ. ಅವು ಅನಿವಾರ್ಯವೆಂಬಂತೆ, ಸಹಜವಾಗಿ ಬರುತ್ತವೆ.

ನಿಯತವಾಗಿ ಕನ್ನಡದ ಓದುಗರಿಗೆ ಕಥಾ ಸಂಕಲನಗಳನ್ನು ನೀಡುತ್ತಿರುವ ಕಾಯ್ಕಿಣಿಯವರ ಈ ಸಂಕಲನ ನಿಯತ ಓದುಗರ ನಿರೀಕ್ಷೆಯನ್ನು ಹುಸಿಗೊಳಿಸುವುದಿಲ್ಲ. ಕತೆಗಾರ ಕಾಯ್ಕಿಣಿ, ನವಕರ್ನಾಟಕ ಪ್ರಕಾಶನ- ಇಬ್ಬರೂ ಅಭಿನಂದನಾರ್ಹರು.

ಡಾ॥ ಶ್ರೀಪಾದಭಟ್
ಅಧ್ಯಾಪಕ, ಮಹಾರಾಜ ಕಾಲೇಜು,
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಬದುಕು ಪ್ರಿಯವಾಗುವ ಬಗೆ : ಸುಧಾ ಚಿದಾನಂದಗೌಡ: ಪ್ರಕಾಶಕರು, ಯುವಕರ ಸಂಘ, ರಾಮನಗರ, ಹಗರಿಬೊಮ್ಮನಹಳ್ಳಿ, ಪುಟ ೧೨೬ ಬೆಲೆ -೩೦ರೂ

''ಬದುಕು ಪ್ರಿಯವಾಗುವ ಬಗೆ'' ಲೇಖಕರು ಶ್ರೀಮತಿ ಸುಧಾ ಚಿದಾನಂದಗೌಡ ಇವರು ಮೂಲತಃ ಬಳ್ಳಾರಿ ಜಿಲ್ಲೆಯವರು. ದಲಿತ ಕುಟುಂಬದ ಹಿನ್ನೆಲೆಯಿಂದ ಬಂದವರು. ಬಾಲ್ಯದಿಂದಲೇ ಇವರು ಕಥೆಗಳನ್ನು, ಕವಿತೆಗಳನ್ನು ರಚಿಸುವಲ್ಲಿ ಅಪಾರ ಆಸಕ್ತಿ. ಬಿ.ಎ. ಗೆ ಸೇರಿದ ನಂತರ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಲು ಪ್ರಾರಂಭಿಸುತ್ತಾರೆ. ಇವರು ಇಂಗ್ಲೀಷ್ ಎಂ.ಎ. ಪದವಿ ಪಡೆದವರು. ಇಲ್ಲಿ ಬರುವ ಕಥೆಗಳು ಇವರ ಸೃಜನ ಶೀಲ ಪ್ರತಿಭೆಗೆ ಕನ್ನಡಿ ಹಿಡಿಯುವಂತಿದೆ. ಇಲ್ಲಿ ಬರುವಂತಹ ಸ್ತ್ರೀ ಪಾತ್ರಗಳು ಚರ್ಚೆಗೆ ವಿಷಯವಾಗುವ ಸಂಭವವುಂಟು.

ಈ ಕಥಾ ಸಂಕಲನದಲ್ಲಿ ಒಟ್ಟು ೮ ಕಥೆಗಳಿವೆ. ಅವುಗಳೆಂದರೆ ೧. ಬದುಕು ಪ್ರಿಯವಾಗುವ ಬಗೆ ೨. ಹಜಾರದ್ ಬೀ, ೩. ಮಣ್ಣು, ೪. ಮಗ ೫. ಕೊಲೆ, ೬. ಗೋಧೂಳಿ, ೭. ಮೃಗಜಲ, ೮. ಬದುಕುವುದು ಕಷ್ಟ.

ಇಲ್ಲಿಯ ಬಹುತೇಕ ಕಥೆಗಳಿಗೆ ಲೇಖಕರು ಕಣ್ಣಾರೆ ಕಂಡ ಸತ್ಯ ಘಟನೆಗಳೇ ಆಧಾರ ಎಂದು ''ಮೊದಲ ಮಾತು'' ಅಲ್ಲಿ ಹೇಳಿರುವುದನ್ನು ಕಾಣಬಹುದು. ಅವರಿಗೆ ಸ್ತ್ರೀ ಮೇಲೆ ಅಪಾರವಾದ ಕಾಳಜಿ ಹಾಗೂ ಗೌರವ. ಜಗತ್ತಿನ ಪ್ರತಿಯೊಂದು ಕಡೆಯಲ್ಲಿಯೂ ಹೆಣ್ಣಿನ ಶೋಷಣೆ ನಿರಂತರವಾಗಿ ನಡೆಯುತ್ತಲೇ ಬಂದಿದೆ. ಸುಧಾ ಅವರು ಗಂಡಸರನ್ನು ದ್ವೇಷಿಸದೆ, ಸ್ತ್ರೀಯು ಅನುಭವಿಸುವ ಬಗೆ ಬಗೆಯ ಚಿತ್ರಣವನ್ನು, ಅದಕ್ಕೆ ಕಾರಣ ವನ್ನು ನೀಡಿ ಸಹೃದಯರ ಅಂತಃಕರಣವನ್ನು ಕಲಕುತ್ತಾರೆ. ಈ ಹೊತ್ತಿಗೆಯಲ್ಲಿ ಸ್ತ್ರೀಯು ತನಗೆ ಎದುರಾಗುವ ಸಮಸ್ಯೆಗಳನ್ನು ತಾನೇ ಪರಿಹರಿಸಿಕೊಂಡು, ತನ್ನನ್ನು ತಾನು ರಕ್ಷಿಸಿಕೊಂಡು ಜೀವನ ನಡೆಸುವುದನ್ನು ಮನಗಾಣಬಹುದು.

ಮೊದಲನೇ ಕಥೆಯಲ್ಲಿ ಸುನೀತ ಜೀವನದಲ್ಲಿ ಬೇಸತ್ತು, ಬದುಕನ್ನು ಅನುಭವಿಸಲಾರದೆ ಆತ್ಮಹತ್ಯೆಗೆ ಪ್ರಯತ್ನಪಡುವ ಚಿತ್ರಣವನ್ನು ನೀಡಲಾಗಿದೆ. ತಾನು ಮನಸಾರೆ ಪ್ರೀತಿಸಿದ ಹುಡುಗನನ್ನು ವಿವಾಹವಾಗಲಾಗದೆ, ಬೇರೊಬ್ಬನನ್ನು ತಂದೆತಾಯಿ ಬಲವಂತಕ್ಕೆ ವಿವಾಹವಾಗುತ್ತಾಳೆ. ವಿವಾಹವಾದ ನಂತರ ಮಕ್ಕಳಾದ ಮೇಲೆ, ಆ ದಂಪತಿಗಳ ಜೀವನ ಸುಖಮಯವಾಗಿರುವುದಿಲ್ಲ. ಮನಸ್ಸಿಗೆ ಸಮಾಧಾನವಾಗಲೆಂದು ನೌಕರಿಗೆ ಸೇರಿದಾಗ ಅಲ್ಲಿ ಪ್ರೀತಿಸಿದವನ ಆಕಸ್ಮಿಕ ಭೇಟಿ. ಇವರ ಗೆಳೆತನವನ್ನು ಅಪಾರ್ಥಮಾಡಿಕೊಂಡ ಸುನೀತಳ ಗಂಡನಿಂದ ಮತ್ತೆ ಕಿರಿಕಿರಿ. ಕೊನೆಗೆ ಸುನೀತ ಮೊದಲು ಪ್ರೀತಿಸಿದ ಹುಡುಗನೊಂದಿಗೆ ತಂದೆಯ ಅನುಮತಿ ಪಡೆದು ವಿವಾಹವಾಗುವುದರೊಂದಿಗೆ ಆ ಕಥೆ ಮುಕ್ತಾಯವಾಗುತ್ತದೆ.

ಎರಡನೇ ಕಥೆಯಲ್ಲಿ ಹಜಾರದ್ ಬೀ ಬೀಡಿ ಕಟ್ಟುವ ಅತಿ ಸಣ್ಣ ಕಾರ್ಮಿಕಳು. ಅವಳು ಮುಸ್ಲಿಂಳಾದರೂ ಅವಳಲ್ಲಿದ್ದ ಮಾನವೀಯ ಗುಣಗಳು ಅಪಾರ. ಮದುವೆಯಾದ ಒಂದು ವಾರಕ್ಕೆ ಹೋದ ಪತಿ ಐದು ವರ್ಷಗಳ ನಂತರ ವಾಪಸ್ಸಾಗುತ್ತಾನೆ. ಈ ಮಧ್ಯೆ ಅಣ್ಣ ಅತ್ತಿಗೆಯರ ಹತ್ತಿರ ನಿಂದನೆ ಮಾತುಗಳನ್ನು ಕೇಳಿದರೂ ಒಂದೂ ಮಾತನಾಡುವುದಿಲ್ಲ. ಅನಿರೀಕ್ಷಿತವಾಗಿ ಪತಿ ಮರಳಿ ಬಂದಾಗ ಮನೆಯಲ್ಲಿ ಯಾರು ಬೇಡವೆಂದರೂ ಅವನ ಜೊತೆ ಸಂಸಾರ ಹೂಡುತ್ತಾರೆ. ಅವನ ನಡತೆ ಸರಿಯಿಲ್ಲದಿದ್ದರೂ ಎಂದೂ ಅವನ ಬಗ್ಗೆ ಬೇಜಾರು ಮಾಡಿಕೊಂಡವಳಲ್ಲ. ಗಂಡ

ಅನೇಕ ದಿನಗಳ ನಂತರ ಮನೆ ಬಿಟ್ಟು ಹೋದರೂ ಧೈರ್ಯದಿಂದ ಮರ್ಯಾದೆಯಾಗಿ ಬದುಕುತ್ತಿದ್ದವಳು. ಗಂಡ ಬೇರೊಬ್ಬಳ ಜೊತೆ ಓಡಿ ಹೋಗಿ ಅವಳನ್ನು ಬೇರೆಯುವರಿಗೆ ಮಾರುತ್ತಾನೆ. ಪೋಲಿಸರಿಗೆ ಗೊತ್ತಾಗಿ ಅವರು ಗಂಡನ ಬಗ್ಗೆ ಕೇಳಿದಾಗ ಮುಚ್ಚುಮರೆ ಯಿಲ್ಲದೆ ಎಲ್ಲವನ್ನು ಹೇಳುತ್ತಾಳೆ. ತಾನು ಕಷ್ಟದಲ್ಲಿದ್ದರೂ ಬೇರೊಬ್ಬರಿಗೆ ಸಹಾಯ ಹಸ್ತ ನೀಡುವ ಹೆಣ್ಣು. ಕೊನೆಗೆ ಇದ್ದೊಬ್ಬ ಮಗನೊಂದಿಗೆ ಜೀವನ ಮುಂದುವರಿಸುತ್ತಾಳೆ.

ಮೂರನೇ ಕಥೆ''ಮಣ್ಣು'' ಇಲ್ಲಿ ಸಿದ್ದಲಿಂಗಪ್ಪನ ಸುತ್ತ ಅನೇಕ ಕೌಟುಂಬಿಕ ಸಮಸ್ಯೆಗಳು ಸುತ್ತುತ್ತಿರುತ್ತವೆ. ನೆಮ್ಮದಿ ಯಿಲ್ಲದೆ, ಯಾಂತ್ರಿಕವಾದ ಜೀವನ ಅವಳದು. ಅವಳ ನೆಂಟರಿಷ್ಟರೆಲ್ಲ ತಂದೆ ತಾಯಿಗಳು ಎಲ್ಲರೂ ಒಬ್ಬರ ಹಿಂದೆ ಒಬ್ಬರು ಮಣ್ಣು ಪಾಲಾಗುತ್ತಿದ್ದರೂ ಗಟ್ಟಿಯಾಗಿ ಹೃದಯ ಬಿಗಿ ಹಿಡಿದುಕೊಂಡು ಜೀವಿಸಿರುತ್ತಾಳೆ. ಕೊನೆಗೆ ಅವಳ ಮಗಳು ಮಣ್ಣಾಗುತ್ತಾಳೆ. ಅವಳ ಗಂಡ ಬೇರೊಬ್ಬಳ ಜೊತೆ ಸ್ನೇಹ ಬೆಳಸಿದ್ದರೂ, ಅವನು ಸತ್ತು ಮಲಗಿದ್ದರೂ ಇವಳ ನೋವು ಹೇಳತೀರದು. ಇದನ್ನು ಕತೆಗಾರ್ತಿ ವಿವರವಾಗಿ ಚಿತ್ರಿಸುತ್ತಾ ಹೋಗಿದ್ದಾರೆ.

ನಾಲ್ಕನೆಯ ಕಥೆ''ಮಗ'ಇಲ್ಲಿ, ನೀಲಮ್ಮ ತಾನು ಮಾಡದ ತಪ್ಪಿಗಾಗಿ ಗಂಡ ಮನೆಯಿಂದ ಹೊರಹಾಕಿದರೂ ಒಬ್ಬಂಟಿಗಳಾಗಿ, ಧೈರ್ಯ ಗೆಡದೆ ಜೀವನ ಸಾಗಿಸುತ್ತಾಳೆ. ತನ್ನಿಬ್ಬರು ಮಕ್ಕಳು, ಬಂಧು ಬಳಗದವರು ಎಲ್ಲರಿಂದಲೂ ದೂರವಿರುತ್ತಾಳೆ. ವೃದ್ಧಾಪ್ಯದ ವರೆಗೂ ಯಾರೂ ಅವಳನ್ನು ನೋಡಲು ಬರುವುದಿಲ್ಲ. ಒಂದು ದಿನ ಇದ್ದಕ್ಕಿದ್ದಂತೆ ಮಗ ಸೊಸೆಯ ಆಗಮನದಿಂದ, ಅವರ ಪ್ರೀತಿಯ ಮಾತುಗಳಿಂದ ನೀಲಮ್ಮನಿಗಾದ ಸಂತೋಷವನ್ನು ವರ್ಣಿಸಲು ಅಸಾಧ್ಯವಾದುದು. ಅವರು ತಮ್ಮೊಡನೆ ಬಂದು ಅಲ್ಲೇ ಇರಿ ಎಂದು ಕರೆದಾಗ ಅವರ ಜೊತೆ ಹೊರಟಳು. ಆದರೆ ಅಲ್ಲಿಗೆ ಹೋದಾಗ ಗೊತ್ತಾಯಿತು. ಮಗ ಸೊಸೆ ಅವಳ ಹೆಸರಿಗಿದ್ದ ೧೦ ಎಕರೆ ಜಮೀನನ್ನು ಪಡೆಯಲು ಅವರು ಆಡಿದ್ದು ನಾಟಕ ಎಂದು. ತಕ್ಷಣವೇ ಯಾರಿಗೂ ಕಾಣಿಸಿಕೊಳ್ಳದೆ ಮನೆ ಬಿಟ್ಟು ಹೋಗುವುದರೊಂದಿಗೆ ಈ ಕಥೆ ಮುಕ್ತಾಯವಾಗುತ್ತದೆ.

ಮುಂದಿನ ಕತೆ ''ಕೊಲೆ'' ಇಲ್ಲ ಬೆಂಜಮಿನ್ ಮೊಲಾಯಿಸ್ ಎಂಬ ವ್ಯಕ್ತಿ ಫಿಲಿಪ್ ಸೆಲಿಪೆ ಎಂಬ ಪೊಲೀಸನನ್ನು ಕೊಲ್ಲದಿದ್ದರೂ, ಬಿಳಿಯರು ಅವನಿಗೆ ಕೊಲೆ ಗಾರ ಎಂಬ ಪಟ್ಟಿಕಟ್ಟಿ ನ್ಯಾಯಾಲಯ ಅವನಿಗೆ ಶಿಕ್ಷೆ ವಿಧಿಸುವುದನ್ನು ಇಲ್ಲಿ ಕಾಣಬಹುದು. ಗಂಡಸಾದರೂ ಅವನು ಅನುಭವಿಸುವ ನೋವು ವರ್ಣಿಸಲು ಅಸಾಧ್ಯವಾದುದು

ಮುಂದಿನ ಕಥೆ 'ಗೋಧೂಳಿ'' ಇಲ್ಲಿ ಬಡವರು ಮತ್ತು ಶ್ರೀಮಂತರ ಮಧ್ಯೆ ಬರುವ ಸಂಬಂಧದ ಬಗ್ಗೆ ಈ ಕಥೆಯನ್ನು ಚಿತ್ರಿಸಿದ್ದಾರೆ. ಒಂದು ಹಸುವಿನ ಸುತ್ತಲೇ ಕಥೆ ಹೆಣೆದುಕೊಂಡು ಬಂದಿದೆ. ಅನ್ನ ಹಾಕಿದ ದಣಿ ಒಂದು ದಿನ ಮನೆಯ ಆಳು ಮಲ್ಲೇಶಿಗೆ ಹಸುವನ್ನು ಕಾಡಿನಲ್ಲಿ ಬಿಟ್ಟು ಬಂದಿದ್ದಕ್ಕೆ ರೇಗುತ್ತಾನೆ. ಒಂದೆರಡು ಏಟುಗಳನ್ನು ಕೊಡುತ್ತಾನೆ. ಇದನ್ನೇ ಮನಸ್ಸಿನಲ್ಲಿಟ್ಟುಕೊಂಡ ಮಲ್ಲೇಶಿ ಆ ಹಸುವನ್ನು ಕೊಲ್ಲುತ್ತಾನೆ. ತನ್ನ ಹಾಗೂ ಮನೆಯುವರ ಸಂತೋಷಕ್ಕೆ ಗೋವನ್ನು ಕೊಲ್ಲುವ ಮನುಷ್ಯರು ಇರುತ್ತಾರೆ ಎಂಬುದನ್ನು ಇಲ್ಲಿ ಕಾಣಬಹುದು. ಮುಂದೆ ಅವನ ಸ್ಥಿತಿ ಚೆನ್ನಾಗಿರುವುದಿಲ್ಲವೆಂಬುದನ್ನು ತಿಳಿಯಬಹುದು.

ಮುಂದಿನ ಕಥೆ ''ಮೃಗಜಲ' ಮರುಭೂಮಿಯಲ್ಲಿ ಎಣ್ಣೆ ತೆಗೆಯಲು ಒಂದು ತಂಡ

ಹೋಗುತ್ತದೆ. ಅದರಲ್ಲಿ ಒಬ್ಬ ವ್ಯಕ್ತಿ ದಿನೇಶ್ ಗೋಯಲ್. ಅಲ್ಲಿಗೆ ಲೇಖನ ಬರೆಯಲು ಮತ್ತೊಬ್ಬಳು ಜರ್ನಲಿಸ್ಟ್ ಹೋಗುತ್ತಾಳೆ. ಇವರಿಬ್ಬರ ಮಧ್ಯೆ ಪರಿಚಯವಾಗುತ್ತದೆ. ಸ್ನೇಹ ಬೆಳೆಯುತ್ತದೆ. ಇಬ್ಬರು ಅವರವರ ವೈಯುಕ್ತಿಕ ವಿಷಯಗಳನ್ನು ಮನಬಿಚ್ಚಿ ಮಾತಾಡಿಕೊಳ್ಳುತ್ತಾರೆ. ಅಲ್ಲಿನ ಮರುಭೂಮಿ, ಪರಿಸರ, ಅಲ್ಲಿ ಸಿಗುವ ಎಣ್ಣೆಯ ಬಗ್ಗೆ ಇತ್ಯಾದಿ ಅನೇಕ ವಿಷಯಗಳನ್ನು ಚರ್ಚಿಸುತ್ತಾ. ಜೀವನದಲ್ಲಿ ಒಂದು ತಪ್ಪು ಮಾಡಿ ಎಡವಿದ್ದಕ್ಕಾಗಿ ಮನೆಯವರಿಂದ ಹಿಂಸೆಗೊಳಗಾದ ಈಕೆ ಜೀವನದಲ್ಲಿ ಜಗುಪ್ಸೆಗೊಂಡು ನಿಸ್ಸಾರದ ಜೀವನ ಸಾಗಿಸುವ ಸಂದರ್ಭದಲ್ಲಿ ದಿನೇಶ್ ಗೋಯಲ್‌ನ ಸ್ನೇಹ ಅವಳಿಗೆ ಮರಳುಗಾಡಿನಲ್ಲಿ ನೀರು ದೊರಕಿದಷ್ಟು ಸಂತೋಷವಾಗುತ್ತದೆ. ಈ ಸಂತೋಷ ಬಹಳ ದಿನ ಉಳಿಯದೆ ದಿನೇಶ ಗೋಯಲ್ ಸಾವನ್ನಪ್ಪುವುದರೊಂದಿಗೆ ಈ ಕಥೆ ಮುಕ್ತಾಯವಾಗುತ್ತದೆ.

ಮುಂದಿನ ಹಾಗೂ ಕೊನೆಯ ಕಥೆಯೇ "ಬದುಕುವುದು ಕಷ್ಟ" ಮನುಷ್ಯರೇನೋ ಬುದ್ಧಿವಂತರು. ತಮಗೆ ಎದುರಾದ ಸಮಸ್ಯೆಗಳಿಗೆ ಪರಿಹಾರ ಕಂಡು ಕೊಳ್ಳುವ ಶಕ್ತಿ ಇದ್ದರೂ ಅವರಿಗೆ ಬದುಕುವುದು ಕಷ್ಟವಾದಾಗ ಇನ್ನು ಪ್ರಾಣಿಗಳ ಸ್ಥಿತಿ ಮತ್ತು ಕಷ್ಟಕರ. ಈ ಕಥೆಯಲ್ಲಿ ಮೀನುಗಳು ನೀರಿನಲ್ಲಿ ಜೀವಿಸಬೇಕಾದರೆ ಎಂತೆಂತಹ ನೋವುಗಳನ್ನು ಅನುಭವಿಸಬೇಕಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಚಿತ್ರಿಸುತ್ತಾ ಹೋಗಿದ್ದಾರೆ. ಮೀನುಗಳು ತಮಗೆ ಎದುರಾದ ತೊಂದರೆಗಳಿಂದ, ಪ್ರಾಣಾಪಾಯದಿಂದ ಪಾರಾದರೂ ಕೊನೆಗೊಂದು ದಿನ ಹೊಲಸಾದ ನೀರಿನಲ್ಲಿ ಉಸಿರಾಡುವುದು ಕಷ್ಟವಾಗಿ ಬದುಕುವುದೇ ಕಷ್ಟವಾಗುತ್ತದೆ. ಈ ಸಂದರ್ಭ ಓದುಗರ ಹೃದಯವನ್ನು ಕರಗಿಸುತ್ತದೆ. ಪಾಪ ಮರಿ ಮೀನು ಕೊನೆಗೆ ಸಾಯುವ ಸ್ಥಿತಿಯ ಚಿತ್ರಣ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಪ್ರಾಣಿಗಳಿಗೆ ಅಂದರೆ ಮೀನಿಗೂ ಬದುಕುವುದು ಕಷ್ಟ ಎಂಬುದನ್ನು ಇಲ್ಲಿ ಲೇಖಕಿ ಚಿತ್ರಿಸಿರುವುದು ಅಮೋಘವಾದುದು.

ಲೇಖಕರು ತಮ್ಮ ಕೃತಿಯಲ್ಲಿ ಸ್ತ್ರೀ ಪುರುಷರಿಬ್ಬರನ್ನು ಸಮಾನವಾಗಿ ಚಿತ್ರಿಸುತ್ತಾ ಹೋಗುತ್ತಾರೆ. ಯಾರೇ ಆಗಲಿ, ಸ್ತ್ರೀಯರಾಗಲಿ, ಪುರುಷರಾಗಲಿ ಒಂದಲ್ಲ ಒಂದು ಸಮಸ್ಯೆಗಳಿಗೆ ಸಿಲುಕುತ್ತಾರೆ. ಆದರೆ ಹೆಣ್ಣು ಸಂಯಮಿ, ತ್ಯಾಗಮಯಿ, ತಾನೆಷ್ಟು ನೋವನ್ನು ಅನುಭವಿಸಿದರೂ ಇತರರು ಚನ್ನಾಗಿರಲಿ, ನನ್ನ ಗಂಡ ಮಕ್ಕಳು ಚೆನ್ನಾಗಿರಲಿ ಎನ್ನುವ ಹೃದಯವಂತಿಕೆ ಈಕೆಯಲ್ಲಿರುತ್ತದೆ. ಸ್ವಾತಂತ್ರ್ಯವಾದಿಯಾದರೂ ಪುರುಷರ ಮೇಲೆ ದ್ವೇಷವನ್ನು ಕಾರದೆ , ಕಥೆಯನ್ನು ನಡೆಸಿಕೊಂಡು ಹೋಗುವ ಜಾಣ್ಮೆ ಇವರದು. ಪ್ರೇಮ ಸ್ನೇಹಗಳ ಮೂಲಕವೇ ಎಂತಹ ಸಮಸ್ಯೆಯನ್ನಾದರೂ ಬಗೆಹರಿಸಬಹುದೆಂಬ ಭಾವನೆ ಇವರಲ್ಲಿ ಇದ್ದಂತಿದೆ.

ಒಟ್ಟಾರೆ ಹೇಳುವುದಾದರೆ ಕೃತಿಕಾರರು ಭರವಸೆಯ ಕತೆಗಾರ್ತಿ. ತುಂಬಾ ಚೆನ್ನಾಗಿ, ಮನಮುಟ್ಟುವಂತೆ ಕಥೆಯಲ್ಲಿ ಬರುವ ಸನ್ನಿವೇಶ ಮತ್ತು ಪಾತ್ರಗಳನ್ನು ಚಿತ್ರಿಸುವ ರೀತಿ ಚೆನ್ನಾಗಿದೆ.

ಎಂ.ವಿ.ವಿಜಯಲಕ್ಷ್ಮಿ
ಅಕ್ಕಿಹೆಬ್ಬಾಳು
ಕೆ.ಆರ್.ಪೇಟೆ

ಅಕ್ಷತ: ಡಾ.ಕೃಷ್ಣಾನಂದ ಕಾಮತ್; ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೧; ಮೊದಲ ಮುದ್ರಣ: ೧೯೯೯; ಪುಟ: ೧೨೦; ಬೆಲೆ: ೩೮-೦೦

ಹನ್ನೆರಡು ಬಿಡಿ ಲೇಖನಗಳ ಸಂಗ್ರಹವಾದ 'ಅಕ್ಷತ' ದ ತುಂಬಾ ಉತ್ತರಕನ್ನಡದ ಕರಾವಳಿಯ ಸೊಗಡು ತುಂಬಿರುವುದು ಎದ್ದು ಕಾಣುತ್ತದೆ. ಲೇಖಕರೇ ಹೇಳಿರುವಂತೆ ಈ ಲೇಖನಗಳು ವಿವಿಧ ಪತ್ರಿಕೆಗಳ ಪ್ರಕಟಾನುಕೂಲತೆಗೆ ಬರೆದಿರುವುವಾದರೂ ಇಲ್ಲಿ ವಿವಿಧ ಮಣಿಗಳಿಂದ ಕೂಡಿದ ಏಕಾವಳಿಯೊಂದು ಸಿದ್ಧವಾಗಿದೆ.

ಮೊದಲ ಲೇಖನ 'ನಾವು-ನಮ್ಮವರು' ಅನೇಕ ದೃಷ್ಟಿಯಿಂದ ಗಮನಾರ್ಹವಾಗಿದೆ. ಇಲ್ಲಿ ಕೆಲವೇ ಮಾತುಗಳಲ್ಲಿ ಉತ್ತರ ಕನ್ನಡದ ಸಮೃದ್ಧ ಪ್ರಕೃತಿಯನ್ನು ವರ್ಣಿಸಿ ಅಲ್ಲಿಯ ಜನಜೀವನವನ್ನು ಕುರಿತು ಸರಸವಾಗಿ ವಿವರಿಸಲಾಗಿದೆ. ಕ್ಷಣಾರ್ಧದಲ್ಲಿ ಕಡಲಿನ ಒಡಲಾಳಕ್ಕೆ ಹೋಗಿ ಮರಳಿನಲ್ಲಿ ಬಿದ್ದ ನಾಣ್ಯ ಹೆಕ್ಕಿಕೊಳ್ಳುವ ಖಾರ್ವಿ ಮಕ್ಕಳ ಬಗ್ಗೆ ಹೇಳುತ್ತಲೇ ಆ ಕೊಂಕಣಿ ಮೂಲದ ಬುಡಕಟ್ಟಿನ ಆಚಾರ ವಿಚಾರಗಳ ಮಾಹಿತಿ ಕೊಡುತ್ತಾರೆ. ಹಾಗೆಯೇ ಗಾಬ್ತಿಯರ ಮರಾಠಿ ಮೂಲ, ಪರಕಂತ್ರರ ಕನ್ನಡತನ, ದಾಲ್ಜಿ ಮುಸ್ಲಿಮರು, ಮಾಪಿಳ್ಳೆ ಮುಸ್ಲಿಮರು ಮುಂತಾದ ಮೀನುಗಾರಿಕೆ ಪ್ರಧಾನವೃತ್ತಿಯಾಗುಳ್ಳ ಮುಸ್ಲಿಂ ಜನರ ಬಗೆಗೆ ಹೇಳಿ ಅನಂತರ ಕಲೆಗಾರಿಕೆಗೆ ಮಹತ್ವ ಕೊಡುವ ನವಾಯತ ಮುಸ್ಲಿಮರು, ದಖ್ಖನಿ ಮುಸ್ಲಿಮರ ವಿಚಾರ ಚರ್ಚಿಸುತ್ತಾರೆ. ರೋಮನ್ ಕ್ಯಾಥೋಲಿಕ್ ಕ್ರಿಶ್ಚಿಯನ್ನರು ಉತ್ತರ ಕರಾವಳಿಯಲ್ಲಿ ವಿಶೇಷವಾಗಿರುವ ಬಗೆ ತಿಳಿಸಿ ಅವರ ಮೂಲ ಹಿಂದೂ ಸಂಸ್ಕೃತಿಯತ್ತ ಗಮನ ಸೆಳೆಯುತ್ತಾರೆ. ಅಂತೆಯೇ ಪೋರ್ಚುಗೀಸರು, ಡಚ್ಚರ ಗುಲಾಮರಾಗಿ ಆಗಮಿಸಿರಬಹುದಾದ ಸಿದ್ದಿಗಳನ್ನು 'ಹೊರಗಿನವರಿಗೆ ತೀರ ಬೇರೆಯಾಗಿ ಕಂಡರೂ ಅವರು ನಮ್ಮವರೇ' ಎಂದು ಹೇಳುತ್ತಲೇ ಅವರ ಪ್ರಸ್ತುತ ಹೀನಾಯ ಪರಿಸ್ಥಿತಿಗೆ ವಿಷಾದಿಸುತ್ತಾರೆ. ಮರಾಠಿ ಗೌಳಿಗರ ರೀತಿ, ಕುಳುಂಬಿಗಳ ಕಷ್ಟಮಯ ಜೀವನ, ಟಿಬೇಟಿಯನ್ನರ ಮೂಲ ಸಂಸ್ಕೃತಿ, ಲಂಬಾಣಿಗರ ಸೌಂದರ್ಯ ಪ್ರಜ್ಞೆ, ಹಾಲಕ್ಕಿ ಗೌಡರ ಸುಗ್ಗಿ ಸಂಭ್ರಮ, ಗುಡಿಗಾರರ ಕಲಾಪ್ರಜ್ಞೆ, ಸೇರುಗಾರರ ವೃತ್ತಿ ಬದಲಾವಣೆ, ಆದಿಕರ್ನಾಟಕರ ಮುಗ್ಧಭಕ್ತಿ, ಹವ್ಯಕರ ಆತಿಥ್ಯಪ್ರಜ್ಞೆ, ಸಾರಸ್ವತರ ಧಾರ್ಮಿಕ ಸಾಂಸ್ಕೃತಿಕ ಶೈಕ್ಷಣಿಕ ಚಟುವಟಿಕೆಗಳು... ಹೀಗೆ ಹಲವು ಹನ್ನೊಂದು ವಿಧದ 'ನಮ್ಮವರ' ಜನಜೀವನವನ್ನು ಹತ್ತಿರದಿಂದ ಗಮನಿಸಿ, ವರ್ಣಿಸಿ, ಈ ಅಂಶ ಕಾಶಿ, ಕಾಶ್ಮೀರ ಯಾತ್ರೆಗಳಿಗಿಂತಲೂ ಮಹತ್ವದ್ದು, ಅಗತ್ಯದ್ದು ಎಂಬ ಭಾವವಾಹಕರಾಗಿದ್ದಾರೆ.

ಎರಡನೇ ಲೇಖನ 'ಗ್ರಾಮೀಣ ಗೌಳಿಗಳು, ಸರಳ ಮನಸ್ಸು, ವಿಶಿಷ್ಟ ಬದುಕು ಗೌಳಿಯ ಮನೆಯೊಂದರ ಆಕರ್ಷಕ ಸುಂದರ ಚಿತ್ರಣವನ್ನು ಕಟ್ಟಿಕೊಟ್ಟು, ಅನಂತರ ಅವರ ಜೀವನ, ಸಂಸ್ಕೃತಿ, ಆಚಾರ ವಿಚಾರಗಳ ಬಗೆಗೆ ಪ್ರಸ್ತಾಪ ಮಾಡುತ್ತದೆ. ಮೂರನೇ ಲೇಖನ ಉತ್ತರಕನ್ನಡದ ಮಾಪಿಳ್ಳೆಯರು' ಕೇರಳ ಮೂಲದ ಮುಸ್ಲಿಮರು ಹೇಗೆ ತಮ್ಮ ಬಿಚ್ಚು ಮನಸ್ಸಿನಿಂದ ಉತ್ತರಕರ್ನಾಟಕದ ಜನಜೀವನದೊಂದಿಗೆ ಬೆರೆತುಹೋಗಿದ್ದಾರೆ ಎಂದು ವಿವರಿಸುತ್ತದೆ. ನಾಲ್ಕನೇ ಲೇಖನ 'ಕರಾವಳಿ ತೀರದ ಸರಳ ಜೀವಿ ಹಾಲಕ್ಕಿ ಗೌಡರು' ಅತ್ಯಂತ ಸರಳ ಆಚಾರ-ವಿಚಾರದ ಆದರೆ ತುಂಬು ಜೀವನದ ಸಹ್ಯಾದ್ರಿಯ ಮಡಿಲ ಮಕ್ಕಳ ಬಗೆಗೆ ಪ್ರಸ್ತಾಪಿಸುತ್ತದೆ. 'ಬುದ್ಧಿ ಚಾತುರ್ಯಕ್ಕೆ ಹೆಸರಾದ ಸಾರಸ್ವತರು' ಎಂಬ ಮುಂದಿನ ಲೇಖನದಲ್ಲಿ ದೂರವಿಚಾರ, ಸಂಯಮ, ಕಠಿಣಾಕ್ರಮಗಳ ಸಾರಸ್ವತರ ಡಂಭರಹಿತ ಜೀವನದ ಬಗೆಗೆ ಬೆಳಕು ಇದೆ. ಆರನೇ ಲೇಖನ 'ಖಾರ್ವಿ ಜನಾಂಗ'ದಲ್ಲಿ

ಕಚ್ಛ- ಕಾಠೇವಾಡದ ಮೂಲದ ಖಾರ್ವಿ ಜನರ ಬಗೆಗೆ ಪ್ರಸಾರಿಸುತ್ತದೆ. ಇವರ ಬಡತನದ ಜೀವನ, ಅಲ್ಪತೃಪ್ತಿಯ ಬಗೆಗಿನ ಮನಕಲಕುವ ವರದಿಯನ್ನು ಲೇಖನ ನೀಡುತ್ತದೆ. ನಂತರದ 'ಮಹಿಷಾಧಿಪತಿ ತೋದವ' ಲೇಖನವು ಕರಾವಳಿಯನ್ನು ಬಿಟ್ಟು ನೀಲಗಿರಿಗೆ ಹಾರುತ್ತದೆ. ಎಮ್ಮೆಗಳೇ ಸರ್ವ ಸಂಪತ್ತಾದ, ನೀಲಗಿರಿಯ ಬೆಟ್ಟ ಗುಡ್ಡಗಳಲ್ಲಿ ಮಾತ್ರ ಕಂಡುಬರುವ ಆತ್ಯಾಕರ್ಷಕ ವ್ಯಕ್ತಿತ್ವದ ನೀಲಗಿರಿಯ ತೋದವರ ವಿಶಿಷ್ಟ ರೀತಿ ರಿವಾಜುಗಳನ್ನು, ಬದುಕಿನ ಬಗೆಗಿನ ಭಿನ್ನಧೋರಣೆಗಳನ್ನು ಈ ಲೇಖನದಲ್ಲಿ ಪರಿಚಯಿಸಲಾಗಿದೆ. ಮುಂದಿನ ಲೇಖನ 'ಮುಂದುವರಿದ ಆದಿವಾಸಿಗಲ್ಲಾದ ಸಂತಾಲರು' ಬಿಹಾರಕ್ಕೆ ಯಾತ್ರಿಸುತ್ತದೆ. ಬಿಹಾರದ ಮೂಲನಿವಾಸಿಗಳಾದ ಸಂತಾಲರ ಬಗೆಗೆ ವಿವರವಾದ ಪರಿಚಯ ನೀಡುವ ಈ ಲೇಖನದಲ್ಲಿ ಸಂತಾಲರ ಮನೆಗಳು, ಆಚಾರ ವಿಚಾರ, ವಿವಾಹ ಪದ್ಧತಿ, ಮರಣ ಸಂಪ್ರದಾಯ, ಆರ್ಥಿಕ ವ್ಯವಸ್ಥೆ, ಸ್ತ್ರೀ ಸ್ಥಾನ ಮಾನ, ಹಬ್ಬಗಳು ಇತ್ಯಾದಿಗಳ ಬಗೆಗೆ ಸಾಕಷ್ಟು ವಿವರವಿದೆ. ಜೊತೆಗೆ ಸಂತಾಲರ ಹಾಡುಗಳ ಕನ್ನಡ ಅನುವಾದವನ್ನು ನೀಡಿರು ವುದು ಈ ಲೇಖನದ ವಿಶೇಷವಾಗಿದೆ. 'ಕೊಂಕಣಿ ಭಾಷೆಯ ಉಗಮ, ಬೆಳವಣಿಗೆ' ಲೇಖನದಲ್ಲಿ ಕೊಂಕಣಿ ಭಾಷೆಯ ವೈಶಿಷ್ಟ್ಯವನ್ನು ಹೇಳುತ್ತಾ ಇದು ಪ್ರೌಢಾವಸ್ಥೆಯನ್ನು ತಲುಪಿದ್ದಾಗಲೂ ಮರಾಠಿ ಭಾಷೆ ಸರಿಯಾದ ನೆಲೆ ಪಡೆದಿರಲಿಲ್ಲ ಆ. ಆದುದರಿಂದ ಇದು ಮರಾಠಿ ಭಾಷೆಯ ಉಪಭಾಷೆ ಆಗುವುದು ಸಾಧ್ಯವೇ ಇಲ್ಲ ಎಂದು ನಿರೂಪಿಸಿ ಕೊಂಕಣಿಗರ, ಸಾರಸ್ವತ ಬ್ರಾಹ್ಮಣರ ಕೆಚ್ಚು ಶೌರ್ಯಗಳನ್ನು ವರ್ಣಿಸಿ ಕೊಂಕಣಿಗೆ ಸರ್ವಮಾನ್ಯತೆಯನ್ನು ಹೇಗೆ ಗಳಿಸಿಕೊಡುವುದು ಸಾಧ್ಯ ? ಎಂದು ಚಿಂತನೆ ನಡೆಸಿದ್ದಾರೆ. 'ಶತಕಗಳಲ್ಲಿ ಕೊಂಕಣಿ, ಕನ್ನಡಿಗರ ಬಾಂಧವ್ಯ'ದಲ್ಲಿ ಕೊಂಕಣಿಗರು ಕನ್ನಡಕ್ಕೆ ನೀಡಿದ ಕೊಡುಗೆಗಳನ್ನು, ವ್ಯಾಪಾರ ಮತಿಯನ್ನು, ಪ್ರತಿಭಾದಾನವನ್ನು, ರಾಜ್ಯ ಸೇವೆಯನ್ನು ಉದಾಹರಣೆ ಸಹಿತವಾಗಿ ವರ್ಣಿಸಿ, ಇಷ್ಟೆಲ್ಲಾ ಕೊಟ್ಟಿರುವ 'ಕೊಂಕಣ'ವನ್ನು ಕನ್ನಡಿಗರು ಗುರುತಿಸದಿರುವುದಕ್ಕೆ ವಿಷಾದ ವ್ಯಕ್ತಪಡಿಸಲಾಗಿದೆ. 'ಕರ್ನಾಟಕ, ಗೋವೆಗಳ ಮೈತ್ರಿ' ಲೇಖನದಲ್ಲಿ ಕರ್ನಾಟಕದಿಂದ ಗೋವೆಗೆ ಸಂದಿರುವ ಮೌಲ್ಯದ ವರ್ಣನೆಯಿದ್ದರೆ 'ಕರಾವಳಿಯ ಕ್ರೈಸ್ತರು' ಲೇಖನದಲ್ಲಿ ಮತಾಂತರ ಹೊಂದಿದ ಕ್ರೈಸ್ತರ ಸ್ಥಾನಮಾನಗಳು, ಹಬ್ಬಹರಿದಿನಗಳು, ಜೀವನ ಚಕ್ರದ ಆಚರಣೆಗಳು ರೀತಿ ರಿವಾಜುಗಳ ವಿವರ ತೆರೆದುಕೊಂಡಿದೆ.

ಹೀಗೆ 'ಅಕ್ಷತ' ಪುಸ್ತಕವು ತನ್ನೊಳಗಿನ ವಿವರಗಳಿಂದ ಸಾಂಸ್ಕೃತಿಕ ವಿಭಾಗಕ್ಕೆ ಒಂದು ಅತ್ಯುತ್ತಮ ಕೊಡುಗೆಯಾಗಿದೆ ಎಂಬುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ.

* * *

ಗಿಲಿ ಗಿಲಿ ಗಜ್ಜೆ : ಹಾಲಾಡಿ ಮಾರುತಿರಾವ್: ಇಂಚರ ಪ್ರಕಾಶನ; ಮೊದಲ ಮುದ್ರಣ ೧೯೯೯:
ಬೆಲೆ : ರೂ ೧೫.೦೦, ಪುಟಸಂಖ್ಯೆ ೪೦

ಒಟ್ಟು ೨೯ ಗೀತೆಗಳನ್ನು ಹೊಂದಿರುವ ಈ ಕವನ ಸಂಕಲನದ ಗೀತೆಗಳು ಜಿ.ಪಿ. ರಾಜರತ್ನಂ ಮತ್ತು ವಿ.ಸೀತಾರಾಮಯ್ಯ ಅವರ ಪ್ರೇರಣೆಯಿಂದ ರೂಪು ಪಡೆದವು ಎಂಬುದನ್ನು ಕವಿ ಮೊದಲೇ ಹೇಳಿಕೊಳ್ಳುತ್ತಾರೆ. ಹಾಗಾಗಿ ಶಿಶುಗೀತೆಗಳ ಛಾಪನ್ನು ಇಲ್ಲಿ ಗುರುತಿಸಬಹುದು. ಕೆಲವು ಗೀತೆಗಳಂತೂ ಮಕ್ಕಳ ಮೃದು ಮಧುರ ಮನೋಭಾವವನ್ನು ಎತ್ತಿ ಹಿಡಿಯುತ್ತವೆ ಕೂಡ. 'ಗುಬ್ಬಿ ಮತ್ತು ಪುಟ್ಟಿ' ಕವನದಲ್ಲಿ ಅಜ್ಜಿ ಕೊಡುವ ಭತ್ತವನ್ನು ಹುಡುಕಿ ಹೋಗುತ್ತಿರುವ

ಗುಬ್ಬಿಯನ್ನು ತನ್ನಲ್ಲಿಯೇ ನಿಲ್ಲಿಸಿಕೊಳ್ಳಲು ಭತ್ತವನ್ನು ನೋಡೇ ಇಲ್ಲದ ಪುಟ್ಟಿ ಭತ್ತವನ್ನುಹುಡುಕಿ ತಂದು, ಅಜ್ಜಿಯ ಸೀರೆಯನ್ನು ಉಟ್ಟು ಗುಬ್ಬಿಯನ್ನು ಒಲಿಸಿ ಕೊಳ್ಳಬೇಕೆಂದು ಬಯಸುವ ಮುಗ್ಧಪ್ರೀತಿ ಮನಸ್ಸನ್ನು ಸೆರೆ ಹಿಡಿಯುತ್ತದೆ. 'ಪಾಠದ ಕಾಟ' ಕವನ 'ಒಂದು ಎರಡು ಬಾಳೆಲೆ ಹರಡು' ಕವನದ ರೂಪಾಂತರ ಆದರೂ ಅರ್ಥಗರ್ಭಿತ. 'ತುಂಟರಲ್ಲ, ನೆಂಟರು' ಕವನವು ಮಕ್ಕಳ ತುಂಟಾಟಗಳನ್ನು ವರ್ಣಿಸಿದರೂ ಆ ತುಂಟಾಟದ ಒಳಗೇ ಅಡಗಿರುವ ನಲ್ಮೆಯ ಬಾಂಧವ್ಯವನ್ನು ನಿರೂಪಿಸುತ್ತದೆ. 'ಮಂಗನಿಂದಲೆ ರಂಗ' ಮಂಗ ಆಡಿಸಿ ಬದುಕುವ ರಂಗನ ಜೀವನ ಬರ್ಭರತೆಯನ್ನು ಮಂಗನನ್ನು ಕುಣಿಸಿ ಮಕ್ಕಳನ್ನು ತಣಿಸುವ ಚಾಕಚಕ್ಯತೆಯನ್ನು ಹೊಂದಿದೆ.'ಹ್ಹ-ಹ್ಹ-ಹ್ಹಾ' ಕಿರುಕವನದಲ್ಲಿ ತಾತ ಮೊಮ್ಮಗನ ಪ್ರಶ್ನೋತ್ತರಗಳಿವೆ. ಪ್ರಶ್ನೆಗಳನ್ನು ಕೇಳುತ್ತಲೇ ಮಗುವಿನ ಮುಗ್ಧ ಮನಸ್ಸನ್ನು ಬೆಳೆಸುವ ಸಾಧ್ಯತೆಗಳನ್ನು ಇದು ಹೇಳುತ್ತದೆ.

ಕೆಲವು ಕವನಗಳಲ್ಲಿ ಪ್ರಾಣಿ ಪಕ್ಷಿಗಳೇ ಆತ್ಮವೃತ್ತಾಂತ ಹೇಳಿಕೊಳ್ಳುವ ಪರಿಕಲ್ಪನೆ ಇದೆ. 'ಗಿಳಿಯ ಮಾತು', 'ನೆಲಗಡಲೆಯ ಅಳಲು', 'ಕಬ್ಬು', 'ಹಾವು', 'ಜೇಡರ ಹುಳ', 'ಬಸವನ ಹುಳ', 'ನೀರ್ಗುದುರೆಯ ಪ್ರಶ್ನೆ', 'ಒಂಟೆಯ ಆತ್ಮ ಚರಿತ್ರೆ', 'ಕಂಬಳಿ ಹುಳ' ಈ ಕವನಗಳು ಈ ವಿಭಾಗಕ್ಕೆ ಸೇರುತ್ತವೆ. ಉಳಿದ ಕವನಗಳಲ್ಲಿ ಸುತ್ತಣ ಜಗತ್ತನ್ನು ತೆರೆದ ಕಣ್ಣು ಮನಗಳಿಂದ ಅವಲೋಕಿಸಿ ಉದಿಸಿದ ಭಾವಗಳಿಗೆ ಶಬ್ದರೂಪವನ್ನು ಕೊಟ್ಟಿರುವ ಹಿನ್ನೆಲೆ ಇದೆ. 'ಕಂದನ ಚಂದ', 'ಜಾಣ', 'ರಜೆ ಬಂತೆಂದರೆ', 'ಮೊಮ್ಮಕ್ಕಳೊಡನೆ', ಅಜ್ಜನಾದೆ', 'ಗತೋಗತ' ಈ ಕವನಗಳಲ್ಲಿ ಮಕ್ಕಳ ಅಜ್ಜನ ಬಾಂಧವ್ಯ ಸ್ಫುಟವಾದರೆ, 'ಕೊಟ್ಟಿದ್ದೇಕೆ?' 'ಚುನಾವಣೆಗೆ ನಿಂತ ಕೊಕ್ಕರೆ', 'ಉಂಡವನೆ ಗುಂಡ', 'ರಕ್ತ ಚಿಮ್ಮಿತು ನನ್ನ ಚಪ್ಪಾಳೆ ಕೈಯಲ್ಲಿ!' 'ಬಾಗಿಲಿಗೆ ಬರುವವರು', 'ಹೀಗಿದ್ದೂ ನಾವೇಕೆ ವಿಶ್ವದಲ್ಲಿ ಬಡವರು', 'ಈ ನಮ್ಮ ಭೂಮಿ' ಈ ಕವನಗಳು ಸಾಮಾಜಿಕ, ಆರ್ಥಿಕ, ರಾಜಕೀಯ, ಪರಿಸರಗಳ ಸುಲಿಗೆ, ನೋವು ಪ್ರತಿಭಟನೆಗಳನ್ನು ಸೂಕ್ಷ್ಮವಾಗಿ ಪ್ರಶ್ನಿಸುತ್ತವೆ.

ಒಟ್ಟಾರೆಯಾಗಿ ಹೇಳಬೇಕೆಂದರೆ ಸಭಾವತಃ ಕವಿಯಲ್ಲದ ಆದರೆ ಕವಿತನಕ್ಕಾಗಿ ಹಂಬಲಿಸುವ ಹಾಲಾಡಿ ಮಾರುತಿರಾವ್ ಅವರು ತಮ್ಮ ಭಾವನೆಗಳನ್ನು ಪದರೂಪದಲ್ಲಿ ಹಿಡಿದಿಟ್ಟಿರುವರಾದರೂ ಹೆಚ್ಚು ಕಡೆಗಳಲ್ಲಿ ಕವನಗಳು ವಾಚ್ಯವಾಗಿ ನಿಲ್ಲುತ್ತವೆ. ಆದರೂ

'ಗುಹೆಯೊಳಗೆ ರವಿ
ಹೇಗೆ ಬಂದ? ಎಂದು
ಕವಿ ಹೊರಗೆ ಬಂದ.
ಇಬ್ಬರೂ ಸೋತು ಗೆದ್ದರು
ಬಾಲಕನ ಜಾಣ್ಮೆಯಿಂದ'

ಈ ತರದ ನುಡಿಗಳು ತಮ್ಮ ಆಕರ್ಷಕ ವಿನ್ಯಾಸದಿಂದ ಗಮನಾರ್ಹವಾಗುತ್ತವೆ. ಕವಿ ಮಕ್ಕಳಿಗೆ ಉತ್ತಮ ಕವನಗಳನ್ನು ಕೊಡಬಹುದಾದ ಸಾಧ್ಯತೆಗಳನ್ನು ತೆರೆದು ತೋರಿಸುತ್ತವೆ.

-ಡಾ. ಮಂಜುಳಾ ಹುಲ್ಲಹಳ್ಳಿ
ವಾಣಿಜ್ಯ ತೆರಿಗೆ ಕಾರ್ಯಾಲಯ
ವೇಗ ಮಾರ್ಗ-೩೧, ೮ನೇ ಮಹಡಿ,
ಬೆಂಗಳೂರು-೫೬೦ ೦೦೯

★ ತಿದ್ದುಪಡಿ:
ಶ್ರೀ ಜಿ.ಎನ್. ಅಶೋಕ ವರ್ಧನಅವರು ಬರೆದ 'ಪ್ರತ್ತಿರಂಜನೆ?-ಪುಸ್ತಕೋದ್ಯಮದಲ್ಲಿ' ಎಂಬ ಲೇಖನತಪ್ಪಿನಿಂದಾಗಿ'ವೃತ್ತಿ ರಂಜನೆ-ಪತ್ರಿಕೋದ್ಯಮದಲ್ಲಿ' ಎಂದು ತಪ್ಪಾಗಿ ಮುದ್ರಣವಾಗಿದೆ. ದಯಮಾಡಿ ಪತ್ರಿಕೋದ್ಯಮದಲ್ಲಿ ಎನ್ನುವ ಬದಲಾಗಿ ಪುಸ್ತಕೋದ್ಯಮದಲ್ಲಿ ಎಂದು ಓದಿಕೊಳ್ಳಬೇಕಾಗಿ ಕೋರಿದೆ.-ಸಂಪಾದಕ

ಓದುಗರ ಅನಿಸಿಕೆ

ಮಾನ್ಯ ಸಂಪಾದಕರಿಗೆ,

ಹೃದಯಪೂರ್ವಕ ನಮನಗಳು. ಮೇ ತಿಂಗಳ 'ಪುಸ್ತಕ ಪ್ರಪಂಚ'ದಲ್ಲಿ ಪ್ರಕಟವಾದ ಭಾರತೀಭಟ್‌ರವರ 'ಭಿಕ್ಷುಕನ ದುರಾಸೆ' ಲೇಖನ ತುಂಬಾ ಅರ್ಥಪೂರ್ಣವಾಗಿತ್ತು. ಈ ಮಾದರಿಯ ಲೇಖನಗಳನ್ನು ಪುಸ್ತಕ ಪ್ರಪಂಚ ಹೊರತರಲಿ ಎಂದು ಹಾರೈಸುತ್ತೇವೆ. . ಭಗವಂತ ಸಂಪಾದಕ ಮಂಡಲಿಯನ್ನು ಆಶೀರ್ವದಿಸಲಿ.

೧೦.೫.೨೦೦೦

ತಮ್ಮ ವಿಶ್ವಾಸಿಗಳು
ಸಿದ್ದನಗೌಡ. ಪಿ. ಮೂಲಿಮನಿ
ಸಣ್ಣ ನೀರಾವರಿ ಇಲಾಖೆ. ನೆಗಳೂರು
ಸೋಮಶೇಖರ ಪಿ. ಹಾವೇರಿ, ನೆಗಳೂರು,
ಬಿ. ಪಿ. ಹಂದಿಗೋಳ
ಆರ್. ಪಿ. ಹಂದಿಗೋಳ
ಸಿ. ಎಸ್. ಜಾವಗಲ್, ಹಾವೇರಿ

ಮಾನ್ಯ ಸಂಪಾದಕರಿಗೆ,

ಹೃದಯಪೂರ್ವಕ ನಮನಗಳು. ಮೇ ೨೦೦೦ದ 'ಪುಸ್ತಕ ಪ್ರಪಂಚ' ಸಂಚಿಕೆಯಲ್ಲಿ ಪ್ರಕಟವಾದ ಪ್ರೊ॥ಎಂ. ಎನ್. ಗೋಪಾಲನ್ ರವರ 'ಶಿಕ್ಷೆಯಿಂದ ಶಿಕ್ಷಣ' ಲೇಖನ ತುಂಬಾ ಅರ್ಥಪೂರ್ಣವಾಗಿ ಬಂದಿದೆ. ಸ್ವಾತಂತ್ರ್ಯ ನಂತರ ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿದಿದೆ. ಅಗತ್ಯಕ್ಕೆ ತಕ್ಕಂತೆ ಹೆಚ್ಚಿನ ಶಿಕ್ಷಣ ಸಂಸ್ಥೆಗಳನ್ನು ತೆರೆಯಬೇಕು. ಈ ಮಾದರಿಯ ಲೇಖನಗಳನ್ನು ಆಗಾಗ ಪ್ರಕಟಿಸಲು ಕೋರುತ್ತೇನೆ. ಸಂಪಾದಕೀಯ ಮಂಡಲಿಯವರಿಗೆ ನಮ್ಮೆಲ್ಲರ ನಮನಗಳು.

೧೫.೫.೨೦೦೦
ನೆಗಳೂರು

ತಮ್ಮ ವಿಶ್ವಾಸಿಗಳು
ರಾಮಣ್ಣ ಹೊಸ ಬಸಪ್ಪನವರು
ಪುಟ್ಟಪ್ಪ ದೊಡ್ಡಿರಪ್ಪನವರು
ಈರಪ್ಪಣ್ಣಗೌಡ ಹರಕಂಗಿ
ಕುಬೇರಪ್ಪ ಕಿವುಡಿ
ಮಾತೇಶಪ್ಪ ಕಟಗಿ.

ಕಾರ್ಯಕಾರಿ ಸಮಿತಿ ಸದಸ್ಯರುಗಳು :

ಸರ್ವಶ್ರೀಗಳಾದ :

ಜಿ. ಕೆ. ಲೋಕರೆ, ಅಧ್ಯಕ್ಷರು ಮತ್ತು ಮೈಸೂರು ವಿಭಾಗಾಧಿಕಾರಿಗಳು

ಧರ್ಮರಾಜ ಲಿಂಗಪ್ಪ ರಿತ್ತಿ ಮರಿಯಣ್ಣನವರ್, ಉಪಾಧ್ಯಕ್ಷರು

ವೈ. ಎನ್. ಶಂಕರೇಗೌಡ, ಖಜಾಂಚಿ

ಎಸ್. ಮಾದೇಗೌಡ

ವೈ. ಎಂ. ಚಂದ್ರು

ಕೆ. ಎಂ. ಚನ್ನೇಗೌಡ

ಮಹದೇವಯ್ಯ

ಆರ್. ಜಯರಾಮ

ಎಚ್. ಎಸ್. ನಂಜಪ್ಪ

ಎಸ್. ಮಂಚಯ್ಯ

ಕೆ.ಜಿ. ಚನ್ನಕೇಶವ

ಶ್ರೀಮತಿ ಕಮಲ ಸಿ. ಹೆಗಡೆ

ನಿರ್ದೇಶಕರು, ಲೋಕಶಿಕ್ಷಣ ನಿರ್ದೇಶನಾಲಯ

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಕಾರ್ಮಿಕ ಇಲಾಖೆ

ಆಯುಕ್ತರು ಮತ್ತು ಕಾರ್ಯದರ್ಶಿಗಳು
ವಸತಿ ಮತ್ತು ನಗರಾಭಿವೃದ್ಧಿ ಇಲಾಖೆ

ಅಭಿವೃದ್ಧಿ ಕಮೀಷನರ್

ಶ್ರೀರಂಗರಾಜು, ಪ್ರಧಾನ ಕಾರ್ಯದರ್ಶಿ

ಮುದ್ರಣ ಮತ್ತು ಪ್ರಕಟಣೆ : ಕ. ರಾ. ವ. ಶಿ. ಸಮಿತಿ, ಮೈಸೂರು–570 006

ಸಮಿತಿಯ ಪ್ರಕಟಣೆ

ಪುಸ್ತಕ ಪ್ರಪಂಚದಲ್ಲಿ ಪ್ರಕಟಗೊಂಡ ಡಾ|| ದೇಜಗೌ ಅವರ
ಸಂಪಾದಕೀಯ ಲೇಖನಗಳ ಸಂಗ್ರಹ—

ಸಂಪಾದಕೀಯ ಸಂಕಲನ

(ಬೆಲೆ: ರೂ. ೫೦–೦೦)

ನಾಡಿನ ಖ್ಯಾತಕಲಾವಿದರಾದ ದಿ|| ಪಿ. ಆರ್. ತಿಪ್ಪೇಸ್ವಾಮಿ ಅವರ ಆಕರ್ಷಕ ಮುಖಚಿತ್ರದೊಂದಿಗೆ, ಡೆಮಿ ೧/೮, ೧೪೪ ಪುಟಗಳ ಆಫ್‌ಸೆಟ್ ಮುದ್ರಣ. ವೈವಿಧ್ಯಮಯ ವಿಚಾರಪೂರಿತ ಚಿಂತನಾರ್ಹ ವಿಷಯಗಳ ಸಾರಸಂಗ್ರಹ.

ಪ್ರತಿಗಳಿಗಾಗಿ ಸಂಪರ್ಕಿಸಿ:

ಪ್ರಧಾನ ಸಂಪಾದಕ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ನಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ ಆವರಣ, ಮೈಸೂರು–೫೭೦ ೦೦೬

Licence No 21, Reg. No. KA/SK/Mys–56

Licenced to Post with payment at Mysore, R. M. S/II





71 ಶ್ರೀ ಚಂದ್ರಶೇಖರ
ನಂ. 1 ಮಹೇಶ್ವರಮ್ಮ
ಗುಡಿರಸ್ತೆ, ಮುನಿರೆಡ್ಡಿ ಪಾಳ್ಯ
ಜೆ. ಸಿ. ನಗರ, ಬೆಂಗಳೂರು–560006

If undelivered please return to:

KARNATAKA STATE ADULT EDUCATION COUNCIL
5/1, Vinoba Road, P.B. No. 15
Manasagangothri Campus, Mysore-570 006